₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಮಂಗಳವಾರ 27.01.2026 ಸಂಪುಟ: 68 ಸಂಚಿಕೆ: 265 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಬ್ರಂಟ್ ಶತಕ: ಆರ್‌ಸಿಬಿಗೆ ಸೋಲು

ವಡೋದರದಲ್ಲಿ ಸೋಮವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್‌ನಲ್ಲಿ ಆರ್‌ಸಿಬಿ ತಂಡವು ಮುಂಬೈ ಇಂಡಿಯನ್ಸ್ ವಿರುದ್ಧ ಸೋತು ಫೈನಲ್ ಹಂತಕ್ಕೆ ನೇರ ಪ್ರವೇಶಿಸುವ ಅವಕಾಶದಿಂದ ವಂಚಿತವಾಗಿದೆ. ಮುಂಬೈ ಪರ 57 ಬಾಲ್‌ಗಳಲ್ಲಿ 100 ರನ್ ಬಾರಿಸಿದ ನ್ಯಾಟ್ ಸ್ಕಿವರ್ ಬ್ರಂಟ್ ಮುಂಬೈ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸೊಂಪಾದ ಪುಟಗಳು

ರಾಜ್ಯಪಾಲರ ಭಾಷಣವೆಂಬ ಗ್ರೇ ಏರಿಯಾ!
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ರಿಜೆಕ್ಟ್ ದಿ ರಿಜೆಕ್ಷನ್: ನಿರಾಕರಣೆಯನ್ನು ನಿರಾಕರಿಸಿ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ



ನಿಮ್ಮ ಕಿಮ್ಮತ್ತು ಮತ್ತು ಮೌಲ್ಯ ನಿಮಗೆ ತಿಳಿದಿಲ್ಲದಿದ್ದರೆ, ಬೇರೆಯವರು ಅವನ್ನು ನಿಮಗಾಗಿ ಲೆಕ್ಕ ಹಾಕಿ ತಿಳಿಸಬೇಕು ಎಂದು ನಿರೀಕ್ಷಿಸಬಾರದು. ನಮ್ಮ ಪ್ರಾಮುಖ್ಯ ವೇನು ಎಂಬುದು ನಮಗೆ ಗೊತ್ತಿರಬೇಕು.

ವಕ್ರತುಂಡೋಕ್ತಿ

ಮೊಬೈಲ್‌ನಲ್ಲಿ ಸದಾ ನೂರು ಪರ್ಸೆಂಟ್ ಬ್ಯಾಟರಿ ಇದ್ದವನನ್ನು ನಿತ್ಯ ಸುಖಿ ಎಂದು ಹೇಳಬಹುದು.

ಕಾಂಗ್ರೆಸ್ ಮುಖಂಡ ರಾಜೀವ್ ಬಂಧನ

ಬೆಂಗಳೂರು: ಶಿಡ್ಲಘಟ್ಟ ನಗರಸಭೆ ಪೌರಾಯುಕ್ತೆ ಅಮೃತಾಗೌಡ ಅವರನ್ನು ನಿಂದಿಸಿ ಹಾಗೂ ಜೀವ ಬೆದರಿಕೆ ಹಾಕಿದ ಆರೋಪ ಎದುರಿಸುತ್ತಿದ್ದ ಕಾಂಗ್ರೆಸ್ ಮುಖಂಡ ರಾಜೀವ್ ಗೌಡನನ್ನು ಬಂಧಿಸಲಾಗಿದೆ.

ಹಲವು ದಿನಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಸೋಮವಾರ ಕೇರಳ ಗಡಿಯಲ್ಲಿ ಬಂಧಿಸುವಲ್ಲಿ ಚಿಕ್ಕಬಳ್ಳಾಪುರ ಪೊಲೀಸರು ಯಶಸ್ವಿಯಾಗಿದ್ದಾರೆ. ಬ್ಯಾನರ್ ವಿಚಾರಕ್ಕೆ ಜನವರಿ 12ರಂದು ಪೌರಾಯುಕ್ತೆ ಅಮೃತಾಗೌಡಗೆ ಕರೆ ಮಾಡಿ ಧಮ್ಕಿ ಹಾಕಿದ್ದು, ಈ ಬಗ್ಗೆ ಜನವರಿ 14ರಂದು ದೂರು ದಾಖಲಾಗುತ್ತಿದ್ದಂತೆಯೇ ತಲೆಮರೆಸಿಕೊಂಡಿದ್ದ.

ಬ್ಯಾಂಕ್ ನೌಕರರ ಮುಷ್ಕರ ಇಂದು

ದೆಹಲಿ: ವಾರದಲ್ಲಿ ಐದು ದಿನ ಕೆಲಸದ ವ್ಯವಸ್ಥೆಯನ್ನು ಕೂಡಲೇ ಜಾರಿ ಗೊಳಿಸಬೇಕು ಎಂದು ಒತ್ತಾಯಿಸಿ ಬ್ಯಾಂಕ್ ನೌಕರರು ಮಂಗಳವಾರ ರಾಷ್ಟ್ರವ್ಯಾಪಿ ಮುಷ್ಕರ ನಡೆಸಲು ನಿರ್ಧ ರಿಸಿದ್ದಾರೆ. ಇದ ರಿಂದಾಗಿ ಗ್ರಾಹಕರಿಗೆ ಹಲವು ಸೇವೆಗಳಲ್ಲಿ ವ್ಯತ್ಯಯ ಉಂಟಾ ಗಲಿದೆ. ಜನವರಿ 23ರಂದು ಮುಖ್ಯ ಕಾರ್ಮಿಕ ಆಯುಕ್ತರೊಂದಿಗೆ ನಡೆದ ಸಂಧಾನ ಸಭೆ ಯಶಸ್ವಿಯಾಗದ ಹಿನ್ನೆಲೆ ಯಲ್ಲಿ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆ ಈ ಮುಷ್ಕರಕ್ಕೆ ಕರೆ ನೀಡಿದೆ. ಎಸ್‌ಬಿಐ ಸೇರಿದಂತೆ ಪ್ರಮುಖ ರಾಷ್ಟ್ರೀಕೃತ ಬ್ಯಾಂಕ್‌ಗಳ ಸೇವೆ ವ್ಯತ್ಯಯವಾಗಲಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಬ್ಯಾಕ್ಟ್ರಿಯನ್ ಒಂಟೆಗಳ ಪರೇಡ್

ಗೋಬಿ ಮರುಭೂಮಿಯಂತಹ ಅತಿ ಶೀತ ಮತ್ತು ಬಿಸಿ ವಾತಾವರಣದಲ್ಲಿ ಬದುಕಬಲ್ಲ, ದಪ್ಪನೆಯ ತುಪ್ಪಳವನ್ನ ಹೊಂದಿರುವ, ಎರಡು ಗೂನುಗಳ ಬ್ಯಾಕ್ಟ್ರಿಯನ್ ಒಂಟೆಗಳು ಮೊದಲ ಬಾರಿಗೆ 77ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಂಡವು.

77ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮಿಲಿಟರಿ ಶಕ್ತಿ, ಸಾಂಸ್ಕೃತಿಕ ವೈಭವ ಪ್ರದರ್ಶನ

ಕರ್ತವ್ಯಪಥದಲ್ಲಿ ಸೇನಾ ಬಲ ಅನಾವರಣ

ದೆಹಲಿ: ದೇಶದ 77ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸೇನೆಯ ಬತ್ತಳಿಕೆಯಲ್ಲಿರುವ ಅತ್ಯಾಧುನಿಕ ಕ್ಷಿಪಣಿಗಳು, ಯುದ್ಧ ವಿಮಾನಗಳು, ಹೊಸದಾಗಿ ನಿರ್ಮಿಸಲಾದ ಘಟಕಗಳು ಮತ್ತು ಆಪರೇಷನ್ ಸಿಂಧೂರ್ ಸಮಯದಲ್ಲಿ ಪಾಕಿಸ್ತಾನದ ವೈಮಾನಿಕ ದಾಳಿಯನ್ನು ಸಮರ್ಥವಾಗಿ ತಡೆದು ರಕ್ಷಣೆ ನೀಡಿದ ಎಸ್-400 ಕ್ಷಿಪಣಿ ನಿರೋಧಕ ರಕ್ಷಣಾ ವ್ಯವಸ್ಥೆ ಸೇರಿ ದಂತೆ ಭಾರತದ ಮಿಲಿಟರಿ ಬಲ ಮತ್ತು ಸಾಂಸ್ಕೃತಿಕ ವೈವಿಧ್ಯತೆಯನ್ನು ಅನಾವರಣಗೊಳಿಸಲಾಯಿತು.

ಐರೋಪ್ಯ ಮಂಡಳಿ ಅಧ್ಯಕ್ಷ ಆಂಟೋನಿಯೊ ಕೋಸ್ಟಾ ಮತ್ತು ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್‌ಲೇಯೆನ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಸಮಾರಂಭ ದಲ್ಲಿ 150 ವರ್ಷ ಪೂರೈಸಿದ ವಂದೇ ಮಾತರಂ ಹಾಡನ್ನು ಕೇಂದ್ರೀಕರಿಸಿಕೊಂಡು ಕರ್ತವ್ಯ ಪಥದಲ್ಲಿ ನಾನಾ ಸಬ್ಧಚಿತ್ರಗಳನ್ನು, ಕಾರ್ಯಕ್ರಮಗಳನ್ನು ಪ್ರದರ್ಶಿಸಲಾಯಿತು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೇನಾ ಯೋಧರಿಂದ ಗೌರವ ವಂದನೆ ಸ್ವೀಕರಿಸುವ ಮೂಲಕ ಕರ್ತವ್ಯಪಥದಲ್ಲಿ ಆಕರ್ಷಕ ಪಥಸಂಚಲನ ಪ್ರಾರಂಭವಾಯಿತು. ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಹಲವಾರು ಕೇಂದ್ರ ಸಚಿವರು, ದೇಶದ ಉನ್ನತ ಮಿಲಿಟರಿ ಅಧಿಕಾರಿಗಳು, ವಿದೇಶಿ ರಾಜತಾಂತ್ರಿಕರು ಮತ್ತು ಹಿರಿಯ ಅಧಿಕಾರಿಗಳು ಕಾರ್ಯಕ್ರಮಕ್ಕೆ ಸಾಕ್ಷಿಯಾದರು. → 4

ಶುಭಾಂಶುಗೆ ಅಶೋಕಚಕ್ರ



ದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶಾಂತಿಕಾಲದ ಅತ್ಯುನ್ನತ ಶೌರ್ಯ ಪ್ರಶಸ್ತಿಯಾದ ಅಶೋಕಚಕ್ರವನ್ನು ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರಿಗೆ ಗಣರಾಜ್ಯೋತ್ಸವ ಸಂದರ್ಭದಲ್ಲಿ ಪ್ರದಾನ ಮಾಡಿದರು. ಕಳೆದ ವರ್ಷ ಜೂನ್‌ನಲ್ಲಿ, ಶುಕ್ಲಾ ಬಾಹ್ಯಾಕಾಶಕ್ಕೆ ಹೋದ ಎರಡನೇ ಭಾರತೀಯ ಮತ್ತು ಐತಿಹಾಸಿಕ ಆಕ್ಸಿಯಮ್ -4 ಕಾರ್ಯಾಚರಣೆಯ ಭಾಗವಾಗಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಭೇಟಿ ನೀಡಿದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವಾಯುಪಡೆಯ ಫೈಟರ್ ಪೈಲಟ್ ಆಗಿ, ಶುಕ್ಲಾ ಅವರು ಎಸ್‌ಯು-30 ಎಂಕೆಐ, ಮಿಗ್ -21, ಮಿಗ್-29, ಜಾಗ್ವಾರ್, ಹಾಕ್, ಡಾರ್ನಿಯರ್ ಮತ್ತು ಎಎನ್-32 ಸೇರಿದಂತೆ ವಿವಿಧ ವಿಮಾನಗಳಲ್ಲಿ 2,000 ಗಂಟೆಗಳ ಹಾರಾಟದ ಅನುಭವದ ವಿಶಿಷ್ಟ ದಾಖಲೆಯನ್ನು ಹೊಂದಿದ್ದಾರೆ.

ರಾಜ್ಯಪಾಲರ ನಡೆ ಖಂಡಿಸಿ ಕಾಂಗ್ರೆಸ್ ಮತಪ್ರದರ್ಶನ

ಬಿಜೆಪಿ-ಜೆಡಿಎಸ್ ನಾಯಕರಿಂದಲೂ ಪ್ರತಿಭಟನಾ ಸಭೆ

ಲೋಕಭವನಕ್ಕೆ ಇಂದು ಮುತ್ತಿಗೆ

ಅಧಿವೇಶನ ನಡುವೆ ಹೈಡ್ರಾಮಾ, ಪೊಲೀಸರಿಗೆ ಪೇಚು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಬಿ ಜಿ ರಾಮ್ ಜಿ ಕಾಯಿದೆ ವಿಷಯದಲ್ಲಿ ಬಿಜೆಪಿ, ಕಾಂಗ್ರೆಸ್ ಮಾತ್ರವಲ್ಲದೇ ರಾಜಭವನ ಹಾಗೂ ರಾಜ್ಯ ಸರಕಾರದ ನಡುವೆ ಶುರುವಾಗಿರುವ ತಿಕ್ಕಾಟ ಮಂಗಳವಾರ ಮತ್ತೊಂದು ಮಜಲು ತಲುಪುವುದು ನಿಶ್ಚಿತವಾಗಿದೆ. ಆಡಳಿತ ಪಕ್ಷವೇ 'ಲೋಕಭವನ' ಮುತ್ತಿಗೆಗೆ ಕರೆ ನೀಡಿರುವುದರಿಂದ ಮಂಗಳವಾರ ಭಾರಿ ಹೈಡ್ರಾಮಕ್ಕೆ ಸಾಕ್ಷಿಯಾಗುವ ಸಾಧ್ಯತೆಯಿದೆ.

ಜಂಟಿ ಅಧಿವೇಶನದಲ್ಲಿ ಸರಕಾರ ಸಿದ್ಧಪಡಿಸಿದ ಭಾಷಣ ಓದದ ರಾಜ್ಯಪಾಲರ ನಡೆ ಖಂಡಿಸಿ ಹಾಗೂ ಮನರೇಗಾ ಮರುಸ್ಥಾಪನೆಗೆ ಆಗ್ರಹಿಸಿ ಕಾಂಗ್ರೆಸಿಗರು ಮಂಗಳವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಿದ್ದಾರೆ.

ಬಳಿಕ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಸೇರಿದಂತೆ ಎಲ್ಲ ಸಚಿವರು, ಶಾಸಕರ ನೇತೃತ್ವದಲ್ಲಿ 'ಲೋಕಭವನ ಚಲೋ' ಮಾಡಲು ತೀರ್ಮಾನಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು, 'ಲೋಕಭವನ ಮುತ್ತಿಗೆ'ಯಲ್ಲಿ ಎಲ್ಲ ಶಾಸಕರು ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಫರ್ಮಾನು ಹೊರಡಿಸಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. → 4

ಅಧಿವೇಶನ ನಡೆಯುತ್ತಿರುವಾಗ ಆಳುವ ಪಕ್ಷ ಪ್ರತಿಭಟನೆ ಹಮ್ಮಿಕೊಂಡು ಶಾಸಕರು ಭಾಗ ವಹಿಸುತ್ತಾರೆ ಎಂದು ಹೇಳಿರು ವುದು ಎಷ್ಟು ಸಮಂಜಸ? ಬೆಂಗಳೂರಿನ ರಸ್ತೆಗಳಲ್ಲಿ ಮೆರವಣಿಗೆ ಮಾಡಿ ಮುತ್ತಿಗೆ ಮಾಡುವಂತಿಲ್ಲವೆಂದು ಹೈಕೋರ್ಟ್ ಸೂಚನೆಯಂತೆ ನಿಷೇಧ ಹೇರಲಾಗಿದ್ದರೂ, ರ‍್ಯಾಲಿಗೆ ಅವಕಾಶ ಹೇಗೆ ಸಿಕ್ಕಿದೆ?

-ಸುರೇಶ್‌ಕುಮಾರ್, ಮಾಜಿ ಸಚಿವ

ಇಂದು ಮತ್ತೆ ಅಬಕಾರಿ ಚರ್ಚೆ, ಇಲ್ಲವೇ ಹೋರಾಟ

ಅಬಕಾರಿ ಇಲಾಖೆಯ ಭ್ರಷ್ಟಾಚಾರ ಆರೋಪದಲ್ಲಿ ಸಚಿವ ಆರ್.ಬಿ. ತಿಮ್ಮಾಪುರ ವಿರುದ್ಧ ಪ್ರಕರಣ ದಾಖಲಾಗಿರುವುದನ್ನು ಮುಂದಿಟ್ಟುಕೊಂಡು ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ವಿಧಾನಸಭೆಯಲ್ಲಿ ಪ್ರತಿಭಟನೆ ಮುಂದುವರಿಸುವ ಸಾಧ್ಯತೆಯಿದೆ. ಶುಕ್ರವಾರ ಸ್ಪೀಕರ್ ಖಾದರ್ ಅವರು, ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿ ಚರ್ಚಿಸಲು ಅವಕಾಶ ನೀಡುವುದಾಗಿ ಪ್ರತಿಪಕ್ಷ ನಾಯಕ ಆರ್.ಅಶೋಕ್‌ಗೆ ಭರವಸೆ ನೀಡಿದ್ದಾರೆ.

ಬಿಜೆಪಿ ನಾಯಕರ ಹಣ ಎಂದ ಕಾಂಗ್ರೆಸ್ ಮುಖಂಡರು

₹ 400 ಕೋ. ದರೋಡೆ ಕೃತ್ಯ, ಮೂಲ ನಿಗೂಢ

ವಿನಾಯಕ ಮಠಪತಿ ಬೆಳಗಾವಿ

400 ಕೋಟಿ ರು. ಹಣ ಇದ್ದ ಕಂಟೇನರ್ ದರೋಡೆ ಪ್ರಕರಣ ಅಂತೆ ಕಂತೆಗಳ ಮೇಲೆ ಸಾಗಿದೆ. ಈ ನಡುವೆ ಅಪಹರಣ ಪ್ರಕರಣ ಬಂಧನಕ್ಕೆ ಒಳಗಾದ ವಿರಾಟ್ ಗಾಂಧಿ ಹಾಗೂ ಜಯೇಶ್ ಮಧ್ಯೆ ನಡೆದ ವಾಟ್ಸಪ್ ಕರೆ ಸಂಭಾಷಣೆ ವೈರಲ್ ಆಗಿದೆ. ಸಂಭಾಷಣೆ ಪ್ರಕಾರ ಹಣ ಗುಜರಾತ್ ಮೂಲದ ರಾಜಕಾರಣಿಗೆ ಸೇರಿದ್ದು ಎಂದು ಹೇಳಲಾಗುತ್ತಿದ್ದು, ಬಾಲಾಜಿ ಟ್ರಸ್ಟ್ ಹೆಸರು ತಳುಕು ಹಾಕಿಕೊಂಡಿದೆ.

ವೈರಲ್ ಆಗಿರುವ ಆಡಿಯೊ ಪ್ರಕಾರ 2 ಸಾವಿರ ಮುಖಬೆಲೆಯ ಸರಿ ಸುಮಾರು 400 ಕೋಟಿ ಹಣ ಕಂಟೇನರ್‌ನಲ್ಲಿ ಗೋವಾದಿಂದ ಕರ್ನಾಟಕ ಮಾರ್ಗ ವಾಗಿ ಸಾಗಿಸಿ ಬಾಲಾಜಿ ಟ್ರಸ್ಟ್‌ಗೆ ತಗೆದುಕೊಂಡು ಹೋಗುವ ಮೂಲಕ ವಿನಿಮಯ ಮಾಡಲು ಸಿದ್ಧತೆ ನಡೆದಿತ್ತು ಎಂದು ಹೇಳಲಾಗುತ್ತಿದೆ. ಆದರೆ ಈ ದರೋಡೆ ಪ್ರಕರಣದ ಕುರಿತು ಮಹಾರಾಷ್ಟ್ರ ಸರಕಾರ ರಚಿಸಿರುವ ಎಸ್‌ಐಟಿ ತಂಡ ಈವರೆಗೂ ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡದಿರುವುದು ಹಲವು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ. → 4

ಬಾಲಾಜಿ ಟ್ರಸ್ಟ್ ನಂಟು!

ಬಂಧನಕ್ಕೆ ಒಳಗಾದ ಇಬ್ಬರು ಆರೋಪಿಗಳ ನಡುವಿನ ಸಂಭಾಷಣೆ ಸದ್ಯ ಕುತೂಹಲ ಮೂಡಿಸಿದೆ. ಆರೋಪಿತರಾದ ಕಿಶೋರ್ ಹಾಗೂ ಜಯೇಶ್ ನಡುವಿನ ಸಂಭಾಷಣೆಯಲ್ಲಿ 400 ಕೋಟಿ ಹಣದ ಮೂಲ ಯಾವುದು ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಗುಜರಾತ್‌ನ ರಾಜಕಾರಣಿ 2 ಸಾವಿರ ನೋಟನ್ನು ಬದಲಾಯಿಸುವ ಜವಾಬ್ದಾರಿಯನ್ನು ಮಹಾರಾಷ್ಟ್ರದ ರಿಯಲ್ ಎಸ್ಟೇಟ್ ಉದ್ಯಮಿ ಕಿಶೋರ್ ಶೇಟ್‌ಗೆ ನೀಡಿದ್ದರಂತೆ. ಕಿಶೋರ್ ತನ್ನ ಐದಾರು ಗೆಳೆಯರನ್ನು ಈ ಕೃತ್ಯಕ್ಕೆ ಬಳಸಿದ್ದಾನೆ. ಕಿಶೋರ್‌ನ ಸ್ನೇಹಿತ ವಿರಾಟ್ ಗಾಂಧಿ ಎಂಬಾತ ಬಾಲಾಜಿ ಟ್ರಸ್ಟ್‌ನಲ್ಲಿ ಹಣದ ಎಕ್ಸ್‌ಚೇಂಜ್ ಮಾಡುವ ಏಜೆಂಟ್ ಎಂದು ಹೇಳಲಾಗುತ್ತಿದೆ. ವಿರಾಟ್ ಗಾಂಧಿ ಮೂಲಕ 400 ಕೋಟಿ ಹಣವನ್ನು ವಿನಿಮಯ ಮಾಡುವ ಉದ್ದೇಶಕ್ಕೆ ಬೆಳಗಾವಿ ಮಾರ್ಗವಾಗಿ ಆಂಧ್ರಪ್ರದೇಶದ ಬಾಲಾಜಿ ಟ್ರಸ್ಟ್‌ಗೆ ಕಳುಹಿಸುವ ಕೆಲಸ ನಡೆದಿತ್ತು ಎಂಬುದು ಆರೋಪಿಗಳ ಸಂಭಾಷಣೆಯ ಸಾರಾಂಶ.

ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಬಂದು ದೂರು ಕೊಟ್ಟರೆ ನಮ್ಮ ಅಧಿಕಾರಿಗಳು ತನಿಖೆ ನಡೆಸುತ್ತಾರೆ. ಹಣ ದರೋಡೆ ಆಗಿದ್ದು ಎಲ್ಲಿ ಎಂಬ ಗೊಂದಲ ಇದೆ. ಪ್ರಕರಣದ ಸತ್ಯಾಸತ್ಯತೆ ಏನು ಎಂಬುದು ಗೊತ್ತಿಲ್ಲ. 400 ಕೋಟಿ ಎಂದು ಹೇಳಲು ಹಣ ಯಾರೂ ಎಣಿಸಿಲ್ಲ. ಸೋಶಿಯಲ್ ಮೀಡಿಯಾದಲ್ಲಿ ಓಡಾಡುತ್ತಿರುವುದು ಮಾತ್ರ ವಿಷಯವಾಗಿದೆ. ಮಹಾರಾಷ್ಟ್ರದ ತನಿಖೆಗೆ ನಾವು ಸಹಕಾರ ನೀಡುತ್ತೇವೆ.

- ಸತೀಶ್ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ದರೋಡೆ ಪ್ರಕರಣದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಯಾರೇ ಇರಲಿ, ಸತ್ಯ ಹೊರಬರಬೇಕು. ಮಾಧ್ಯಮಗಳ ವರದಿ ಪ್ರಕಾರ ಈ ಹಣಕ್ಕೆ ಗುಜರಾತ್, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ಲಿಂಕ್ ಇದೆ. ಈ ಮೂರೂ ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿದ್ದು, ಸರಕಾರಗಳ ಮೂಗಿನಡಿಯೇ ಇಷ್ಟೊಂದು ದೊಡ್ಡ ಮೊತ್ತದ ಹಣದ ಚಲನವಲನ ಹೇಗೆ ಸಾಧ್ಯ?

-ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಅಪಘಾತ: ಮೂವರು ಟೆಕ್ಕಿಗಳ ದುರ್ಮರಣ

ತುಮಕೂರು: ಲಾರಿಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದು ಸಂಭವಿಸಿದ ಭೀಕರ ಅಪಘಾತದಲ್ಲಿ ಮೂವರು ಟೆಕ್ಕಿಗಳು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ನೆಲಹಾಳ್ ಬಳಿಯ ರಾಷ್ಟ್ರೀಯ ಹೆದ್ದಾರಿ-48ರಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ. ಕಾರಲ್ಲಿ ಪ್ರಯಾಣಿಸುತ್ತಿದ್ದ ಉತ್ತರ ಪ್ರದೇಶ ಮೂಲದ ಅನಿಕೇತ್ (42), ಅಭೀರ್ (44) ಹಾಗೂ ಆಂಧ್ರ ಪ್ರದೇಶ ಮೂಲದ ಸನ್ಮೋಕ್ತಿ (35) ಮೃತ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಎಂದು ಗುರುತಿಸಲಾಗಿದೆ. ಒಬ್ಬ ಗಂಭೀರವಾಗಿ ಗಾಯಗೊಂಡಿದ್ದು, ಇನ್ನಿಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮೃತರೆಲ್ಲರೂ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯಲ್ಲಿ ಎಂಜಿನಿಯರ್‌ಗಳಾಗಿ ಕೆಲಸ ಮಾಡುತ್ತಿದ್ದರು.

ಹಿಂದುಗಳಿಗಷ್ಟೇ ಬದರಿ, ಕೇದಾರ ದರ್ಶನಾವಕಾಶ

ದೆಹಲಿ: ಉತ್ತರಾಖಂಡದ ಗಂಗೋತ್ರಿ ಮತ್ತು ಬದರಿನಾಥಕ್ಕೆ ಹಿಂದೂಯೇತರರಿಗೆ ಪ್ರವೇಶ ನಿಷೇಧಿಸಲಾಗಿದೆ. ಶ್ರೀಗಂಗೋತ್ರಿ ದೇವಸ್ಥಾನ ಸಮಿತಿ ಈ ನಿರ್ಧಾರವನ್ನು ಕೈಗೊಂಡಿದೆ. ಈ ನಿರ್ಬಂಧವು ಶತಮಾನಗಳಷ್ಟು ಬದರಿನಾಥ ಮತ್ತು ಕೇದಾರನಾಥ ದೇವಾಲಯಗಳಿಗೂ, ಹಾಗೂ ಗಂಗಾ ಮಾತೆಯ ಚಳಿಗಾಲದ ವಾಸಸ್ಥಾನವಾದ ಮುಖ್ಬಾಗೂ ಅನ್ವಯಿಸುತ್ತದೆ ಎಂದು ಸಮಿತಿ ತಿಳಿಸಿದೆ. ಉತ್ತರಾಖಂಡದ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಸಂರಕ್ಷಿಸುವುದು ಅತ್ಯಂತ ಮುಖ್ಯ ಎಂದು ಸಮಿತಿ ತಿಳಿಸಿದೆ.

ಅಮೆರಿಕ: 12 ಸಾವಿರ ವಿಮಾನಯಾನ ರದ್ದು

ವಾಷಿಂಗ್ಟನ್: ಅಮೆರಿಕದಲ್ಲಿ ಈ ವರ್ಷ ಭಾರಿ ಪ್ರಮಾಣದಲ್ಲಿ ಹಿಮಪಾತವಾಗುತ್ತಿದ್ದು, ಹಲವು ರಾಜ್ಯಗಳಲ್ಲಿ ತುರ್ತುಪರಿಸ್ಥಿತಿ ಘೋಷಿಸಲಾಗಿದೆ. ಈ ಬೆನ್ನಲ್ಲೇ, ಅಮೆರಿಕದ ಮೈನ್ ರಾಜ್ಯದಲ್ಲಿ 8 ಜನರನ್ನು ಹೊತ್ತೊಯ್ಯುತ್ತಿದ್ದ ಖಾಸಗಿ ಜೆಟ್ ಪತನವಾಗಿದೆ. ಶೀತ ಚಂಡಮಾರುತದಿಂದ ಅಮೆರಿಕದಾದ್ಯಂತ ವಿಮಾನ ಪ್ರಯಾಣಕ್ಕೆ ಅಡ್ಡಿಯಾಗಿದೆ. ಭಾನುವಾರ ಒಂದೇ ದಿನದಲ್ಲಿ ಸುಮಾರು 12 ಸಾವಿರ ವಿಮಾನಗಳು ರದ್ದಾಗಿದ್ದು, 20 ಸಾವಿರಕ್ಕೂ ಅಧಿಕ ವಿಮಾನಗಳು ವಿಳಂಬವಾಗಿವೆ.

27 ದೇಶಗಳ ಒಕ್ಕೂಟದಿಂದ ಬರುವ ಐಷಾರಾಮಿ ಕಾರುಗಳು ಅಗ್ಗ

ಇಯು ಜತೆ ಒಪ್ಪಂದ: ಅಮೆರಿಕಕ್ಕೆ ಸಡ್ಡು

ದೆಹಲಿ: ಅಮೆರಿಕದ ಸುಂಕ ಸಮರಕ್ಕೆ ಪ್ರತಿಯಾಗಿ ಐರೋಪ್ಯ ಒಕ್ಕೂಟದ ಜತೆ ಬಹುಕೋಟಿ ವ್ಯಾಪಾರ ಒಪ್ಪಂದಕ್ಕೆ ಮುಂದಾಗಿರುವ ಭಾರತ 77ನೇ ಗಣತಂತ್ರದ ದಿನದಂದೇ ಈ ವ್ಯಾಪಾರ ಒಪ್ಪಂದಕ್ಕೆ ಅಂತಿಮ ಸ್ಪರ್ಶ ನೀಡಿದೆ. ಒಪ್ಪಂದದ ಭಾಗವಾಗಿ ಯೂರೋಪ್‌ನ ರಾಷ್ಟ್ರಗಳಿಂದ ಆಮದು ಮಾಡುವ ಕಾರುಗಳ ಮೇಲಿನ ಸುಂಕವನ್ನು ಶೇ.110ರಿಂದ 40ಕ್ಕೆ ಇಳಿಸಲು ನಿರ್ಧರಿಸಿದೆ.

2007ರಲ್ಲಿ ಆರಂಭವಾದ ಈ ಮಾತುಕತೆಗಳು ಸುಮಾರು 18 ವರ್ಷಗಳ ಸುದೀರ್ಘ ಕಾಲದ ನಂತರ ನಿರ್ಣಾಯಕ ಹಂತಕ್ಕೆ ಬಂದಿವೆ. ಯುರೋಪಿಯನ್ ಒಕ್ಕೂಟದ 27 ರಾಷ್ಟ್ರಗಳಿಂದ ಒಕ್ಕೂಟದಿಂದ 16.27 ಲಕ್ಷ ರೂ. ಆಮದು ಬೆಲೆ ಯೊಂದಿಗೆ ಸೀಮಿತ ಸಂಖ್ಯೆಯ ಕಾರುಗಳ ಮೇಲಿನ ತೆರಿಗೆಯನ್ನು ತಕ್ಷಣ ಕಡಿಮೆ ಮಾಡಲು ಸರಕಾರ ಒಪ್ಪಿದೆ. ಮುಂದಿನ ದಿನಗಳಲ್ಲಿ ಈ ಸುಂಕವನ್ನು ಶೇ. 10% ಕ್ಕೆ ಇಳಿಸಲಾಗುವುದು ಎಂದು ಸರಕಾರ ತಿಳಿಸಿದೆ. ಇದರೊಂದಿಗೆ ಯುರೋಪಿಯನ್ ವಾಹನ ತಯಾರಕ ಕಂಪನಿ ಗಳಾದ ವೋಕ್ಸ್‌ವ್ಯಾಗನ್, ರೆನಾಲ್ಟ್, ಸ್ಟೆಲ್ಲಾಂಟಿಸ್, ಮರ್ಸಿಡಿಸ್, ಬೆಂಜ್ ಮತ್ತು ಬಿಎಂಡಬ್ಲ್ಯು ಕಾರುಗಳು ಭಾರತದಲ್ಲಿ ಇನ್ನಷ್ಟು ಕಡಿಮೆ ಬೆಲೆಗೆ ದೊರೆಯಲಿವೆ. ಮಹೀಂದ್ರಾ ಮತ್ತು ಮಹೀಂದ್ರಾ, ಟಾಟಾ ಮೋಟಾರ್ಸ್‌ನಂತಹ ದೇಶೀಯ ಕಂಪನಿಗಳ ಮೇಲಿನ ಹೂಡಿಕೆಗಳನ್ನು ರಕ್ಷಿಸಲು ಎಲೆಕ್ಟ್ರಿಕ್ ವಾಹನಗಳನ್ನು ಮೊದಲ 5 ವರ್ಷಗಳ ಕಾಲ ಆಮದು ಸುಂಕದಿಂದ ಹೊರಗಿಡಲಾಗಿದೆ. ಭಾರತದ ಆಭರಣ ವಸ್ತುಗಳು, ಜವಳಿ, ಪಾದರಕ್ಷೆಗಳು ಸೇರಿ ಅನೇಕ ಉತ್ಪನ್ನಗಳಿಗೆ ಒಪ್ಪಂದ ಜಾರಿಗೆ ಬಂದ ಮೊದಲ ದಿನದಿಂದಲೇ ಐರೋಪ್ಯ ಒಕ್ಕೂಟಕ್ಕೆ ಸುಂಕ ರಹಿತ ಪ್ರವೇಶ ಸಿಗಲಿದೆ. ಇನ್ನೂ ಕೆಲವು ವಸ್ತುಗಳ ಮೇಲಿನ ಸುಂಕಗಳನ್ನು ಐದು, ಏಳು ಅಥವಾ ಹತ್ತು ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ಕಡಿಮೆ ಮಾಡಲಾಗುತ್ತದೆ ಅಥವಾ ಸಂಪೂರ್ಣವಾಗಿ ತೆಗೆದು ಹಾಕಲಾಗುತ್ತದೆ.

ರಾಜಸ್ಥಾನ: 10 ಸಾವಿರ ಕಿಲೋ ಸ್ಫೋಟಕ ವಶ

ಜೈಪುರ: ಕೆಂಪುಕೋಟೆಯಲ್ಲಿ ಗಣರಾಜ್ಯೋತ್ಸವ ಆಚರಣೆಗೂ ಮುನ್ನವೇ ರಾಜಸ್ಥಾನದ ನಾಗೌರ್ ಜಿಲ್ಲೆಯಲ್ಲಿ ಸುಮಾರು 10 ಸಾವಿರ ಕೆಜಿ ಸ್ಫೋಟಕಗಳು ಮತ್ತು ಡಿಟೋನೇಟರ್‌ಗಳು ಪತ್ತೆಯಾಗಿದೆ. ಎರಡು ತಿಂಗಳ ಹಿಂದೆ ದೆಹಲಿಯಲ್ಲಿ ನಡೆದ ಸ್ಫೋಟಕ್ಕೆ ಈ ವ್ಯಕ್ತಿಯ ನಂಟು ಇದೆಯೇ ಎಂಬ ಶಂಕೆ ವ್ಯಕ್ತವಾಗಿದೆ. ಅಕ್ರಮ ಗಣಿಗಾರಿಕೆ ಸಂಬಂಧಿತ ಚಟುವಟಿಕೆಗಳ ವಿರುದ್ಧ ಕಾರ್ಯಾಚರಣೆ ಕೈಗೊಂಡಿದ್ದ ರಾಜಸ್ಥಾನದ ನಾಗೌರ್ ಜಿಲ್ಲೆಯ ಪೊಲೀಸರು ತೋಟದ ಮನೆಯೊಂದರಲ್ಲಿ 10 ಸಾವಿರ ಕೆಜಿ ಸ್ಫೋಟಕಗಳು ಹಾಗೂ ಡಿಟೋನೇಟರ್‌ಗಳನ್ನ ವಶಪಡಿಸಿಕೊಂಡಿದ್ದು ಹರ್ಸೌರ್ ಗ್ರಾಮದ ನಿವಾಸಿ ಸುಲೇಮಾನ್ ಖಾನ್ ಎಂಬಾತನನ್ನು ಬಂಧಿಸಿದ್ದಾರೆ. ಸುಮಾರು 187 ಚೀಲಗಳಲ್ಲಿ ತುಂಬಿಸಿಟ್ಟಿದ್ದ ಒಟ್ಟು 9,550 ಕೆಜಿ ಅಮೋನಿಯಂ ನೈಟ್ರೇಟ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಭಾರೀ ಪ್ರಮಾಣದ ಸ್ಫೋಟಕ ಪರಿಕರಗಳನ್ನೂ ವಶಪಡಿಸಿಕೊಳ್ಳಲಾಗಿದೆ.

ಮಲ್ಪೆ: ದೋಣಿ ಪಲ್ಟಿ ಇಬ್ಬರ ದುರ್ಮರಣ

ಉಡುಪಿ: ಮೈಸೂರಿನ ಪ್ರವಾಸಿಗರನ್ನು ವಿಹಾರಕ್ಕೆ ಕರೆದೊಯ್ಯುತ್ತಿದ್ದ ದೋಣಿ ಮಗುಚಿ ಇಬ್ಬರು ಮೃತಪಟ್ಟ ಘಟನೆ ಮಲ್ಪೆ ಕೋಡಿಬೆಂಗ್ರೆ ಬೀಚ್ ಸಮೀಪ ನಡೆದಿದೆ. 14 ಮಂದಿ ಪ್ರವಾಸಿಗರು ವಿಹಾರಕ್ಕೆಂದು ಉಡುಪಿ ಕರಾವಳಿಗೆ ತೆರಳಿದ್ದರು. ಅಳಿವೆ ಬಳಿ ಭಾರಿ ಅಲೆಗಳ ಕಾರಣದಿಂದ ದೋಣಿ ಪಲ್ಟಿಯಾಗಿದ್ದು, ಪ್ರವಾಸಿಗರೆಲ್ಲರೂ ನೀರಿನಲ್ಲಿ ಮುಳುಗಿದ್ದರು. ಸ್ಥಳೀಯ ಮೀನುಗಾರರು ಎಲ್ಲರನ್ನೂ ರಕ್ಷಿಸಿ ದಡ ಸೇರಿಸಿದರೂ ಇಬ್ಬರು ಸಾವನ್ನಪ್ಪಿದ್ದಾರೆ. ಉಳಿದವರಲ್ಲಿ ಇಬ್ಬರ ಸ್ಥಿತಿ ಗಂಭೀರವಿದೆ. ಮೃತರನ್ನು ಶಂಕರಪ್ಪ (22) ಹಾಗೂ ಸಿಂಧು (23) ಎಂದು ಗುರುತಿಸಲಾಗಿದೆ. ಇವರು ಮೈಸೂರಿನ ಸರಸ್ವತಿಪುರಂ ಮೂಲದವರಾಗಿದ್ದು, ಅಲ್ಲಿನ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದರು.

ಸರಕಾರದ ಭಾಷಣ ಓದಿದ ರಾಜ್ಯಪಾಲರು, ಸಂವಿಧಾನದ ಗುಣಗಾನ | ಕೇಂದ್ರದ ವಿರುದ್ಧ ಸಿಎಂ ಸಿದ್ದು ವಾಗ್ದಾಳಿ

ಗಣತಂತ್ರ ದಿನದ ಗವರ್ನರ್ ಭಾಷಣ ನಿರ್ವಿಘ್ನ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ಗದ್ದಲ ಬಳಿಕ, ಗಣರಾಜ್ಯೋತ್ಸವ ದಿನದ ರಾಜ್ಯಪಾಲರ ಭಾಷಣದಲ್ಲಿ ಕೇಂದ್ರ ಸರಕಾರದ ವಿರುದ್ಧ ಟೀಕಾ ಪ್ರಹಾರ ನಡೆಸುವ ನಿರ್ಧಾರದಿಂದ ಸಿದ್ದರಾಮಯ್ಯ ಸರಕಾರ ಹಿಂದೆ ಸರಿದಿದೆ. ರಾಜ್ಯಪಾಲರು ಸರಕಾರದ ಭಾಷಣವನ್ನು ಯಥಾವತ್ ಓದುವುದರೊಂದಿಗೆ ಬೆಂಗಳೂರಿನ ಮಾಣೆಕ್ ಶಾ ಪರೇಡ್‌ನಲ್ಲಿ ಗಣತಂತ್ರ ದಿನದ ಕಾರ್ಯಕ್ರಮ ನಿರ್ವಿಘ್ನವಾಗಿ ನೆರವೇರಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಣತಂತ್ರ ದಿನದ ತಮ್ಮ ಸಂದೇಶದಲ್ಲಿ ಕೇಂದ್ರ ಸರಕಾರ ಹಾಗೂ ಬಿಜೆಪಿಯ ಧೋರಣೆಗಳ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ್ದಾರೆ.

ಗಣರಾಜ್ಯೋತ್ಸವದ ಭಾಷಣವನ್ನು ಸರಕಾರ ಸಿದ್ಧಪಡಿಸಿ ರಾಜ್ಯಪಾಲರಿಗೆ ನೀಡಲಾಗುತ್ತದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಕೇಂದ್ರದ ವಿರುದ್ಧ ಅಂಶವಿದ್ದರೆ, ತಮ್ಮದೇ ಪ್ರತ್ಯೇಕ ಭಾಷಣ ಮಾಡುವುದಾಗಿ ಥಾವರ್ ಚಂದ್ ಗೆಹ್ಲೋಥ್ ಸ್ಪಷ್ಟಪಡಿಸಿದ್ದರು. ಆದ್ದರಿಂದ ರಾಜ್ಯಪಾಲರ ಭಾಷಣ ಕರ್ನಾಟಕದ ಅಭಿವೃದ್ಧಿ ಯೋಜನೆ, ಗ್ಯಾರಂಟಿ ಯೋಜನೆ, ಸಂವಿಧಾನದ ಮೌಲ್ಯಕ್ಕೆ ಸೀಮಿತಗೊಳಿಸಲಾಗಿತ್ತು. → 4

ಸಂವಿಧಾನ ಎಷ್ಟೇ ಕೆಟ್ಟದ್ದಾಗಿದ್ದರೂ ಅದನ್ನು ಅನುಷ್ಠಾನಗೊಳಿಸುವವರು ಒಳ್ಳೆಯವರಾಗಿದ್ದರೆ ಅದರ ಪರಿಣಾಮ ಒಳ್ಳೆಯದ್ದೇ ಆಗುತ್ತದೆ ಎಂದು ಅಂಬೇಡ್ಕರ್ ಹೇಳಿದ್ದರು. ಆದ್ದರಿಂದ ಸಂವಿಧಾನದ ಮೂಲ ಆಶಯವನ್ನು ಅರಿತು ಕೆಲಸ ಮಾಡುವವರನ್ನು ಆರಿಸಿ ಕಳುಹಿಸುವ ಮೂಲಕ ಜನತಂತ್ರ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕಿದೆ.

-ಗೆಹ್ಲೋಥ್, ರಾಜ್ಯಪಾಲ

ಸಂವಿಧಾನವನ್ನು ವಿರೋಧಿಸುತ್ತಿರುವವರು ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವವರು. ಅಂಬೇಡ್ಕರ್ ದೇಶಕ್ಕೆ ಸಂವಿಧಾನ ಅರ್ಪಿಸಿದಾಗಲೂ ಅದನ್ನು ವಿರೋಧಿಸುವವರಿದ್ದರು. ಸಂವಿಧಾನ ಬದಲಿಸಲು ಕಷ್ಟವೆಂದು ಅದನ್ನು ನಿಧಾನವಾಗಿ ದುರ್ಬಲಗೊಳಿಸುವ ಪ್ರಯತ್ನದಲ್ಲಿದ್ದಾರೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಮಾಚಾರ ಸಣ್ಣದಲ್ಲ

ಜೆಡಿಎಸ್ ಕಚೇರಿಯಲ್ಲಿ ಧ್ವಜಾರೋಹಣ

ಬೀದರ್: ನಗರದ ಜೆಡಿಎಸ್ ಪಕ್ಷದ ಜಿಲ್ಲಾ ಕಚೇರಿಯಲ್ಲಿ 77ನೇ ಗಣರಾಜ್ಯೋತ್ಸವ ದಿನಾಚರಣೆ ಆಚರಿಸಲಾಯಿತು. ಜೆಡಿಎಸ್ ಜಿಲ್ಲಾಧ್ಯಕ್ಷ ರಮೇಶ್ ಪಾಟೀಲ್ ಸೋಲಪೂರ್, ಪ್ರಧಾನ ಕಾರ್ಯದರ್ಶಿ ಅಶೋಕ್ ಕೊಡ್ಗೆ, ಶಿವಪುತ್ರ ಮಾಳಗೆ, ಪ್ರಮುಖರಾದ ರಾಜಶೇಖರ್ ಜವಳೆ, ದೇವೇಂದ್ರ ಸೋನಿ, ಸಜ್ಜದ್ ಸಾಹೇಬ್, ಮಹಮ್ಮದ್ ಅಶೋದ್ದೋದ್ದೀನ್, ಬೋಮಗೊಂಡ ಚಿಟ್ಟಾವಾಡಿ, ಅಭಿ ಕಾಳೆ, ರಾಜು ಚಿಂತಾಮಣಿ, ಸಂಗು ಚಿದ್ರಿ, ಲಲಿತಾ ಕರಂಜೆ, ಶಾಂತಮ್ಮ ಸೇರಿದಂತೆ ಅನೇಕರಿದ್ದರು.

ಅಹಿಂದ ಸಂಘಟನೆಗೆ ರಮೇಶ ನೇಮಕ

ಬೀದರ್: ರಾಷ್ಟ್ರೀಯ ಅಹಿಂದ ಸಂಘಟನೆಯ ಬೀದರ್ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ರಮೇಶ ಚಿಮಕೋಡ್ ಅವರನ್ನು ನೇಮಕ ಮಾಡಲಾಗಿದೆ. ಸಂಘಟನೆಯ ಕಾರ್ಯಕಾರಣಿ ಸಭೆಯಲ್ಲಿ ಸಂಘಟನೆಯ ರಾಜ್ಯ ಅಧ್ಯಕ್ಷ ಮುತ್ತಣ್ಣ ಎಸ್. ಶಿವಳ್ಳಿ ಹಾಗೂ ರಾಜ್ಯ ಉಪಾಧ್ಯಕ್ಷ ರವೀಂದ್ರ ಬಳತ ಅವರ ಅನುಮೋದನೆಯ ಮೇರೆಗೆ ಈ ನೇಮಕಾತಿ ಮಾಡಲಾಗಿದೆ. ಈ ಕುರಿತು ರಾಜ್ಯ ಉಪಾಧ್ಯಕ್ಷ ರವೀಂದ್ರ ಬಳತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ಸರಕಾರಿ ನೌಕರರ ಕ್ರೀಡಾಕೂಟ ಇಂದು

ಬೀದರ್: 2025-26ನೇ ಸಾಲಿನ ಬೀದರ್ ಜಿಲ್ಲಾ ಮಟ್ಟದ ರಾಜ್ಯ ಸರಕಾರ ನೌಕರರ ಕ್ರೀಡಾಕೂಟ ಜ. 27 ಮತ್ತು 28 ರಂದು ಬೆಳಗ್ಗೆ 9 ಗಂಟೆಯಿಂದ ಜಿಲ್ಲಾ ನೆಹರು ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ. ಬೀದರ್ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕ್ರೀಡಾಕೂಟದಲ್ಲಿ ಭಾಗವಹಿಸಲು ಆಸಕ್ತ ಇರುವ ಖಾಯಂ (ಕೆಜಿಐಡಿ ಸಂಖ್ಯೆ ಹೊಂದಿರುವ) ಸರಕಾರಿ ನೌಕರರು ಆನ್ ಲೈನ್‌ಲ್ಲಿ ನೋಂದಣಿ ಮಾಡಿಕೊಳ್ಳಲು ಸಾಧ್ಯವಾಗದೇ ಇರುವ ನೌಕರರು ಜ. 27 ರಂದು ನೆಹರು ಕ್ರೀಡಾಂಗಣದಲ್ಲಿ ಸಂಪೂರ್ಣ ವಿವರದೊಂದಿಗೆ ನೋಂದಣಿ ಮಾಡಿಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ವಡಗೇರಾ: ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆ ಹಾಗೂ ಕುಡಿಯುವ ನೀರಿನ ಶುದ್ದೀಕರಣ ಘಟಕ ಹಾಗೂ ಕೊಳವೆ ಬಾವಿಗಳ ದುರಸ್ತಿಗೊಳಿಸಿ ಪಟ್ಟಣ ಹಾಗೂ ಗ್ರಾಮೀಣ ಭಾಗದಲ್ಲಿನ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ಅಬ್ದುಲ್ ಚಿಗಾನೂರ ಜಿಲ್ಲಾಡಳಿತಕ್ಕೆ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಈಗಾಗಲೇ ಬೇಸಿಗೆ ಆರಂಭವಾಗುತ್ತಿದ್ದು ಜನರಿಗೆ ಕುಡಿಯುವ ನೀರಿನ ಸಮಸ್ಯೆ ಕಾಡುತ್ತಿದೆ ಪಟ್ಟಣದ ವಾರ್ಡ್ ನಂ1 ಮತ್ತು 3ರಲ್ಲಿ ಹಾಗೂ ಇನ್ನಿತರ ಬಡಾವಣೆಗಳಲ್ಲಿ ಸುಮಾರು ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಇದೆ ನಮ್ಮ ಕರವೇ ವತಿಯಿಂದ ಹಲವಾರು ಬಾರಿ ಸಂಬಂದಿಸಿಧ ಅಧಿಕಾರಿಗಳ ಗಮನಕ್ಕೆ ತಂದರು ಕೂಡಾ ಯಾವುದೇ ಪ್ರಯೋಜನವಾಗಿಲ್ಲ ಎಂದು ಅಧಿಕಾರಿಗಳ ವಿರುದ್ಧ ಕಿಡಿ ಕಾರಿದ್ದಾರೆ.ಆದ್ದರಿಂದ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಪರಿಹಾರವಾಗಿ ತುಮಕೂರು ಗ್ರಾಮದ ಕೃಷ್ಣಾ ನದಿಯಿಂದ ನೀರು ಹರಿಸಲು ಕ್ರಮ ಕೊಳ್ಳಬೇಕು ಎಂದು ಕರವೇ ಮುಖಂಡರಾದ ಮಲ್ಲು ಜಡಿ ಅಂಗಡಿ,ಪೀರ್‌ಸಾಬ್ ಮರಡಿ, ಸತೀಶ್ ಜಡಿ, ಶ್ರೀನಿವಾಸ್ ಮಡಿವಾಳ್, ಸುರೇಶ್ ಬಾಡದ,ಬಸವರಾಜ ಕೊದ್ದಡ್ಡಿ,ಮಹಮ್ಮದ್ ಕತಾಲಿ, ಹಣಮಂತ ಓಡಕಾರ ಹಾಗೂ ಇನ್ನಿತರರು ಜಿಲ್ಲಾಡಳಿತಕ್ಕೆ ಒತ್ತಾಯಿಸಿದ್ದಾರೆ.

ತಿಮ್ಮಾಪುರ ವಿರುದ್ಧ ಆರೋಪ ಸತ್ಯಕ್ಕೆ ದೂರ

ಯಾದಗಿರಿ: ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ್ ವಿರುದ್ಧ ಮಾಡಿರುವ ಲಂಚದ ಆರೋಪ ಸತ್ಯಕ್ಕೆ ದೂರವಾದದ್ದು ಎಂದು ಯಾದಗಿರಿ ನಗರಸಭೆ ಮಾಜಿ ಸದಸ್ಯ ಹಾಗೂ ಕಾಂಗ್ರೆಸ್ ಯುವ ಮುಖಂಡ ಗಣೇಶ ದುಪ್ಪಲ್ಲಿ ಹೇಳಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಸಚಿವ ಆರ್.ಬಿ ತಿಮ್ಮಾಪುರ ರವರ ರಾಜೀನಾಮೆ ಕೇಳುವ ಯಾವ ನೈತಿಕತೆ ಬಿಜೆಪಿಯವರಿಗೆ ಇಲ್ಲ ಇದೊಂದು ದೊಡ್ಡ ಷಡ್ಯಂತರ ಅವರನ್ನು ರಾಜಕೀಯವಾಗಿ ತುಳಿಯುವ ಪ್ರಯತ್ನ ಮಾಡುತ್ತಿದ್ದಾರೆ ಇಷ್ಟು ವರ್ಷಗಳ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಒಳ್ಳೆಯ ಆಡಳಿತ ನೀಡಿದಂತ ಧೀಮಂತ ನಾಯಕ ಸಚಿವರು ಭ್ರಷ್ಟಾಚಾರದಲ್ಲಿ ತೊಡಗಿಲ್ಲ ಆಧಾರ ರಹಿತ ಆರೋಪಗಳು ಇವಾಗಿವೆ ಬೆಂಗಳೂರಿನ ನಿವಾಸಿ ಲಕ್ಷ್ಮೀನಾರಾಯಣ ಎಂಬುವವರು ಮೈಕ್ರೋ ಬಿವರ್‌ಯೂನಿಟ್ ಆರಂಭಿಸಲು ಪರವಾನಿಗೆ ಪಡೆಯಲು ಅಬಕಾರಿ ಡಿಸಿ ಜಗದೀಶ್ ನಾಯಕ್ ಹಾಗೂ ಸೂಪರಡೆಂಟ್ ತಮ್ಮಣ್ಣ ರವರನ್ನು ಭೇಟಿಯಾಗಿ ವಿಚಾರಿಸಿದಾಗ ಪರವಾನಿಗೆಗೆ ಸುಮಾರು 1.ಕೋಟಿ 50 ಲಕ್ಷ ಆಗುತ್ತದೆ ಎಂದು ತಿಳಿಸಿದರು.

{ ರಾಜಾ ವೇಣುಗೋಪಾಲ ನಾಯಕ } ಶಾಸಕ

ಚುನಾವಣೆಗಳಲ್ಲಿ ಮತಗಳ್ಳತನವಾಗಿರುವುದಕ್ಕೆ ನಮ್ಮ ಕ್ಷೇತ್ರವೇ ಸಾಕ್ಷಿ. ಕಳೆದ 2018ರ ಸರ್ವತ್ರಿಕಾ ಚುನಾವಣೆಯಲ್ಲಿ ನಮ್ಮ ತಂದೆ ರಾಜಾ ವೆಂಕಟಪ್ಪ ನಾಯಕರ ಸೋಲಿಗೆ ಮತಗಳ್ಳತನವೇ ಕಾರಣ, ಅಂದು ನಕಲಿ ಮತದಾರರನ್ನು ಮತ ಪಟ್ಟಿಗೆ ಸೇರಿಸಿ. ನಮ್ಮ ಪಕ್ಷ ಬೆಂಬಲಿತ ಮತಗಳನ್ನು ಡಿಲೀಟ್ ಮಾಡಿದ್ದರು.

ಗಣರಾಜ್ಯೋತ್ಸವ ದಿನಾಚರಣೆ | ಕಾನೂನಿನ ಎದುರು ಎಲ್ಲರೂ ಸಮಾನರು: ಸಚಿವ ಶರಣಬಸಪ್ಪ ದರ್ಶನಾಪುರ ಹೇಳಿಕೆ

ಸಂವಿಧಾನದ ಮೌಲ್ಯಗಳ ಪಾಲಿಸಿ, ಗೌರವಿಸಿ

ಯಾದಗಿರಿ: ಭಾರತದ ಸಂವಿಧಾನವನ್ನು ಅರ್ಥಮಾಡಿಕೊಂಡು, ಆದರ್ಶ ಮೌಲ್ಯಗಳನ್ನು ಪಾಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಕರೆ ನೀಡಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ, ವಿವಿಧ ಕವಾಯತು ಪಡೆಗಳಿಂದ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು. 1947 ಆಗಸ್ಟ್ 15 ರಂದು ನಮಗೆ ಸ್ವಾತಂತ್ರ್ಯ ಲಭಿಸಿದ್ದರೆ 1950 ಜನವರಿ 26ರಂದು ಸಾಮ್ರಾಜ್ಯಶಾಹಿ ಪಾಳೆಗಾರಿಕೆಯ ಕಾನೂನುಗಳನ್ನು ಕಿತ್ತೆಸೆದು ಸ್ವಾತಂತ್ರ್ಯ,ಸಮಾನತೆ, ಮತ್ತು ಸಹೋದರತೆಯನ್ನು ಎತ್ತಿ ಹಿಡಿಯುವ ಮತ್ತು ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ದೃಷ್ಟಿಯಿಂದ 371(ಜೆ) ಯಂತೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ವಾರ್ಷಿಕ 5000 ಕೋಟಿ ರು. ಅನುದಾನವನ್ನು ನೀಡುತ್ತಿದೆ. ವಡಗೇರಾ ಭಾಗದ ಕಟ್ಟಕಡೆಯ ಹಳ್ಳಿಗೆ ಸೌಲಭ್ಯ ಕಲ್ಪಿಸಲು 300 ಕೋ.ರು ಒದಗಿಸಿದೆ. ಶಹಾಪುರ,ಸುರಪೂರ ಹಾಗೂ ಜೇವರ್ಗಿ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ಹೋಗಲಾಡಿಸಲು 350 ಕೋಟಿ ರು.ಗಳನ್ನು ಒದಗಿಸಿದೆ. ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರದಲ್ಲಿ ಅನೇಕ ಆಸ್ಪತ್ರೆಗಳ ಸ್ಥಾಪನೆಗೆ ನೆರವು ನೀಡಿದೆ ಎಂದು ಹೇಳಿದರು.

ಸಮಾರಂಭದಲ್ಲಿ, ಬೆಂಗಳೂರು ಕರ್ನಾಟಕ ವಿಧಾನ ಪರಿಷತ್ತು ವಿರೋಧ ಪಕ್ಷದ ನಾಯಕ ಛಲವಾದಿ . ಟಿ.ನಾರಾಯಣಸ್ವಾಮಿ ,ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್,ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲದಾಪುರ, ಯಾದಗಿರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್,ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ,ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್ ,ಅಪರ್‌ಜಿಲ್ಲಾಧಿಕಾರಿ ರಮೇಶ ಕೋಲಾರ್,ಸಹಾಯಕ ಆಯುಕ್ತ ಶ್ರೀಧರ್‌ಗೋಟುರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನಿಸಲಾಯಿತು, ಅಸಾಧಾರಣ ಶೌರ್ಯ ಪ್ರದರ್ಶಿಸಿದ ಮಕ್ಕಳಿಗೆ, ಎಸ್‌ಎಸ್ ಎಲ್ ಸಿ ಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಡಳು ಗಮನ ಸೆಳೆದವು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ರಾಷ್ಟ್ರಧ್ವಜಾರೋಹಣ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ನೆರವೇಸಿದರು.

ಮಕ್ಕಳಿಗೆ ಉತ್ತಮ ಸಂಸ್ಕಾರ, ಸಂಸ್ಕೃತಿ ಕಲಿಸಿ

ಶಹಾಪುರ: ಮಕ್ಕಳಿಗೆ ಉತ್ತಮ ಸಂಸ್ಕಾರ ಕಲಿಸಿ ಕನ್ನಡ ಶಾಲೆಗಳನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಮಕ್ಕಳಿಗೆ ಶಿಕ್ಷಣದ ಜತೆಗೆ ಒಳ್ಳೆಯ ಸಂಸ್ಕಾರ ,ಸಂಸ್ಕೃತಿ ಕಲಿಸಿದಾಗ ಸಮಾಜದಲ್ಲಿ ಉನ್ನತ ಸ್ಥಾನ ಪಡೆಯಲು ಸಾಧ್ಯ ಎಂದು ಶ್ರೀಗುರು ಶಾಂತವೀರ ಶಿವಾಚಾರ್ಯ ಹೇಳಿದರು.

ತಾಲೂಕಿನ ಸೈದಾಪುರ ಗ್ರಾಮದ ಯುನಿಟೆಡ್ ಪಬ್ಲಿಕ್ ಶಾಲೆಯಲ್ಲಿ ಗಣರಾಜ್ಯೋತ್ಸವ ದಿನ ಹಿನ್ನಲೇ ಧ್ವಜಾರೋಹಣ ನೇರವೆರಿಸಿ ಸಾನಿಧ್ಯ ವಹಿಸಿ ಮಾತನಾಡಿದರು.

ಕಾಂಗ್ರೆಸ್ ಸಮಿತಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಲ್ಲಾಪಟೇಲ್ ಮಕ್ತಾಪುರ ಮಾತನಾಡಿ 1950 ಜ.26 ರಂದು ಭಾರತ ತನ್ನ ಸಂವಿಧಾನವನ್ನು ಜಾರಿಗೊಳಿಸಲಾಗಿದ್ದು, ರಾಜಪ್ರಭುತ್ವವನ್ನು ತ್ಯಜಿಸಿ ಪ್ರಜಾಪ್ರಭುತ್ವವು ಅಸ್ಥಿತ್ವಕ್ಕೆ ಬಂದ ದಿನವಾಗಿದೆ. ಸಂವಿಧಾನ ಹಕ್ಕುಗಳನ್ನು ಪಾಲನೆ ಮಾಡುವುದು ಅತ್ಯಂತ ಮಹತ್ವದ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಶಾಲೆಯ ಮುಖ್ಯಗುರುಗಳಾದ ಶರಣಬಸವ ಬಿರೆದಾರ ಮಾತನಾಡಿ ಸಾಧು ಸಂತರ ,ಸ್ವಾತಂತ್ರ್ಯ ಯೋಧರ, ದೇಶ ಪ್ರೇಮಿಗಳ , ಹಿರಿಯ ಹೋರಾಟ ಹಾಗೂ ಪರಿಶ್ರಮದಿಂದ ಕಟ್ಟಿ ಬೆಳೆಸಿರುವ ಈ ಭವ್ಯ ಭಾರತದ ಭವಿಷ್ಯವನ್ನು ಇನ್ನೂ ಎತ್ತರಕ್ಕೆ ಕೊಂಡೊಯ್ಯುವ ಸವಾಲುಗಳ ನಮ್ಮ ಮುಂದಿದ್ದು, ಈ ಕಾರ್ಯದ ಯಶಸ್ಸಿಗೆ ನಾವೆಲ್ಲರೂ ಒಟ್ಟಾಗಿ ದುಡಿಯೋಣ ಎಂದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಈ ಸಂದರ್ಭದಲ್ಲಿ ಯುವ ಉದ್ಯಮಿಗಳಾದ ಬಸಣಗೌಡ ಕಂಚನಕವಿ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಈರಣ್ಣ ಮೌರ್ಯ,ಪತ್ರಕರ್ತ ಪುರುಷೋತ್ತಮ ಸುರಪುರ, ನಾಗಪ್ಪಗೌಡ ಶಖಾಪುರ, ಮಲ್ಲಪ್ಪ ಮೇಟಿ, ಪ್ರಥಮ ದರ್ಜೆ ಗುತ್ತಿಗೆದಾರ ಮಾಳಿಂಗರಾಯ ಮಂಡಗಳ್ಳಿ, ಮಲ್ಲು ಬಾದ್ಯಾಪುರ, ಗುತ್ತಿಗೆದಾರ ಮಾಳಪ್ಪ ಗಂಗನಾಳ ಸೇರಿದಂತೆ ಶಾಲೆಯ ಸಿಬ್ಬಂದಿ ವರ್ಗ,ಮಕ್ಕಳು, ಪೋಷಕರು ಇದ್ದರು.

ತಾಲೂಕಿನ ಸೈದಾಪುರ ಗ್ರಾಮದ ಯುನಿಟೆಡ್ ಪಬ್ಲಿಕ್ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು.

ಕೆಂಭಾವಿಯಲ್ಲಿ ಗಣರಾಜ್ಯೋತ್ಸವ ಸಂಭ್ರಮ

ಕೆಂಭಾವಿ: ಪಟ್ಟಣ ಸೇರಿದಂತೆ ವಲಯದಲ್ಲಿ 77ನೇ ಗಣರಾಜ್ಯೋತ್ಸವ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಪುರಸಭೆಯಲ್ಲಿ ನಡೆದ ಗಣರಾಜ್ಯೋತ್ಸವ ದ್ವಜಾರೋಹಣವನ್ನು ಅಧ್ಯಕ್ಷೆ ಪ್ರಿಯಾ ರಾಮನಗೌಡ ಪೊ.ಪಾಟೀಲ್ ನೆರವೇರಿಸಿದರು. ಉತ್ಸವದ ನಿಮಿತ್ಯ ಪುರಸಭೆ ಹಾಗೂ ಆವರಣ ಸೇರಿದಂತೆ ತಳಿರು ತೋರಣ ಬಣ್ಣದ ಬಲೂನಗಳಿಂದ ಅಲಂಕರಿಸಲಾಗಿತ್ತು. ಧ್ವಜಾರೋಹಣದ ನಂತರ ಪುರಸಭೆ ಆವರಣದಲ್ಲಿ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಕ್ಕಳಿಂದ ನಡೆದ ದೇಶಭಕ್ತಿ ಗೀತೆಗಳ ನೃತ್ಯ, ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರ ಅಭಿನಯ, ಛದ್ಮವೇಶ, ಸ್ವಾತಂತ್ರ್ಯ ಸಂಗ್ರಾಮಗಳ ಸನ್ನಿವೇಶಗಳ ರೂಪಕ, ಜನಪದ ನೃತ್ಯ ಹೀಗೆ ಮಕ್ಕಳಿಂದ ಮೂಡಿಬಂದ ಸಾಂಸ್ಕೃತಿಕ ಕಾರ್ಯಕ್ರಮಗಳು ರಾಷ್ಟ್ರ ಭಕ್ತಿ, ನಾಡು ನುಡಿ ಶ್ರೀಮಂತಿಗೆಗೆ ಸಾಕ್ಷಿಯಾಗಿತ್ತು. ಕಾರ್ಯಕ್ರಮದಲ್ಲಿ ಪುರಸಭೆ ಉಪಾಧ್ಯಕ್ಷೆ ಲಕ್ಷ್ಮೀಬಾಯಿ ಕಂಬಾರ, ಮುಖ್ಯಾಧಿಕಾರಿ ಮಹ್ಮದ್ ಯೂಸೂಫ್, ಪುರಸಭೆ ಸದಸ್ಯರು, ಆಶ್ರಯ ಸಮಿತಿ ಸದಸ್ಯರು, ನಾಮನಿರ್ದೇಶನ ಸದಸ್ಯರು, ಪುರಸಭೆ ಸಿಬ್ಬಂದಿ, ಶಾಲಾ ಶಿಕ್ಷರು, ಮಕ್ಕಳು, ಸೇರಿದಂತೆ ಸಾರ್ವಜನಿಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶಿಕ್ಷಕ ಬಂದೇನವಾಜ ನಾಲ್ತವಾಡ ನಡೆಸಿಕೊಟ್ಟರು.

ಪಟ್ಟಣದ ಗಂಗೂಬಾಯಿ ಶಾಂತಗೌಡ ಪೊ. ಪಾಟೀಲ್ ಮೆಮೋರಿಯಲ್ ಪದವಿ ಕಾಲೇಜಿನಲ್ಲಿ ನಡೆದ ದ್ವಜಾರೋಣವನ್ನು ಪ್ರಾಂಶುಪಾಲ ನಾಗಪ್ಪ ಚಾವಲ್ಕರ್ ನೆರವೇರಿಸಿದರು. ಉಪನ್ಯಾಸಕ ಸಿಬ್ಬಂದಿ ಇದ್ದರು. ಸರಕಾರಿ ಪ. ಪೂ ಕಾಲೇಜಿನಲ್ಲಿ ಪ್ರಾಚಾರ್ಯ ಅಶೋಕ ಕುಮಾರ ತಳಕೇರಿ ದ್ವಜಾರೋಹಣ ಮಾಡಿದರು. ಸರಕಾರಿ ಪ್ರೌಢ ಶಾಲೆ, ಕನ್ಯಾ ಪ್ರೌಢ ಶಾಲೆ, ಮುರಾರ್ಜಿ ದೇಸಾಯಿ ವಸತಿ ಶಾಲೆ, ಸರಕಾರಿ ಉರ್ದು ಪ್ರೌಢ ಶಾಲೆ ಸೇರಿದಂತೆ ವಲಯ ಎಲ್ಲ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಕಾಲೇಜುಗಳಲ್ಲಿ ಮುಖ್ಯ ಗುರುಗಳು ಗಣರಾಜ್ಯೋತ್ಸವದ ದ್ವಜಾರೋಹಣ ನೆರವೇರಿಸುದರು.

ಸಮುದಾಯ ಆರೋಗ್ಯ ಕೇಂದ್ರದ ದ್ವಜಾರೋಣ ವೈದ್ಯಾಧಿಕಾರಿ ಡಾ. ಗಿರೀಶ ಕುಲಕರ್ಣಿ ನೆರವೇರಿಸಿದರು, ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಅಮೋಜ್ ಕಾಂಬಳೆ ನೆರವೇರಿಸಿದರು. ಕ್ರೈಮ್ ಪಿಎಸ್‌ಐ ಹಣಮಂತ ಬಿ ಸಿದ್ದಾಪುರ ಹಾಗೂ ಪೊಲೀಸ್ ಸಿಬ್ಬಂದಿ ಇದ್ದರು. ನಾಡ ಕಚೇರಿಯಲ್ಲಿ ಉಪ ತಹಸೀಲ್ದಾರ ಪ್ರವೀಣಕುಮಾರ ಸಜ್ಜನ ದ್ವಜಾರೋಹಣ ಮಾಡಿದರು, ಆರ್.ಐ ರಾಜೇಸಾಬ್ ಕಂದಗಲ್ ವಲಯದ ಗ್ರಾಮ ಲೆಕ್ಕಿಗರು ಸಿಬ್ಬಂದಿ ಇದ್ದರು.

ಗೌರವದ ಸನ್ಮಾನ

ಪುರಸಭೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಇತ್ತೀಚಿಗೆ ರಾಜ್ಯಮಟ್ಟದ ಕಬ್ಬಡ್ಡಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಪರಸನಹಳ್ಳಿ ಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ಜಿಲ್ಲಾ ಪಂಚಾಯತ್ ಯೋಜನೆ ಸಮಿತಿಯ ಸದಸ್ಯರಾಗಿ ಆಯ್ಕೆಯಾದ ಆರಿಫ್ ಹುಸೇನ್ ಖಾಜಿ ಹಾಗೂ ರವಿಶಂಕರ ಸೊನ್ನದ ಅವರನ್ನು ಪುರಸಭೆ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.

77ನೇ ಗಣರಾಜ್ಯೋತ್ಸವ ಅಂಗವಾಗಿ ಪುರಸಭೆ ಆವರಣದಲ್ಲಿ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಭಾರತದ ಸಂವಿಧಾನ ವಿಶ್ವದಲ್ಲೇ ಶ್ರೇಷ್ಠ: ಪ್ರಭು ಚವ್ಹಾಣ

ಔರಾದ್: ಡಾ.ಬಿ.ಆರ್‌ಅಂಬೇಡ್ಕರ್‌ನೀಡಿದ ಭಾರತದ ಸಂವಿಧಾನವು ವಿಶ್ವದಲ್ಲೇ ಶ್ರೇಷ್ಠವಾದ. ಸಮಾನತೆ, ಸ್ವಾತಂತ್ರ್ಯ,ಸೌಹಾರ್ದತೆಯ ಮೌಲ್ಯ ಗಳನ್ನು ಒಳಗೊಂಡ ಮಾದರಿ ಸಂವಿಧಾನವಾಗಿದೆ ಎಂದು ಶಾಸಕ ಪ್ರಭು ಬಿ.ಚವ್ಹಾಣ ತಿಳಿಸಿದರು.

ತಾಲೂಕು ಆಡಳಿತದ ವತಿಯಿಂದ ತಾಲೂಕು ಕ್ರೀಡಾಂಗಣದಲ್ಲಿ ಆಯೋಜಿಸಿದ ಗಣರಾಜ್ಯೋತ್ಸವ ದಿನಾಚರಣೆಯ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಭಾರತ ವಿವಿಧ ಭಾಷೆ, ಧರ್ಮ,ಆಚಾರ-ವಿಚಾರ, ಉಡುಗೆ-ತೊಡುಗೆಗಳು ಪ್ರತಿಯೊಂದರಲ್ಲಿ ವೈವಿಧ್ಯದತೆಗಳನ್ನು ಕಾಣುತ್ತೇವೆ. ಇಂತಹದರಲ್ಲೂ ಎಲ್ಲರಿಗೂ ಅನ್ವಯವಾಗುವಂತಹ ಉತ್ತಮ ಸಂವಿಧಾನ ಪಡೆದಿರುವುದು ನಮ್ಮ ಸೌಭಾಗ್ಯ. ಸಂವಿಧಾನದ ಮೌಲ್ಯಗಳನ್ನು ಗೌರವಿಸಿ, ದೇಶದ ಏಕತೆ ಮತ್ತು ಅಖಂಡತೆಯನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು.ದತ್ತಾತ್ರಿ ಮಡಿವಾಳ ವಿಶೇಷ ಉಪನ್ಯಾಸ ನೀಡಿದರು. ಪ್ರೊಬೆಷನರಿ ಐಎಎಸ್ ಅಧಿಕಾರಿ ರಮ್ಯ ರಂಗಸ್ವಾಮಿ ಧ್ವಜಾರೋಹಣ ನೆರವೇರಿಸಿದರು. ಇದೇ ವೇಳೆ ವಿವಿಧ ಶಾಲೆಗಳ ವಿದ್ಯಾಥಿಗಳು ಪಥ ಸಂಚಲನ ನಡೆಸಿದರು. ತಹಸೀಲ್ದಾರರಾದ ಮಹೇಶ ಪಾಟೀಲ್, ತಾಪಂ ಇಒ ಕಿರಣ ಪಾಟೀಲ್, ಶಿಕ್ಷಣಾಧಿಕಾರಿ ಬಿ.ಜೆ ರಂಗೇಶ್, ತಾಲೂಕು ಪಂಚಾಯತಿ ಸಹಾಯಕ ನಿರ್ದೇಶಕ ಶಿವಕುಮಾರ ಘಾಟೆ, ತಾಲೂಕು ಆರೋಗ್ಯಾಧಿಕಾರಿ ಡಾ.ಗಾಯತ್ರಿ ಇದ್ದರು.

ಔರಾದ್ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಆಯೋಜಿಸಿದ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಪ್ರಭು ಚವ್ಹಾಣ ಮಾತನಾಡಿದರು.

ಅಷ್ಟೂರ್ ಪಿಡಿಒ ಗಾಯತ್ರಿದೇವಿಗೆ ಪ್ರತಿಭಾವಂತ ಅಧಿಕಾರಿ ಪ್ರಶಸ್ತಿ

ಬೀದರ್ : ನೀನು ಶಾಶ್ವತವಲ್ಲ. ನೀ ಮಾಡಿದ ಸೇವೆ ಮಾತ್ರ ಶಾಶ್ವತ ಎನ್ನುವ ಗುರುಹಿರಿಯರ ನಾಣ್ನುಡಿಯಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಜನಸ್ನೇಹಿ. ಜನಸೇವೆಯಲ್ಲಿ ಜೀವನ ಸಾರ್ಥಕ ಕಂಡವರು ಸುಮಾರು ಹದಿನಾರು ವರ್ಷಗಳಿಂದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಗಾಯತ್ರಿದೇವಿ ಅವರಿಗೆ ಅಷ್ಟೂರ್‌ಗ್ರಾಮ ಪಂಚಾಯತಿನಲ್ಲಿ ಆಯೋಜಿಸಿದ 77 ನೇ ಗಣರಾಜ್ಯೋತ್ಸವದಲ್ಲಿ ಗ್ರಾಪಂ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸೇರಿದಂತೆ ಸಿಬ್ಬಂದಿ ಇವರ ಕರ್ತವ್ಯ ನಿಷ್ಠೆಗೆ ಪ್ರತಿಭಾವಂತ ಅಧಿಕಾರಿ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಲಾಯಿತು.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಹಾಗೂ ಸರಕಾರದ ಯೋಜನೆಗಳು ಅನುಷ್ಠಾನಗೊಳಿಸುವಲ್ಲಿ ಯಶಸ್ವಿ. ಜನ ಸ್ನೇಹಿ ಅಧಿಕಾರಿಯಾಗಿ ಜನಪರ ಕಾಳಜಿ ಉಳ್ಳ ಹಲವಾರು ಮಾದರಿ ಕೆಲಸಗಳನ್ನು ಮಾಡಿಕೊಂಡು ಬಂದಿದ್ದು ಅವರ ಕರ್ತವ್ಯ ನಿಷ್ಠೆಗೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಇತ್ತೀಚಿಗೆ ಜ. 19 ರಂದು ಯೂನಿವರ್ಸಿಟಿ ಆಫ್ ಮೆಕ್ಸಿಕೋ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ನಂತರ ಪಂಚಾಯತಿ ಚುನಾಯಿತ ಪ್ರತಿನಿಧಿಗಳು ಹಾಗೂ ಸಿಬ್ಬಂದಿ ಪ್ರತಿಭಾವಂತ ಅಧಿಕಾರಿ ಪ್ರಶಸ್ತಿ ನೀಡಿ ಗೌರವಿಸಿದರು.

ಗ್ರಾಮ ಪಂಚಾಯತಿ ಅಧ್ಯಕ್ಷ ಸಂಗಶೆಟ್ಟಿ ರಾಮತೀರ್ಥ, ಉಪಾಧ್ಯಕ್ಷ ರೇಣುಕಾ ರಾಹುಲ್ ,ಸರಕಾರಿ ಶಾಲೆಯ ಮುಖ್ಯಗುರುಗಳು ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು. ವಿದ್ಯಾರ್ಥಿಗಳು ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ತಾಲೂಕಿನ ಅಷ್ಟೂರ್‌ಗ್ರಾಪಂ ನಲ್ಲಿ ಪಿಡಿಒ ಗಾಯತ್ರಿದೇವಿ ಅವರಿಗೆ ಪ್ರತಿಭಾವಂತ ಅಧಿಕಾರಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಗ್ರಾಪಂ ಸಿಬ್ಬಂದಿ ಹಾಗೂ ಸದಸ್ಯರ ಸಹಕಾರದಿಂದ ಗ್ರಾಪಂ ವತಿಯಿಂದ ಅಭಿವೃದ್ಧಿ ಕಾಮಗಾರಿಗಳು ಕೈಗೊಳ್ಳಲು ಸಾಧ್ಯವಾಗಿದೆ. ನನ್ನ ಜನಪರ ಸೇವೆ ಪರಿಗಣಿಸಿ ಪ್ರತಿಭಾವಂತ ಅಧಿಕಾರಿ ಪ್ರಶಸ್ತಿ ನೀಡಿ ಗೌರವಿಸಿರುವುದು ನನ್ನ ಜವಾಬ್ದಾರಿ ಹೆಚ್ಚಿಸಿದೆ.

-ಗಾಯತ್ರಿದೇವಿ, ಪಿಡಿಒ

ತೆರಿಗೆ ಪಾವತಿ: ಐವರಿಗೆ ಸನ್ಮಾನ

ಗ್ರಾಪಂ ವ್ಯಾಪ್ತಿಯಲ್ಲಿ ಸ್ವಯಂ ಪ್ರೇರಣೆಯಿಂದ ಸಂಪೂರ್ಣವಾಗಿ ತೆರಿಗೆ ಪಾವತಿ ಮಾಡಿರುವ ಐದು ಜನರಿಗೆ ಗ್ರಾಪಂ ವತಿಯಿಂದ ಸನ್ಮಾನಿಸಿ ಗೌರವಿಸಲಾಗಿದೆ ಎಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಗಾಯತ್ರಿದೇವಿ ತಿಳಿಸಿದ್ದಾರೆ.

ಯುವಕರು ಭವ್ಯ ಭಾರತದ ಇತಿಹಾಸ ಅರಿಯಲಿ

ಬೀದರ್: ನಮಗೆಲ್ಲರಿಗೂ ವಾಕ್ ಸ್ವಾತಂತ್ರ್ಯ, ಧಾರ್ಮಿಕ ಆಚರಣೆ, ಮತದಾನದ ಹಕ್ಕು, ಗೌರವ ದಿಂದ ಬಾಳುವ ಹಕ್ಕುಗಳನ್ನು ನಮ್ಮ ಸಂವಿಧಾನ ನೀಡಿದೆ. ಸಮಸಮಾಜದ, ಸಾಮಾಜಿಕ ನ್ಯಾಯದ ಸ್ಪಷ್ಟ ಸಂದೇಶಗಳು ಸಂವಿಧಾನದಲ್ಲಿವೆ. ಶೋಷಿತರು, ದಲಿತರು, ವಂಚಿತರು, ದುರ್ಬಲರು, ಮಹಿಳೆಯರಿಗೂ ನ್ಯಾಯ ಕಲ್ಪಿಸಿರುವ ನಮ್ಮ ಸಂವಿಧಾನ ಇಡೀ ವಿಶ್ವಕ್ಕೇ ಮಾದರಿಯಾಗಿದೆ ಎಂದು ಅರಣ್ಯ ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ.ಖಂಡ್ರೆ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 77ನೇ ಗಣರಾಜ್ಯೋತ್ಸವ ನಿಮಿತ್ತ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಭಾರತದ ಸಂವಿಧಾನ ಹಲವು ವೈಶಿಷ್ಟ್ಯತೆಗಳಿಂದ ಕೂಡಿದೆ. ಇಷ್ಟು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಹೊಂದಿರುವ ಲಿಖಿತ ಸಂವಿಧಾನದಂತಹ ಯಾವುದೇ ಗೊಂದಲ ಅಸ್ಪಷ್ಟತೆ ಇಲ್ಲದ ಸಂವಿಧಾನ ಬೇರೆ ಯಾವ ರಾಷ್ಟ್ರದಲ್ಲೂ ಇಲ್ಲ ಎಂದರೆ ಅತಿಶಯೋಕ್ತಿ ಯಾಗಲಾರದು. ಇದಕ್ಕೆ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ಅವರ ಪರಿಶ್ರಮ ಕಾರಣವಾಗಿದೆ. ನಮ್ಮ ಸಂವಿಧಾನ ಭಾರತದ ಎಲ್ಲ ಪ್ರಜೆಗಳಿಗೂ ಬದುಕುವ ಸಮಾನಹಕ್ಕು ಕಲ್ಪಿಸಿದೆ. ಹಲವು ಮೂಲಭೂತ ಹಕ್ಕುಗಳನ್ನು ನೀಡಿದೆ. ಅದೇ ರೀತಿ ನಮ್ಮ ಕರ್ತವ್ಯಗಳೇನು ಎಂಬುದನ್ನೂ ತಿಳಿಸಿಕೊಟ್ಟಿದೆ ಎಂದರು. ಇಂದಿನ ಯುವ ಜನರು ಭಾರತದ ಭವ್ಯ ಇತಿಹಾಸವನ್ನು ತಿಳಿಯಬೇಕು ಸ್ವಾತಂತ್ರ್ಯ ಪೂರ್ವದಲ್ಲಿ ಹೇಗಿತ್ತು. ಇಂದು ತಾಂತ್ರಿಕವಾಗಿ, ವೈಜ್ಞಾನಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹೇಗೆ ಪ್ರಗತಿ ಸಾಧಿಸಿದೆ ಎಂದರು. ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ವಿಧಾನ ಪರಿಷತ್ ಸದಸ್ಯರಾದ ಮಾರುತಿರಾವ ಮೂಳೆ, ನಗರಸಭೆ ಅಧ್ಯಕ್ಷ ಮಹ್ಮದ ಗೌಸ್, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಪಂ ಸಿಇಒ ಡಾ. ಗಿರೀಶ್ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಬೀದರ್ ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್ ಇದ್ದರು.

ಬೀದರ್ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಚಿವ ಈಶ್ವರ ಖಂಡ್ರೆ ಮಾತನಾಡಿದರು.

ಬುದ್ಧ, ಬಸವ, ಅಂಬೇಡ್ಕರ ಅವರ ತತ್ವ ಆದರ್ಶಗಳನ್ನು ಇಂದಿನ ಯುವ ಪೀಳಿಗೆಯಲ್ಲಿ ಬಿತ್ತಿ ಅನುಸರಿಸಬೇಕಿದೆ. ಇಡೀ ಜಗತ್ತಿಗೆ ಸಮಾನತೆ ಸಾಮಾಜಿಕ ನ್ಯಾಯ ಪರಿಕಲ್ಪನೆಯನ್ನು ನೀಡಿದ ಬಸವಾದಿ ಶರಣರ ನೆಲ ಇದು, 12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ಎಲ್ಲ ಜಾತಿ ಹಾಗೂ ಮಹಿಳೆಯರಿಗೆ ಸಮಾನತೆಯನ್ನು ಸಾರಿದರು. ಈಗ 750 ಕೋಟಿರೂ. ವೆಚ್ಚದಲ್ಲಿ ಆಧುನಿಕ ಅನುಭವ ಮಂಟಪ ನಿರ್ಮಿಸಲಾಗುತ್ತಿದೆ. ಈಗ ಶೇ. 70 ರಷ್ಟು ಕಾಮಗಾರಿ ಪೂರ್ಣಗೊಂಡಿದೆ.

-ಈಶ್ವರ ಬಿ.ಖಂಡ್ರೆ, ಉಸ್ತುವಾರಿ ಸಚಿವ

ಪ್ರಜಾಪ್ರಭುತ್ವದ ಆದರ್ಶಗಳು ಮಾರ್ಗದರ್ಶನ

ಬೀದರ್: ರಾಷ್ಟ್ರದ ಏಕತೆ, ಸಮಾನತೆ, ಸಮೃದ್ಧಿ ಸಾಧಿಸುವಲ್ಲಿ ಪ್ರಜಾಪ್ರಭುತ್ವದ ಆದರ್ಶಗಳು ನಮ್ಮ ಹಾದಿಗೆ ಮಾರ್ಗದರ್ಶನ ನೀಡುತ್ತಲೇ ಇರಲೆಂದು ಬೀದರ್ ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಎಸ್.ವಿ. ಪಾಟೀಲ್ ಹೇಳಿದರು. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯ ಅಧೀನದಲ್ಲಿರುವ ಬೀದರ್‌ತೋಟಗಾರಿಕಾ ಮಹಾವಿದ್ಯಾಲಯದ ಆವರಣದಲ್ಲಿ 77ನೇ ಗಣರಾಜ್ಯೋತ್ಸವ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ದೇಶಭಕ್ತಿ ಮತ್ತು ಏಕತೆಯ ಮನೋಭಾವ ರಾಷ್ಟ್ರದ ಒಳಿತಿಗೆ ಕೊಡುಗೆ ನೀಡಲಿ, ಸುಭದ್ರ ಸೌಹಾರ್ದ ಹಾಗೂ ಸಮೃದ್ಧ ಕರ್ನಾಟಕ, ಭಾರತ ನಿರ್ಮಿಸಲು ಸಂವಿಧಾನದ ಶಕ್ತಿ ಬಳಸಿಕೊಂಡು ಮುನ್ನಡೆಯೋಣ. ಮಾದರಿ ಪ್ರಜಾಪ್ರಭುತ್ವವನ್ನು ಇನ್ನಷ್ಟು ಶಕ್ತಗೊಳಿಸಿ ಅಭಿವೃದ್ಧಿಶೀಲ ರಾಷ್ಟ್ರದ ನಿರ್ಮಾಣಕ್ಕೆ ಹೊಸ ಪಣಗಳನ್ನು ತೊಡಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ವಿದ್ಯಾರ್ಥಿ ಗಳು ಅತೀ ಹೆಚ್ಚು ಫೆಲೋಶಿಪ್ ಗಳಿಸುವುದರೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ್ದಾರೆ ಎಂದರು. ವಿಶ್ವವಿದ್ಯಾಲಯು ಈಗಾಗಲೇ ರಾಷ್ಟ್ರ ಹಾಗೂ ಅಂತಾಷ್ಟ್ರೀಯ ಮಟ್ಟದಲ್ಲಿ ತನ್ನದೆಯಾದ ಛಾಪು ಮೂಡಿಸಿದ್ದು, ಇನ್ನೂ ಹೆಚ್ಚು ಹೆಸರುವಾಸಿಯಾಗಲೂ ನಮ್ಮ ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ, ಕಾರ್ಮಿಕ ಬಂಧುಗಳು ಮತ್ತು ವಿದ್ಯಾರ್ಥಿಗಳು ಹೆಚ್ಚಿನ ಪರಿಶ್ರಮವನ್ನು ವಹಿಸಿ ದಕ್ಷ ಹಾಗೂ ಪ್ರಾಮಾಣಿಕವಾಗಿ ಕೆಲಸವನ್ನು ನಿರ್ವಹಿಸಬೇಕು ಎಂದು ಸಲಹೆ ನೀಡಿದರು. ಈ ಸಂದರ್ಭ ದಲ್ಲಿ ಡಾ.ಮಹ್ಮದ್ ಫಾರೂಕ, ಡಾ. ವಿ.ಪಿ. ಸಿಂಗ್, ಡಾ.ವಿಜಯ ಮಹಾಂತೇಶ, ಶಿಕ್ಷಕ, ಶಿಕ್ಷಕೇತರ ನೌಕರರು ಉಪಸ್ಥಿತರಿದ್ದರು.

ಬೀದರ್ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಗಣರಾಜ್ಯೋತ್ಸವ ದಿನಾಚರಣೆ ಆಚರಿಸಲಾಯಿತು.

ಗೌರವಯುತ ಬದುಕು ಕಲ್ಪಿಸುವ ಗ್ರಂಥವೇ ಸಂವಿಧಾನ

ಸುರಪುರ: ನಮ್ಮ ದೇಶದ ಪ್ರಗತಿಗೆ ಡಾ.ಬಾಬಾ ಸಾಹೇಬ ಅಂಬೇಡ್ಕರ ಮತ್ತು ಸಂವಿಧಾನ ರಚನಾ ಸಮಿತಿಯ ಸದಸ್ಯರು ಸುಮಾರು 2 ವರ್ಷ 18 ತಿಂಗಳುಗಳ ಕಾಲ ಚರ್ಚಿಸಿ ವಿವಿಧ ದೇಶಗಳ ಸಂವಿಧಾನಗಳನ್ನು ಅಧ್ಯಯನ ನಡೆಸಿ, ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳನ್ನು ನೀಡಿದೆ. ಜಾತಿ, ಧರ್ಮ,ಭಾಷೆ, ಲಿಂಗ ಭೇದವಿಲ್ಲದೆ ಎಲ್ಲರಿಗೂ ಗೌರವಯುತ ಬದುಕು ಕಲ್ಪಿಸುವ ಮಹಾನ್ ಗ್ರಂಥವೇ ನಮ್ಮ ಸಂವಿಧಾನವಾಗಿದೆ ಎಂದು ಶಾಸಕ ರಾಜಾ ವೇಣುಗೋಪಾಲ ನಾಯಕ ತಿಳಿಸಿದರು.

ನಗರದ ನಗರದ ಪ್ರಭು ಕಾಲೇಜು ಆವರಣದಲ್ಲಿ ತಾಲೂಕು ಆಡಳಿತ ವತಿಯಿಂದ 77ನೇ ಗಣರಾಜ್ಯೋತ್ಸವ ದಿನಾಚರಣೆಯ ಧ್ವಜಾರೋಹಣದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗಣರಾಜ್ಯೋತ್ಸವ ಕೇವಲ ಆಚರಣೆಗಷ್ಟೇ ಸೀಮಿತ ವಾಗಬಾರದು. ನಮ್ಮ ಕರ್ತವ್ಯಗಳನ್ನು ನೆನಪಿಸಿಕೊಳ್ಳುವ ದಿನವಾಗಬೇಕು. ದೇಶದ ಕಾನೂನಿಗೆ ಗೌರವ ನೀಡುವುದು, ಸ್ವಚ್ಛತೆ ಕಾಪಾಡುವುದು, ಸಾಮಾಜಿಕ ಸೌಹಾರ್ದತೆ ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದರು.

ನಂತರ ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದ್ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ತಹಸೀಲ್ದಾರ್ ಎಚ್.ಎ.ಸರಕಾವಸ್, ಬಿಇಒ ಯಲ್ಲಪ್ಪ ಕಾಡ್ಲೂರು ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಿಂಗರಾಜ ಬಾಚಿಮಟ್ಟಿ, ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಉಪಾಧ್ಯಕ್ಷ ರಮೇಶ ದೊರೆ, ಮುಖಂಡರುಗಳಾದ ಮಲ್ಲಣ್ಣ ಸಾಹುಕಾರ ಮುಧೋಳ, ರಾಜಾ ಪಿಡ್ಡನಾಯಕ(ತಾತಾ), ವೆಂಕಟೇಶ ಬೇಟೆಗಾರ, ವೆಂಕೇಶ ಹೊಸ್ಮನಿ, ಸುವರ್ಣಾ ಸಿದ್ರಾಮ ಎಲಿಗಾರ, ಪ್ರಕಾಶ ಅಲಬನೂರ, ಸಾಯಬಣ್ಣ ಮಡಿವಾಳ, ಭಂಡಾರಿ ನಾಟೇಕಾರ, ಶಕೀಲ್ ಅಹ್ಮದ, ಡಿವೈಎಸ್‌ಪಿ ಜಾವೇದ್ ಇನಾಮದಾರ, ಪಿಐ ಉಮೇಶ.ಎಂ, ಇಒ ಬಸವರಾಜ ಸಜ್ಜನ್, ಟಿಎಚ್‌ಒ ಡಾ.ಆರ್.ವಿ.ನಾಯಕ, ಪಿ ಡಬ್ಲ್ಯೂಎಇಇ ಎಚ್.ಜಿ.ಪಾಟೀಲ, ಎಸ್‌ಟಿಒ ಸಣ್ಣಕ್ಕೆಪ್ಪ ಕೊಂಡಿಕಾರ, ಪೌರಾಯುಕ್ತ ಬಸವರಾಜ ಟಣಕೇದಾರ, ಯಲ್ಲಪ್ಪ ಹುಲಿಕಲ್ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಹಾದೇವಪ್ಪ ಗುತ್ತೇದಾರ ನಿರೂಪಿಸಿದರು ಕ್ಷೇತ್ರ ಸಮನ್ವಯಾಧಿಕಾರಿ ಪಂಡಿತ್ ನಿಂಬೂರ ಸ್ವಾಗತಿಸಿದರು ಖಾದರ ಪಟೇಲ ವಂದಿಸಿದರು.

ಪಥ ಸಂಚಲನ: ಪಿಎಸ್‌ಐ ಸಿದ್ದಣ್ಣ ಯಡ್ರಾಮಿ ನೇತೃತ್ವದಲ್ಲಿ ಆಕರ್ಷಕ ಪಥ ಸಂಚಲನ ನಡೆಯಿತು, ಗೃಹ ರಕ್ಷಕದಳ ಘಟಕಾಧಿಕಾರಿ ವೆಂಕಟೇಶ್ವರ ಸುರಪುರಕರ, ಪ್ಲಾಟೂನ್ ಕಮಾಂಡರ್‌ರಮೇಶ ಅಂಬೂರೆ ಮತ್ತು ಎನ್‌ಸಿ ತಂಡದ ಕು. ರಾಹುಲ್ ಸೀನಿಯರ್ ಅಂಡರ್ ಆಫೀಸರ್ ಸೇರಿದಂತೆ ಸೇವಾದಳ, ಸ್ಕೌಟ್ಸ್ ಮತ್ತು ಗೈಡ್ ತಂಡಗಳು ಭಾಗವಹಿಸಿದ್ದರು.

ಸಾಧಕರಿಗೆ ಸನ್ಮಾನ : ವಿವಿಧ ಕ್ಷೇತ್ರದಲ್ಲಿ ಸೇವೆಗೈದ ಸಾಧಕರನ್ನು ಶಾಸಕ ರಾಜಾ ವೇಣುಗೋಪಾಲ ನಾಯಕ ಅವರು ಸನ್ಮಾನಿಸಿದರು. ವಿನೋದ ನಾಯಕ(ಕೃಷಿ), ಶ್ರೀನಿವಾಸ ಜಾಲವಾದಿ(ಸಾಹಿತ್ಯ), ಬಲಭೀಮ ಶೆಳ್ಳಗಿ(ಕಲೆ), ಹಣಮಂತ ಯರಗೋಟ, ನಿಂಗಪ್ಪ ಬೋವಿ(ಸಂಗೀತ), ಅಜಯಕುಮಾರ ದಳವಾಯಿ(ಕ್ರೀಡೆ), ಗಿರೀಶ ಬ್ಯಾಕೋಡ, ಹೊನ್ನಪ್ಪ ತೇಲ್ಕರ(ಮಾಧ್ಯಮ) ಮತ್ತು ರಾಷ್ಟ್ರಮಟ್ಟದ ಖೋ ಖೋ ತಂಡಕ್ಕೆ ಆಯ್ಕೆಗೊಂಡ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಗರದ ಪ್ರಭು ಕಾಲೇಜು ಆವರಣದಲ್ಲಿತಾಲೂಕು ಆಡಳಿತ ವತಿಯಿಂದ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣದಲ್ಲಿ ಭಾಗವಹಿಸಿ ಶಾಸಕ ರಾಜಾ ವೇಣುಗೋಪಾಲ ನಾಯಕ ಮಾತನಾಡಿದರು.

ಯಾದಗಿರಿ ಜಿಲ್ಲಾ ಜೆಡಿಎಸ್‌ನಿಂದ ಗಣರಾಜ್ಯೋತ್ಸವ

ಯಾದಗಿರಿ: ನಗರದ ಜಿಲ್ಲಾ ಜೆಡಿಎಸ್ ಕಾರ್ಯಾಲಯದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಜಿಲ್ಲಾಧ್ಯಕ್ಷ ಸುಭಾಷ್ಶ್ಚಂದ್ರ ಕಟಕಟಿ ನೇತೃತ್ವದದಲ್ಲಿ ಧ್ವಜಾರೋಹಣ ನೆರವೇರಿಸಿ ಗಣರಾಜ್ಯೋತ್ಸವ ದಿನ ಆಚರಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಕಟಕಟಿ ನಮ್ಮ ಜೆಡಿಎಸ್ ಪಕ್ಷವು ರೈತರ ಹಕ್ಕುಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಜಾತ್ಯತೀತೆಯ ರಾಜಕಾರಣಕ್ಕೆ ಒತ್ತು ನೀಡುತ್ತಾ ಬಂದಿದ್ದು, ಈ ಗಣರಾಜ್ಯದ ಆಶಯಗಳನ್ನು ಈಡೇರಿಸುತ್ತಾ ಕರ್ನಾಟಕದಲ್ಲಿ ನಮ್ಮ ಪಕ್ಷ ಜನರ ಸಮಸ್ಯೆಗಳಿಗೆ ಧ್ವನಿಯಾಗಿದ್ದು, ಈ ಗಣರಾಜ್ಯೋತ್ಸವದ ದಿನ ರಾಷ್ಟ್ರೀಯ ಏಕತೆಗಾಗಿ ನಾವೆಲ್ಲರೂ ಪ್ರತಿಜ್ಞೆ ಮಾಡೋಣ ಎಂದರು.

ಇದೇ ವೇಳೆ ಮಹಿಳಾ ಜಿಲ್ಲಾಧ್ಯಕ್ಷರಾದ ನಾಗರತ್ನ ಅನಪುರ ಮಾತನಾಡಿ ದೇಶಭಕ್ತಿ, ಐಕ್ಯತೆ ಮತ್ತು ಸಂವಿಧಾನದ ಆದರ್ಶಗಳನ್ನು ಗೌರವಿಸುವ ಈ ಸುದಿನದಂದು ನಮ್ಮ ಸಂವಿಧಾನವು ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯವನ್ನು ಎತ್ತಿ ಹಿಡಿಯುತ್ತದೆ. ಇಂದಿನ ಆಚರಣೆಯು ನಮ್ಮ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಲಿ ಗ್ರಾಮೀಣ ಅಭಿವೃದ್ಧಿ, ಯುವಕರ ಉದ್ಯೋಗ, ಮಹಿಳಾ ಸಬಲೀಕರಣಕ್ಕಾಗಿ ನಾವು ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಚನ್ನಪ್ಪಗೌಡ ಮೊಸಂಬಿ, ವಿಶ್ವನಾಥ್ ಶಿರವಾರ, ರಾಮಣ್ಣ ಕೋಟಗೇರಾ, ಮಲ್ಲನಗೌಡ ಹಳಿಮನಿ, ಬಂದಪ್ಪ ಹರಳಿ, ಬಸ್ಸುಗೌಡ, ರಾಜುಗೌಡ, ಪರಮರೆಡ್ಡಿ, ಶರಣಪ್ಪಗೌಡ, ಬಸವರಾಜ ಗಿರೆಪ್ಪ ನೋರ, ನರಸಿಂಹ ರೆಡ್ಡಿ, ಶರಣುಗಾಡಿ, ಹರೀಶವಾಲಿ, ಮಲ್ಲು ಗುಂಡಗುರ್ತಿ,ಉದಯ್, ನಿಂಗಪ್ಪ ಯಡ್ಡಳ್ಳಿ, ಯಲ್ಲಾಲಿಂಗ ಚಾಮನಹಳ್ಳಿ, ಸಾಯಿಬಣ್ಣ ಯಾದವ್ ಸೇರಿದಂತೆ ಇನ್ನಿತರರಿದ್ದರು.

ಸಮಾಚಾರ ಸಣ್ಣದಲ್ಲ

ಭೀಮಾಶಂಕರ ಡಾಂಗೆ ರಾಜ್ಯ ಮಟ್ಟಕ್ಕೆ ಆಯ್ಕೆ

ಕಲಬುರಗಿ: ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ನಗರದ ಕೇಂದ್ರ ಕಾರಾಗೃಹದ ಸಹಾಯಕ ಆಡಳಿತಾಧಿಕಾರಿ ಭೀಮಾಶಂಕರ ಕೆ. ಡಾಂಗೆ ಅವರು ಅತ್ಯುತ್ತಮ ಸಾಧನೆ ಮಾಡಿದ್ದಾರೆ. 50-60 ವರ್ಷದೊಳಗಿನವರ ವಿಭಾಗದ 400 ಮೀಟರ್‌ಓಟ ಮತ್ತು ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನ ಹಾಗೂ 100 ಮೀಟರ್‌ಓಟದಲ್ಲಿ ತೃತೀಯ ಸ್ಥಾನ ಪಡೆಯುವ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಜಿಲ್ಲಾಡಳಿತ ಹಾಗೂ ಸರ್ಕಾರಿ ನೌಕರರ ಸಂಘದ ಸಹಯೋಗದಲ್ಲಿ ಆಯೋಜಿಸಿದ್ದ ಈ ಕೂಟದಲ್ಲಿ ಭೀಮಾಶಂಕರ ಅವರ ಕ್ರೀಡಾ ಸ್ಫೂರ್ತಿಗೆ ಮೆಚ್ಚುಗೆ ವ್ಯಕ್ತವಾಗಿದೆ.

ಶಿಕ್ಷಣ ಪಡೆದಾಗ ಬದಲಾವಣೆ ಸಾಧ್ಯ

ಕಮಲಾಪೂರ: ಸ್ವಾತಂತ್ರ ತಂದುಕೊಟ್ಟ ಗಾಂಧೀಜಿ ಅವರು ಹಾಗೂ ಸವಿಂಧಾನ ಜಾರಿಗೆ ತಂದ ಅಂಬೇಡ್ಕರ ನೆನಪು ಅಜರಾಮರವಾಗಿದೆ ಎಂದು ಕಲಬುರಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮಡು ಅವರು ಅಭಿಪ್ರಾಯಪಟ್ಟರು. ತಾಲೂಕಿನ ಡೊಂಗರಗಾಂವ ಗ್ರಾಮದಲ್ಲಿ ಗ್ರಾಮ ಪಂಚಾಯತ ವತಿಯಿಂದ ಹಮ್ಮಿಕೊಂಡ 77ನೇ ಗಣರಾಜ್ಯೋತ್ಸವ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು,ಸ್ವಾತಂತ್ರ್ಯ ಸಮಾನತೆ ಭಾತೃತ್ವದ ಮೂಲಕ ನಮ್ಮ ದೇಶಕ್ಕೆ ಸ್ವಾತಂತ್ರವನ್ನು ತಂದುಕೊಟ್ಟ ಕೀರ್ತಿ ಗಾಂಧೀಜಿಯವರಿಗೆ ಸಲ್ಲುತ್ತದೆ. ಮಹಾತ್ಮ ಗಾಂಧೀಜಿಯ ಹೋರಾಟದಿಂದ ಅಂಬೇಡ್ಕರ್ ಸವಿಂಧಾನ ರಚನೆಯಾಗಿದ್ದರಿಂದ ನಾವು ಇಬ್ಬರನ್ನು ನೆನಪು ಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿ ಅರವತ್ತು ಭಾಗ ಯುವಕರು ಇರುವುದರಿಂದ ಏನಾದರೂ ಬದಲಾವಣೆ ಆಗಬೇಕು ಅಂದರೆ ನಮ್ಮ ಯುವಕರರಿಂದ ಮಾತ್ರ ಸಾಧ್ಯ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಅನಿಲಕುಮಾರ ಪಿ. ಬೆಳಕೇರಿ,ರವೀಂದ್ರ ಪಾಟೀಲ್ ,ಡಾ. ಮೇಘರಾಜ, ಶಾಂತಕುಮಾರ ಪಾಟೀಲ, ವಿಜಯಕುಮಾರ ವಡ್ಡನಕೇರ, ಮಹದೇವ ಪಾಟೀಲ, ಸುನಿಲ ಬಿರಾದಾರ, ಬಸವರಾಜ ಸಿಂಗೆ, ಮಾಜಿ ಗ್ರಾಪಂ ಅಧ್ಯಕ್ಷ ಚಂದ್ರಶೇಖರ ಗೋಳಾದ ,ಶಾಲಾ ವಿದ್ಯಾರ್ಥಿಗಳು ಶಿಕ್ಷಕರು ಗ್ರಾಮಸ್ಥರು ಇದ್ದರು.

ಸಂವಿಧಾನ ದೇಶದ ಪವಿತ್ರ ಗ್ರಂಥ

ಕಲಬುರಗಿ: ಭಾರತಕ್ಕೆ ಸಂವಿಧಾನ ಪವಿತ್ರ ಗ್ರಂಥವಾಗಿದ್ದು, ನಮ್ಮೆಗಲ್ಲರಿಗೂ ಸಂವಿಧಾನವೇ ಆಧಾರವಾಗಿದೆ ಎಂದು ಚೌಡೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಹಾಗೂ ಸ್ತ್ರೀ ರೋಗ ತಜ್ಞೆ ಡಾ. ಇಂದಿರಾ ಶಕ್ತಿ ಹೇಳಿದರು.ನಗರದ ಬ್ರಹ್ಮಾಪುರ ಬಡಾವಣೆಯ ಚೌಡೇಶ್ವರಿ ಕಾಲೋನಿಯಲ್ಲಿ ಚೌಡೇಶ್ವರ ವಿದ್ಯಾವರ್ಧಕ ಸಂಸ್ಥೆಯ ಶ್ರೀ ಚೌಡೇಶ್ವರ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ 77ನೇ ಗಣರಾಜ್ಯೋತ್ಸವ ದಿನಾಚರಣೆಯ ತ್ರಿವರ್ಣ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿ, ಭಾರತೀಯರಿಗೆ ಗಣರಾಜ್ಯೋತ್ಸವವು ಮನೆ ಮನೆಗಳ ರಾಷ್ಟ್ರೀಯ ಹಬ್ಬವಾಗಬೇಕು. ಇಂದಿನ ಮಕ್ಕಳಲ್ಲಿ ದೇಶಾಭಿಮಾನ, ದೇಶರಕ್ಷಣೆ ಮತ್ತು ದೇಶಭಕ್ತಿ ಸದ್ಗುಣಗಳು ಬೆಳೆಯಬೇಕಿದ್ದು, ದೇಶದ ಇತಿಹಾಸ, ಸಂಸ್ಕೃತಿ, ಆಚಾರ-ವಿಚಾರ ಬೆಳಕು ಚೆಲ್ಲುವ ಕೆಲಸ ಆಗಬೇಕು ಎಂದರು. ಮುಖ್ಯ ಅತಿಥಿಗಳಾಗಿದ್ದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಭೀಮಾಶಂಕರ ಫಿರೋಜಾಬಾದ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖ್ಯಗುರು ಸೂರ್ಯಕಾಂತ ಎಂ. ಜಮಾದಾರ್,ಶಿಕ್ಷಕರಾದ ಶಿವಾನಂದ ಲೇಂಗಟಿ, ಪ್ರತಿಭಾ ವಂಟಿ, ಮಂಗಲಾ ಗೌರೆ, ಮಹಾಂತಯ್ಯ ಸ್ಥಾವರಮಠ, ಪ್ರತಿಭಾ ಗಂದಿಗುಡಿ, ನಿಂಗಣ್ಣ ಪೂಜಾರಿ ಸೇರಿದಂತೆ ಶಿಕ್ಷಕ-ಶಿಕ್ಷಕಯೇತರರು ಭಾಗವಹಿಸಿದ್ದರು.

ಗಣರಾಜ್ಯೋತ್ಸವ: ಧ್ವಜಾರೋಹಣ

ಕಲಬುರಗಿ: ಲೋಕೋಪಯೋಗಿ ಇಲಾಖೆಯ ಭವನದಲ್ಲಿ 77 ನೇ ಗಣರಾಜ್ಯೋತ್ಸವ ದಿನಾಚರಣೆ ಆಚರಿಸಲಾಯಿತು. ಸಂಪರ್ಕ ಮತ್ತು ಕಟ್ಟಡಗಳು ಮುಖ್ಯ ಅಭಿಯಂತರಾದ ಶರಣಪ್ಪಾ ಸುಲಗಂಟೆ ಅವರು ಧ್ವಜಾರೋಹಣ ನೆರವೇರಿಸಿದರು. ಇತ್ತೀಚೆಗೆ ಬುದ್ಧವಿಹಾರ ಮೈದಾನದಲ್ಲಿ ಕರ್ನಾಟಕ ರಾಜ್ಯ ಲೋಕೋಪಯೋಗಿ ಇಲಾಖೆ ನೌಕರರ ಸಂಘ (ನೋಂದಣಿ) ಬೆಂಗಳೂರು ಜಿಲ್ಲಾ ಘಟಕ ವತಿಯಿಂದ ಗಣರಾಜೋತ್ಸವ ಅಂಗವಾಗಿ ಲೋಕೋಪಯೋಗಿ ಇಲಾಖೆಯ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಯವರು ಹಾಗೂ ಲೋಕೋಯೋಗಿ ಇಲಾಖೆಯ ಗುತ್ತಿಗೆದಾರರಿಗೆ ಕ್ರಿಕೆಟ್ ಪದ್ಯಾಂವಳಿ ಆಯೋಜಿಸಲಾಯಿತು. ಈ ಪಂದ್ಯಾವಳಿಯಲ್ಲಿ ವಿಜೇತರಾದ ಗುತ್ತಿಗೇದಾರ ತಂಡದವರಿಗೆ ಪ್ರಶಸ್ತಿ ಟ್ರೋಫಿ ವಿತರಿಸಲಾಯಿತು.ಈ ಸಂದರ್ಭದಲ್ಲಿ (ವಿನ್ಯಾಸ) ಮುಖ್ಯ ಅಭಿಯಂತರವರ ಕಚೇರಿ ಅಧೀಕ್ಷಕ ಅಭಿಯಂತರಾದ ಸುರೇಶ ಎಲ್ ಶರ್ಮಾ ಇದ್ದರು.

{ಜಮೀರ್‌ಅಹ್ಮದ್ } ಸಚಿವ

ದೇವೇಗೌಡ್ರು, ನೂರು ವರ್ಷ ಆರೋಗ್ಯವಾಗಿ ಇರಲಿ. ನಾನು ಈಗ ಕಾಂಗ್ರೆಸ್ನಲ್ಲಿ ಇರಬಹುದು, ಆದರೆ ಅವರು ನನ್ನ ರಾಜಕೀಯ ಗುರುಗಳು. ಇನ್ನೂ, ಪ್ರಾದೇಶಿಕ ಪಕ್ಷಕ್ಕೆ ಅಷ್ಟೋ ಇಷ್ಟೋ ಶಕ್ತಿ ಇದೆ. ಬಿಜೆಪಿ ಸೇರಿ ಅದನ್ನು ಕೂಡ ಕಳ್ಕೊಂಡಿದ್ದಾರೆ. ಬಿಜೆಪಿ ಜೊತೆ ಸೇರಿದ್ರೆ ಏನು ಆಗುತ್ತೆ ಅಂತಾ ಮುಂದೆ ನೋಡೋಣ.

ಜಿಲ್ಲಾಡಳಿತದಿಂದ 77ನೇ ಗಣರಾಜ್ಯೋತ್ಸವ | ಧ್ವಜಾರೋಹಣ ನೆರವೇರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ

ಸಂವಿಧಾನದಿಂದಲೇ ವಿವಿಧತೆಯಲ್ಲಿ ಏಕತೆ ಸಾಧ್ಯ

ಕಲಬುರಗಿ: ಸಂವಿಧಾನವೇ ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆಯ ಮೂಲಾಧಾರವಾಗಿದ್ದು, ಸಂವಿಧಾನವೇ ಇಲ್ಲದಿದ್ದರೆ ದೇಶದಲ್ಲಿ ವಿವಿಧತೆಯ ನಡುವೆ ಭಾವೈಕ್ಯತೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಭಾರತ ಇಂದು ವಿವಿಧತೆಯಲ್ಲಿ ಏಕತೆಯಾಗಿ ನಿಂತಿರುವುದಕ್ಕೆ ಪ್ರಮುಖ ಕಾರಣವೇ ಸಂವಿಧಾನ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅಭಿಮತ ವ್ಯಕ್ತಪಡಿಸಿದರು.

ಸೋಮವಾರ ನಗರದ ಡಿ.ಎ.ಆರ್. ಪೊಲೀಸ್ ಪರೇಡ್ ಮೈದಾನದಲ್ಲಿ 77ನೇ ಗಣರಾಜ್ಯೋತ್ಸವ ದಿನಾಚರಣೆಯ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ವಿವಿಧ ಪಡೆಗಳಿಂದ ಗೌರವ ಸ್ವೀಕರಿಸಿ ಮಾತನಾಡಿ, 26 ಜನವರಿ 1950ರಂದು ಸಂವಿಧಾನ ಜಾರಿಗೆ ಬಂದ ದಿನವು ದಮನಿತ ಸಮುದಾಯಗಳಿಗೆ ಧ್ವನಿ ದೊರೆತ ಐತಿಹಾಸಿಕ ಕ್ಷಣವಾಗಿದೆ. ಎಸ್ಸಿ, ಎಸ್ಟಿ, ಆದಿವಾಸಿಗಳು ಮುಖ್ಯವಾಹಿನಿಗೆ ಬಂದ ದಿನವಾಗಿದ್ದು, ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಿದ ಮಹತ್ವದ ದಿನವಾಗಿದೆ ಎಂದು ಹೇಳಿದರು.

ರಾಜಕೀಯ ಸಮಾನತೆಯೊಂದೇ ಸಾಕಾಗದು, ಆರ್ಥಿಕ ಹಾಗೂ ಸಾಮಾಜಿಕ ಸಮಾನತೆ ಕೂಡ ಅಗತ್ಯವಿದೆ. ಮತದಾನದಲ್ಲಿ ಸಮಾನತೆ ದೊರೆತಿದ್ದರೂ, ಉದ್ಯೋಗ, ಅವಕಾಶ, ಶಿಕ್ಷಣ ಸೇರಿ ಅನೇಕ ಕ್ಷೇತ್ರಗಳಲ್ಲಿ ಇನ್ನೂ ಅ ಸ ' ವ ' ಾ ನ ' ತ ' ಕಾಣಿಸುತ್ತಿದೆ. ಅದನ್ನು ಹೋಗಲಾಡಿಸಲು ರಾಜ್ಯ ಸರಕಾರವು ರೈತರು, ಮಹಿಳೆಯರು, ಕಾರ್ಮಿಕರು ಹಾಗೂ ದುರ್ಬಲ ವರ್ಗಗಳಿಗೆ ಆರ್ಥಿಕ ಸಮಾನತೆ ತರುವ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಆರ್ಥಿಕ ಸಬಲತೆ ಮತ್ತು ಸಾಮಾಜಿಕ ಭದ್ರತೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಆಕರ್ಷಕ ಪರೇಡ್, ಕಲಾತಂಡಗಳು ಭಾಗಿ

ಗಣರಾಜ್ಯೋತ್ಸವದಲ್ಲಿ ಡಿಎಆರ್,ಕೆಎಸ್ ಆರ್ಪಿ,ಮಹಿಳಾ ಮೀಸಲು, ಹೋಮ್ ಗಾರ್ಡ್, ಅರಣ್ಯ ಇಲಾಖೆ, ರೆಡ್ ಕ್ರಾಸ್ ಸೇರಿ 16 ವಿವಿಧ ತುಕಡಿಗಳು ಆಕರ್ಷಕ ಪರೇಡ್ ನಡೆಸಿದವು. ಆರೋಗ್ಯ, ಕೃಷಿ, ಅರಣ್ಯ, ಸಾರಿಗೆ, ಜೆಸ್ಕಾಂ ಇಲಾಖೆ ಸೇರಿ ಎಂಟು ಇಲಾಖೆಗಳ ಸ್ತಬ್ಧ ಚಿತ್ರಗಳ ಪ್ರದರ್ಶನ ನಡೆಯಿತು. ಡೊಳ್ಳು ಕುಣಿತ, ಹಲಗೆ ವಾದನ, ಲಂಬಾಣಿ ನೃತ್ಯ ಸೇರಿ ವಿವಿಧ ಕಲಾತಂಡಗಳು ಭಾಗಿಯಾಗಿದವು.

ನವ ಕಲಬುರಗಿ ನಿರ್ಮಾಣಕ್ಕೆ ಬದ್ಧ:ನವ ಕಲಬುರಗಿ ನಿರ್ಮಾಣಕ್ಕೆ ಸರಕಾರ ಬದ್ಧವಾಗಿದ್ದು, ಇದಕ್ಕಾಗಿ 2,591 ಕೋಟಿ ರು. ಅನುದಾನ ದೊರೆತಿದೆ. ಕಲಬುರಗಿ ರೊಟ್ಟಿಗೆ ಬ್ರ್ಯಾಂಡಿಂಗ್ ಮಾಡಿ 1,000ಕ್ಕೂ ಹೆಚ್ಚು ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಲಾಗಿದೆ. ಜತೆಗೆ ನಾಲ್ಕು ಡ್ರೋನ್ ಸಿಂಪಡಣೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನವ ಕಲಬುರಗಿ, ಸಮೃದ್ಧ ಹಾಗೂ ಸಮಾನ ಅವಕಾಶಗಳನ್ನು ಒದಗಿಸುವ ಸಮಾಜ ನಿರ್ಮಾಣಕ್ಕೆ ರಾಜ್ಯ ಸರಕಾರ ಸಂಪೂರ್ಣ ಬದ್ಧವಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.

ಹಲವರಿಗೆ ಗೌರವ ಸನ್ಮಾನ: 2025-26ನೇ ಸಾಲಿನ ಆತ್ಮ ಯೋಜನೆ ಅಡಿಯಲ್ಲಿ 9 ರೈತರಿಗೆ ಶ್ರೇಷ್ಠ ಕೃಷಿಕ ಪ್ರಶಸ್ತಿ ವಿತರಿಸಲಾಯಿತು. 2024-25ನೇ ಸಾಲಿನ ಎಸ್ ಎಸ್‌ಎಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಮೂವರು ವಿದ್ಯಾರ್ಥಿಗಳು, ಸಿಎಂ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು ಹಾಗೂ ರಾಷ್ಟ್ರಪತಿ ಪ್ರಶಸ್ತಿ ವಿಜೇತ 146 ಸಿವಿಲ್ ಹೆಡ್ ಕಾನ್ಸ್ಟೇಬಲ್ ಸನ್ಮಾನ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಶಾಸಕಿ ಕನೀಜ್ ಫಾತೀಮಾ, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ತಿಮ್ಮಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್ ,ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್‌ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್‌ಆಲಂ ಖಾನ್ ಹಾಗೂ ಮಹಾನಗರ ಪಾಲಿಕೆ ಮೇಯರ್‌ವರ್ಷಾ ರಾಜೀವ ಜಾನೆ, ಉಪ ಮೇಯರ್ ತೃಪ್ತಿ ಅಲ್ಲದ್ (ಲಾಖೆ), ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲಬುರಗಿ ಈಶಾನ್ಯ ವಲಯದ ಪೊಲೀಸ್ ಉಪ ಮಹಾನಿರೀಕ್ಷಕ ಶಾಂತನು ಸಿನ್ಹಾ, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್‌ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು ಹಾಗೂ ಮಹಾನಗರ ಪಾಲಿಕೆಯ ಆಯುಕ್ತ ಅವಿನಾಶ ಶಿಂಧೆ ಇದ್ದರು.

77ನೇ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ವಿವಿಧ ಪಡೆಗಳಿಂದ ಗೌರವ ಸ್ವೀಕರಿಸಿದರು.

ಬಡವರ ಹಕ್ಕು ಕಸಿದುಕೊಂಡ ಕೇಂದ್ರ ಸರಕಾರ

ಕೇಂದ್ರದಲ್ಲಿ ಈ ಹಿಂದೆ ಕಾಂಗ್ರೆಸ್ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಉದ್ಯೋಗ, ಆಹಾರ, ಶಿಕ್ಷಣ ಭದ್ರತೆಗೆ ಅನೇಕ ಯೋಜನೆಗಳನ್ನು ಜಾರಿಗೆ ತರಲಾಗಿತ್ತು. ನರೇಗಾ ಯೋಜನೆ ಜಗತ್ತಿನಲ್ಲೇ ಅತಿದೊಡ್ಡ ಸಾಮಾಜಿಕ ಭದ್ರತೆ ಯೋಜನೆಯಾಗಿದೆ. ಆದರೆ, ಕೇಂದ್ರ ಸರಕಾರ ಬೃಹತ್ ಉದ್ಯೋಗ ಸೃಜನಾತ್ಮಕ ಯೋಜನೆಗಳನ್ನು ರದ್ದು ಮಾಡಿ 'ವಿವಿ ಜಿ ರಾಮ್ ಜಿ' ಯೋಜನೆ ತಂದು ಕಾರ್ಮಿಕರ ಉದ್ಯೋಗ ಹಕ್ಕನ್ನು ಕಸಿದುಕೊಳ್ಳಲು ಮುಂದಾಗಿದೆ. ಇದರಿಂದ ವರ್ಷಗಳ ಕಾಲ ದುಡಿದ ಕಾರ್ಮಿಕರು ತಮ್ಮ ಜೀವನೋಪಾಯವನ್ನೇ ತ್ಯಜಿಸುವ ಪರಿಸ್ಥಿತಿ ಎದುರಿಸಬೇಕಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ಕಳೆದ ಎರಡುವರೆ ವರ್ಷಗಳಲ್ಲಿ ಜಿಲ್ಲೆಯಲ್ಲಿ ಕೃಷಿ, ಶಿಕ್ಷಣ, ರಸ್ತೆ, ಉದ್ಯಾನವನಗಳು ಸೇರಿದಂತೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ಭಾರೀ ಅನುದಾನ ಬಿಡುಗಡೆ ಮಾಡಲಾಗಿದೆ. ಗ್ರಾಮೀಣ ರಸ್ತೆಗಳಿಗೆ ₹1000 ಕೋಟಿ ವೆಚ್ಚದ ಕಲ್ಯಾಣ ಪಥ, ಕುಡಿಯುವ ನೀರಿಗೆ 1052 ಕೋಟಿ ವೆಚ್ಚದ 8 ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ.

- ಪ್ರಿಯಾಂಕ್ ಖರ್ಗೆ,ಜಿಲ್ಲಾ ಉಸ್ತುವಾರಿ ಸಚಿವ

ಸಂವಿಧಾನದ ಆಶಯಗಳ ಪಾಲನೆ ನಮ್ಮ ಜವಾಬ್ದಾರಿ

ಆಳಂದ: ವಿವಿಧತೆಯಲ್ಲಿ ಏಕತೆಯನ್ನು ಸಾರುವ ಭಾರತೀಯ ಸಂವಿಧಾನವು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ಸಂವಿಧಾನದ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಾವೆಲ್ಲರೂ ಹೋರಾಡೋಣ ಎಂದು ಮಾಜಿ ಶಾಸಕ ಸುಭಾಷ್ ಆರ್. ಗುತ್ತೇದಾರ ಕರೆ ನೀಡಿದರು.

ಪಟ್ಟಣದ ಎಸ್‌ಆರ್‌ಜಿ ಫೌಂಡೇಶನ್ ಹಾಗೂ ಜೀವನಜ್ಯೋತಿ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಂಡಿದ್ದ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿ, ಸಾಮಾಜಿಕ ನ್ಯಾಯದೊಂದಿಗೆ ಸರ್ವರಿಗೂ ಸಮಪಾಲು ನೀಡುವ ಧ್ಯೇಯದೊಂದಿಗೆ ನಮ್ಮ ದೇಶ ಮುನ್ನಡೆಯುತ್ತಿದೆ. ಮಹಿಳೆಯರು, ಮಕ್ಕಳು ಹಾಗೂ ಹಿಂದುಳಿದ ವರ್ಗಗಳಿಗೆ ವಿಶೇಷ ಅವಕಾಶ ನೀಡಿ ಸಬಲೀಕರಣಗೊಳಿಸುವುದು ಅವಶ್ಯಕ ಎಂದರು.ಬಿಜೆಪಿ ಮುಖಂಡ ಬಾಬುರಾವ್ ಸರಡಗಿ ಮಾತನಾಡಿ, ಸಂವಿಧಾನ ರಚನೆಗೆ ಶ್ರಮಿಸಿದ ಮಹನೀಯರನ್ನು ಸ್ಮರಿಸಿದರು.

ಆಡಳಿತಾಧಿಕಾರಿ ಹಣಮಂತ ಶೇರಿ ಅವರು, ಸ್ವಾತಂತ್ರ್ಯದ ಶತಮಾನೋತ್ಸವದ ಗುರಿಯತ್ತ ಸಾಗಲು ಪ್ರತಿಯೊಬ್ಬ ನಾಗರಿಕನು ಮೂಲಭೂತ ಕರ್ತವ್ಯಗಳಿಗೆ ಬದ್ಧನಾಗಿರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿ.ಎಡ್ ಕಾಲೇಜು ಪ್ರಾಚಾರ್ಯ ಡಾ. ಅಶೋಕರೆಡ್ಡಿ, ಡಾ. ಅಪ್ಪಾಸಾಬ್ ಬಿರಾದಾರ ಸೇರಿದಂತೆ ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

77ನೇ ಗಣರಾಜ್ಯೋತ್ಸವದಲ್ಲಿ ಮಾಜಿ ಶಾಸಕ ಸುಭಾಷ್ ಆರ್. ಗುತ್ತೇದಾರ, ಬಿಜೆಪಿ ಮುಖಂಡ ಬಾಬುರಾವ್ ಸರಡಗಿ, ಬಿ.ಎಡ್ ಕಾಲೇಜು ಪ್ರಾಚಾರ್ಯ ಡಾ. ಅಶೋಕರೆಡ್ಡಿ ಭಾಗವಹಿಸಿದ್ದರು.

ಮಹಿಳಾ ಸಬಲೀಕರಣಕ್ಕೆ ಶರಣಬಸವೇಶ್ವರ ಸಂಸ್ಥೆಗಳ ಒತ್ತು

ಕಲಬುರಗಿ: ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಶಿಕ್ಷಣ ಸಂಸ್ಥೆಗಳು ಸಮಾಜದ ಎಲ್ಲಾ ವರ್ಗಗಳ ಸಮಾನತೆ ಮತ್ತು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುವ ಮೂಲಕ ಭಾರತೀಯ ಸಂವಿಧಾನದ ಆಶಯಗಳನ್ನು ಚಾಚೂತಪ್ಪದೆ ಈಡೇರಿಸುತ್ತಿವೆ ಎಂದು ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಎಸ್ ಅಪ್ಪ ಹೇಳಿದರು.

ನಗರದ ಶರಣಬಸವೇಶ್ವರ ಶಿಕ್ಷಣ ಸಂಸ್ಥೆಯ ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ 77ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿ, ಲಿಂಗೈಕ್ಯ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿಯವರು ಮಹಿಳೆಯರ ಶಿಕ್ಷಣಕ್ಕಾಗಿ ಉತ್ತರ ಕರ್ನಾಟಕದಲ್ಲೇ ಮೊದಲ ಮಹಿಳಾ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸುವ ಮೂಲಕ ಕ್ರಾಂತಿ ಮಾಡಿದ್ದರು. ಅವರ ಶೈಕ್ಷಣಿಕ ತತ್ವವು ಡಾ. ಬಿ.ಆರ್. ಅಂಬೇಡ್ಕರ್‌ಅವರ ಸಮಾನತೆಯ ಆಶಯಗಳನ್ನು ಪ್ರತಿಬಿಂಬಿಸುತ್ತದೆ ಎಂದರು.ಸಂಸ್ಥೆಯು ರಾಷ್ಟ್ರೀಯ ಮಟ್ಟದ ''ಅತ್ಯುತ್ತಮ ಶಿಕ್ಷಣ ಸೊಸೈಟಿ'' ಹಾಗೂ ''ಅತ್ಯುತ್ತಮ ವಿಶ್ವವಿದ್ಯಾಲಯ'' ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದು, ಇವುಗಳನ್ನು ಸಿಬ್ಬಂದಿಯ ಕಠಿಣ ಶ್ರಮಕ್ಕೆ ಅರ್ಪಿಸುವುದಾಗಿ ತಿಳಿಸಿದರು.

ಸಂಸ್ಥಾನದ 9ನೇ ಪೀಠಾಧಿಪತಿ ಪೂಜ್ಯ ದೊಡ್ಡಪ್ಪ ಅಪ್ಪಾಜಿ ಮಾತನಾಡಿ, ಸಂವಿಧಾನದ ತತ್ವಗಳನ್ನು ಅನುಸರಿಸಿ ದೇಶವನ್ನು ಪ್ರೀತಿಸಬೇಕು ಎಂದು ಕರೆ ನೀಡಿದರು.

ಕುಮಾರಿ ಭವಾನಿ ಅಪ್ಪಾ, ಬಸವರಾಜ ದೇಶಮುಖ ವೇದಿಕೆಯಲ್ಲಿದ್ದರು. 2000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ಆಕರ್ಷಕ ಪಥಸಂಚಲನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಇದಕ್ಕೂ ಮುನ್ನ ಶರಣಬಸವ ವಿವಿಯಲ್ಲಿ ಉಪಕುಲಪತಿ ಪ್ರೊ. ಅನಿಲಕುಮಾರ್ ಬಿಡವೆ ಧ್ವಜಾರೋಹಣ ನೆರವೇರಿಸಿದರು.

ನಗರದ ಶರಣಬಸವೇಶ್ವರ ಶಿಕ್ಷಣ ಸಂಸ್ಥೆಯ ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ 77ನೇ ಗಣರಾಜ್ಯೋತ್ಸವದಲ್ಲಿ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಎಸ್ ಅಪ್ಪ ಧ್ವಜಾರೋಹಣ ನೆರವೇರಿಸಿದರು.

ಜೇವರ್ಗಿ,ಯಡ್ರಾಮಿ ಅಭಿವೃದ್ಧಿಗೆ ಬದ್ಧ: ಶಾಸಕ

ತಾಲೂಕು ಆಡಳಿತ ಹಮ್ಮಿಕೊಂಡಿದ್ದ 76ನೇ ಗಣರಾಜ್ಯೋತ್ಸವದಲ್ಲಿ ಕೆಕೆಆರ್ಡಿಬಿ ಅಧ್ಯಕ್ಷ ಡಾ. ಅಜಯ್ ಧರ್ಮಸಿಂಗ್, ತಹಸೀಲ್ದಾರ್‌ಮಲ್ಲಣ್ಣ ಯಲಗೋಡ, ತಾ.ಪಂ ಇಒ ರವಿಚಂದ್ರರೆಡ್ಡಿ ಭಾಗವಹಿಸಿದ್ದರು.

ಜೇವರ್ಗಿ: ಭಾರತದ ಸಂವಿಧಾನವು ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಹಾಗೂ ದೊಡ್ಡದಾಗಿದ್ದು, ದೇಶದ ಪ್ರತಿಯೊಬ್ಬ ಪ್ರಜೆಯೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್ ಅಂಬೇಡ್ಕರ್‌ಅವರನ್ನು ಸದಾ ಸ್ಮರಿಸಬೇಕು ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಡಾ. ಅಜಯ್ ಧರ್ಮಸಿಂಗ್ ಹೇಳಿದರು. ಪಟ್ಟಣದ ಸಾರ್ವಜನಿಕ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ ಹಮ್ಮಿಕೊಂಡಿದ್ದ 76ನೇ ಗಣರಾಜ್ಯೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜೇವರ್ಗಿ ಮತ್ತು ಯಡ್ರಾಮಿ ಕ್ಷೇತ್ರಗಳ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಶಿಕ್ಷಣಕ್ಕೆ ಶೇ. 25 ರಷ್ಟು ಅನುದಾನ ಮೀಸಲಿಡಲಾಗಿದ್ದು, ಪ್ರತಿ ಪಂಚಾಯತ್ ವ್ಯಾಪ್ತಿಯಲ್ಲಿ ತಲಾ ಎರಡು 'ಪಿ ಕೆ ಎಸ್' ಶಾಲೆಗಳನ್ನು ನಿರ್ಮಿಸಲಾಗುತ್ತಿದೆ. ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಟೆಂಡರ್‌ಪ್ರಕ್ರಿಯೆ ಪೂರ್ಣಗೊಂಡಿದ್ದು, ಶೀಘ್ರವೇ ಕಾಮಗಾರಿ ಮುಕ್ತಾಯವಾಗಲಿದೆ ಎಂದರು.ಇದೇ ಸಂದರ್ಭದಲ್ಲಿ ಬಡ ಮಹಿಳೆಯರಿಗೆ ಹೊಲಿಗೆ ಯಂತ್ರ ಗಳನ್ನು ವಿತರಿಸಲಾಯಿತು. ಅಲ್ಲದೆ, ಅರಳುಗುಂಡಗಿ ಗ್ರಾಮದಲ್ಲಿ ವಿದ್ಯುತ್ ಅವಘಡದಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ 5 ಲಕ್ಷ ಪರಿಹಾರದ ಚೆಕ್ ಹಸ್ತಾಂತರಿಸಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್‌ಮಲ್ಲಣ್ಣ ಯಲಗೋಡ, ತಾ.ಪಂ ಇಒ ರವಿಚಂದ್ರರೆಡ್ಡಿ, ಸಿಪಿಐ ರಾಜೇಸಾಬ್ ನದಾಫ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಗಣ್ಯರು ಉಪಸ್ಥಿತರಿದ್ದರು.

ವಿಶ್ವಕ್ಕೆ ಮಾದರಿ ಭಾರತದ ಸಂವಿಧಾನ

ಚಿಂಚೋಳಿ: ಜಗತ್ತಿನ ಹಲವು ರಾಷ್ಟ್ರಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ, ಡಾ. ಬಿ.ಆರ್. ಅಂಬೇಡ್ಕರ್‌ಅವರು ರಚಿಸಿದ ಭಾರತದ ಸಂವಿಧಾನವು ವಿಶ್ವಕ್ಕೇ ಮಾದರಿಯಾಗಿದೆ ಎಂದು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ಹೇಳಿದರು.

ತಾಲೂಕಿನ ಪೋಲಕಪಳ್ಳಿ ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ ಹಮ್ಮಿಕೊಂಡಿದ್ದ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿ, ಭಾರತವು ವಿವಿಧತೆಯಲ್ಲಿ ಏಕತೆ ಹೊಂದಿರುವ ಒಕ್ಕೂಟ ರಾಷ್ಟ್ರವಾಗಿದ್ದು, ಸಂವಿಧಾನವು ಜಾತ್ಯತೀತ ತತ್ವ ಮತ್ತು ಏಕ ಪೌರತ್ವವನ್ನು ಪ್ರತಿಪಾದಿಸಿದೆ. ಜನರು ಜಾಗೃತರಾಗಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ರೈತ ಗೀತೆಗೆ ಗೌರವ ಸಲ್ಲಿಸಲಾಯಿತು ಹಾಗೂ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಇದೇ ವೇಳೆ ಎಸ್‌ಎಸ್‌ಎಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಿಗೆ ಲ್ಯಾಪ್ಟಾಪ್ ವಿತರಿಸಿ, ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು. ತಾ.ಪಂ ಇಒ ಸಂತೋಷ ಚವ್ಹಾಣ, ಡಿವೈಎಸ್ಪಿ ಸಂಗಮನಾಥ ಹಿರೇಮಠ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

77ನೇ ಗಣರಾಜ್ಯೋತ್ಸವದಲ್ಲಿ ತಹಸೀಲ್ದಾರ್‌ಸುಬ್ಬಣ್ಣ ಜಮಖಂಡಿ ಮಾತನಾಡಿದರು.

ನಗರದ ಜಸ್ಟ್ ಕ್ಲಬ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಲೋಕಾರ್ಪಣೆ | ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಭಾಗಿ

ಕಲಬುರಗಿಯನ್ನು ಆರ್ಥಿಕ ನಕ್ಷೆಯಲ್ಲಿ ಬಲಿಷ್ಠಗೊಳಿಸುವ ಗುರಿ

ಕಲಬುರಗಿ: ಜಿಲ್ಲೆಯನ್ನು ಹಿಂದುಳಿದ ಪ್ರದೇಶವೆಂದು ನೋಡುವ ದೃಷ್ಟಿಕೋನವನ್ನು ಬದಲಿಸಿ, ರಾಜ್ಯದ ಆರ್ಥಿಕ ನಕ್ಷೆಯಲ್ಲಿ ಬಲಿಷ್ಠವಾಗಿ ಸ್ಥಾಪಿಸುವುದು ನಮ್ಮ ಸಂಕಲ್ಪ. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಈ ಗುರಿ ಸಾಧಿಸಲು ಕಲಬುರಗಿ **ನೆಕ್ಸ್ಟ್** ಫೌಂಡೇಶನ್ ಸ್ಥಾಪಿಸಲಾಗಿದೆ ಎಂದು ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಜಸ್ಟ್ ಕ್ಲಬ್‌ನಲ್ಲಿ ಭಾನುವಾರ ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಕೃಷಿ, ಶಿಕ್ಷಣ, ಕೌಶಲ್ಯಾಭಿವೃದ್ಧಿ, ನವೋದ್ಯಮ ಹಾಗೂ ಮಾನವ ಸಂಪನ್ಮೂಲ ಕ್ಷೇತ್ರಗಳಲ್ಲಿ ಜಿಲ್ಲೆಯ ಸಮಗ್ರ ಬೆಳವಣಿಗೆ ಸಾಧಿಸುವ ಉದ್ದೇಶವನ್ನು ವಿವರಿಸಿದರು. ಇದು ಜನರಿಂದ ಜನರಿಗಾಗಿ ರೂಪುಗೊಂಡ ಫೌಂಡೇಶನ್ ಆಗಿದ್ದು, ಎಲ್ಲ ವ್ಯವಹಾರಗಳು ಸಂಪೂರ್ಣ ಪಾರದರ್ಶಕವಾಗಿ ನಡೆಯಲಿವೆ ಎಂದು ತಿಳಿಸಿದರು.

'ಕಲಬುರಗಿ ನೆಕ್ಸ್ಟ್' ಎಂಬ ಪರಿಕಲ್ಪನೆ ಸಂಸದ ರಾಧಾಕೃಷ್ಣ ದೊಡ್ಡಮನಿ ಅವರ ಕನಸಾಗಿದ್ದು, ಅವರ ಮಾರ್ಗದರ್ಶನದಲ್ಲಿ ಸಮುದಾಯದ ಭಾಗವಹಿಸುವಿಕೆಯೊಂದಿಗೆ ಜಿಲ್ಲೆಯನ್ನು ಅಭಿವೃದ್ಧಿಯ ದಾರಿಯಲ್ಲಿ ಮುನ್ನಡೆಸಲಾಗುವುದು ಎಂದರು.

ಈ ಫೌಂಡೇಶನ್ಗೆ ಉಸ್ತುವಾರಿ ಸಚಿವ ಅಧ್ಯಕ್ಷರಾಗಿರಲಿದ್ದಾರ. ಜಿಲ್ಲಾಧಿಕಾರಿಗಳು ಉಪಾಧ್ಯಕ್ಷರಾಗಿರುತ್ತಾರೆ. ಸಂಸದರು, ಕಲಬುರಗಿ ಉತ್ತರ ಮತ್ತು ದಕ್ಷಿಣ ಶಾಸಕರು, ಜಿಲ್ಲೆಯ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು ಟ್ರಸ್ಟ್ ಸದಸ್ಯರಾಗಿರುತ್ತಾರೆ ಎಂದು ಮಾಹಿತಿ ನೀಡಿದರು. ಫೌಂಡೇಶನ್ನ ರೂಪರೇಷೆ ಪ್ರಕಟವಾದ ಬಳಿಕ ಹಲವು ಹೆಸರಾಂತ ಕಂಪನಿಗಳು ಸಹಭಾಗಿತ್ವಕ್ಕೆ ಮುಂದಾಗಿವೆ. ಈ ಸಹಕಾರದೊಂದಿಗೆ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ, ತಾಂತ್ರಿಕ ಮತ್ತು ಕೌಶಲ್ಯ ತರಬೇತಿ, ನವೋದ್ಯಮ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯಗಳ ಒದಗಿಸುವ ಗುರಿ ಇಡಲಾಗಿದೆ. ಕಲಬುರಗಿಯನ್ನು ಕೈಗಾರಿಕಾ ಹಬ್ ಆಗಿ ರೂಪಿಸಿ ರಾಜ್ಯದ ಜಿಡಿಪಿಗೆ ಹೆಚ್ಚಿನ ಕೊಡುಗೆ ನೀಡುವುದು ಫೌಂಡೇಶನ್ನ ಪ್ರಮುಖ ಉದ್ದೇಶವಾಗಿದೆ ಎಂದು ಸಚಿವ ಖರ್ಗೆ ಹೇಳಿದರು. ಪ್ರಸ್ತುತ ರಾಜ್ಯದ ಜಿಡಿಪಿಯಲ್ಲಿ ಬೆಂಗಳೂರಿನ ಪಾಲು 39.9 ಶೇಕಡಾ ಇದ್ದರೆ, ಕಲಬುರಗಿ ಜಿಲ್ಲೆಯ ಪಾಲು ಕೇವಲ 1.9 ಶೇಕಡಾ ಮಾತ್ರವಿದೆ. ಈ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಫೌಂಡೇಶನ್ ನಿರಂತರ ಶ್ರಮ ವಹಿಸಲಿದೆ. ಜಿಲ್ಲೆಯ ನಾಗರಿಕರು, ಉದ್ಯಮಿಗಳು ಹಾಗೂ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸಬೇಕು ಎಂದು ಪ್ರಿಯಾಂಕ್ ಖರ್ಗೆ ಕರೆ ನೀಡಿದರು. ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಜಿಲ್ಲೆಯ ಸೂರ್ಯನ ಪ್ರಖರತೆ ಹಾಗೂ ಜನರ ಶ್ರಮತೆ ಹೊಳಪಿನ ಸಂಯೋಜನೆಯಿಂದ ಲಾಂಛನ ರೂಪಿಸಲಾಗಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಫೌಂಡೇಶನ್ ಲೋಗೋ ಬಿಡುಗಡೆಗೊಳಿಸಿದರು, ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಈ ಸಂದರ್ಭದಲ್ಲಿ ಶಾಸಕಿ ಕನೀಜ್ ಫಾತೀಮಾ, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ತಿಮ್ಮಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್,ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವಿಂದ್ರಪ್ಪ ಮರತೂರ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ್‌ಎಂ.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್‌ಆಲಂ ಖಾನ್ ಹಾಗೂ ಮಹಾನಗರ ಪಾಲಿಕೆ ಮೇಯರ್‌ವರ್ಷಾ ರಾಜೀವ ಜಾನೆ, ಪೊಲೀಸ್ ಆಯುಕ್ತ ಡಾ. ಶರಣಪ್ಪ ಸೇರಿ, ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟೆ ಸೇರಿ ಅನೇಕರು ಇದ್ದರು.

ನಗರದ ಜಸ್ಟ್ ಕ್ಲಬ್ ನಲ್ಲಿ ಭಾನುವಾರ ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಫೌಂಡೇಶನ್ ಲೋಗೋ ಬಿಡುಗಡೆಗೊಳಿಸಿದರು.

ವಿವಿಧ ಕಂಪನಿಗಳ ಸಹಕಾರ

ಫೆಡಿಲಿಟಿ ಕಂಪನಿಯಿಂದ 800 ಲ್ಯಾಪ್ಟಾಪ್ಗಳು, ಘಉಐಖಖ ಸಂಸ್ಥೆಯಿಂದ ಜಿಲ್ಲೆಯ 11 ಲಕ್ಷ ವಿದ್ಯಾರ್ಥಿಗಳಿಗೆ ನೇತ್ರ ತಪಾಸಣೆ, Unstop ಮೂಲಕ 2500 ಯುವಕರಿಗೆ ಕೌಶಲ್ಯ ತರಬೇತಿ, TATA Electronics ನಿಂದ 600 ಲ್ಯಾಪ್‌ಟಾಪ್, NEOSKY ಮೂಲಕ 500 ವಿದ್ಯಾರ್ಥಿಗಳಿಗೆ ಡ್ರೋನ್ ಪೈಲಟ್ ತರಬೇತಿ ಸೇರಿ ಹಲವು ಕಂಪನಿಗಳು ಕಲಬುರಗಿ ನೆಕ್ಸ್ಟ್ ಫೌಂಡೇಶನ್ಗೆ ಕೈಜೋಡಿಸಿವೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಕಲಬುರಗಿಯನ್ನು ಕೌಶಲ್ಯ, ಕೈಗಾರಿಕೆ ಮತ್ತು ನವೋದ್ಯಮದ ಕೇಂದ್ರವಾಗಿಸುವುದು ನಮ್ಮ ಉದ್ದೇಶ. ಈ ಫೌಂಡೇಶನ್ ಜಿಲ್ಲೆಯ ಭವಿಷ್ಯವನ್ನು ರೂಪಿಸುವ ವೇದಿಕೆಯಾಗಲಿದೆ.

-ಪ್ರಿಯಾಂಕ್ ಖರ್ಗೆ,ಜಿಲ್ಲಾ ಉಸ್ತುವಾರಿ ಸಚಿವ

ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಮೂಲಕ ಜಿಲ್ಲಾಡಳಿತ, ಸಾರ್ವಜನಿಕರು ಮತ್ತು ಕಂಪನಿಗಳ ನಡುವೆ ಪರಿಣಾಮಕಾರಿ ಸಮನ್ವಯ ಸಾಧಿಸಲಾಗುತ್ತದೆ. ಪಾರದರ್ಶಕ ಆಡಳಿತ ಹಾಗೂ ಫಲಿತಾಂಶಾಧಾರಿತ ಕಾರ್ಯಕ್ರಮಗಳ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಗತಿ ನೀಡಲಾಗುವುದು.

ಫೌಜಿಯಾ ತರನ್ನುಮ್, ಜಿಲ್ಲಾಧಿಕಾರಿ

ಸಮಾಚಾರ ಸಣ್ಣದಲ್ಲ

ಶೀಘ್ರವೇ ಬಾಂಗ್ಲಾ ವಲಸಿಗರ ಗಡಿಪಾರು

ಕೋಲಾರ: ಅಭಿವೃದ್ಧಿಯಲ್ಲಿ ಕೋಲಾರ ಜಿಲ್ಲೆ ಮುಂದಿದ್ದು, ಆರೋಪ ಮತ್ತು ಟೀಕೆಗಳಿಗೆ ಕಿವಿಗೊಡುವುದಿಲ್ಲ ಎಂದು ಉಸ್ತುವಾರಿ ಸಚಿವ ಭೈರತಿ

ಸುರೇಶ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರಕಾರದ ವಿರುದ್ಧ ದೇವೇಗೌಡರು ವಾಗ್ದಾಳಿ ನಡೆಸಿರುವ ಕುರಿತು ಪ್ರತಿಕ್ರಿಯಿಸುವುದಿಲ್ಲ. ಅವರು ದೊಡ್ಡ ನಾಯಕರು, ಯಜಮಾನರು, ಪ್ರಧಾನಿಯಾಗಿದ್ದವರು ಎಂದರು. ಕೋಲಾರದಲ್ಲಿ ಎಸ್‌ಎನ್‌ಆರ್ ಆಸ್ಪತ್ರೆ, ಪ್ರವಾಸಿ ಮಂದಿರ, ರೇಷ್ಮೆ ಇಲಾಖೆ, ಡಿಎಚ್‌ಒ ಕಚೇರಿ ಜಾಗ ಗುರುತಿಸಲಾಗಿದೆ. ಎಪಿಎಂಸಿ ಮಾರುಕಟ್ಟೆಗಾಗಿ 100 ಎಕರೆ ಜಮೀನು ಗುರುತು ಮಾಡಲಾಗಿದೆ. ರಾಜ್ಯಪಾಲರು ಪೂರ್ಣ ಭಾಷಣ ಮಾಡಬೇಕಿತ್ತು. ಆದರೂ ಸರಕಾರ ಗೌರವದಿಂದ ನಡೆದುಕೊಂಡಿದೆ. ಮೊಟಕುಗೊಳಿಸಿ ಭಾಷಣ ಮಾಡಿದ್ದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಮತ ಪರಿಷ್ಕರಣೆಯಲ್ಲಿ ಅನರ್ಹರನ್ನು ತೆಗೆದು ಹಾಕಬಹುದಾದರೂ ಒಂದು ಕೋಮಿನವರನ್ನು ಸೀಮಿತಗೊಳಿಸಿ ಉದ್ದೇಶ ಪೂರ್ವಕವಾಗಿ ಡಿಲೀಟ್ ಮಾಡುವುದು ಸರಿಯಲ್ಲ. ಬಾಂಗ್ಲಾ ವಲಸಿಗರು ಅಕ್ರಮವಾಗಿ ವಾಸವಿದ್ದರೆ, ದೇಶದಿಂದ ಗಡಿಪಾರು ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ನಿಫಾ ಭೀತಿ: ಗಡಿ ಜಿಲ್ಲೆಗಳಲ್ಲಿ ಎಚ್ಚರಿಕೆ

ಬೆಂಗಳೂರು: ಪಶ್ಚಿಮ ಬಂಗಾಳದಲ್ಲಿ ನಿಫಾ ಎಂಬ ಮಾರಕ ವೈರಸ್ ಹಬ್ಬಿ ಜನತೆಯಲ್ಲಿ ಆತಂಕ ಮೂಡಿಸಿರುವ ಬೆನ್ನಲ್ಲೇ ರಾಜ್ಯದಲ್ಲಿಯೂ ಭಯದ ವಾತಾವ



ರಣ ಮೂಡಿದೆ. ರಾಜ್ಯದಲ್ಲಿ ಯಾವುದೇ ಪ್ರಕರಣಗಳು ದೃಢಪಟ್ಟಿಲ್ಲವಾದರೂ ಆರೋಗ್ಯ ಇಲಾಖೆಯು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. ದಕ್ಷಿಣ ಭಾರತದಲ್ಲಿ ಅತಿ ಹೆಚ್ಚಾಗಿ ಕೇರಳ ರಾಜ್ಯದಲ್ಲಿ ನಿಫಾ ವೈರಸ್ ಕಂಡು ಬರುತ್ತದೆ. ಪ್ರಸ್ತುತ ಯಾವುದೇ ಪ್ರಕರಣಗಳು ವರದಿಯಾಗದಿರುವ ಹಿನ್ನೆಲೆಯಲ್ಲಿ ರಾಜ್ಯವು ಸದ್ಯಕ್ಕೆ ನಿಟ್ಟುಸಿರು ಬಿಡುವಂತಾಗಿದೆ. ಕರ್ನಾಟಕದ ಯಾವುದೇ ಭಾಗದಲ್ಲಿ ಮನುಷ್ಯರಲ್ಲಿ ನಿಫಾ ವೈರಸ್ ಕಾಣಿಸಿಕೊಂಡಿರುವ ಬಗ್ಗೆ ವರದಿಯಾಗಿಲ್ಲ ಎಂದು ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ. ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ. ನೆರೆಯ ರಾಜ್ಯವಾದ ಕೇರಳದ ಮಲಪ್ಪುರಂ ಮತ್ತು ಕಲ್ಲಿಕೋಟೆ ಜಿಲ್ಲೆಗಳಲ್ಲಿ ಆಗಾಗ್ಗೆ ನಿಫಾ ವೈರಸ್ ಪ್ರಕರಣಗಳು ವರದಿಯಾಗುತ್ತಿರುತ್ತವೆ. ಕೇರಳದಲ್ಲಿ ಈ ಸೋಂಕು ಇರುವ ಬಗ್ಗೆ ಅಥವಾ ಅದರ ಸುಳಿವು ಲಭ್ಯವಾದರೆ ಕೇರಳ ಮತ್ತು ಕರ್ನಾಟಕದ ನಡುವೆ ನಿತ್ಯ ಸಾವಿರಾರು ಜನರು ಪ್ರಯಾಣಿಸುವುದರಿಂದ, ಮುನ್ನೆಚ್ಚರಿಕೆ ಕ್ರಮವಾಗಿ ಕರ್ನಾಟಕದ ಗಡಿ ಜಿಲ್ಲೆಗಳಲ್ಲಿ 'ಹೈ ಅಲರ್ಟ್' ಘೋಷಿಸಲಾಗುತ್ತದೆ. ದಕ್ಷಿಣ ಕನ್ನಡ , ಕೊಡಗು, ಚಾಮರಾಜನಗರ, ಮೈಸೂರು ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆ ಅಧಿಕಾರಿ ಹೇಳಿದ್ದಾರೆ.

ರಾಜ್ಯದಲ್ಲಿ ಹೊಡಿಬಡಿ ರಾಜಕಾರಣ ಶುರು

ಗಂಗಾವತಿ: ಸಭ್ಯ ರಾಜಕಾರಣಕ್ಕೆ ಹೆಸರಾಗಿದ್ದ ಕರ್ನಾಟಕದಲ್ಲಿ ಈಗ ಎಲ್ಲಿ ನೋಡಿದರೂ ಬರೀ ಹೊಡಿ-ಬಡಿ ರಾಜಕಾರಣ ಶುರುವಾಗಿದ್ದು, ರಾಜ್ಯ ಕುಖ್ಯಾತಿ ಪಡೆಯುತ್ತಿದೆ ಎಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಬೇಸರ ವ್ಯಕ್ತಪಡಿಸಿದರು. ಗಂಗಾವತಿಯಲ್ಲಿ 77ನೇ ಗಣರಾಜ್ಯೋತ್ಸವ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ದೇಶದಲ್ಲಿ ಸಂವಿಧಾನ ಅಸ್ತಿತ್ವಕ್ಕೆ ಬಂದ ಪವಿತ್ರ ದಿನವಿದು. ಸ್ವಾತಂತ್ರ್ಯ ಸಿಕ್ಕ ದಿನವನ್ನು ಎಷ್ಟು ಸಂಭ್ರಮದಿಂದ ಆಚರಿಸುತ್ತೇವೋ ಅಷ್ಟೇ ಸಂಭ್ರಮದಿಂದ ಈ ದಿನ ಆಚರಿಸುತ್ತೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷ ನಡುವೆ ಆರೋಪ-ಪ್ರತ್ಯಾರೋಪ ಸಹಜ. ಬಳ್ಳಾರಿಯಲ್ಲಿ ನನ್ನ ಮನೆಯ ಮೇಲೆ ದಾಳಿಯಲ್ಲಿ 25 ವರ್ಷದ ಯುವಕನ ಕೊಲೆಯಯಾದಾಗ ಉಪ ಮುಖ್ಯಮಂತ್ರಿಯಂತ ಉನ್ನತ ಸ್ಥಾನದಲ್ಲಿರುವ ಡಿ.ಕೆ.ಶಿವಕುಮಾರ ಮಾತಿನ ರೀತಿ ಬೇಜವಾಬ್ದಾರಿತನದ್ದು. ರೆಡ್ಡಿ ಬೇಕಿದ್ದರೆ ಅಮೆರಿಕಾ, ಇರಾನ್, ರಷ್ಯಾದಂತ ದೇಶದಿಂದ ಭದ್ರತೆ ಪಡೆಯಲಿ ಎಂದು ಸಲಹೆ ನೀಡಿದ್ದು ದುರಂತ. ರಾಜ್ಯ ಎತ್ತ ಸಾಗುತ್ತಿದೆ ಎಂಬುವುದು ಆತಂಕ ತಂದಿದೆ ಎಂದರು.

ವಿಶ್ವವಾಣಿ ಕ್ಲಬ್ ಹೌಸ್
27.01.2026
ಸಂಜೆ: 06.55 ರಿಂದ 08.05 ರವರೆಗೆ
ಮಂಗಳವಾರದ ಅತಿಥಿ

ಶ್ರೀ ಸತ್ಯೇಶ್ ಬೆಳ್ಳೂರು
ವಿಷಯ
ಮ್ಯಾನೇಜ್ಮೆಂಟ್ ಕಥೆಗಳು
vishwavani.news

{ಜಮೀರ್ ಅಹ್ಮದ್} ಸಚಿವ

ದಾವಣಗೆರೆ ದಕ್ಷಿಣದಲ್ಲಿ ಮುಸ್ಲಿಮರಿಗೆ ಟಿಕೆಟ್ ಕೊಡಬೇಕು ಎಂಬ ಬೇಡಿಕೆ ಇದೆ. ಹಿಂದೆ ಶಾಮನೂರು ಶಿವಶಂಕರಪ್ಪ ಅವರು ಇದು ಕೊನೆ ಚುನಾವಣೆ ನನ್ನ ನಂತರ ಅಲ್ಪಸಂಖ್ಯಾತರಿಗೆ ಸೀಟ್ ಕೊಡುತ್ತೇವೆ ಎಂದಿದ್ದರು. ಅಲ್ಪಸಂಖ್ಯಾತರಿಗೆ ಟಿಕೆಟ್ ಕೊಡಬೇಕು ಅಂತಾ ಬೇಡಿಕೆ ಇದೆ. ನಂತರ ಅಹಿಂದ ಮುಖಂಡರಿಗೆ ಟಿಕೆಟ್ ಕೊಡಬೇಕು ಎಂಬ ಬೇಡಿಕೆ ಇದೆ.

ಜಂಟಿ ಅಧಿವೇಶನದ ಭಾಷಣದ ಘಟನೆಗಳ ಕ್ಷಣ-ಕ್ಷಣದ ಮಾಹಿತಿ ರಾಷ್ಟ್ರಪತಿಗೆ ರವಾನೆ

ಸಂಚಲನ ಮೂಡಿಸಿದ ರಾಜ್ಯಪಾಲರ ವರದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿ ನಡೆದಿದ್ದ ಘಟನೆಗಳಿಗೆ ಸಂಬಂಧ ವಾಸ್ತವ ಅಂಶಗಳ ಪ್ರತ್ಯೇಕ ವರದಿಯೊಂದನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದ್ದಾರೆ ಎಂದು ತಿಳಿದುಬಂದಿದೆ.

ಜಂಟಿ ಅಧಿವೇಶನದಲ್ಲಿ ಭಾಷಣ ಮುಗಿಸಿದ ನಂತರ ಆಡಳಿತ ಪಕ್ಷ ಕಾಂಗ್ರೆಸ್ ಸದಸ್ಯರು ತಮ್ಮ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತೋರಿದ ದುರ್ವರ್ತನೆ, ವಿಧಾನಸಭೆಯಿಂದ ತಮಗೆ ಘೇರಾವ್ ಹಾಕುವ ಪ್ರಯತ್ನ, ಇದರಿಂದ ತಮ್ಮ ಮೇಲೆ ಉಂಟಾದ ಒತ್ತಡಗಳ ಬಗ್ಗೆ ತಮ್ಮ ವರದಿಯಲ್ಲಿ ವಿವರವಾಗಿ ಉಲ್ಲೇಖಿಸಿದ್ದಾರೆ ಎಂದು ಲೋಕಭವನ ಮೂಲಗಳು ತಿಳಿಸಿವೆ.

ಘಟನೆ ಬಗ್ಗೆ ಪ್ರತ್ಯೇಕ ವರದಿ: ಸಾಮಾನ್ಯವಾಗಿ ಪ್ರತಿ ವಾರ, ತಿಂಗಳಿಗೊಮ್ಮೆ ಲೋಕಭವನದಿಂದ ರಾಷ್ಟ್ರಪತಿಗೆ ವರದಿ ಹೋಗುತ್ತದೆ. ರಾಜಕೀಯ, ಸಾಮಾಜಿಕ, ಅಭಿವೃದ್ಧಿ ಚಟುವಟಿಕೆಗಳ ಸೇರಿದಂತೆ ರಾಜ್ಯದ ಆಗುಹೋಗುಗಳ ಪ್ರಸಕ್ತ ವಿದ್ಯಮಾನ ಬೆಳವಣಿಗೆ ಬಗ್ಗೆ ವಾರ, ತಿಂಗಳಿಗೊಮ್ಮೆ ರಾಜ್ಯಪಾಲರು ರಾಷ್ಟ್ರಪತಿಗೆ ವರದಿ ನೀಡುವುದು ಶಿಷ್ಟಾಚಾರ. ಆದರೆ, ಈ ವರದಿ ಅಲ್ಲದೇ ಪ್ರತ್ಯೇಕವಾಗಿ ಅಧಿವೇಶನ ಉದ್ದೇಶಿಸಿ ತಾವು ಭಾಷಣ ಮಾಡುವ ಮೊದಲು ಹಾಗೂ ನಂತರ ನಡೆದ ಎಲ್ಲಾ ಬೆಳವಣಿಗೆ, ಘಟನೆಗಳ ಕುರಿತು ಸವಿವರವಾದ ವರದಿಯನ್ನು ರಾಷ್ಟ್ರಪತಿಯವರಿಗೆ ರವಾನಿಸಿದ್ದು ಸಂಚಲನಕ್ಕೆ ಕಾರಣವಾಗಿದೆ.

ರಾಜ್ಯಪಾಲರು ತಮ್ಮ ವರದಿಯಲ್ಲಿ ಸರಕಾರ ಸಿದ್ಧಪಡಿಸಿ ಕಳುಹಿಸಿದ ಭಾಷಣ, ಅದರಲ್ಲಿದ್ದ ಕೇಂದ್ರ ಸರಕಾರದ ವಿರುದ್ಧದ ಟೀಕೆಗಳ ಬದಲಾವಣೆಗೆ ತಾವು ನೀಡಿದ ಸಲಹೆ, ಭಾಷಣ ಬದಲಾವಣೆಗೆ ಒಪ್ಪದ ಸರಕಾರದ ನಡೆ, ಈ

ಹಿನ್ನೆಲೆಯಲ್ಲಿ ಭಾಷಣ ಓದಲು ತಾವು ಸಾಂವಿಧಾನಿಕವಾಗಿ ಕೈಗೊಂಡ ನಿರ್ಧಾರ, ಜಂಟಿ ಅಧೀವೇಶನದಲ್ಲಿ ತಾವು ಮಾಡಿದ ಭಾಷಣ, ಭಾಷಣ ಓದಿದ ಬಳಿಕ ಆಡಳಿತ ಪಕ್ಷದ ಸದಸ್ಯರು ನಡೆದುಕೊಂಡ ರೀತಿ, ನಂತರ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರು ನೀಡಿರುವ ಹೇಳಿಕೆಗಳು. ಹೀಗೆ ಎಲ್ಲಾ ಎಲ್ಲಾ ಮಾಹಿತಿಯನ್ನೂ ಪಟ್ಟಿ ಮಾಡಿ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ.

ರಾಜ್ಯಪಾಲರ ವರದಿಯಲ್ಲೇನಿದೆ?: ಜಂಟಿ ಅಧಿವೇಶನ ಹಿಂದಿನ ದಿನ ಅಂದರೆ ಜನವರಿ 21 ಮತ್ತು ಮರುದಿನ (ಜನವರಿ 22) ನಡೆದ ವಿದ್ಯಮಾನಗಳನ್ನು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ರಾಜ್ಯ ಸರಕಾರ ಕಳುಹಿಸಿದ್ದ ಭಾಷಣವನ್ನು ಯಥಾವತ್ತಾಗಿ ಓದಲು ರಾಜ್ಯಪಾಲರು ನಿರಾಕರಿಸಿದ್ದರು. ವಿಬಿ ಜಿ ರಾಮ್ ಜಿ ಕಾಯಿದೆಯೂ ಸೇರಿದಂತೆ ಕೇಂದ್ರ ಸರಕಾರವನ್ನು ಟೀಕಿಸಲಾಗಿತ್ತು. ಈ ಭಾಗವನ್ನು ಪರಿಷ್ಕರಿಸುವಂತೆ ರಾಜ್ಯ ಸರಕಾರಕ್ಕೆ ಲೋಕಭವನದಿಂದ ಸೂಚಿಸಲಾಗಿತ್ತು. ಬಳಿಕ ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹಾಗೂ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಮತ್ತು ಸಂಸದೀಯ ವ್ಯವಹಾರ ಸಚಿವ ಎಚ್.ಕೆ.ಪಾಟೀಲ್, ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ ಜತೆ ನಡೆಸಿದ ಮಾತುಕತೆ ಬಗ್ಗೆಯೂ ಥಾವರ್‌ಚಂದ್ ಗೆಹ್ಲೋತ್ ವರದಿಯಲ್ಲಿ ತಿಳಿಸಿದ್ದಾರೆ. ಜಂಟಿ ಅಧೀವೇಶವನ್ನು ಉದ್ದೇಶಿಸಿ ಭಾಷಣ ಮಾಡಬೇಕಾದ ಸಂವಿಧಾನಬದ್ಧ ಕರ್ತವ್ಯ ನಿಭಾಯಿಸಿದ್ದೇನೆ ಎಂದೂ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ಭಾಷಣ ಮುಗಿಸಿ ವಿಧಾನಸಭೆಯಿಂದ ಹೊರ ಹೋಗುವ ಸಂದರ್ಭದಲ್ಲಿ ರಾಜ್ಯಪಾಲರ ವಿರುದ್ಧ ಘೋಷಣೆ ಕೂಗಿ ಒತ್ತಡ ಹೇಲು ಪ್ರಯತ್ನಸಿದ ಕಾಂಗ್ರೆಸ್ ಸದಸ್ಯರ ವರ್ತನೆ ಬಗ್ಗೆಯೂ ವರದಿಯಲ್ಲಿ ಉಲ್ಲೇಖವಿದೆ. ಘಟನೆ ನಂತರ ಸದನದಲ್ಲಿ ಆಡಳಿತ ಪಕ್ಷದ ಸದಸ್ಯರು ಹಾಗೂ ವಿಪಕ್ಷ ಸದಸ್ಯರ ಜಟಾಪಟಿ, ಅಭಿಪ್ರಾಯಗಳನ್ನೂ ಸಹ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ತಾವು ಏನೆಲ್ಲಾ ಮುಜುಗರ ಅನುಭವಿಸಬೇಕಾಯಿತು ಎನ್ನುವ ಎಲ್ಲಾ ಅಂಶಗಳನ್ನು ಸಹ ಸವಿವರಾಗಿ ವರದಿ ಮೂಲಕ ರಾಷ್ಟ್ರಪತಿಗೆ ತಲುಪಿಸಲಾಗಿದೆ.

ಭದ್ರತೆಯಲ್ಲಿ ಲೋಕಭವನಕ್ಕೆ

ಕರ್ತವ್ಯಲೋಪ ಆಗಬಾರದೆಂದು ಅಧಿವೇಶನಕ್ಕೆ ಹಾಜರಾಗಿ ಮೂರು ಸಾಲಿನ ಭಾಷಣ ಮಾಡಿ ಹೊರಟೆ. ಆಗ ಕಾಂಗ್ರೆಸ್ ಸದಸ್ಯರು ವಿಬಿ ಜಿ ರಾಮ್ ಜಿ ಕಾಯ್ದೆ ವಿರುದ್ಧ ಘೋಷಣೆ ಕೂಗಿದರು. ನನ್ನನ್ನು ಅಡ್ಡಗಟ್ಟಿ ಭಾಷಣ ಓದಲೇಬೇಕೆಂದು ಅಡ್ಡಿಪಡಿಸಿದರು. ನನ್ನ ವಿರುದ್ಧವೂ ಘೋಷಣೆಗಳನ್ನು ಕೂಗಿದರು. ಆಗ ಪೊಲೀಸ್ ಭದ್ರತೆಯಲ್ಲಿ ನಾನು ಲೋಕಭವನಕ್ಕೆ ತೆರಳಿದೆ ಅಂತ ರಾಜ್ಯಪಾಲರು ಆತಂಕ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಅದಾದ ಬಳಿಕ ಸಿಎಂ ಆದಿಯಾಗಿ ಎಲ್ಲರೂ ನನ್ನ ವಿರುದ್ಧ ಮಾಧ್ಯಮ ಹೇಳಿಕೆ ನೀಡಿದ್ದಾರೆ. ಆದರೆ ನೀವೇ ಅಂಕಿತ ಹಾಕಿರುವ ಕಾಯ್ದೆ ವಿರುದ್ಧ ನಾನು ಹೇಗೆ ಭಾಷಣ ಮಾಡಲಿ? ಎಂದು ವರದಿಯಲ್ಲಿ ಖುದ್ದು ರಾಷ್ಟ್ರಪತಿಗಳಿಗೆ ತಮ್ಮ ಅಹವಾಲು ಸಲ್ಲಿಸಿದ್ದಾರೆ.

ಚಡಚಣ ತಾಲೂಕಿನ ಹಲಸಂಗಿಯಲ್ಲಿ ಪಿಸ್ತೂಲ್ ತೋರಿಸಿ ಹಾಡಹಗಲೇ ಚಿನ್ನದ ಅಂಗಡಿ ದರೋಡೆ

ಸಿನಿಮೀಯ ಶೈಲಿಯಲ್ಲಿ ಚಿನ್ನದ ಅಂಗಡಿ ದರೋಡೆ

ವಿಜಯಪುರ: ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಬ್ಯಾಂಕ್ ದರೋಡೆ ಪ್ರಕರಣದ ನೆನಪು ಮಾಸುವ ಮುನ್ನವೇ, ಮತ್ತೊಂದು ಆಘಾತಕಾರಿ ಘಟನೆ ನಡೆದಿದೆ. ಜಿಲ್ಲೆಯ ಚಡಚಣ ತಾಲೂಕಿನ ಹಲಸಂಗಿ ಗ್ರಾಮದಲ್ಲಿ ಸೋಮವಾರ ಸಂಜೆ ಸಿನಿಮೀಯ ಶೈಲಿಯಲ್ಲಿ ಚಿನ್ನದ ಅಂಗಡಿಯೊಂದರ ದರೋಡೆ ನಡೆದಿದೆ.

ಸೋಮವಾರ ಸಂಜೆ ಸುಮಾರು 4 ಗಂಟೆಯ ಸಮಯದಲ್ಲಿ ಹಲಸಂಗಿ ಗ್ರಾಮದ ಚಿನ್ನಾಭರಣ ಮಳಿಗೆಗೆ ನುಗ್ಗಿದ ಇಬ್ಬರು ಆಗಂತುಕರು, ಕ್ಷಣಾರ್ಧದಲ್ಲಿ ದರೋಡೆಗೈದು ಪರಾರಿಯಾಗಿದ್ದಾರೆ. ಬೈಕ್‌ನಲ್ಲಿ ಬಂದಿದ್ದ ಇಬ್ಬರು ಮುಸುಕುಧಾರಿಗಳು ಏಕಾಏಕಿ ಅಂಗಡಿಯೊಳಗೆ ಪ್ರವೇಶಿಸಿ, ಮಾಲೀಕರಿಗೆ ಪಿಸ್ತೂಲ್ ತೋರಿಸಿ ಬೆದರಿಕೆ ಒಡ್ಡಿದ್ದಾರೆ. ಪ್ರಾಣಭಯದಿಂದ ಅಂಗಡಿಯಲ್ಲಿದ್ದವರು ಸುಮ್ಮನಾಗುತ್ತಿದ್ದಂತೆ, ಕೈಗೆ ಸಿಕ್ಕ ಚಿನ್ನಾಭರಣಗಳನ್ನು ದೋಚಿ ದರೋಡೆಕೋರರು ಬೈಕ್ ಏರಿ ಪರಾರಿಯಾಗಿದ್ದಾರೆ.

ದರೋಡೆಯ ಸಂಪೂರ್ಣ ದೃಶ್ಯಾವಳಿಗಳು ಅಂಗಡಿಯಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಮುಸುಕು ಧರಿಸಿದ್ದರಿಂದ ಆರೋಪಿಗಳ ಗುರುತು ಪತ್ತೆಯಾಗಿಲ್ಲವಾದರೂ, ಪೊಲೀಸರು ದೃಶ್ಯಾವಳಿಗಳನ್ನು ಆಧರಿಸಿ ತನಿಖೆ ಆರಂಭಿಸಿದ್ದಾರೆ. ಘಟನಾ ಸ್ಥಳಕ್ಕೆ ಚಡಚಣ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯ.

ಮರುಕಳಿಸುತ್ತಿರುವ ದರೋಡೆ ಕೃತ್ಯಗಳು

ಚಡಚಣ ತಾಲೂಕಿನಲ್ಲಿ ಇದು ಮೊದಲನೇ ಪ್ರಕರಣವೇನಲ್ಲ. ಇತ್ತೀಚೆಗಷ್ಟೇ ಇದೇ ತಾಲೂಕಿನ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಾಖೆಯಲ್ಲಿ ದರೋಡೆ ನಡೆದಿತ್ತು. ಆ ಪ್ರಕರಣದಲ್ಲಿ ಬ್ಯಾಂಕ್ ಮ್ಯಾನೇಜರ್ ನೀಡಿದ ದೂರಿನನ್ವಯ ಬರೋಬ್ಬರಿ 1.4 ಕೋಟಿ ರುಪಾಯಿ ನಗದು ಹಾಗೂ 20 ಕೆಜಿ ಚಿನ್ನಾಭರಣ ಕಳ್ಳತನವಾಗಿತ್ತು. ಇದೀಗ ಮತ್ತೆ ಪಿಸ್ತೂಲ್ ತೋರಿಸಿ ಚಿನ್ನದ ಅಂಗಡಿ ದರೋಡೆ ಮಾಡಿರುವುದು ಸಾರ್ವಜನಿಕರಲ್ಲಿ ಮತ್ತು ವ್ಯಾಪಾರಿಗಳಲ್ಲಿ ತೀವ್ರ ಆತಂಕವನ್ನು ಸೃಷ್ಟಿಸಿದೆ.

ಸರಕಾರದ ವಿರುದ್ಧ ಮೈತ್ರಿ ಪ್ರತಿಭಟನೆ ಇಂದು

ಬೆಂಗಳೂರು: ರಾಜ್ಯ ಕಾಂಗ್ರೆಸ್ ಶಾಸಕರು ರಾಜ್ಯಪಾಲರ ಮೇಲೆ ಗೂಂಡಾಗಿರಿ ಮತ್ತು ಅಪಮಾನ ಮಾಡಿರುವುದನ್ನು ಖಂಡಿಸಿ ಹಾಗೂ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಬಕಾರಿ ಸಚಿವರಾದ ಆರ್.ಬಿ. ತಿಮ್ಮಾಪುರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷ ಧರಣಿ ನಡೆಸಲಿದೆ.

ವಿಧಾನಸೌಧದ ಮಹಾತ್ಮ ಗಾಂಧೀಜಿ ಪ್ರತಿಮೆ ಬಳಿ ಮಂಗಳವಾರ ಬೆಳಗ್ಗೆ 10.30 ಗಂಟೆಗೆ ಪ್ರತಿಭಟನೆ ನಡೆಸಲಾಗುತ್ತಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾದ ಸುರೇಶ್ ಬಾಬು ಮತ್ತು ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಭೋಜೆಗೌಡ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ.

ಈ ಸಂಬಂಧ ಮಾತನಾಡಿರುವ ವಿಧಾನ ಪರಿಷತ್ ವಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಸಂವಿಧಾನದ ಮುಖ್ಯಸ್ಥರಾದ ರಾಜ್ಯದ ಗೌರವಾನ್ವಿತ ರಾಜ್ಯಪಾಲರಿಗೆ ಅಪಮಾನ ಮಾಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಲಾಗುತ್ತದೆ. ಜಂಟಿ ಅಧಿವೇಶನವನ್ನು ಮುಗಿಸಿ ವಾಪಸ್ ಹೋಗುವ ಸಂದರ್ಭದಲ್ಲಿ ವಿಧಾನಸೌಧದ ಅಸೆಂಬ್ಲಿ ಸಭಾಂಗಣದಲ್ಲಿ ಮಾನ್ಯ ರಾಜ್ಯಪಾಲರಿಗೆ ಬೆರಳು ತೋರಿಸಿ, ಎಚ್ಚರಿಕೆ ಸಂದೇಶ ನೀಡಿ ಅಪಮಾನ ಮಾಡಿದ್ದಾರೆ. ಅಲ್ಲದೇ ಅಗೌರವ ತೋರಿಸಿದ್ದಾರೆ. ಅವರಿಗೆ ಧಿಕ್ಕಾರ ಕೂಗಿದ್ದಾರೆ. ಈ ಹಿನ್ನೆಲೆಯಲ್ಲಿ ಬಿ.ಕೆ.ಹರಿಪ್ರಸಾದ್, ಎಸ್.ರವಿ, ಶರತ್ ಬಚ್ಚೇಗೌಡ, ಪ್ರದೀಪ್ ಈಶ್ವರ್ ಅವರನ್ನು ಕೂಡಲೇ ಅಮಾನತು ಮಾಡಬೇಕು ಎಂದು ಆಗ್ರಹಿಸುವುದಾಗಿ ತಿಳಿಸಿದರು.

ಹೆಚ್ಚಿದ ಪೊಲೀಸ್ ಭದ್ರತೆ

ಮಂಗಳವಾರ ರಾಜಧಾನಿಯಲ್ಲಿ ರಾಜಕೀಯವಾಗಿ ಎರಡು ದೊಡ್ಡ ಪ್ರತಿಭಟನೆಗಳು ನಡೆಯಲಿದ್ದು, ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ಕಾಂಗ್ರೆಸ್ ಪಕ್ಷ ಲೋಕಭವನ ಚಲೋ ಚಳವಳಿ ನಡೆಸಲಿದ್ದು, ಲೋಕಭವನದ ಸುತ್ತ ಪೊಲೀಸ್ ಬಂದೋಬಸ್ತ್ ಇರಲಿದೆ. ಅಲ್ಲದೆ ಕಾಂಗ್ರೆಸ್ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರೆ, ಇತ್ತ ಬಿಜೆಪಿ ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆಗೆ ಮುಂದಾಗಿದೆ. ಎರಡೂ ಪಕ್ಷಗಳು ಒಂದೇ ದಿನದಲ್ಲಿ ಲೋಕಭವನ ಮತ್ತು ವಿಧಾನಸೌಧದ ಸಮೀಪದಲ್ಲಿ ಧರಣಿ ನಡೆಸುವುದರಿಂದ ರಾಜಕೀಯ ವಾತಾವರಣ ತುಸು ಉದ್ವಿಗ್ನವಾಗಲಿದೆ. ಆದ್ದರಿಂದಾಗಿ ಪೊಲೀಸ್ ಇಲಾಖೆ ಪ್ರತಿಭಟನೆಯ ವೇಳೆ ನಿಗಾ ಇರಿಸಲಿದೆ ಎಂದು ತಿಳಿದುಬಂದಿದೆ.

ಕರ್ತವ್ಯಪಥದಲ್ಲಿ ಸೇನಾ ಬಲ ಅನಾವರಣ

← ಮೊದಲ ಪುಟದಿಂದ

ಆಪರೇಷನ್ ಸಿಂದೂರ್ ಸಮಯದಲ್ಲಿ ಭಾರತೀಯ ಸೇನೆ ನಿಯೋಜಿಸಿದ ಪ್ರಮುಖ ಶಸ್ತ್ರಾಸ್ತ್ರ ವ್ಯವಸ್ಥೆಗಳ ಪ್ರತಿಕೃತಿ ಪ್ರದರ್ಶಿಸುವ ತ್ರಿಸೇನಾ ಟ್ಯಾಬ್ಲೋ ಪಥಸಂಚಲನದ ಪ್ರಮುಖ ಆಕರ್ಷಣೆಯಾಗಿತ್ತು. ಕಾರ್ಯಾಚರಣೆಯಲ್ಲಿ ಭಾಗಿಯಾದ ಬ್ರಹ್ಮೋಸ್ ಮತ್ತು ಆಕಾಶ್ ಸೂಪರ್ ಸಾನಿಕ್ ಮಿಸ್ಸೈಲ್ ಶಸ್ತ್ರಾಸ್ತ್ರ ವ್ಯವಸ್ಥೆ, ಸೂರ್ಯಾಸ್ತ್ರ ರಾಕೆಟ್ ಲಾಂಚರ್, ಭೀಷ್ಮ ಮತ್ತು ಅರ್ಜುನ್ ಯುದ್ಧ ಟ್ಯಾಂಕ್‌ಗಳು, ಧ್ರುವ ಹೆಲಿಕಾಪ್ಟರ್, ನಾಗ್ ಕ್ಷಿಪಣಿ ವ್ಯವಸ್ಥೆ, ಶಕ್ತಿಬಾನ್, ದಿವ್ಯಾಸ್ತ್ರ, ಧನುಷ್, ಅಮೋಘ್ ಮತ್ತಿತರ ರಕ್ಷಣಾ ಸಾಧನಗಳಲ್ಲದೆ ಅಪಾಚೆ ಎಹೆಚ್-64 ಇ ಮತ್ತು ಪ್ರಚಂಡ್ ಲೈಟ್ ಯುದ್ಧ ಹೆಲಿಕಾಪ್ಟರ್‌ಗಳು ಕವಾಯತಿನಲ್ಲಿ ಭಾಗಿಯಾದವು. ಇದೇ ಮೊದಲ ಬಾರಿಗೆ ಸೇನೆಯ ಡ್ರೋನ್‌ಗಳನ್ನೂ ಪ್ರದರ್ಶಿಸಲಾಯಿತು. ಆಪರೇಷನ್ ಸಿಂದೂರ್ ಸಮಯದಲ್ಲಿ ಭೂ ಸೇನೆ, ವಾಯುಪಡೆ ಮತ್ತು ನೌಕಾದಳದ ಪಾತ್ರವನ್ನು ನೆನಪಿಸುವ ರೀತಿಯಲ್ಲಿ ಅಂದು ಬಳಸಿದ ಶಸ್ತ್ರಾಸ್ತ್ರಗಳು, ರಕ್ಷಣಾ ಉಪಕರಣಗಳು ಮೆರವಣಿಯಲ್ಲಿ ಸಾಗಿದರೆ ಜಾಗ್ವಾರ್ ಸೇರಿದಂತೆ ಯುದ್ಧ ವಿಮಾನಗಳು ಇವುಗಳ ಮೇಲಿನಿಂದ ಹಾರಾಟ ನಡೆಸಿದವು.

ವೈವಿಧ್ಯತೆಯಲ್ಲಿ ಏಕತೆ ಎಂಬ ವಿಷಯದ ಮೇಲೆ ಸುಮಾರು 100 ಕಲಾವಿದರು ಮೆರವಣಿಗೆಯಲ್ಲಿ ಪಾಲ್ಗೊಂಡು ಸಂಗೀತ ವಾದ್ಯಗಳ ಭವ್ಯ ಪ್ರಸ್ತುತಿಯೊಂದಿಗೆ ಭಾರತದ ಸಿರಿವಂತ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರದರ್ಶಿಸಿದರು.

ಪ್ರಾಣಿ-ಪಕ್ಷಿಗಳ ತುಕಡಿ

ಭಾರತೀಯ ಸೇನೆಯಲ್ಲಿ ಪ್ರಾಣಿಗಳ ಪಾತ್ರ ಹಾಗೂ ಕಠಿಣ ಭೂಪ್ರದೇಶಗಳಲ್ಲಿ ಅವುಗಳ ಸೇವೆಯನ್ನು ಅನಾವರಣಗೊಳಿಸಲೆಂದೇ ಭಾರತೀಯ ಸೇನೆಯ ರಿಮೌಂಟ್ ಮತ್ತು ಪಶುವೈದ್ಯಕೀಯ ದಳದ ಸಮರ್ಪಿತ ಪ್ರಾಣಿ ತುಕಡಿಯು, ಗಣರಾಜ್ಯೋತ್ಸವ ಪರೇಡ್‌ನಲ್ಲಿ ತಮ್ಮ ಪ್ರದರ್ಶನ ನೀಡಿದವು. ಪರೇಡ್‌ನಲ್ಲಿ ಕರ್ನಾಟಕ ಮುಧೋಳ ಶ್ವಾನ, ಬ್ಯಾಕ್ಟ್ರಿಯನ್ ಒಂಟೆ, ಶಿಕಾರಿ ಪಕ್ಷಿ ಗಮನ ಸೆಳೆದವು. ಪರೇಡ್‌ನ ಆರಂಭದಲ್ಲೇ ಬ್ಯಾಕ್ಟ್ರಿಯನ್ ಒಂಟೆ, ಶಿಕಾರಿ ಪಕ್ಷಿಯಾದ ಬ್ಲ್ಯಾಕ್ ಕೈಟ್ಸ್, ವಿವಿಧ ತಳಿಯ ಶ್ವಾನಗಳು ಸಾಗಿ ಬಂದು ನೆರೆದಿದ್ದ ಗಣ್ಯರ ಗಮನ ಸೆಳೆದವು. ಜನ್ಸ್ಕಾರ್ ಪೋನಿಗಳು, ಬ್ಲ್ಯಾಕ್ ಕೈಟ್ಸ್ (ರ್ಯಾಪ್ಟರ್ ಅಥವಾ ಶಿಕಾರಿ ಪಕ್ಷಿ), ವಿಜಿಲೆಂಟ್ ಬರ್ಡ್ಸ್, ಮುಧೋಳ ಹೌಂಡ್, ರಾಂಪುರ್ ಹೌಂಡ್, ಚಿಪ್ಪಿಪರೈ, ಕೊಂಬೈ ಮತ್ತು ರಾಜಪಾಳಯಂ ಸೇರಿದಂತೆ ವಿವಿಧ ಶ್ವಾನಗಳನ್ನು ಪ್ರದರ್ಶಿಸಲಾಯಿತು.

ಎಸ್‌ಐಟಿ ತನಿಖೆ ಬಳಿಕವೇ ಪ್ರಕರಣದ ಸಂಪೂರ್ಣ ಮಾಹಿತಿ ಲಭ್ಯ: ಪರಂ

400 ಕೋಟಿ ಕಳವು ಕೇಸ್‌ನಲ್ಲಿ ಸಾಕಷ್ಟು ಗೊಂದಲ

ತುಮಕೂರು: ಮಹಾರಾಷ್ಟ್ರ ಪೊಲೀಸರು 400ಕೋಟಿ ರು.ನಗದು ಕಳ್ಳತನವಾಗಿದೆ ಎಂದು ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ಈ ಕಳ್ಳತನ ಪ್ರಕರಣದ ತನಿಖೆ ನಡೆಸಲು ಈಗಾಗಲೇ ಎಸ್‌ಐಟಿ ರಚನೆ ಮಾಡಲಾಗಿದೆ. ತನಿಖೆ ಬಳಿಕವೇ ಪ್ರಕರಣದ ಸಂಪೂರ್ಣ ಮಾಹಿತಿ ಸಿಗಲಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ತುಮಕೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಪ್ರಾಥಮಿಕ ತನಿಖಾ ವರದಿ ಪ್ರಕಾರ ಕಳ್ಳತನ ಪ್ರಕರಣವು ಕರ್ನಾಟಕ ಗಡಿ ಭಾಗದ ಬೆಳಗಾವಿ ಜಿಲ್ಲೆಯಲ್ಲಿ ನಡೆದಿದೆ. ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿ ಈ ಪ್ರಕರಣದ ಸಂಬಂಧ ಕೆಲವು ಮಂದಿಯನ್ನು ಬಂಧಿಸಲಾಗಿದೆ. ಇದರಲ್ಲಿ ಸಾಕಷ್ಟು ಗೊಂದಲ ಗಳು ಕೂಡ ಅಡಗಿದೆ. ಈ ಪ್ರಕರಣ ಸತ್ಯವೋ ಅಥವಾ ಸುಳ್ಳು ಎಂಬುದು ಬೆಳಕಿಗೆ ಬರಲಿದೆ. ಕರ್ನಾಟಕ ಪೊಲೀಸ್ ಸಿಬ್ಬಂದಿ ಕೂಡ ಪ್ರಕರಣ ದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು ಈ ಬಗ್ಗೆ ಅಧಿಕಾರಿಗಳನ್ನು ವಿಚಾರಿಸಿಸ ಲಾಗಿದ್ದು, ರಾಜ್ಯ ಪೊಲೀಸ್ ಸಿಬ್ಬಂದಿಗಳು ಭಾಗಿಯಾಗಿಲ್ಲ ಎನ್ನುವುದು ದೃಢಪಟ್ಟಿದೆ ಎಂದು ಹೇಳಿದರು. ರಾಜ್ಯ ರಾಜಕಾರಣಕ್ಕೆ ಮರಳುತ್ತೇನೆ ಎಂಬ ಎಚ್‌ಡಿಕೆ ಹೇಳಿಕೆಗೆ ವಿಚಾರವಾಗಿ ಮಾತನಾಡಿ, ಅವರು ರಾಜ್ಯ ರಾಜಕಾರಣಕ್ಕೆ ಬರಲಿ ಅವರೇನು ಕ್ರಾಂತಿಕಾರಿ ಮುಖಂಡನಲ್ಲ. ಅವರೊಬ್ಬ ಹಿರಿಯ ಮುಖಂಡರಾಗಿದ್ದಾರೆ. ರಾಜ್ಯ ರಾಜಕಾರಣಕ್ಕೆ ಬರಲಿ ನೋಡೋಣ. ನಾವು ಅವರನ್ನು ಎದುರಿಸುತ್ತೇವೆ ಯಾವುದೇ ತೊಂದರೆ ಇಲ್ಲ ಎಂದರು.

ತುಮಕೂರು ಜಿಲ್ಲೆಯ ಶೈಕ್ಷಣಿಕ ನೀರಾವರಿ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳ ಸಮಗ್ರ ಅನುಷ್ಠಾನಕ್ಕಾಗಿ ಮತ್ತು ಜನಪರ ಯೋಜನೆಗಳ ಜಾರಿಗೆ ಮುಂಬರುವ ಬಜೆಟ್‌ನಲ್ಲಿ 500 ಕೋಟಿ ರು. ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇನೆ.

ಜಿ.ಪರಮೇಶ್ವರ್, ಸಚಿವ

₹400 ಕೋ.ದರೋಡೆ: ಕೃತ್ಯ, ಮೂಲ ನಿಗೂಢ

← ಮೊದಲ ಪುಟದಿಂದ

ಕಳೆದ ವರ್ಷ 2025 ರ ಅಕ್ಟೋಬರ್ 16 ರಂದು 400 ಕೋಟಿ ಹಣ ತುಂಬಿದ್ದ ಎರಡು ಕಂಟೇನರ್‌ಗಳನ್ನು ಬೆಳಗಾವಿ ಚೋರ್ಲಾ ಘಾಟ್ ನಲ್ಲಿ ತಡೆದು ದರೋಡೆ ಮಾಡಲಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಈವರೆಗೂ ಕರ್ನಾಟಕ, ಮಹಾರಾಷ್ಟ್ರ ಹಾಗೂ ಗೋವಾ ಪೊಲೀಸರಿಗೆ ಸಣ್ಣ ಸುಳಿವು ಸಿಕ್ಕಿಲ್ಲ. ಅಷ್ಟಕ್ಕೂ ಈ ಘಟನೆ ನಡೆದಿರುವುದು ಅನುಮಾನ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಹಾಗಾದರೆ ಇಷ್ಟು ದೊಡ್ಡ ಮೊತ್ತದ ಹಣದ ಕಥೆ ಶುರುವಾಗಿದ್ದು ಏಕೆ ಎಂಬ ಸಂಶಯವೂ ಪೊಲೀಸರನ್ನು ಕಾಡುತ್ತಿದೆ.

ಮಹಾರಾಷ್ಟ್ರ ಉದ್ಯಮಿಗೂ ಸೇರಿಲ್ಲ ಈ ಹಣ: 400 ಕೋಟಿ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಣ ಮಹಾರಾಷ್ಟ್ರದ ರಿಯಲ್ ಎಸ್ಟೇಟ್ ಉದ್ಯಮಿ ಕಿಶೋರ್ ಸೇಠ್ ಅವರಿಗೂ ಸಂಬಂಧಿಸಿದ್ದಲ್ಲ ಎಂದು ಹೇಳಲಾಗುತ್ತಿದೆ. ಗುಜರಾತ್ ಮೂಲದ ಪ್ರಭಾವಿ ರಾಜಕಾರಣಿ 2 ಸಾವಿರ ಮುಖ ಬೆಲೆಯ 400 ಕೋಟಿ ಹಣವನ್ನು ಚಲಾವಣೆಯ ನೋಟಾಗಿ ವರ್ಗಾವಣೆ ಮಾಡಲು ಉದ್ಯಮಿಗೆ ಒಪ್ಪಿಸಿದ್ದ ಎಂದು ಹೇಳಲಾಗುತ್ತಿದೆ.

ಅಪಹರಣಕ್ಕೆ ಒಳಗಾದ ವ್ಯಕ್ತಿ ಸಂದೀಪ್ ಪಾಟೀಲ್‌ಗೆ ಚಿತ್ರಹಿಂಸೆ ನೀಡಿ ಹಣವನ್ನು ದರೋಡೆ ಮಾಡಿದ್ದು ನೀನು. ಇದನ್ನು ಮರಳಿಸು ಎಂದು ಕಿರುಕುಳ ನೀಡಿದ್ದಾಗಿ ಉದ್ಯಮಿ ಕಿಶೋರ್ ಸೇಠ್ ಸೇರಿ ಅನೇಕರ ವಿರುದ್ಧ ಪ್ರಕರಣ ದಾಖಲಾಗಿದೆ. ಹಾಗಿದ್ದರೆ ಇಷ್ಟು ದೊಡ್ಡ ಮೊತ್ತದ ಕಪ್ಪು ಹಣ ಹೊಂದಿರುವ ಗುಜರಾತ್ ಉದ್ಯಮಿ ಯಾರು ಎಂಬುದು ಸದ್ಯದ ಕುತೂಹಲ.

ದರೋಡೆ ಹಾಗೂ ಹಣ ನೋಡಿದವರೂ ಒಬ್ಬರೂ ಇಲ್ಲ: ಅಷ್ಟಕ್ಕೂ 400 ಕೋಟಿ ರು. ಇದ್ದ ಕಂಟೇನರ್ ದರೋಡೆ ಹಾಗೂ ಹಣವನ್ನು ನೋಡಿರುವುದಾಗಿ ಈವರೆಗೂ ಬಂಧನಕ್ಕೆ ಒಳಗಾದ ಯಾವೊಬ್ಬ ಆರೋಪಿ ಪೊಲೀಸರ ಮುಂದೆ ಹೇಳಿಲ್ಲ. ಕೇವಲ ವಾಟ್ಸಪ್ ಸಂದೇಶ ಮತ್ತು ಪ್ರಕರಣ ದಾಖಲಿಸಿದ ಸಂದೀಪ್ ಪಾಟೀಲ್ ಹೇಳಿಕೆ ಆಧಾರದ ಮೇಲೆ ಈ ಪ್ರಕರಣಕ್ಕೆ ಇಷ್ಟೊಂದು ಮಹತ್ವ ನೀಡಲಾಗುತ್ತಿದೆ. ಮಹಾರಾಷ್ಟ್ರ ಸರಕಾರ ರಚಿಸಿರುವ ಐಪಿಎಸ್ ಅಧಿಕಾರಿ ಆದಿತ್ಯ ಮಿರ್ಖಲ್ಕರ್ ನೇತೃತ್ವದಲ್ಲಿ ಎಸ್‌ಐಟಿ ತಂಡವೂ ಅಧಿಕೃತವಾಗಿ ದರೋಡೆ ಪ್ರಕರಣ ನಡೆದಿದೆ ಎಂದು ಈವರೆಗೂ ಅಧಿಕೃತ ಹೇಳಿಕೆ ನೀಡಿಲ್ಲ. ಕೇವಲ ಊಹಾಪೋಹಗಳ ಮೇಲೆ ಕರ್ನಾಟಕ ಹಾಗೂ ಗೋವಾ ಪೊಲೀಸರಿಗೆ ಸಹಕಾರ ನೀಡುವಂತೆ ಪತ್ರ ಬರೆದಿದ್ದು ಬಿಟ್ಟರೆ ಯಾರಿಂದಲೂ ಈವರೆಗೂ ಹೇಳಿಕೆ ಸಿಕ್ಕಿಲ್ಲ.

ಈಶ ಯೋಗ ಕೇಂದ್ರದಲ್ಲಿ ಸಂಭ್ರಮದ ಗಣರಾಜೋತ್ಸವ

ಚಿಕ್ಕಬಳ್ಳಾಪುರ: ಸದ್ಗುರು ಜಗ್ಗಿ ವಾಸುದೇವನ್ ನೇತೃತ್ವದಲ್ಲಿ ಕೊಯಂಬತ್ತೂರಿನ ಈಶ ಯೋಗ ಕೇಂದ್ರದಲ್ಲಿ 77ನೇ ಗಣರಾಜ್ಯೋತ್ಸವವ ಸಂಭ್ರಮದಿಂದ ಆಚರಿಸಲಾಯಿತು. ಸಂಸದ ತೇಜಸ್ವಿ ಸೂರ್ಯ, ಗಾಯಕಿ ಶಿವಶ್ರೀ ಸ್ಕಂದಪ್ರಸಾದ್, ಭರತನಾಟ್ಯ ನೃತ್ಯಗಾರ್ತಿ ಲೀಲಾ ಸ್ಯಾಮ್ಸನ್ ಪಾಲ್ಗೊಂಡಿದ್ದರು.

ಈ ವೇಳೆ ಸದ್ಗುರುಗಳು ಆಶೀರ್ವಚನ ನೀಡಿದರು. ಕೇವಲ ಬದುಕುವ ಹಂತವನ್ನು ಮೀರಿ ಯುವಜನತೆಯ ಸಮಗ್ರ ಬೆಳವಣಿಗೆಯತ್ತ ಗಮನ ಹರಿಸುವ ಅಗತ್ಯತೆ ಬಗ್ಗೆ ಒತ್ತಿ ಹೇಳಿದರು. 'ಇಲ್ಲಿ ಕುಳಿತಿರುವ ಯುವಜನತೆಗೆ ಹಿಂದೆಂದಿಗಿಂತಲೂ ಹೆಚ್ಚಿನ ಸಾಧ್ಯತೆಗಳು ಲಭ್ಯವಿದೆ. ಇಂತಹ ನಂಬಲಸಾಧ್ಯ ಸಾಧ್ಯತೆಗಳನ್ನು ನಾನು ಕೂಡ ಹಿಂದೆಂದೂ ಊಹಿಸಿರಲಿಲ್ಲ. ಈ ಸಾಧ್ಯತೆಗಳನ್ನು ಭಯ ಅಥವಾ ಅಸುರಕ್ಷಿತ ಭಾವನೆಯಿಂದ ನೋಡಬಾರದು. ಬದಲಿಗೆ, ಮುಕ್ತ ಮನಸ್ಸು ಮತ್ತು ಧೈರ್ಯದೊಂದಿಗೆ ಎದುರಿಸಬೇಕು ಎಂದರು.

ಸಂಸದ ತೇಜಸ್ವಿ ಸೂರ್ಯ ಅವರು ತಮ್ಮ ಪತ್ನಿಯೊಂದಿಗೆ ಮೂರು ದಿನಗಳ ಕಾಲ ಈಶ ಯೋಗ ಕೇಂದ್ರದಲ್ಲಿದ್ದು, ದೇಹವನ್ನು ಪುನಶ್ಚೇತನಗೊಳಿಸಲು ಮತ್ತು ಶಾರೀರಿಕ ಹಾಗೂ ಮಾನಸಿಕ ಆರೋಗ್ಯದ ಉತ್ತುಂಗವನ್ನು ತಲುಪಲು ನೆರವಾಗುವ, ಯೋಗದಲ್ಲಿ ಬೇರೂರಿರುವ ಅಂಗಮರ್ದನ ಎಂಬ ಅಭ್ಯಾಸವನ್ನು ಕಲಿತರು. ಈಶ ಯೋಗ ಕೇಂದ್ರದ ಅನುಭವದ ಬಗ್ಗೆ ಮಾತನಾಡುತ್ತಾ ಅವರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. ಸದ್ಗುರುಗಳೇ, ನೀವು ಸೃಷ್ಟಿಸಿರುವ ಈ ಆವರಣದ ಪ್ರತಿಯೊಂದು ಕಲ್ಲು ಮತ್ತು ಎಲೆಗಳಲ್ಲಿಯೂ ಸ್ಫೂರ್ತಿ ಅಡಗಿದೆ. ಕಳೆದ ಮೂರು ದಿನಗಳು ನಾನು ಕಳೆದ ಅತ್ಯಂತ ಸ್ಫೂರ್ತಿದಾಯಕ ದಿನಗಳಾಗಿವೆ. ಈ ದೇಶದ ಶ್ರೇಷ್ಠ ದಾರ್ಶನಿಕರು ನಮಗೆ ನೀಡಿರುವ ಈ ಶಾಶ್ವತ ಸ್ಫೂರ್ತಿಯ ಬುಗ್ಗೆಯಿಂದ ದೇಶದಾದ್ಯಂತ ಇನ್ನೂ ಹೆಚ್ಚಿನ ಯುವಜನರು ಸ್ಫೂರ್ತಿ ಪಡೆಯುವಂತಾಗಲಿ ಎಂದು ನಾನು ಆಶಿಸುತ್ತೇನೆ ಎಂದರು.

ಕೊಯಂಬತ್ತೂರಿನ ಈಶ ಯೋಗ ಕೇಂದ್ರದಲ್ಲಿ ಗಣರಾಜೋತ್ಸವ ನಿಮಿತ್ತ ತ್ರಿವರ್ಣ ಧ್ವಜಾರೋಹಣ ಮಾಡಲಾಯಿತು. ಈ ವೇಳೆ ಸದ್ಗುರುಗಳು ಮಾತನಾಡಿದರು.

ನಾಗರಿಕತೆ ಭಾರತದ ಪರಂಪರೆ:

ರಾಷ್ಟ್ರಧ್ವಜಾರೋಹಣ ನೆರವೇರಿಸಿ ತೇಜಸ್ವಿ ಸೂರ್ಯ ಮಾತನಾಡಿ, ಭಾರತದ ನಾಗರಿಕತೆ ಪರಂಪರೆಯ ಬಗ್ಗೆ ಮಾತನಾಡಿದರು. ಭಾರತವು ಎಪ್ಪತ್ತೇಳು ವರ್ಷಗಳ ಹಳೆಯ ಗಣರಾಜ್ಯವಾಗಿರಬಹುದು, ಆದರೆ ನಾವು ಸಾವಿರಾರು ವರ್ಷಗಳ ಹಳೆಯ ನಾಗರಿಕತೆಯನ್ನು ಹೊಂದಿದ್ದೇವೆ. ಸುಲಲಿತವಾಗಿ ಮತ್ತು ಘನತೆಯಿಂದ ಹೇಗೆ ಬದುಕಬೇಕು. ಜೀವನ ಪ್ರಕ್ರಿಯೆಯನ್ನು ಹೇಗೆ ಸಾಗಿಸಬೇಕು ಎಂಬುದರ ಕುರಿತು ಜಗತ್ತಿಗೆ ದಾರಿ ತೋರಿಸಿದ ಮತ್ತು ಮಾರ್ಗದರ್ಶನ ನೀಡಿದ ನಾಗರಿಕತೆ ನಮ್ಮದು. ಇದೇ ಕಾರಣಕ್ಕಾಗಿ, ಭಾರತವು ಜಗತ್ತಿಗೆ ವಿಶ್ವಗುರುವಾಗಿತ್ತು ಮತ್ತು ಯಾವಾಗಲೂ ಆಗಿರುತ್ತದೆ ಎಂದರು.

ಗಣತಂತ್ರ ದಿನದ ಗವರ್ನರ್ ಭಾಷಣ ನಿರ್ವಿಘ್ನ

← ಮೊದಲ ಪುಟದಿಂದ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರದ ವಿರುದ್ಧ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ವಾಗ್ದಾಳಿ ನಡೆಸಿದ್ದಾರೆ. ದೇಶ ನಿಜಕ್ಕೂ ಬಲಗೊಳ್ಳುವುದು ಮತ್ತು ಸದೃಢಗೊಳ್ಳುವುದು ಆರ್ಥಿಕ ಪ್ರಜಾಪ್ರಭುತ್ವದಿಂದ. ಇದನ್ನು ಸಾಧಿಸಬೇಕೆಂದರೆ ಸಾವಿರಾರು ಜಾತಿಗಳಾಗಿ, ಮೇಲು ಕೀಳು ಎಂಬ ತಾರತಮ್ಯಗಳಲ್ಲಿ ಛಿದ್ರವಾಗಿರುವ ಈ ದೇಶದಲ್ಲಿ ಸಾಮಾಜಿಕ ನ್ಯಾಯದ ಮೂಲಕ ಆರ್ಥಿಕ ಸಮಾನತೆಯನ್ನು ಸ್ಥಾಪಿಸಿ ದೇಶವನ್ನು ಆಂತರಿಕವಾಗಿ ಸದೃಢಗೊಳಿಸ ಬೇಕಾಗಿದೆ. ಕೇವಲ ರಾಜಕೀಯ ಪ್ರಜಾತಂತ್ರದಿಂದ ನಾವು ತೃಪ್ತರಾಗಬಾರದು, ಅದನ್ನು ಸಾಮಾಜಿಕ ಪ್ರಜಾಪ್ರಭುತ್ವವನ್ನು ಮಾಡುವ ನಮ್ಮ ಪ್ರಯತ್ನ ಜಾರಿಯಲ್ಲಿರಬೇಕು ಎಂದು ಅಂಬೇಡ್ಕರ್ ಹೇಳಿದ್ದರು. ಇದರ ಆಶಯದಲ್ಲಿಯೇ ನಮ್ಮ ಸರಕಾರ ಮುನ್ನಡೆಯುತ್ತಿದೆ ಎಂದಿದ್ದಾರೆ.

ಲೋಕಭವನಕ್ಕೆ ಇಂದು ಮುತ್ತಿಗೆ

← ಮೊದಲ ಪುಟದಿಂದ

ಕಾಂಗ್ರೆಸಿಗರು ಹಮ್ಮಿಕೊಂಡಿರುವ ಪ್ರತಿಭಟನಾ ರ್‍ಯಾಲಿಗೆ ಪ್ರತಿಯಾಗಿ ಬಿಜೆಪಿ, ಜೆಡಿಎಸ್ ನಾಯಕರು ಮಂಗಳವಾರ ಬೆಳಗ್ಗೆ 10.30ಕ್ಕೆ ವಿಧಾನ ಸೌಧದ ಬಳಿಯಿರುವ ಮಹಾತ್ಮ ಗಾಂಧಿ ಪ್ರತಿಮೆ ಮುಂಭಾಗ ಧರಣಿ ಹಮ್ಮಿಕೊಂಡಿದ್ದಾರೆ.

ಈ ನಡುವೆ ಆಡಳಿತ ಪಕ್ಷದವರು, ಅದರಲ್ಲಿಯೂ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಗೃಹ ಸಚಿವರೇ ಲೋಕಭವನ ಮುತ್ತಿಗೆ ಹಾಕಲು ಮುಂದಾಗಿರುವುದು ಹಾಗೂ ಇಡೀ ರ್‍ಯಾಲಿಯ ನೇತೃತ್ವದಲ್ಲಿ ಆಡಳಿತದಲ್ಲಿರುವ ನಾಯಕರೇ ಮುಂಚೂಣಿಯಲ್ಲಿರುವುದು ಪೊಲೀಸರಿಗೆ ಪೀಕಲಾಟ ತಂದಿಟ್ಟಿದೆ.

ಸಾಮಾನ್ಯವಾಗಿ ವಿಧಾನಸೌಧ, ಲೋಕಭವನ, ಮುಖ್ಯಮಂತ್ರಿಗಳ ಅಧಿಕೃತ ನಿವಾಸಕ್ಕೆ ಪ್ರತಿಭಟನಾಕಾರರು ಮುತ್ತಿಗೆ ಹಾಕಲು ಪ್ರಯತ್ನಿಸುತ್ತಾರೆ. ಆದರೆ ದಾರಿ ಮಧ್ಯದಲ್ಲಿಯೇ ಅವರನ್ನು ಅಡ್ಡಹಾಕಿ ಪೊಲೀಸರು ವಶಕ್ಕೆ ಪಡೆಯುತ್ತಾರೆ. ಆದರೀಗ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳೇ ಪ್ರತಿಭಟನಾ ರ್‍ಯಾಲಿಯ ನೇತೃತ್ವವಹಿಸುವುದರಿಂದ, ಪೊಲೀಸರು ಯಾವ ರೀತಿ ಪ್ರತಿಕ್ರಿಯಿಸಬೇಕು ಎನ್ನುವ ಗೊಂದಲದಲ್ಲಿದ್ದಾರೆ. ಮುತ್ತಿಗೆಯನ್ನು ತಡೆಯಲು ಹೋದರೆ ಸರಕಾರ ಪ್ರಮುಖರ 'ಸಿಟ್ಟಿಗೆ' ಬಲಿಯಾಗಬೇಕಾಗುತ್ತದೆ. ಹಾಗೆಂದು ಮುತ್ತಿಗೆಯನ್ನು ತಡೆಯದಿದ್ದರೆ ಲೋಕಭವನದ ಬಳಿ ಗದ್ದಲವಾದರೆ ಅದು ಮತ್ತೊಂದು ರೀತಿಯ ಸಮಸ್ಯೆಯಾಗುತ್ತದೆ. ಆದ್ದರಿಂದ ಈ ಘಟನೆಯನ್ನು ಯಾವ ರೀತಿ ನಿಭಾಯಿಸಬೇಕು ಎನ್ನುವ ಗೊಂದಲದಲ್ಲಿ ಪೊಲೀಸರಿದ್ದಾರೆ.

ಕೈಗೆ ಪ್ರತಿಯಾಗಿ ಕಮಲ ಪ್ರತಿಭಟನೆ: ಕಾಂಗ್ರೆಸ್ ಹಮ್ಮಿಕೊಂಡಿರುವ ಪ್ರತಿಭಟನೆಗೆ ಪ್ರತಿಯಾಗಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಜಂಟಿಯಾಗಿ ಪ್ರತಿಭಟನೆ ನಡೆಸಲು ತೀರ್ಮಾನಿಸಿದ್ದಾರೆ. ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆ ಎದುರು ಬಿಜೆಪಿ-ಜೆಡಿಎಸ್ ಜಂಟಿಯಾಗಿ ಪ್ರತಿಭಟನೆ ನಡೆಸಲಿದ್ದು, ಈ ವೇಳೆ ರಾಜ್ಯಪಾಲರ ಮೇಲೆ ಕಾಂಗ್ರೆಸಿಗರು ನಡೆಸಿರುವ ಗೂಂಡಾಗಿರಿ ಮತ್ತು ಅಪಮಾನವನ್ನು ಖಂಡಿಸಿ ಹಾಗೂ ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಅಬಕಾರಿ ಸಚಿವರಾದ ಆರ್.ಬಿ. ತಿಮ್ಮಾಪುರ ರಾಜೀನಾಮೆಗೆ ಒತ್ತಾಯಿಸಲು ತೀರ್ಮಾನಿಸ ಲಾಗಿದೆ. ಪ್ರತಿಭಟನೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ್, ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಎಸ್.ಎಲ್. ಭೋಜೆಗೌಡ ಅವರ ಸೇರಿದಂತೆ ಎರಡು ಪಕ್ಷದ ಶಾಸಕರು, ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ ಎಂದು ತಿಳಿದುಬಂದಿದೆ.

ಮೂರು ಪಕ್ಷಗಳು ವಿಧಾನಸೌಧದ ಸುತ್ತಮುತ್ತ ಪ್ರತಿಭಟನೆ, ರ್‍ಯಾಲಿಗಳನ್ನು ಹಮ್ಮಿಕೊಂಡಿರುವುದರಿಂದ ಭಾರಿ ಬಿಗಿ ಭದ್ರತೆಯನ್ನು ಒದಗಿಸಲಾಗಿದೆ. ಅದರಲ್ಲಿಯೂ ರಾಜಭವನಕ್ಕೆ ಮುತ್ತಿಗೆ ಹಾಕುವುದಾಗಿ ಸ್ವತಃ ಉಪಮುಖ್ಯಮಂತ್ರಿಗಳು ಹಾಗೂ ಆಡಳಿತ ಪಕ್ಷದ ನಾಯಕರು ಹೇಳಿಕೆ ನೀಡಿರುವುದರಿಂದ ರಾಜಭವನಕ್ಕೆ ಹೆಚ್ಚುವರಿ ಭದ್ರತೆಯನ್ನು ನೀಡಲಾಗಿದೆ.

ನರೇಗಾ ಉಳಿಸುವ ಸಲುವಾಗಿ ಮಂಗಳವಾರ ರಾಜಭವನ ಚಲೋ ನಡೆಸಲಾಗುವುದು. ನಾವು ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಬೇಕಿತ್ತು. ಆದರೆ ನಾವು ಲೋಕಭವನ ಚಲೋ ಹಮ್ಮಿಕೊಂಡಿದ್ದೇವೆ. ನಮ್ಮ ಎಲ್ಲಾ ಶಾಸಕರು, ಪರಿಷತ್ ಸದಸ್ಯರು ಕಡ್ಡಾಯವಾಗಿ ಭಾಗವಹಿಸಬೇಕು. ಪ್ರತಿ ಪಂಚಾಯಿತಿಯಲ್ಲಿರುವ ನರೇಗಾ ಉದ್ಯೋಗ ಕಾರ್ಡ್ ಹೊಂದಿರುವವರಿಗೆ ಈ ಹೋರಾಟ ತಲುಪಬೇಕು. ರಾಜ್ಯ, ಜಿಲ್ಲೆ ಹಾಗೂ ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ಈ ಪ್ರತಿಭಟನೆ ನಡೆಸಲಾಗುವುದು.

-ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಇಂದು ಮತ್ತೆ ಅಬಕಾರಿ ಚರ್ಚೆ, ಇಲ್ಲವೇ ಹೋರಾಟ

ಅಬಕಾರಿ ಇಲಾಖೆಯ ಭ್ರಷ್ಟಾಚಾರ ಆರೋಪದಲ್ಲಿ ಸಚಿವ ಆರ್.ಬಿ. ತಿಮ್ಮಾಪುರ ವಿರುದ್ಧ ಪ್ರಕರಣ ದಾಖಲಾಗಿರುವುದನ್ನು ಮುಂದಿಟ್ಟುಕೊಂಡು ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ವಿಧಾನಸಭೆಯಲ್ಲಿ ಪ್ರತಿಭಟನೆ ಮುಂದುವರಿಸುವ ಸಾಧ್ಯತೆಯಿದೆ. ಶುಕ್ರವಾರ ಸ್ಪೀಕರ್ ಖಾದರ್ ಅವರು, ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿ ಚರ್ಚಿಸಲು ಅವಕಾಶ ನೀಡುವುದಾಗಿ ಪ್ರತಿಪಕ್ಷ ನಾಯಕ ಆರ್.ಅಶೋಕ್‌ಗೆ ಭರವಸೆ ನೀಡಿದ್ದಾರೆ. ಚರ್ಚೆಗೆ ಅವಕಾಶ ನೀಡಿದರೆ, ತಿಮ್ಮಾಪುರ ರಾಜೀನಾಮೆಗೆ ಆಗ್ರಹಿಸಿ, ಅಶೋಕ್ ಸೇರಿದಂತೆ ಇನ್ನಿತರ ಪ್ರಮುಖರು ಮಾತನಾಡುತ್ತಾರೆ. ಒಂದು ವೇಳೆ ಅವಕಾಶ ನೀಡದಿದ್ದರೆ ಬಾವಿಗಿಳಿದು ಪ್ರತಿಭಟನೆ ಮುಂದುವರೆಸುವ ಸಾಧ್ಯತೆಯಿದೆ ಎನ್ನಲಾಗಿದೆ.

77ನೇ ಗಣರಾಜ್ಯೋತ್ಸವದ ಅಂಗವಾಗಿ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯಪಾಲರಿಂದ ಧ್ವಜಾರೋಹಣ

ಜನರ ಆರ್ಥಿಕ ಚೈತನ್ಯಕ್ಕೆ ಗ್ಯಾರಂಟಿ ಬಲ: ಗೆಹ್ಲೋಥ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂವಿಧಾನದ ಮುಖ್ಯ ಆಶಯದಂತೆ ಹಿಂದುಳಿದವರ ಬಲವರ್ಧನೆಗಾಗಿ ರಾಜ್ಯದ ಜನರಿಗೆ ಆರ್ಥಿಕ ಚೈತನ್ಯ ನೀಡುವುದಕ್ಕಾಗಿ ರಾಜ್ಯ ಸರಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಹೇಳಿದರು.

77ನೇ ಗಣರಾಜ್ಯೋತ್ಸವದ ಅಂಗವಾಗಿ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಕರ್ನಾಟಕ ಸರಕಾರವು ಸಂವಿಧಾನ ಪ್ರಸ್ತಾಪಿಸಿರುವ ಭಾತೃತ್ವ, ಸ್ವಾತಂತ್ರ ಹಾಗೂ ಸಮಾನತೆಯನ್ನು ಆದ್ಯತೆಯ ವಿಷಯಗಳನ್ನಾಗಿ ಪರಿಗಣಿಸಿದೆ. ರಾಜ್ಯ ಸರಕಾರ ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಇದರ ಮೂಲಕ ಕರ್ನಾಟಕದಲ್ಲಿ ಸಾಮಾಜಿಕ ಹಾಗೂ ರಾಜಕೀಯ ಚೈತನ್ಯ ಉದಯಿಸುತ್ತಿದೆ. ರಾಜ್ಯದ ಪ್ರತಿ ಪ್ರದೇಶ ಹಾಗೂ ಪ್ರತಿ ಸಮುದಾಯಗಳ ಜನರ ಧ್ವನಿಗಳನ್ನು ಆಲಿಸಿ, ಅವುಗಳಿಗೆ ನ್ಯಾಯೋಚಿತ ಪರಿಹಾರ ನೀಡುವ ಕೆಲಸವನ್ನು ಮಾಡುತ್ತಿದೆ. ಸರಕಾರದ ವಿವಿಧ ನೇಮಕಾತಿಗಳಲ್ಲಿ ಅಲಕ್ಷಿತರಿಗೆ ಪ್ರಾಧಾನ್ಯತೆ ನೀಡಲಾಗುತ್ತಿದೆ. ವಿವಿಧ ಜನಸಮುದಾಯಗಳ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳಲು ಆಯೋಗಗಳನ್ನು ರಚಿಸಿ ಅವುಗಳ ಶಿಫಾರಸು ಜಾರಿ ಮಾಡಲಾಗುತ್ತಿದೆ ಎಂದರು.

ಜನ ಕಲ್ಯಾಣಗಳಿಗಾಗಿ ರಾಜ್ಯವು ವರ್ಷಕ್ಕೆ 1.12 ಲಕ್ಷ ಕೋಟಿ ರು. ಖರ್ಚು ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳಿಗಾಗಿ ಈವರೆಗೆ 1.13 ಲಕ್ಷ ಕೋಟಿ ರು.ಗಳಿಗೂ ಹೆಚ್ಚಿನ ಅನುದಾನ ವಿನಿಯೋಗಿಸ ಲಾಗಿದೆ. ಇದರ ಪರಿಣಾಮವಾಗಿ ಜನರ ಕೊಳ್ಳುವ ಶಕ್ತಿ ಹೆಚ್ಚಿದೆ, ಕುಟುಂಬಗಳು ಆರ್ಥಿಕವಾಗಿ ಸಬಲವಾಗುತ್ತಿವೆ ಎಂದು ಹಲವಾರು ಅಧ್ಯಯನ ಗಳು ಹೇಳಿವೆ. ಮಹಿಳಾ ಸಮುದಾಯದಲ್ಲಿ ಹೊಸ ಆರ್ಥಿಕ ಸಾಮಾಜಿಕ ಉತ್ಸಾಹ ಬಂದಿದೆ. ದೇಶದಲ್ಲಿ ಗ್ರಾಹಕ ಬೆಲೆ ಸೂಚ್ಯಂಕಗಳು ಆರೋಗ್ಯಕರವಾ ಗಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ ಎಂದು ಸರಕಾರದ ಗ್ಯಾರಂಟಿ ಯೋಜನೆಗಳನ್ನು ಬಣ್ಣಿಸಿದ್ದಾರೆ.

ಸಂವಿಧಾನವನ್ನು ರಕ್ಷಿಸಿದರೆ, ನಮ್ಮನ್ನು ಅದು ರಕ್ಷಿಸಲಿದೆ: ಸಂವಿಧಾನವು ತನ್ನ ಮೊದಲ ಅನುಚ್ಛೇದದಲ್ಲಿಯೇ ಭಾರತವನ್ನು ಒಂದು ರಾಜ್ಯಗಳ ಒಕ್ಕೂಟ ಎಂದು ಘೋಷಿಸುತ್ತದೆ. ನಮ್ಮ ಸಂವಿಧಾನವು ಸಾರ್ವಭೌಮ ಅಧಿಕಾರವನ್ನು ಒಕ್ಕೂಟ ಮತ್ತು ರಾಜ್ಯಗಳ ನಡುವೆ ಹಂಚಿದೆ. ದೇಶದ ಅಖಂಡತೆ ಮತ್ತು ಸಮಗ್ರತೆಯ ದೃಷ್ಟಿಯಿಂದ ಒಕ್ಕೂಟ ಸರಕಾರಕ್ಕೆ ಹೆಚ್ಚಿನ ಅಧಿಕಾರ ನೀಡುವಾಗಲೂ ರಾಜ್ಯಗಳ ಅಧಿಕಾರ ವ್ಯಾಪ್ತಿಯನ್ನು ಗುರುತಿಸಿ ಗೌರವಿಸಿದೆ.

77ನೇ ಗಣರಾಜ್ಯೋತ್ಸವದ ಅಂಗವಾಗಿ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರು ಧ್ವಜಾರೋಹಣ ನೆರವೇರಿಸಿದರು.

ಆ ಮೂಲಕ ದೇಶದ ವಿವಿಧತೆಯನ್ನು ಎತ್ತಿ ಹಿಡಿದಿದೆ. ವೈವಿಧ್ಯಮಯವಾದ, ಅಧಿಕಾರ ಹಂಚಿಕೆಯ ಈ ತತ್ವವನ್ನು ಅಳವಡಿಸಿಕೊಂಡು ನಮ್ಮ ಸಂವಿಧಾನದ ನಿರ್ಮಾತೃಗಳು ಈ ಆಡಳಿತ ವ್ಯವಸ್ಥೆಯನ್ನು ನಮಗೆ ನೀಡಿದ್ದಾರೆ. ಸಶಕ್ತ ರಾಜ್ಯಗಳ ಮೂಲಕ ಸಶಕ್ತ ಭಾರತ ನಿರ್ಮಿಸುವುದು ಅವರ ಕನಸಾಗಿತ್ತು. ಆ ಕನಸಿಗೆ ಕುಂದುಂಟಾಗದಂತೆ ನಮ್ಮ ಒಕ್ಕೂಟ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ಸಂವಿಧಾನದ ಕಾರಣಕ್ಕಾಗಿಯೇ ನಾವು ನೆಮ್ಮದಿಯಿಂದ ಇದ್ದೇವೆ. ದೇಶದ ಅಸಂಖ್ಯಾತ ಜನರು, ನಾವು ಸಂವಿಧಾನವನ್ನು ರಕ್ಷಿಸಿದರೆ ಸಂವಿಧಾನವು ನಮ್ಮನ್ನು ರಕ್ಷಿಸುತ್ತದೆ ಎಂದು

ಗ್ಯಾರಂಟಿಗಳು ಕೇವಲ ಭರವಸೆಯಲ್ಲ, ಅವು ಸಂವಿಧಾನಬದ್ಧ ಹಕ್ಕು: ಸಿಎಂ

ಸಂವಿಧಾನವನ್ನು ದುರ್ಬಲಗೊಳಿಸುವ ಸಂಚು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂವಿಧಾನವನ್ನು ಬದಲಿಸಲು ಆಗಲ್ಲವೆಂದು ಅದನ್ನು ನಿಧಾನವಾಗಿ ದುರ್ಬಲಗೊಳಿಸುವ ಸಂಚು ದೇಶದಲ್ಲಿ ಕೆಲ ಪಟ್ಟಭದ್ರರು ನಡೆಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ರಾಜ್ಯದ ಜನರಿಗೆ ನೀಡಿರುವ ಸಂದೇಶದಲ್ಲಿ, ಸಂವಿಧಾನವನ್ನು ವಿರೋಧಿಸುತ್ತಿರುವವರು ಸಾಮಾಜಿಕ ಬದಲಾವಣೆ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವವರು. ಅವರು ಬಡವರ, ರೈತರ, ಕಾರ್ಮಿಕರ, ದಲಿತರ, ಶೋಷಿತರ ಪರವಾದ ಕಾನೂನುಗಳು ಮತ್ತು ಕಾರ್ಯಕ್ರಮಗಳನ್ನು ವಿರೋಧಿಸುವವರು ಎನ್ನುವುದನ್ನು ಜನತೆ ಅರ್ಥಮಾಡಿಕೊಳ್ಳಬೇಕು ಎಂದಿದ್ದಾರೆ.

ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನ ಅರ್ಪಿಸಿದಾಗಲೂ ಅದನ್ನು ವಿರೋಧಿಸುವವರಿದ್ದರು. ಈಗಲೂ ಆಗಾಗ ಸಂವಿಧಾನವನ್ನು ಬದಲಾಯಿಸುವ, ಕಿತ್ತೊಗೆಯುವ ಕೂಗುಗಳು ಅಲ್ಲಲ್ಲಿ ಕೇಳಿಬರುತ್ತಿದೆ. ಆದರೆ ಇದು ಸುಲಭದ ಕೆಲಸ ಅಲ್ಲ ಎಂದು ಅರ್ಥಮಾಡಿಕೊಂಡವರು ಅದನ್ನು ನಿಧಾನವಾಗಿ ದುರ್ಬಲಗೊಳಿಸುವ ಪ್ರಯತ್ನದಲ್ಲಿದ್ದಾರೆ. ಇದು ನಿಧಾನವಾಗಿ ವಿಷ ಉಣಿಸುವ ಸಂಚು. ಸಾಂವಿಧಾನಿಕ ಸಂಸ್ಥೆಗಳ ಸ್ವಾಯತ್ತತೆ ಕಿತ್ತುಕೊಳ್ಳುವ ಮೂಲಕ ಸಂವಿಧಾನವನ್ನು ಅಪ್ರಸ್ತುತ ಮಾಡುವ ಈ ಸಂಚಿನ ಬಗ್ಗೆ ನಾವು ಎಚ್ಚರದಿಂದ ಇರಬೇಕು. ಸಂವಿಧಾನವನ್ನು ನಾವು ರಕ್ಷಿಸಿದರೆ ಸಂವಿಧಾನ ನಮ್ಮನ್ನು ರಕ್ಷಿಸುತ್ತದೆ, ದೇಶ ಸುಭದ್ರವಾಗಿ ಉಳಿಯುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಂವಿಧಾನಬದ್ಧ ನಮ್ಮ ಸರಕಾರ: ನಾಗರಿಕನೊಬ್ಬನ ಸ್ಥಾನಮಾನ ಆತನ ಸತ್ವ-ಸಾಧನೆಗಳಿಂದ ನಿರ್ಣಯವಾಗಬೇಕೇ ಹೊರತು ಆತನ ಹುಟ್ಟು ಇಲ್ಲವೇ ಪುರಾತನ ಕಾಲದಿಂದ ಬಂದ ಸಾಮಾಜಿಕ ಮೂಲಗಳಿಂದ ಅಲ್ಲ ಎಂಬುದನ್ನು ಪ್ರತಿಪಾದಿಸುವ ನಾಗರಿಕ ಸಮಾಜದ ನಿರ್ಮಾಣ ನಮ್ಮ ಸಂವಿಧಾನದ ಮೂಲ ಆಶಯ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನವನ್ನು ದೇಶಕ್ಕೆ ಅರ್ಪಿಸುವಾಗ ಮುಂದಿನ ದಿನಗಳಲ್ಲಿ ದೇಶವನ್ನು ಆಳುವವರಿಗೆ ಎರಡು ಮುಖ್ಯವಾದ ಜವಾಬ್ದಾರಿಗಳನ್ನು ಒತ್ತು ಕೊಟ್ಟು ಹೇಳಿದ್ದರು. ಮೊದಲನೆಯದು ಈ ದೇಶದಲ್ಲಿ ರಾಜಕೀಯ ಪ್ರಜಾಪ್ರಭುತ್ವದ ರಕ್ಷಣೆ, ಆ ಮೂಲಕ ದೇಶದ ಸಾರ್ವಭೌಮತೆ ಕಾಪಾಡುವುದು. ಎರಡನೆಯದಾಗಿ ಆರ್ಥಿಕ ಪ್ರಜಾಪ್ರಭುತ್ವ ಸಾಧಿಸುತ್ತಾ ಹೋಗುವುದು. ದೇಶ ನಿಜಕ್ಕೂ ಸದೃಢಗೊಳ್ಳುವುದು ಆರ್ಥಿಕ ಪ್ರಜಾಪ್ರಭುತ್ವದಿಂದ. ಇದನ್ನು ಸಾಧಿಸಬೇಕೆಂದರೆ ಸಾವಿರಾರು ಜಾತಿಗಳಾಗಿ, ಮೇಲು ಕೀಳು ಎಂಬ ತಾರತಮ್ಯಗಳಲ್ಲಿ

ಸಿಎಂ ಸಿದ್ದರಾಮಯ್ಯ ಅವರು ತ್ರಿವರ್ಣ ಧ್ವಜಕ್ಕೆ ವಂದನೆ ಸಲ್ಲಿಸಿದರು.

ಛಿದ್ರವಾಗಿರುವ ಈ ದೇಶದಲ್ಲಿ ಸಾಮಾಜಿಕ ನ್ಯಾಯದ ಮೂಲಕ ಆರ್ಥಿಕ ಸಮಾನತೆ ಸ್ಥಾಪಿಸಿ ದೇಶವನ್ನು ಆಂತರಿಕವಾಗಿ ಸದೃಡಗೊಳಿಸಬೇಕಾಗಿದೆ ಎಂದು ಕರೆ ನೀಡಿದ್ದಾರೆ.

ಭವಿಷ್ಯಕ್ಕೆ 'ಗ್ಯಾರಂಟಿ' ನೆರವು: ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆಯಲ್ಲಿ ರೂಪಿತವಾದ ನಮ್ಮ ಗ್ಯಾರಂಟಿ ಯೋಜನೆಗಳು ಭವಿಷ್ಯಕ್ಕೆ ಅನುಕೂಲವಾಗಲಿದೆ. ಗ್ಯಾರಂಟಿ ಯೋಜನೆಗಳ ಪರಿಣಾಮ ಇಂದು ಸಮಾಜದಲ್ಲಿ ಭದ್ರತೆಯ ಭಾವನೆ ಮನೆ ಮಾಡಿದೆ. ಇಂದು ಅನ್ನಭಾಗ್ಯ ಯೋಜನೆಯ ಮೂಲಕ ಆಹಾರ ಭದ್ರತೆ, ಗೃಹಜ್ಯೋತಿಯ ಮೂಲಕ ಇಂಧನ ಖಾತರಿಯನ್ನು ನಾಡಿನ ಜನತೆಗೆ ಒದಗಿಸಿವೆ. ಗೃಹಲಕ್ಷ್ಮಿ ಯೋಜನೆಯು ಆರ್ಥಿಕವಾಗಿ ಹಿಂದುಳಿದಿರುವ ಈ ನಾಡಿನ ಕುಟುಂಬಗಳ ಯಜಮಾನಿಯರಿಗೆ ಮಾಸಿಕ 2 ಸಾವಿರ ರು. ಒದಗಿಸುವ ಮೂಲಕ ಅವರ ಕನಿಷ್ಠ ಅಗತ್ಯಗಳಿಗೆ ಬೆಂಗಾವಲಾಗಿದೆ ಎಂದು ಹೇಳಿದ್ದಾರೆ. ಶಕ್ತಿ ಯೋಜನೆ ಮಹಿಳೆಯರಿಗೆ ಉಚಿತ ಪ್ರಯಾಣದ ಖಾತರಿ ನೀಡಿ ಅವರನ್ನು ಸ್ವಾವಲಂಬಿಗಳಾಗಿಸಿದೆ. ಯುವನಿಧಿ ಯೋಜನೆಯು ಪದವೀಧರ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ ನೀಡುವ ಮೂಲಕ ಅವರಲ್ಲಿ ಮಾನಸಿಕ ಸ್ಥೈರ್ಯ ತುಂಬಿ ಉತ್ತಮ ಉದ್ಯೋಗಾವಕಾಶಗಳಿಗೆ ತರಬೇತಿ ಪಡೆಯಲು ಅವಕಾಶ ಕಲ್ಪಿಸಿದೆ. ಕರ್ನಾಟಕದಲ್ಲಿ ಇಂದು ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಯೊಂದು ಕುಟುಂಬವು ಸರಕಾರದ ಗ್ಯಾರಂಟಿ

> **ಸಂವಿಧಾನವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆಸುವುದು ವಿಷ ಉಣಿಸುವ ಸಂಚು. ಸಂವಿಧಾನವನ್ನು ನಾವು ರಕ್ಷಿಸಿದರೆ ಸಂವಿಧಾನ ನಮ್ಮನ್ನು ರಕ್ಷಿಸುತ್ತದೆ. ದೇಶ ಸುಭದ್ರವಾಗಿ ಉಳಿಯುತ್ತದೆ. ನಮ್ಮ ಸರಕಾರದ ಎಲ್ಲ ಯೋಚನೆ-ಯೋಜನೆಗಳಿಗೆ ಮಾರ್ಗದರ್ಶನ ನೀಡುತ್ತಾ ಬಂದಿರುವುದು ನಮ್ಮ ಸಂವಿಧಾನ. ಅದರೊಳಗಿನ ಅಕ್ಷರ-ಅಕ್ಷರಗಳಿಗೂ ನಾನು, ನಮ್ಮ ಪಕ್ಷ ಮತ್ತು ಸರಕಾರ ಬದ್ಧವಾಗಿದೆ.**
>
> -ಸಿದ್ದರಾಮಯ್ಯ ಮುಖ್ಯಮಂತ್ರಿ

ಯೋಜನೆಗಳಿಂದಾಗಿ ತಿಂಗಳಿಗೆ 5 ರಿಂದ 6 ಸಾವಿರ ರು. ಉಳಿತಾಯ ಕಾಣುತ್ತಿದ್ದು, ವಾರ್ಷಿಕ 60 ರಿಂದ 70 ಸಾವಿರ ರು. ಈ ಕುಟುಂಬಗಳಿಗೆ ಉಳಿತಾಯವಾಗುತ್ತಿದೆ. ಅದೇ ರೀತಿ, ಮಧ್ಯಮ, ಮೇಲ್ವರ್ಗದ ಕುಟುಂಬಗಳಿಗೂ ಸಹ ಗೃಹಜ್ಯೋತಿ, ಶಕ್ತಿ, ಯುವನಿಧಿಯಂತಹ ಗ್ಯಾರಂಟಿ ಯೋಜನೆಗಳಿಂದಾಗಿ ವಾರ್ಷಿಕ 25 ರಿಂದ 30 ಸಾವಿರ ರೂಪಾಯಿ ಉಳಿತಾಯ ಕಾಣುತ್ತಿದ್ದಾರೆ. ಈ ಹಣವನ್ನು ಅವರು ತಮ್ಮ ಮಕ್ಕಳ ಶಿಕ್ಷಣಕ್ಕೆ, ಆರೋಗ್ಯಕ್ಕೆ, ಭವಿಷ್ಯದ ಉಳಿತಾಯಕ್ಕೆ ಬಳಸುತ್ತಿದ್ದಾರೆ ಎಂದು ವಿವರಿಸಿದರು.

ಆಳವಾಗಿ ನಂಬಿರುವುದರಿಂದ ಸಂವಿಧಾನವು ದಿನದಿಂದ ದಿನಕ್ಕೆ ಹೆಚ್ಚು ಪ್ರಸ್ತುತವಾಗುತ್ತಿದೆ. ಬಾಬಾಸಾಹೇಬ್ ಅಂಬೇಡ್ಕರ್ ಅವರು, ಸಂವಿಧಾನ ಎಷ್ಟೇ ಒಳ್ಳೆಯದಾಗಿರಲಿ, ಅದನ್ನು ಅನುಷ್ಠಾನಗೊಳಿಸುವ ಜನ ಕೆಟ್ಟವರಾಗಿದ್ದರೆ ಪರಿಣಾಮ ಕೆಟ್ಟದ್ದೇ ಆಗುತ್ತದೆ. ಸಂವಿಧಾನ ಎಷ್ಟೇ ಕೆಟ್ಟದ್ದಾಗಿದ್ದರೂ ಅದನ್ನು ಅನುಷ್ಠಾನಗೊಳಿಸುವವರು ಒಳ್ಳೆಯವರಾಗಿದ್ದರೆ ಅದರ ಪರಿಣಾಮ ಒಳ್ಳೆಯದ್ದೇ ಆಗುತ್ತದೆ. ಸಂವಿಧಾನದ ಕಾರ್ಯನಿರ್ವಹಣೆಯು ಅದರ ಗುಣಲಕ್ಷಣದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿ ರುವುದಿಲ್ಲ ಎಂದಿದ್ದರು. ಆದ್ದರಿಂದ ಸಂವಿಧಾನದ ಮೂಲ ಆಶಯವನ್ನು ಅರಿತು ಕೆಲಸ ಮಾಡುವ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವುದು ಹಾಗೂ ನಿರಂತರವಾಗಿ ಪ್ರಶ್ನೆ, ಸಂವಾದ ಮಾಡುತ್ತಲೇ ಜನತಂತ್ರ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಾಗಿದೆ. ಇದನ್ನೇ ಮಹಾತ್ಮ ಗಾಂಧೀಜಿಯವರು ಸಹ ಹೇಳಿದ್ದಾರೆ ಎಂದು ಸ್ಮರಿಸಿದರು.

ಸಮಾಚಾರ ಸಣ್ಣದಲ್ಲ

ಮಲ್ಪೆ: ದೋಣಿ ಮಗುಚಿ ಇಬ್ಬರು ಸಾವು

ಉಡುಪಿ: ಪ್ರವಾಸಿಗರನ್ನು ವಿಹಾರಕ್ಕೆ ಕರೆದೊಯ್ಯುತ್ತಿದ್ದ ದೋಣಿ ಮಗುಚಿ ಇಬ್ಬರು ಮೃತಪಟ್ಟ ಘಟನೆ ಮಲ್ಪೆ ಕೋಡಿಬೆಂಗ್ರೆ ಬೀಚ್ ಸಮೀಪ ನಡೆದಿದೆ. 14 ಮಂದಿ ಪ್ರವಾಸಿಗರು ವಿಹಾರಕ್ಕೆಂದು ಸಮುದ್ರಕ್ಕೆ ತೆರಳಿದ್ದರು. ನೀರಿನಲ್ಲಿ ಸಾಗುತ್ತಿದ್ದ ವೇಳೆ ದೋಣಿ ಆಕಸ್ಮಿಕವಾಗಿ ಪಲ್ಟಿಯಾಗಿದ್ದು ಇಬ್ಬರು ನೀರಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಉಳಿದವರನ್ನು ರಕ್ಷಿಸಲಾಗಿದ್ದು, ಇಬ್ಬರು ಗಂಭೀರ ಸ್ಥಿತಿಯಲ್ಲಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸ್ಥಳಕ್ಕೆ ಮಲ್ಪೆ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸುತ್ತಿದ್ದಾರೆ. ಮೃತರನ್ನು ಶಂಕರಪ್ಪ (22) ಹಾಗೂ ಸಿಂಧು (23) ಎಂದು ಗುರುತಿಸಲಾಗಿದೆ. ದೀಶಾ (26) ಎಂಬವರ ಸ್ಥಿತಿ ಗಂಭೀರವಾಗಿದ್ದು, ಧರ್ಮರಾಜ(26) ಎಂಬವರ ಸ್ಥಿತಿ ಸ್ಥಿರವಾಗಿದೆ. ಇವರು ಮೈಸೂರು ಜಿಲ್ಲೆಯ ಸರಸ್ವತೀಪುರಂ ಮೂಲದವರಾಗಿದ್ದು, ಅಲ್ಲಿನ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ.

ಫೆ.13ರಂದು 1 ಲಕ್ಷ ಜನರಿಗೆ ಹಕ್ಕು ಪತ್ರ

ಹಾವೇರಿ: ಫೆಬ್ರವರಿ 13ರಂದು ಹಾವೇರಿಯಲ್ಲಿ ನಡೆಯಲಿರುವ ಸಾಧನಾ ಸಮಾವೇಶದಲ್ಲಿ ಜಿಲ್ಲೆಯ 30 ಸಾವಿರ ಫಲಾನುಭವಿಗಳು ಸೇರಿ ಸುಮಾರು ಒಂದು ಲಕ್ಷ ಜನರಿಗೆ ಕಂದಾಯ ಹಕ್ಕು ಪತ್ರ, ಇ-ಪೌತಿ ಮತ್ತು ಬಕರ್‌ಹುಕುಂ ಹಕ್ಕು ಪತ್ರ ವಿತರಣೆ ಮಾಡಲಾಗುವುದು ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು. ಒಟ್ಟು 65 ಸಾವಿರ ಹಕ್ಕು ಪತ್ರಗಳಿಗೆ ಅನುಮೋದನೆ ದೊರೆತಿದೆ. ಜಿಲ್ಲೆಯ 20 ಸಾವಿರ ಜನರಿಗೆ ಕಂದಾಯ ಹಕ್ಕು ಪತ್ರ ಹಾಗೂ 10 ಸಾವಿರ ಜನರಿಗೆ ಇ ಪೌತಿ ಸವಲತ್ತುಗಳನ್ನು ವಿತರಣೆ ಮಾಡಲಾಗುವುದು. ಪೋಡಿ ಮುಕ್ತ ಗ್ರಾಮ ಅಭಿಯಾನ ನಡೆಯಲಿದೆ. 1ಲಕ್ಷ ಕಂದಾಯ ಗ್ರಾಮ ಹಕ್ಕು ಪತ್ರ ವಿತರಣೆ ಗುರಿ ಹೊಂದಲಾಗಿದೆ ಎಂದರು.

ದಿನ ವಿಶೇಷ

27 ಜನವರಿ 2026 ಮಂಗಳವಾರ

» ಸೂರ್ಯೋದಯ	: 06-47
» ಸೂರ್ಯಾಸ್ತ	: 06-19
» ತಿಥಿ	: ನವಮಿ
» ನಕ್ಷತ್ರ	: ಭರಣಿ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಮಾಘ
» ಪಕ್ಷ	: ಶುಕ್ಲಪಕ್ಷ

ಉಡುಪಿ ಸೈಂಟ್ ಮೇರಿಸ್ ದ್ವೀಪದಲ್ಲಿ ಧ್ವಜಾರೋಹಣ

ಉಡುಪಿ: ಇದೇ ಮೊದಲ ಬಾರಿಗೆ ಉಡುಪಿ ಜಿಲ್ಲೆಯ ಸೈಂಟ್ ಮೇರಿಸ್ ದ್ವೀಪದಲ್ಲಿ ಧ್ವಜಾರೋಹಣ ಮಾಡಲಾಗಿದೆ. ಗಣರಾಜ್ಯೋತ್ಸವದ ಅಂಗವಾಗಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಇಲ್ಲಿ ಧ್ವಜಾರೋಹಣ ನೆರವೇರಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದ್ವೀಪದಲ್ಲಿ ಧ್ವಜಾರೋಹಣ ಮಾಡಿದ್ದು ನನ್ನ ಭಾಗ್ಯ.ಇದು ರೋಮಾಂಚನಕಾರಿ ಅನುಭವ ಎಂದಿದ್ದಾರೆ.

ದ್ವೇಷ ಭಾಷಣ ಕಾನೂನು ಜಾರಿಗೂ ಮುನ್ನ ನೋಟಿಸ್ ನೀಡಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಈಗ ಕಾಂಗ್ರೆಸ್ ಸರಕಾರ ಇದೆ. ದ್ವೇಷ ಭಾಷಣ ವಿರುದ್ಧ ಕಾನೂನು ರೀತಿಯಲ್ಲಿ ಮಸೂದೆ ತಂದಿದ್ದೇವೆ. ಭವಿಷ್ಯದಲ್ಲಿ ಯಾವತ್ತಾದರೂ ಬಿಜೆಪಿ ಸರಕಾರ ಬರಬಹುದು. ಅವರು ನಮ್ಮ ವಿರುದ್ಧವೂ ಇದನ್ನು ಬಳಕೆ ಮಾಡಬಹುದು. ದೇಶದ ಐಕ್ಯತೆ ಸಮಗ್ರತೆ ಒಂದೇ ಎಂಬುದು ದ್ವೇಷ ಭಾಷಣ ಮಸೂದೆಯ ಉದ್ದೇಶ ಎಂದು ಹೇಳಿದ್ದಾರೆ. ಜನರು ಒಟ್ಟಿಗೆ ಇರಬೇಕಾದರೆ ಜಾತಿ, ಸ್ಥಳ, ಭಾಷೆ, ವ್ಯಕ್ತಿತ್ವಗಳನ್ನು ನಿಂದಿಸಬಾರದು. ಈ ಕಾರಣಕ್ಕೆ ಸಂವಿಧಾನದ ಆಶಯದಂತೆ ಮಸೂದೆ ತಂದಿದ್ದೇವೆ.

ಉಡುಪಿಯ ಸೆಂಟ್ ಮೇರಿಸ್ ದ್ವಿಪದಲ್ಲಿ ಮೊದಲ ಬಾರಿಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಧ್ವಜಾರೋಹಣ ಮಾಡಿದರು.

ಬಿಜೆಪಿಯವರು ಏನಾದರೂ ಹೇಳಲಿ. ದೇಶದ ಸಂವಿಧಾನಕ್ಕೆ ಧಕ್ಕೆ ಬರಬಾರದು ಎಂಬುದು ಮಾತ್ರ ನಮ್ಮ ಉದ್ದೇಶ. ಕಾಂಗ್ರೆಸಿನವರು ಯಾರಾದರೂ ದ್ವೇಷ ಭಾಷಣ ಮಾಡಿದರೆ ಕಾಂಗ್ರೆಸ್‌ನವರ ಮೇಲೂ ಕಾನೂನು ಜಾರಿಯಾಗುತ್ತದೆ. ವ್ಯಕ್ತಿಗಳ ಹಿನ್ನೆಲೆಯನ್ನು ನೋಡಿ ನೋಟಿಸ್ ಕೊಟ್ಟಿರಬಹುದು. ನೋಟಿಸ್ ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ ಎಂದಿದ್ದಾರೆ.



ಆಳ್ವಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆದ 77ನೇ ಗಣರಾಜ್ಯೋತ್ಸವ ಆಚರಣೆ ವೇಳೆ 30 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ತ್ರಿವರ್ಣ ಧ್ವಜದ ಬಣ್ಣದಲ್ಲಿ 'ಭಾರತ್' ಎಂಬ ಅಕ್ಷರ ಆಕಾರದಲ್ಲಿ ನಿಂತುಕೊಂಡಿದ್ದು ಎಲ್ಲರ ಗಮನ ಸೆಳೆಯಿತು. ಹೈಕೋರ್ಟ್ ನ್ಯಾ.ಎಚ್.ಪಿ.ಸಂದೇಶ್ ಧ್ವಜಾರೋಹಣ ನೆರವೇರಿಸಿದರು.

ಲಾರಿ-ಕಾರು ಡಿಕ್ಕಿ: 3 ಸಾವು

ತುಮಕೂರು: ಲಾರಿ ಹಾಗೂ ಕಾರು ನಡುವೆ ನಡೆದ ಭೀಕರ ಅಪಘಾತದಲ್ಲಿ ಮೂವರು ಟೆಕ್ಕಿಗಳು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ನೆಲಹಾಳ್ ಬಳಿಯ ರಾಷ್ಟ್ರೀಯ ಹೆದ್ದಾರಿ-48 ರಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ಕಾರಲ್ಲಿ ಪ್ರಯಾಣಿಸುತ್ತಿದ್ದ ಉತ್ತರ ಪ್ರದೇಶ ಮೂಲದ ಅನಿಕೇತ್ (42), ಅಭೀರ್ (44) ಹಾಗೂ ಆಂಧ್ರ ಪ್ರದೇಶ ಮೂಲದ ಸನ್ಮೋಕ್ತಿ (35) ಮೃತ ಸಾಫ್ಟ್‌ವೇರ್ ಎಂಜಿನಿಯರ್ ಎಂದು ಗುರುತಿಸಲಾಗಿದೆ. ಒಬ್ಬ ಗಂಭೀರವಾಗಿ ಗಾಯಗೊಂಡಿದ್ದು, ಇನ್ನಿಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮೃತರೆಲ್ಲರೂ ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯಲ್ಲಿ ಎಂಜಿನಿಯರ್‌ಗಳಾಗಿ ಕೆಲಸ ಮಾಡುತ್ತಿದ್ದರು. ರಜೆ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಗೋಕರ್ಣ, ಮುರುಡೇಶ್ವರ, ಉಡುಪಿ ಕಡೆಗೆ ಕಾರಿನಲ್ಲಿ ಪ್ರವಾಸಕ್ಕೆ ತೆರಳಿದ್ದರು. ಪ್ರವಾಸ ಮುಗಿಸಿ ಸೋಮವಾರ ಬೆಂಗಳೂರಿಗೆ

ವಾಪಸ್ ತೆರಳುವಾಗ ಅಪಘಾತ ಸಂಭವಿಸಿದೆ.

ಲಾರಿಗೆ ಹಿಂಬದಿಯಿಂದ ಬೆಂಗಳೂರು ಕಡೆಗೆ ತೆರಳುತ್ತಿದ್ದ ಮಾರುತಿ ಎರಿಟಿಗಾ ಕಾರು ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಕಾರಲ್ಲಿ ಚಾಲಕ ಸೇರಿ 6 ಜನರಿದ್ದರು. ಗಾಯಗೊಂಡ ನಾಲ್ವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಚಾಲಕನ ಸ್ಥಿತಿ ಗಂಭೀರವಾಗಿದ್ದು, ಇನ್ನುಳಿದ ಮೂವರು ಅಪಾಯದಿಂದ ಪಾರಾಗಿದ್ದಾರೆ. ಮೃತರನ್ನು ಮರಣೋತ್ತರ ಪರೀಕ್ಷೆಗೆ ಜಿಲ್ಲಾಸ್ಪತ್ರೆಯ ಶವಾಗಾರಕ್ಕೆ ರವಾನೆ ಮಾಡಲಾಗಿದೆ.

ಸದನಲ್ಲಿ ಉತ್ತರಿಸಲು ಕಾಯುತ್ತಿರುವೆ

ಬಾಗಲಕೋಟೆ: ನನ್ನ ಮೇಲೆ ಕೇಳಿ ಬರುತ್ತಿರುವ ಆರೋಪಗಳಿಗೆ ಸದನದಲ್ಲಿ ಉತ್ತರ ನೀಡಲು

ಕಾಯುತ್ತಿದ್ದೇನೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಅಧಿಕಾರ ಇದ್ದಾಗ ಒಂದು ಅಧಿಕಾರ ಇಲ್ಲದಿದ್ದಾಗ ಮತ್ತೊಂದು ಮಾತನಾಡಬಾರದು. ನನ್ನ ಮೇಲೆ ಬಂದಿರುವ ಆರೋಪಗಳಿಗೆ ಸದ್ಯ ನಡೆಯುತ್ತಿರುವ ಜಂಟಿ ಸದನದಲ್ಲಿ ಉತ್ತರ ನೀಡುತ್ತೇನೆ ಎಂದು ಹೇಳಿದರು.

ಕೃಷ್ಣ ಮೇಲ್ದಂಡೆ ಯೋಜನೆ (ಯುಕೆಪಿ) 3ನೇ ಹಂತದಲ್ಲಿ ಮುಳುಗಡೆಯಾಗುತ್ತಿರುವ ನೀರಾವರಿ ಜಮೀನಿಗೆ 40 ಲಕ್ಷ ರು. ಹಾಗೂ ಖುಷ್ಕಿ ಜಮೀನಿಗೆ 30 ಲಕ್ಷ ರು. ನಿಗದಿ ಪಡಿಸಲಾಗಿದೆ. ಪರಿಹಾರ ನೀಡುವ ಹಾಗೂ ಬಾಗಲಕೋಟೆಯಲ್ಲಿ ಸರಕಾರಿ ಮೆಡಿಕಲ್ ಕಾಲೇಜ್ ಪ್ರಾರಂಭಕ್ಕೆ ಆದಷ್ಟು ಬೇಗ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

2028ಕ್ಕೆ ನಾನು ಸಿಎಂ ಆಗೋದು ಗ್ಯಾರಂಟಿ

ವಿಜಯಪುರ: 2028ಕ್ಕೆ ನಾನೇ ಸಿಎಂ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಭವಿಷ್ಯ ನುಡಿದಿದ್ದಾರೆ.



'ಕಾಂಗ್ರೆಸ್‌ನಿಂದ ಹೊರ ಬಂದ ನಾಯಕ ಮುಂದೆ ಸಿಎಂ ಆಗುತ್ತಾರೆ' ಎಂಬ ಸ್ವಾಮೀಜಿಯೊಬ್ಬರು ನುಡಿದಿದ್ದ ಭವಿಷ್ಯ ವಿಚಾರಕ್ಕೆ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಅವರೇ ಕಾಂಗ್ರೆಸ್‌ನ ಕೊನೆಯ ಸಿಎಂ. 2028ಕ್ಕೆ ನನ್ನದೆ ಜೆಸಿಬಿ ಪಾರ್ಟಿ ಅಧಿಕಾರಕ್ಕೆ ಬರಬಹುದು. ಇದನ್ನು ನೀವು ಜೋಕ್ ಎನ್ನಬಹುದು, ಆದರೆ 2028ಕ್ಕೆ ನಾನು ಸಿಎಂ ಆಗೋದು ಗ್ಯಾರಂಟಿ. ಕೆಲ ಜ್ಯೋತಿಷಿಗಳು ಫೇಕ್ ಇದ್ದಾರೆ, ಹಣ ಕೊಟ್ಟ ತಕ್ಷಣ ಏನೇನೋ ಹೇಳುತ್ತಾರೆ. ಪಾದಪೂಜೆ ಮಾಡಿದರೆ ಇವರೇ ವೀರಶೈವ ಮಹಾಸಭಾ ಅಧ್ಯಕ್ಷರು, ಸಿಎಂ ಎಂದೆಲ್ಲ ಹೇಳಿ ಬಿಡುತ್ತಾರೆ, ಸ್ವಾಮೀಜಿಗಳು ಘನತೆ ಕಳೆದುಕೊಳ್ಳುತ್ತಿದ್ದಾರೆ ಎಂದರು.

'ಯತ್ನಾಳ್ ಬಿಜೆಪಿ ಸಪೋರ್ಟ್ ಮೂಲಕ ಸಿಎಂ ಆಗ್ತಾರಾ?' ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿ, ಬಿಜೆಪಿಗೆ ಬಂದು ಸಿಎಂ ಆಗ್ತೀನಾ? ಬಿಜೆಪಿ ಸಪೋರ್ಟ್ ಪಡೆದು ಸಿಎಂ ಆಗುತ್ತೀನಾ ಯಾರಿಗೆ ಗೊತ್ತು. 2028ಕ್ಕೆ ನಾನು ಸಿಎಂ ಆಗೋದು ಗ್ಯಾರಂಟಿ. ಯಾರು ಏನೇ ಹೇಳಲಿ, ಮೀಡಿಯಾದವರು ಏನೇ ಹೇಳಲಿ ನಾನೇ ಸಿಎಂ ಆಗುತ್ತೇನೆ. ವಿಜಯೇಂದ್ರಾನೇ ಸಿಎಂ ಆಗ್ತಾನೆ ಎಂದು ಎಷ್ಟೇ ಹೇಳಿದರೂ ನಾನೇ ಸಿಎಂ ಆಗೋದು ಗ್ಯಾರಂಟಿ, 5 ವರ್ಷ ನಾನೇ ಸಿಎಂ ಆಗಿರ್ತಿನಿ, ಕರ್ನಾಟಕದಲ್ಲಿ ಹೊಸ ಇತಿಹಾಸ ನಿರ್ಮಾಣ ಮಾಡ್ತೀನಿ ಎಂದು ಭವಿಷ್ಯ ನುಡಿದರು.

ಆಗ ಬುಲ್ಡೋಜರ್ ಸದ್ದು ಎಲ್ಲ ಕಡೆಗೆ ಕೇಳುತ್ತದೆ. 2.80 ಲಕ್ಷ ಸರಕಾರಿ ಖಾಲಿ ಹುದ್ದೆ ಭರ್ತಿ ಆಗುತ್ತವೆ. 3 ಲಕ್ಷ ಜನರಿಗೆ ಉದ್ಯೋಗ ಕೊಡ್ತೀನಿ. ಯತ್ನಾಳ್ ಹೀಗೆ ಅಂದ್ರು ಎಂದು ಮೀಡಿಯಾದವರು ಗಾಬರಿಯಾಗಬೇಡಿ, ವಿಜಯೇಂದ್ರ ಪರಿಸ್ಥಿತಿ ಏನು ಎಂದು ಹೊಡೆಯಬೇಡಿ ಎಂದರು.

> ### ಸರಕಾರಿ ಹುದ್ದೆಗಳಿಗೆ ಹಣ ಕೊಡಬೇಕು
>
> **ಪೊಲೀಸ್ ಇಲಾಖೆಯ ಮೇಲೆ ಸರಕಾರಕ್ಕೆ ಕಂಟ್ರೋಲ್ ಇಲ್ಲ. ಎಲ್ಲ ಇಲಾಖೆ ಅಧಿಕಾರಿಗಳನ್ನು ಆಕ್ಷನ್‌ಗೆ ಇಟ್ಟಿದ್ದಾರೆ. ಬೆಂಗಳೂರು ಕಮಿಷನರ್ ಆಗಬೇಕಾದರೆ 50 ಕೋಟಿ ಕೊಡಬೇಕು, ಡಿಸಿ ಆಗೋಕೆ 10 ಕೋಟಿ ಕೊಡಬೇಕು. ಒಳ್ಳೆ ಒಳ್ಳೆ ಪೋಸ್ಟ್‌ಗಳು ಹರಾಜು ಆಗ್ತಿವೆ. ಪೋಸ್ಟ್ ಹರಾಜು ಆದ್ರೆ ಯಾರು ಒಳ್ಳೆಯ ಅಧಿಕಾರಿಗಳು ಉಳಿಯೊಲ್ಲ, ಒಳ್ಳೆಯ ಸ್ಥಾನದಲ್ಲಿ ಇರೋದಿಲ್ಲ ಎಂದು ಯತ್ನಾಳ ಹೊಸ ಬಾಂಬ್ ಸಿಡಿಸಿದ್ದಾರೆ. ಅಂತಾರಾಷ್ಟ್ರೀಯ ಗೊತ್ತಿಲ್ಲ ಮಂತ್ರಿ ಎಂದರೆ ಅದು ಕರ್ನಾಟಕ ಗೃಹ ಮಂತ್ರಿ. ಅವರಿಗೆ 400 ಕೋಟಿಯದ್ದು ಗೊತ್ತಿಲ್ಲ, ಬೆಂಗಳೂರಲ್ಲಿ ಮರ್ಡರ್ ಆದ್ರೂ ಗೊತ್ತಿಲ್ಲ, ವಿಜಯಪುರದಲ್ಲಿ ಸಿಎಂ ಕಾರ್ಯಕ್ರಮ ಆಗಿದ್ದೂ ಗೊತ್ತಿಲ್ಲ, ಅವರು ಊಟ ಮಾಡಿದ್ದೂ ಗೊತ್ತಿಲ್ಲ, ಮಲಗಿದ್ದೂ ಗೊತ್ತಿಲ್ಲ ಎಂದು ಯತ್ನಾಳ ವ್ಯಂಗ್ಯವಾಡಿದರು.**

400 ಕೋಟಿ ದರೋಡೆ ಪ್ರಕರಣ: ನಿಷ್ಪಕ್ಷಪಾತ ತನಿಖೆಯಾಗಲಿ

ಕಲಬುರಗಿ: ಬೆಳಗಾವಿಯಲ್ಲಿ ನಡೆದ 400 ಕೋಟಿ ರುಪಾಯಿ ದರೋಡೆ ಪ್ರಕರಣವು ಹಲವಾರು ಅನುಮಾನಗಳಿಗೆ

ಎಡೆಮಾಡಿಕೊಟ್ಟಿದ್ದು, ಈ ಬಗ್ಗೆ ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆಯಾಗಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಕರಣದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಯಾರೇ ಇರಲಿ, ಸತ್ಯ ಹೊರಬರಬೇಕು. ಮಾಧ್ಯಮಗಳ ವರದಿ ಪ್ರಕಾರ ಈ ಹಣದ ಹಿಂದೆ ಗುಜರಾತ್, ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ಲಿಂಕ್ ಇದೆ ಎನ್ನಲಾಗುತ್ತಿದೆ. ಈ ಮೂರೂ ರಾಜ್ಯಗಳಲ್ಲಿ ಬಿಜೆಪಿ ಆಡಳಿತವಿದ್ದು, ಸರಕಾರಗಳ ಮೂಗಿನಡಿಯೇ ಇಷ್ಟೊಂದು ದೊಡ್ಡ ಮೊತ್ತದ ಹಣದ ಚಲನವಲನ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಈ ಹಣವನ್ನು ತಿರುಪತಿ ಚುನಾವಣೆಗೆ ಕೊಂಡೊಯ್ಯಲಾಗುತ್ತಿತ್ತು ಎಂದು ಕೆಲವು ಬಿಜೆಪಿ ಶಾಸಕರು ಹೇಳುತ್ತಿದ್ದಾರೆ. ತನಿಖಾ ಸಂಸ್ಥೆಗಳಿಗೆ ಇಲ್ಲದ ಮಾಹಿತಿ ಇವರಿಗೆ ಹೇಗೆ ತಿಳಿಯಿತು? ಅಲ್ಲಿ ಯಾವ ಪಕ್ಷದ ಸರಕಾರವಿದೆ ಎಂಬುದು ದೇಶಕ್ಕೆ ಗೊತ್ತಿದೆ. ಇ.ಡಿ ಕೇವಲ ವಿರೋಧ ಪಕ್ಷಗಳನ್ನು ಬೆನ್ನಟ್ಟಲು ಮಾತ್ರ ಸೀಮಿತವಾಗಿದೆಯೇ? ಪ್ರಕರಣದಲ್ಲಿ ಕರ್ನಾಟಕ ಪೊಲೀಸರು ಭಾಗಿಯಾಗಿರುವ ಆರೋಪದ ಕುರಿತು ಪ್ರತಿಕ್ರಿಯಿಸಿದ ಸಚಿವ ಖರ್ಗೆ, ಉಪ್ಪು ತಿಂದವರು ನೀರು ಕುಡಿಯಲೇಬೇಕು. ತಪ್ಪಿತಸ್ಥರು ಯಾರೇ ಆಗಿರಲಿ ಕಾನೂನು ಕ್ರಮ ಅನಿವಾರ್ಯ ಎಂದು ಎಚ್ಚರಿಸಿದರು.

> ### ಕೇಂದ್ರದ ವೈಫಲ್ಯಕ್ಕೆ ಕಿಡಿ
>
> **ನೋಟು ಅಮಾನ್ಯೀಕರಣದ ವೇಳೆ ಕಪ್ಪು ಹಣ ಸಂಪೂರ್ಣ ನಾಶವಾಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದರು. ಆದರೆ, ಇಂದು ಟ್ರಕ್‌ಗಳಲ್ಲಿ ಸಾವಿರಾರು ಕೋಟಿ ಹಣ ಸಾಗುತ್ತಿರುವುದು ಯಾರ ವೈಫಲ್ಯ? ಸೆಮಿಕಂಡಕ್ಟರ್ ತಯಾರಿಸುತ್ತೇವೆ ಎಂದವರು ಗುಜರಾತ್‌ನಲ್ಲಿ ನೋಟು ಪ್ರಿಂಟಿಂಗ್ ಮಷೀನ್ ಇಟ್ಟಿದ್ದಾರಾ ಅಥವಾ ಇವು ನಕಲಿ ನೋಟುಗಳೇ? ಇಷ್ಟೆಲ್ಲಾ ನಡೆಯುತ್ತಿದ್ದರೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನಿದ್ದೆ ಮಾಡುತ್ತಿದ್ದಾರೆಯೇ? ಎಂದು ಖರ್ಗೆ ಕಟುವಾಗಿ ಪ್ರಶ್ನಿಸಿದರು.**

ವಿಶ್ವವಾಣಿ

ಸಂಪಾದಕೀಯ

ಎರಡು ಅತಿರೇಕಗಳ ಸುತ್ತ

ಯಾವುದೇ ವಿಷಯ, ವಸ್ತು ಅಥವಾ ಕ್ರಿಯೆಯು ಅಗತ್ಯಕ್ಕಿಂತ ಅಥವಾ ಮಿತಿಗಿಂತ ಹೆಚ್ಚಾಗಿರುವ ಸ್ಥಿತಿಯನ್ನು 'ಅತಿರೇಕ' ಎನ್ನಲಾಗುತ್ತದೆ. ಒಂದೊಮ್ಮೆ ಇಂಥ ಸಂದರ್ಭಗಳಲ್ಲಿ 'ಅತಿರೇಕದ ಪರಮಾವಧಿ' ಎಂಬ ಪದಪ್ರಯೋಗವಾದರೆ, ಅದು ಪರಿಸ್ಥಿತಿಯು ಕೈಮೀರಿರುವುದರ ದ್ಯೋತಕವಾಗುತ್ತದೆ. ಈ ಪರಿಕಲ್ಪನೆಯನ್ನು ನೆನಪಿಸುವ ಎರಡು ಘಟನೆಗಳು ಇತ್ತೀಚೆಗೆ ವರದಿಯಾಗಿವೆ. ಮೊದಲನೆಯದಕ್ಕೆ ಕಾರಣಕರ್ತರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಅಮೆರಿಕದ ಬೆನ್ನಿಗೆ ಅಂಟಿಕೊಂಡಿರುವ ಕೆನಡಾ ರಾಷ್ಟ್ರದ ಮೇಲೆಯೇ ಕೆಂಗಣ್ಣು ಬೀರಿರುವ ಟ್ರಂಪ್, ಅದರ ಮೇಲೆಯೂ ಶೇ.100ರ ಪ್ರಮಾಣದ ಸುಂಕವನ್ನು ವಿಧಿಸುವುದಾಗಿ ಬೆದರಿಕೆ ಹಾಕಿದ್ದಾರೆ; ಚೀನಾದೊಂದಿಗಿನ ವ್ಯಾಪಾರ ಸಂಬಂಧವನ್ನು ಕೆನಡಾ ಮುಂದುವರಿಸಿರುವುದೇ ಟ್ರಂಪ್ ಮಹಾಶಯರ ಈ ಕಡುಕೋಪಕ್ಕೆ ಕಾರಣವಂತೆ. ಈ ಐಲುದೊರೆಯ ಆಟಾಟೋಪ ಯಾವಾಗ ನಿಲ್ಲುವುದೋ ಭಗವಂತನೇ ಬಲ್ಲ! ಮತ್ತೊಂದೆಡೆ, ನೆರೆಯ ಬಾಂಗ್ಲಾದೇಶದಲ್ಲಿ ಇನ್ನೊಬ್ಬ ಹಿಂದೂವಿನ ಸಜೀವ ದಹನವಾಗಿದೆ. ಗ್ಯಾರೇಜ್‌ನಲ್ಲಿ ಮಲಗಿದ್ದಾಗ ಆತನ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲಾಗಿದೆ ಎಂಬ ಸುದ್ದಿಯೇ ಬಾಂಗ್ಲಾದಲ್ಲಿ ಕಾಣಬರುತ್ತಿರುವ ಅಸಹಿಷ್ಣುತೆಯನ್ನು, ಅದರ 'ಅತಿರೇಕದ ಪರಮಾವಧಿ'ಯನ್ನು ಧ್ವನಿಸುತ್ತದೆ. ಕಳೆದೊಂದು ತಿಂಗಳಲ್ಲಿ ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಹತ್ಯೆಯ ಸಂಖ್ಯೆಯು 15ಕ್ಕೆ ಏರಿದೆ ಎನ್ನಲಾಗುತ್ತಿರುವುದು ಇದಕ್ಕೆ ಪುಷ್ಟಿ ನೀಡೀತು. ಒಟ್ಟಿನಲ್ಲಿ ಇಂಥ ಹುಚ್ಚಾಟಗಳು, ಅಸಹಿಷ್ಣುತೆಗಳು ಯಾವಾಗ ತಹಬಂದಿಗೆ ಬರುವುದೋ ಎಂದು ಶಾಂತಿಪ್ರಿಯರು ಮರುಗುವಂತಾಗಿದೆ...

ಸೊಂಪಾದಕೀಯ

ಸ್ವಾಮಿ ದೇವನೆ ರಾಜ್ಯಪಾಲನೆ

ಕರ್ನಾಟಕದ ರಾಜ್ಯಪಾಲರಾದ ಗೆಹ್ಲೋಟ್ ಅವರು ಇತ್ತೀಚೆಗೆ ಸರಕಾರ ಸಿದ್ಧಪಡಿಸಿದ ಭಾಷಣವನ್ನು ಓದದೆ ತಮ್ಮದೇ ಸ್ವಂತ ಭಾಷಣ ಓದಿ ವಿವಾದಕ್ಕೆ ಕಾರಣರಾಗಿದ್ದರು. ಸ್ವಂತ ಭಾಷಣ ಓದುವ ಮೂಲಕ ತಾವು ಆಶುಭಾಷಣ ಸ್ಪರ್ಧೆಯಲ್ಲಿ ಪಾರಂಗತರು ಅಂತ ಅವರೇನೋ ತಮ್ಮ ಬೆನ್ನು ತಟ್ಟಿಕೊಂಡಿದ್ದರು. ಆದರೆ ಕಾಂಗ್ರೆಸ್ ಸರಕಾರದ ಪ್ರತಿನಿಧಿಗಳಿಗೆ ಇದು ಜೀರ್ಣ ಆಗಿರಲಿಲ್ಲ. ಹಾಗಾಗಿ ಅದು ರಾಜ್ಯಪಾಲರ ವಿರುದ್ಧದ ಪ್ರತಿಭಟನೆ ಮತ್ತು ಅಸಹನೆಗೆ ಕಾರಣ ಆಗಿತ್ತು. ಕೆಲವರಂತೂ ಒಂದು ಹೆಜ್ಜೆ ಮುಂದೆ ಹೋಗಿ ಸರಕಾರದ ಎಲ್ಲ ಕೆಲಸಗಳಿಗೆ ಮತ್ತು ಅನಿಸಿಕೆಗಳಿಗೆ ಅಡ್ಡಗಾಲು ಹಾಕುವ ಗೆಹ್ಲೋಟ್ ಅವರನ್ನು ಗೆಟ್ ಔಟ್ ಮಾಡುವ ಸಮಯ ಬಂದಿದೆ ಅಂತಲೇ ಮಾತಾಡಿದ್ದರು. ಅದು ನಿಜ ಕೂಡಾ. ಗೆಹ್ಲೋಟ್ ಅವರು ರಾಜ್ಯಪಾಲರಾದಾಗಿನಿಂದ, ಕೇಂದ್ರದಲ್ಲಿ ಅಸ್ತಿತ್ವದಲ್ಲಿರುವ ಬಿಜೆಪಿ ಸರಕಾರದ ಏಜೆಂಟರಂತೆ ವರ್ತಿಸುತ್ತಿರೋದು ಎಲ್ಲರ ಗಮನಕ್ಕೆ ಬಂದಿದೆ. ರಾಜ್ಯ ಕಾಂಗ್ರೆಸ್ ಸರಕಾರ ಏನೇ ಮಾಡಿದರೂ ಅದಕ್ಕೆ ಅಪಸ್ವರ ಹಾಡೋದೇ ತಮ್ಮ ಕೆಲಸ ಎಂಬಂತೆ ನಮ್ಮ ರಾಜ್ಯಪಾಲರು ಆಗಾಗ ತಾವು ಬಿಜೆಪಿ ಪರ ಅನ್ನೋದನ್ನು ತೋರಿಸಿಕೊಂಡೇ ಬಂದಿದ್ದರು. ಅದು ಮೊನ್ನೆ ಮೊನ್ನೆಯ ವರೆಗೂ ಮುಂದುವರಿದಿತ್ತು. ಹಾಗಾಗಿ ಈಗ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲೂ ರಾಜ್ಯಪಾಲರು ತಮ್ಮ ಅಸಹಕಾರ ಚಳವಳಿಯನ್ನು ಮುಂದುವರಿಸುತ್ತಾರೇನೋ ಅಂತ ಎಲ್ಲರಿಗೂ ಅನುಮಾನ ಇತ್ತು. ಅಲ್ಲೂ ರಾಜ್ಯಪಾಲರು ತಮ್ಮದೇ ಸ್ವಂತ ಕಾಲ ಮೇಲೆ ನಿಂತು ಸ್ವಂತ ಭಾಷಣ ಓದುವ ಮೂಡಿನಲ್ಲಿ ಇರಬಹುದು ಅನ್ನೋದು ಬಹುತೇಕರ ಅನಿಸಿಕೆ ಆಗಿತ್ತು. ಆದರೆ ಈ ಬಾರಿ ವಿವಾದಕ್ಕೆ ಎಡೆಮಾಡದೆ ಗಣರಾಜ್ಯೋತ್ಸವದಂದು ತಮ್ಮ ಟ್ಯಾಲೆಂಟ್ ತೋರಿಸಲು ಹೋಗದೆ ಸರಕಾರ ಸಿದ್ಧಪಡಿಸಿದ್ದ ಭಾಷಣವನ್ನೇ ಓದಿ ವಿವಾದಗಳಿಗೆ ಆಸ್ಪದ ಇಲ್ಲದಂತೆ ಮಾಡಿದ್ದಾರೆ ರಾಜ್ಯಪಾಲರು. ಹಾಗಾಗಿ ಅವರ ಮಾತುಗಳನ್ನು ಈಗ ಗಣನೆಗೆ ತೆಗೆದುಕೊಂಡು ಗಣರಾಜ್ಯೋತ್ಸವದಂದು ಮತ್ತೆ ಹಳೆಯ ವಿವಾದಗಳು ಗಣನೆಗೆ ಬಾರದಂತೆ ಗಣನೀಯ ಕೆಲಸ ಮಾಡಿದ್ದರೆ ರಾಜ್ಯಪಾಲ ಗೆಹ್ಲೋಟ್. ಆದರೆ ಹಾಗಂತ ಇನ್ನು ಮುಂದೆ ರಾಜ್ಯಪಾಲರು ರಾಜ್ಯ ಸರಕಾರದ ಕೈಗೊಂಬೆ ಆಗ್ತಾರೆ ಅಂತ ನಿರೀಕ್ಷೆ ಮಾಡುವುದು ಮಾತ್ರ ಖಂಡಿತಾ ಅಪರಾಧ ಆಗುತ್ತೆ ಅನ್ನೋದು ಎಲ್ಲರಿಗೂ ಗೊತ್ತು.

ಸಂಪಾದಕರ ಸದ್ಯಶೋಧನೆ

ಮಾರ್ಕ್ ಟಲಿ ನೆನಪು

ಈ ದೃಶ್ಯವನ್ನ ಕಣ್ಣಮುಂದೆ ತಂದುಕೊಳ್ಳಿ. ದೆಹಲಿಯ ಲೋಧಿ ಎಸ್ಟೇಟ್‌ನ ಹಳೆಯ ಬಂಗಲೆಯೊಂದರ ಜಗಲಿ. ಅಲ್ಲಿ ಒಬ್ಬ ಮನುಷ್ಯ ಕೂತಿದ್ದಾನೆ. ಕೈಯಲ್ಲಿ ಒಂದು ಹಳೆಯ ರೇಡಿಯೋ, ಮುಖದಲ್ಲಿ ಸಾವಿರಾರು ಕಥೆಗಳನ್ನ ಹೇಳಿ ಸುಸ್ತಾದವನ ತೃಪ್ತಿ, ಅಪ್ಪಟ ಬಿಳಿಯನ ದೇಹದೊಳಗೆ ಮಿಡಿಯುತ್ತಿರುವ ಹಸಿಬಿಸಿ ಭಾರತೀಯ ಆತ್ಮ. ಆತನ ಹೆಸರು, ರೂಪ ಮತ್ತು ಭಾಷೆಯನ್ನು ಕೇಳಿದರೆ ಆತ ಭಾರತೀಯ ಎಂದು ಅನಿಸುವುದಿಲ್ಲ. ಆದರೆ ಆತನ ಯೋಚನೆ, ಸೆಳೆತ, ಈ ಮಣ್ಣಿನದು. ಆ ಮನುಷ್ಯನ ಹೆಸರು ಸರ್ ಮಾರ್ಕ್ ಟಲಿ. ಮಾರ್ಕ್ ಟಲಿ ನಮ್ಮನ್ನು ಅಗಲಿದರು ಅನ್ನುವ ಸುದ್ದಿ ಬಂದಾಗ, ಪತ್ರಕರ್ತನೊಬ್ಬನ ಸಾವಿಗಿಂತ ಹೆಚ್ಚಾಗಿ, ಈ ದೇಶದ 'ಧ್ವನಿ'ಯೊಂದು ಮೌನವಾದಂತೆ ಅನಿಸುತ್ತಿದೆ. ನೀವು 80 ಮತ್ತು 90ರ ದಶಕದ ಕಾಲಕ್ಕೆ ಹೋಗಿ ನೋಡಿ. ಆಗಿನ್ನೂ ಚಾನೆಲ್‌ಗಳ ಅಬ್ಬರ ಇರಲಿಲ್ಲ, ಬ್ರೇಕಿಂಗ್ ನ್ಯೂಸ್‌ಗಳ ಆರ್ಭಟವಿರಲಿಲ್ಲ. ಸಂಜೆ ಏಳೋ ಎಂಟೋ ಗಂಟೆಯಾದಾಗ ಹಳ್ಳಿಹಳ್ಳಿಯ ಕಟ್ಟೆಗಳ ಮೇಲೆ ಕುಳಿತ ಜನರೆಲ್ಲ ಕಿವಿಗೊಡುತ್ತಿದ್ದುದು ರೇಡಿಯೋಕ್ಕೆ. ಇಂಗ್ಲಿಷ್ ಬಲ್ಲ ನಗರ ಪ್ರದೇಶಗಳ ಕೆಲ ಜನ ಬಿಬಿಸಿಯ ಆ ಒಂದು ಕಂಠಕ್ಕೆ ಎದುರು ನೋಡುತ್ತಿದ್ದರು- 'ದಿಸ್ ಈಸ್ ಬಿಬಿಸಿ... ಐ ಆಮ್ ಮಾರ್ಕ್ ಟಲಿ'. ಅವರು ಹಾಗೆ ಇಂಗ್ಲಿಷ್‌ನಲ್ಲಿ ಮಾತಾಡುತ್ತಿದ್ದರೂ, ಇಂಗ್ಲಿಷ್ ಬಲ್ಲವರೆಲ್ಲರಿಗೂ ಅರ್ಥವಾಗುತ್ತಿತ್ತು. ಯಾಕೆ ಗೊತ್ತಾ? ಆ ಧ್ವನಿಯಲ್ಲಿ ಅಧಿಕಾರವಿರಲಿಲ್ಲ, ಬದಲಿಗೆ ಈ ಮಣ್ಣಿನ ಮೇಲಿನ ಅಪಾರವಾದ ಪ್ರೀತಿಯಿತ್ತು. ಆ ಧ್ವನಿ ಕೇಳಿದರೆ ಜನ ಅಂದುಕೊಳ್ಳುತ್ತಿದ್ದರು- 'ಟಲಿ ಹೇಳಿದ್ದಾರಾ? ಹಾಗಿದ್ದರೆ ಅದು ಸತ್ಯವಿರಲೇಬೇಕು!' ನಮ್ಮ ದೇಶದ ಜನ ಮಾರ್ಕ್ ಟಲಿ ಮಾತನ್ನ ನಂಬುತ್ತಿದ್ದರು. ಒಬ್ಬ ಪತ್ರಕರ್ತ ಗಳಿಸಬಹುದಾದ ಅತಿದೊಡ್ಡ ಆಸ್ತಿ ಅದು. ಮಾರ್ಕ್ ಟಲಿ ಹುಟ್ಟಿದ್ದು ಕೋಲ್ಕತ್ತಾದಲ್ಲಿ. ಲಂಡನ್ನಿಗೆ ಹೋಗಿ ಆರಾಮಾಗಿ ಸೆಟಲ್ ಆಗಬಹುದಿತ್ತು. ಆದರೆ ಈ ದೇಶದ ಧೂಳು, ಆ ಹಳೆಯ ಅಂಬಾಸಿಡರ್ ಕಾರುಗಳು, ರಸ್ತೆಯ ಬದಿಯ ಚಹಾ, ಕಾಶಿಯ ಗಲ್ಲಿಗಳು ಈ ಮನುಷ್ಯನನ್ನು ಬಿಡಲೇ ಇಲ್ಲ. ಅವರು ಬಿಬಿಸಿ ಪ್ರತಿನಿಧಿಯಾಗಿ ಭಾರತಕ್ಕೆ ಬಂದಾಗ ಇಲ್ಲಿನ ರಾಜಕೀಯ ಹಾಗಿತ್ತು. ಇಂದಿರಾ ಗಾಂಧಿಯವರ ತುರ್ತು ಪರಿಸ್ಥಿತಿಯಿರಲಿ, ಆಪರೇಷನ್ ಬ್ಲೂ ಸ್ಟಾರ್ ಇರಲಿ ಅಥವಾ ರಾಜೀವ್ ಗಾಂಧಿಯವರ ಹತ್ಯೆಯಿರಲಿ... ಘಟನೆ ನಡೆದ ಜಾಗದಲ್ಲಿ ಮೊದಲು ಇರುತ್ತಿದ್ದದ್ದೇ ಈ ಮಾರ್ಕ್ ಟಲಿ. ಅವರಿಗೆ ಭಾರತ ಅಂದರೆ ಕೇವಲ ಒಂದು ಅಸೈನ್ಮೆಂಟ್ ಆಗಿರಲಿಲ್ಲ, ಅದೊಂದು ಎಮೋಷನ್ ಆಗಿತ್ತು. ಅವರು ಬರೀ ರಿಪೋರ್ಟರ್ ಆಗಿರಲಿಲ್ಲ, ಈ ದೇಶದ ನಾಡಿಮಿಡಿತ ಹಿಡಿದು ನೋಡುತ್ತಿದ್ದ ವೈದ್ಯನಂತಿದ್ದರು. ಎಮರ್ಜೆನ್ಸಿ ಸಮಯದಲ್ಲಿ ಇಂದಿರಾ ಗಾಂಧಿಯವರಿಗೆ ಅತ್ಯಂತ ಹೆಚ್ಚು ಕಿರಿಕಿರಿ ಉಂಟುಮಾಡಿದ ವ್ಯಕ್ತಿ ಅಂದರೆ ಅದು ಟಲಿ. ಅವರು ದೇಶ ಬಿಟ್ಟು ಹೋಗುವಂತೆ ಸರಕಾರ ಆದೇಶ ಮಾಡಿತ್ತು. ಆದರೆ ಟಲಿ ಹೆದರಲಿಲ್ಲ. ಸತ್ಯವನ್ನ ಹೇಳುವುದರಲ್ಲಿ ಅವರು ಎಂದೂ ರಾಜಿ ಮಾಡಿಕೊಳ್ಳಲಿಲ್ಲ. ಆಮೇಲೆ ಅದೇ ಇಂದಿರಾ ಗಾಂಧಿಯವರು ಮೃತಪಟ್ಟಾಗ ಅವರು ನೀಡಿದ ವರದಿ ಇಂದಿಗೂ ಜನಜನಿತ ಮತ್ತು ಚರ್ಚಿತ. ಮೊದಲು ಆ ಸುದ್ದಿಯನ್ನ ಬಿತ್ತರಿಸಿದ್ದು ಟಲಿ ಎಂದು ಜನ ಈಗಲೂ ನಂಬುತ್ತಾರೆ. ಆದರೆ ಅದನ್ನು ಬಿತ್ತರಿಸಿದ್ದು ಅವರ ಸಹೋದ್ಯೋಗಿ ಸತೀಶ್ ಜೇಕಬ್. ಅದು ಟಲಿಯವರ ಕ್ರೆಡಿಬಿಲಿಟಿ! ಇಂದಿನ ಪತ್ರಕರ್ತರು ಟೈ ಕಟ್ಟಿಕೊಂಡು ಸ್ಟುಡಿಯೋ ಒಳಗೆ ಕೂತು ಕಿರುಚಾಡುವುದೇ ಪತ್ರಿಕೋದ್ಯಮ ಅಂದುಕೊಂಡಿದ್ದಾರೆ. ಆದರೆ ಟಲಿ ಹಾಗಿರಲಿಲ್ಲ. ಅವರು 'Slow is Beautiful' ಎಂದು ನಂಬಿದವರು. ಭಾರತದ ರೈಲು ಪ್ರಯಾಣ ಅಂದರೆ ಅವರಿಗೆ ಪಂಚಪ್ರಾಣ. ಅಪ್ಪಟ ಭಾರತೀಯನಂತೆ ಕುರ್ತಾ ಪೈಜಾಮ ತೊಟ್ಟು, ಕುಲ್ಹಡ್ ಚಹಾದಲ್ಲಿ ಈ ದೇಶದ ಸಂಸ್ಕೃತಿಯನ್ನ ಹುಡುಕುತ್ತಿದ್ದರು. ಅವರು ಬರೆದ 'No Full Stops in India' ಪುಸ್ತಕ ಅವರ ಗ್ರಹಿಕೆಯ ಭಾರತಕ್ಕೆ ಪಲ್ಲವಿ ಬರೆದಂತಿದೆ. ಭಾರತ ಬದಲಾಗುತ್ತಿದೆ, ಆದರೆ ಈ ದೇಶದ ಮೂಲಸತ್ವ ಎಂದಿಗೂ ಬದಲಾಗಬಾರದು ಎನ್ನುವ ಹಂಬಲ ಅವರ ಪ್ರತಿ ಸಾಲಿನಲ್ಲೂ ಕಾಣುತ್ತದೆ. ಸರ್ ಮಾರ್ಕ್ ಟಲಿ ನಿಧನರಾಗಿದ್ದಾರೆ ಎನ್ನುವುದು ಭೌತಿಕ ಸತ್ಯ ಇರಬಹುದು. ಆದರೆ ಪತ್ರಿಕೋದ್ಯಮದ ಇತಿಹಾಸದಲ್ಲಿ ಅವರ ಹೆಸರು ಸದಾಕಾಲ ಉಳಿಯುತ್ತದೆ. ಯಾವುದೇ ಪಕ್ಷದ ಪರ ಇರದೇ, ಯಾವುದೇ ಸಿದ್ಧಾಂತಕ್ಕೆ ಅಂಟಿಕೊಳ್ಳದೇ, ಕೇವಲ 'ಸತ್ಯ' ಮತ್ತು 'ಸಾಮಾನ್ಯ ಮನುಷ್ಯ'ನ ಪರವಾಗಿ ಧ್ವನಿಯೆತ್ತುವ ತಾಕತ್ತು ಇದೆಯಲ್ಲ... ಅದು ಮಾರ್ಕ್ ಟಲಿ. ಇಂದು ಲೋಧಿ ಎಸ್ಟೇಟ್‌ನ ಆ ಹಳೆಯ ಬಂಗಲೆ ಖಾಲಿಯಾಗಿರಬಹುದು. ಆದರೆ ಬಿಬಿಸಿಯ ಆ ಹಳೆಯ ರೇಡಿಯೋ ತರಂಗಗಳಲ್ಲಿ 'ದಿಸ್ ಈಸ್ ಬಿಬಿಸಿ' ಎನ್ನುವ ಕಂಠ ಇಂದಿಗೂ ಅನುರಣಿಸುತ್ತಲೇ ಇರುತ್ತದೆ. ಟಲಿ ಅವರೇ, ಹೋಗಿ ಬನ್ನಿ. ನಿಮ್ಮಂಥ ಪತ್ರಕರ್ತರು ನಮ್ಮ ಕಾಲದಲ್ಲಿ ಇದ್ದರು ಎಂಬುದೇ ಹೆಮ್ಮೆ.

ರಾಜ್ಯಪಾಲರ ಭಾಷಣವೆಂಬ ಗ್ರೇ ಏರಿಯಾ!

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪ್ರೇರಿತ ಕಿತ್ತಾಟಗಳು ಹೊಸದೇನಲ್ಲ. ಅದರಲ್ಲಿಯೂ ಕೇಂದ್ರ ಹಾಗೂ ರಾಜ್ಯದಲ್ಲಿ ಭಿನ್ನ ಪಕ್ಷಗಳು ಅಧಿಕಾರದಲ್ಲಿದ್ದಾಗ, ಕೇಂದ್ರ ಸರಕಾರದಿಂದ ನೇಮಕವಾಗುವ ರಾಜ್ಯಪಾಲರ ಹಾಗೂ ರಾಜ್ಯ ಸರಕಾರದ ನಡುವೆ ಕಿತ್ತಾಟಗಳೂ ಇತ್ತೀಚಿನ ವರ್ಷಗಳಲ್ಲಿ ಸಾಮಾನ್ಯ ಎನಿಸುವಷ್ಟರ ಮಟ್ಟಿಗೆ ಹೋಗಿದೆ. ಆದರೆ ಈ ವಿಷಯದಲ್ಲಿ ಮಾದರಿ ಎನಿಸಿಕೊಂಡಿದ್ದ ಕರ್ನಾಟಕದಲ್ಲಿಯೂ ಇದೀಗ ರಾಜಭವನ ವರ್ಸಸ್ ರಾಜ್ಯ ಸರಕಾರ ಶುರುವಾಗಿರುವುದು ಕರ್ನಾಟಕದ ಮಟ್ಟಿಗೆ ಆತಂಕಕಾರಿ ಬೆಳವಣಿಗೆಯಾಗಿದೆ.

ಕರ್ನಾಟಕದಲ್ಲಿ ಹಂಸರಾಜ್ ಭಾರದ್ವಾಜ್ ರಾಜ್ಯಪಾಲರಾಗಿ, ಬಿಜೆಪಿ ಅಧಿಕಾರದಲ್ಲಿದ್ದಾಗ ಈ ರೀತಿಯ ತಿಕ್ಕಾಟವಿತ್ತು. ಆ ಸಮಯದಲ್ಲಿ ರಾಜ್ಯಪಾಲರು ನಿತ್ಯ ಒಂದಿಲ್ಲೊಂದು ವಿಷಯವನ್ನು ಮುಂದಿಟ್ಟುಕೊಂಡು ಸರಕಾರವನ್ನು ಟೀಕಿಸುವ ಅಥವಾ ಇಕ್ಕಟ್ಟಿಗೆ ಸಿಲುಕಿಸುವ ಕೆಲಸವನ್ನು ಮಾಡುತ್ತಿದ್ದರು. ಆದರೆ ಜಂಟಿ ಅಧಿವೇಶನದಲ್ಲಿ ಭಾಷಣ ಮಾಡುವುದಿಲ್ಲ ಎನ್ನುವ 'ವಿರೋಧ'ವನ್ನು ವ್ಯಕ್ತಪಡಿಸಿದ್ದ ಇತಿಹಾಸವಿರಲಿಲ್ಲ. ಆದರೆ ಈ ಬಾರಿ ಕರ್ನಾಟಕದ ಇತಿಹಾಸದಲ್ಲಿ ಅದೂ ಘಟಿಸಿದ್ದು, ಆ ಮಟ್ಟಿಗೆ ಕರ್ನಾಟಕದ 'ಮಾದರಿ' ಹಾಳಾಯಿತು ಎಂದರೆ ತಪ್ಪಾಗುವುದಿಲ್ಲ.

ಈ ಹಿಂದೆ ಜೆಎಚ್ ಪಟೇಲರ ಸಮಯದಲ್ಲಿ ಹಾಗೂ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ಭಾಷಣ ಮಾಡುವಾಗ ಪ್ರತಿಪಕ್ಷಗಳ ತೀವ್ರ ವಿರೋಧ ಹಾಗೂ ಗಲಾಟೆಯಿಂದ ಭಾಷಣವನ್ನು ಮೊಟಕುಗೊಳಿಸಿದ್ದ ಇತಿಹಾಸವಿದೆ. ಆದರೆ ರಾಜ್ಯ ಸರಕಾರ ಸಿದ್ಧಪಡಿಸಿರುವ ಭಾಷಣ ಸರಿಯಿಲ್ಲ, ಆದ್ದರಿಂದ ಅದನ್ನು ಓದಲು ಸಾಧ್ಯವಿಲ್ಲ ಎಂದು ಹೇಳಿದ್ದು ಇದೇ ಮೊದಲು.

ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡಲು ಆರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಒಪ್ಪಿದ್ದರು. ಆ ಕಾರಣಕ್ಕಾಗಿಯೇ ಅಧಿವೇಶನವನ್ನೂ 'ಕರೆದಿದ್ದರು'. ಅಲ್ಲಿಯವರೆಗೆ ಎಲ್ಲವೂ ಸರಿಯಾಗಿತ್ತು. ಆದರೆ ಯಾವಾಗ ಸರಕಾರ ಕೇಂದ್ರದ ವಿರುದ್ಧ 11 ಪ್ಯಾರಗಳನ್ನು ಸೇರಿಸಿತೋ ಅಲ್ಲಿಗೆ, ಲೋಕಭವನ ಹಾಗೂ ಸರಕಾರದ ನಡುವಿನ ಸಂಘರ್ಷ ಆರಂಭವಾಯಿತು. ಕೇಂದ್ರ ಸರಕಾರದ ಅನುಮೋದನೆಯೊಂದಿಗೆ, ರಾಷ್ಟ್ರಪತಿಗಳಿಂದ ನೇಮಕವಾಗಿರುವ ನಾನು, ಕೇಂದ್ರ ಹಾಗೂ ರಾಷ್ಟ್ರಪತಿಗಳಿಂದ ಅನುಮೋದನೆಗೊಂಡಿರುವ ಕಾಯಿದೆಯ ವಿರುದ್ಧ ಹೇಗೆ ಮಾತನಾಡಲಿ? ಎನ್ನುವ ಪ್ರಶ್ನೆಯನ್ನು ಗೆಹ್ಲೋಥ್ ಅವರು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಹಾಗೂ ಸಿಎಸ್ ಶಾಲಿನಿ ರಜನೀಶ್ ಮುಂದಿಟ್ಟರು. ಇದರೊಂದಿಗೆ ಭಾಷಣಕ್ಕೆ ಹೋದರೆ ಏನಾಗುತ್ತದೆ? ಹೋಗದಿದ್ದರೆ ಏನಾಗುತ್ತದೆ ಎನ್ನುವ ಪ್ರಶ್ನೆ ಸಂವಿಧಾನ ಪಂಡಿತರ ಮುಂದಿಟ್ಟಾಗಲೇ ಗೊತ್ತಾಗಿದ್ದು, ರಾಜ್ಯಪಾಲರ ಭಾಷಣ ಎನ್ನುವುದು 'ಗ್ರೇ ಏರಿಯಾ' ಎಂದು. ಜಂಟಿ ಅಧಿವೇಶನದ ಸಮಯದಲ್ಲಿ ರಾಜ್ಯಪಾಲರು ತಮ್ಮಿಷ್ಟದ ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ ಎನ್ನುವುದು ಎಷ್ಟು ಸ್ಪಷ್ಟವೋ, ಯಾವುದು ಓದಬೇಕು? ಯಾವುದು ಓದಬಾರದು ಎನ್ನುವುದನ್ನು ತೀರ್ಮಾನಿಸುವುದಕ್ಕೆ ಅವರಿಗೆ ಅವಕಾಶವಿದೆ.

ಸಂವಿಧಾನದ 176ನೇ ವಿಧಿಯಲ್ಲಿ ಸಚಿವ ಸಂಪುಟ ಸಿದ್ಧಪಡಿಸಿದ ಭಾಷಣವನ್ನು ಓದಬೇಕು ಎಂದು ಹೇಳಿದೆಯೇ ಹೊರತು, ಓದದೇ ಹೋದರೆ ಏನಾಗುತ್ತದೆ ಎನ್ನುವ ಸ್ಪಷ್ಟನೆ ಇಲ್ಲ. ಸಂವಿಧಾನದಲ್ಲಿರುವ ಈ ಗೊಂದಲವನ್ನು ಮುಂದಿಟ್ಟುಕೊಂಡು ರಾಜ್ಯಪಾಲರು ಆರಂಭದಲ್ಲಿ ಭಾಷಣಕ್ಕೆ ಬರುವುದಿಲ್ಲ ಎಂದು ಹೇಳಿದ್ದು. ಕೇಂದ್ರದ ವಿರುದ್ಧ 11 ಪ್ಯಾರಾ ತೆಗೆಯದಿದ್ದರೆ ಭಾಷಣ ಮಾಡುವುದಿಲ್ಲ ಎಂದಾಗ ಆರಂಭದಲ್ಲಿ ಸರಕಾರದಿಂದ 'ಓದದಿದ್ದರೆ ಪರವಾಗಿಲ್ಲ' ಎನ್ನುವ ಸಂದೇಶ ರವಾನೆಯಾಗಿತ್ತು. ಆದರೆ ಬಳಿಕ ಸಿದ್ಧಪಡಿಸಿರುವ ಭಾಷಣವನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುವ ಸ್ಪಷ್ಟ ಮಾತನ್ನು ಎಚ್.ಕೆ. ಪಾಟೀಲ್ ಹೇಳಿದಾಗಲೇ ಗೊಂದಲ ಶುರುವಾಗಿತ್ತು. ಈ ನಡುವೆ ಸರಕಾರ ಸಂಧಾನದ ಜತೆ ಜತೆಗೆ, ರಾಜ್ಯಪಾಲರು ಆಗಮಿಸದಿದ್ದರೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಸಿದ್ಧತೆ ಆರಂಭಿಸಿತ್ತು.

ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಸಜ್ಜಾಗುತ್ತಿದ್ದಂತೆ ಎಚ್ಚೆತ್ತ ರಾಜ್ಯಪಾಲರು, ಭಾಷಣ ಮಾಡಿರಬೇಕು. ಆದರೆ ರಾಜ್ಯ ಸರಕಾರವನ್ನು ಒಂಟಿ ಕಾಲಿನಲ್ಲಿ ನಿಲ್ಲಿಸಬೇಕು ಎನ್ನುವ ತೀರ್ಮಾನಕ್ಕೆ ಬಂದರು. ಒಂದು ವೇಳೆ ಬಾರದೇ ಹೋಗಿ, ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠದಲ್ಲಿ ರಾಜ್ಯಪಾಲರ ನಡೆಯನ್ನು ಪ್ರಶ್ನಿಸಿದಾಗ, 'ರಾಜ್ಯಪಾಲರ ಭಾಷಣವಿಲ್ಲದೇ ಅಧಿವೇಶನ ನಡೆಸಬಹುದು' ಎಂದೋ ಅಥವಾ 'ಸಚಿವ ಸಂಪುಟ ಕೊಟ್ಟ ಭಾಷಣ ಓದುವುದು ರಾಜ್ಯಪಾಲರ ಕರ್ತವ್ಯ'ವೆಂದು ಪೀಠ ಹೇಳಿದ್ದರೆ, ರಾಜ್ಯಪಾಲರಿಗೆ ತೀವ್ರ ಹಿನ್ನಡೆಯಾಗುತ್ತಿತ್ತು. ಆ ಕಾರಣಕ್ಕೆ, ನ್ಯಾಯಾಲಯದಲ್ಲಿ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಬಂದು, ಎರಡು ಸಾಲಿನ ಭಾಷಣ ಓದಿ ಹೋದರು. ಆದರೆ ರಾಜ್ಯಪಾಲರ ಈ ನಡೆಯಿಂದ ಕೇಂದ್ರವನ್ನು ರಾಜ್ಯಪಾಲರಿಂದ ಟೀಕಿಸುವ ಕೈ ನಾಯಕರ ಆಶಯ ಈಡೇರಲಿಲ್ಲ. ಆ ಕಾರಣಕ್ಕಾಗಿಯೇ ರಾಜ್ಯಪಾಲರನ್ನು ಅಡ್ಡಹಾಕುವ ಕೆಟ್ಟ ಸಂಪ್ರದಾಯಕ್ಕೆ ಕೆಲ ಕಾಂಗ್ರೆಸ್ ಶಾಸಕರು ನಾಂದಿ ಹಾಡಿದರು.

ಮೂರು ವಾಕ್ಯದಲ್ಲಿ ರಾಜ್ಯಪಾಲರು ಭಾಷಣ ಮಾಡುವ ಮೂಲಕ 'ಸಾಂವಿಧಾನಿಕ ಬಿಕ್ಕಟ್ಟು' ಸೃಷ್ಟಿಯಾಗದಂತೆ ಜಾಣ ನಡೆ ಅನುಸರಿಸಿದರು. ಆದರೆ ಅದರ ಮುಂದುವರಿದ ಭಾಗವಾಗಿ ಕಾಂಗ್ರೆಸ್ ಶಾಸಕರು ರಾಜ್ಯಪಾಲರನ್ನು ತಡೆಯುವ ಪ್ರಯತ್ನ ಮಾಡಿದ್ದು, ರಾಜ್ಯಪಾಲರ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ನಾಯಕರು ವಾಗ್ದಾಳಿ ನಡೆಸಿದ್ದು, ರಾಜ್ಯಪಾಲರ ವಿರುದ್ಧವೇ 'ನಿರ್ಣಯ' ತೆಗೆದುಕೊಳ್ಳುವ ಆಲೋಚನೆ ಮಾಡಿರುವುದರಿಂದ ಲೋಕಭವನ ಹಾಗೂ ವಿಧಾನಸೌಧದ ನಡುವೆ ಎಲ್ಲರೂ ಸರಿಯಾಗಿಲ್ಲ. ಸರಿ ಹೋಗುವುದು ಇಲ್ಲ ಎನ್ನುವ ಸ್ಪಷ್ಟ ಸಂದೇಶ ನೀಡಿದಂತಾಗಿದೆ. ಆದರೆ ಇದೀಗ ಕಾಂಗ್ರೆಸಿಗರು ಒಂದು ಹೆಜ್ಜೆ ಮುಂದೆ ಹೋಗಿ, ಲೋಕಭವನ ಚಲೋಕ್ಕೆ ಕರೆ ನೀಡಿರುವುದು ತೀವ್ರ ವಿರೋಧಕ್ಕೆ ಕಾರಣವಾಗಿದೆ.

ನರೇಗಾ ಯೋಜನೆ ಮರುಸ್ಥಾಪನೆಗೆ ಆಗ್ರಹಿಸಿ ಕಾಂಗ್ರೆಸಿಗರು ಮಂಗಳವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಆಯೋಜಿಸಿದ್ದರು. ಪ್ರತಿಭಟನೆ ನಡೆಸುವುದು ಎಲ್ಲರ ಹಕ್ಕಾಗಿರುವುದರಿಂದ ಇದಕ್ಕೆ ಯಾರ ಅಭ್ಯಂತರವೂ ಇಲ್ಲ. ಆದರೆ ಈ ಪ್ರತಿಭಟನೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ 'ಲೋಕಭವನ ಚಲೋ' ನಡೆಸುವುದಾಗಿ ಕಾಂಗ್ರೆಸ್ ಘೋಷಿಸಿದೆ. ಆಡಳಿತಾರೂಢ ಪಕ್ಷ ಅದರಲ್ಲಿಯೂ ಸಿಎಂ, ಡಿಸಿಎಂ ಹಾಗೂ ಗೃಹ ಸಚಿವರ ಸಮ್ಮುಖದಲ್ಲಿ, ರಾಜಭವನಕ್ಕೆ ಮುತ್ತಿಗೆ ಹಾಕುವುದು ಎಷ್ಟು ಸರಿ? ಹೈಕೋರ್ಟ್ ಸೂಚನೆಯಂತೆ ನಿಗದಿತ ಸ್ಥಳಗಳನ್ನು ಹೊರತಾಗಿ ಇತರೆಡೆ ರ್‍ಯಾಲಿ, ಮೆರವಣಿಗೆಗೆ ರಾಜ್ಯ ಸರಕಾರವೇ ನಿರ್ಬಂಧ ವಿಧಿಸಿರುವಾಗ ಈ ನಿರ್ಬಂಧವನ್ನು ಉಲ್ಲಂಘಿಸಿ ರ್‍ಯಾಲಿ ನಡೆಸುವುದು ಕಾನೂನಾತ್ಮಕವಾಗಿ ಎಷ್ಟು ಸರಿ ಎನ್ನುವ ಪ್ರಶ್ನೆಗಳು ಶುರುವಾಗಿದೆ. ಅದರಲ್ಲಿಯೂ ಡಿ.ಕೆ. ಶಿವಕುಮಾರ್ ಅವರು 'ಲೋಕಭವನಕ್ಕೆ ಮುತ್ತಿಗೆ' ಎನ್ನುವ ಶಬ್ದವನ್ನು ಬಳಸಿದ್ದಾರೆ.

ರಾಜಕೀಯವಾಗಿ ತಮ್ಮ ತಮ್ಮ ಪಕ್ಷದ ನಿಲುವು, ಸಿದ್ಧಾಂತಕ್ಕೆ ಬದ್ಧವಾಗಿ ಹೋರಾಟ ನಡೆಸುವುದರಲ್ಲಿ ತಪ್ಪಿಲ್ಲ. ಆದರೆ ರಾಜ್ಯದಲ್ಲಿ ಸಂವಿಧಾನ ಮುಖ್ಯಸ್ಥರಾಗಿರುವ, ಯಾವುದೇ ಪಕ್ಷಕ್ಕೆ ಸೇರದೇ ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರ ಅಧಿಕೃತ ನಿವಾಸಕ್ಕೆ ಮುತ್ತಿಗೆ ಹಾಕಲು ಮುಂದಾಗುವ ಮೂಲಕ ಯಾವ ಸಂದೇಶವನ್ನು ನೀಡಲು ಸರಕಾರ ಪ್ರಯತ್ನಿಸುತ್ತಿದೆ?

ಲೋಕಭವನಕ್ಕೆ ಯಾರೇ ಮುತ್ತಿಗೆ ಹಾಕಲು ಪ್ರಯತ್ನಿಸಿದರೂ ಪೊಲೀಸರು ಕಿ.ಮೀ ದೂರದಲ್ಲಿಯೇ ವಶಕ್ಕೆ ಪಡೆಯುವುದು ಸಹಜ. ವಿಧಾನಸೌಧ, ರಾಜಭವನ, ಮುಖ್ಯಮಂತ್ರಿಗಳ ನಿವಾಸಕ್ಕೆ ಮುತ್ತಿಗೆ ಹಾಕುವ 'ವಿಫಲ' ಪ್ರಯತ್ನಗಳು ನಡೆಯುತ್ತಲೇ ಇರುತ್ತದೆ. ಆದರೆ ಜನಸಾಮಾನ್ಯರು, ಸಂಘ-ಸಂಸ್ಥೆಗಳು, ಪ್ರತಿಪಕ್ಷಗಳು ಮಾಡುವುದಕ್ಕೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡಬೇಕಾದ, ರಾಜಭವನಕ್ಕೆ ಭದ್ರತೆಯನ್ನು ನೀಡಬೇಕಾದ ಆಡಳಿತ ಪಕ್ಷವೇ ಈ ರೀತಿ ಬೀದಿಗೆ ಇಳಿದರೆ ಪೊಲೀಸರ ಕಥೆಯೇನು ಎನ್ನುವುದು ಈಗಿರುವ ಪ್ರಶ್ನೆ. ವಿಬಿ ರಾಮ್ ಜಿ ಕಾಯಿದೆ ಜಾರಿಗೊಳಿಸಿರುವ ಬಿಜೆಪಿಯ ನಿರ್ಧಾರವನ್ನು ವಿರೋಧಿಸಿ ಪ್ರತಿಭಟನೆ ನಡೆಸುವುದಕ್ಕೆ ಯಾರ ಅಭ್ಯಂತರವೂ ಇಲ್ಲ. ಒಂದು ವೇಳೆ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಡಿ.ಕೆ. ಶಿವಕುಮಾರ್ ಕರೆ ನೀಡಿದ್ದರೂ 'ರಾಜಕೀಯ' ಹೋರಾಟದ ಒಂದು ಭಾಗವೆಂದೇ ಭಾವಿಸಬಹುದಾಗಿತ್ತು. ಆದರೆ ಈ ಮುತ್ತಿಗೆ ಕಾರ್ಯಕ್ರಮವನ್ನು ಲೋಕಭವನಕ್ಕೆ ಶಿಫ್ಟ್ ಮಾಡುವ ಮೂಲಕ ಕರ್ನಾಟಕ ರಾಜಕೀಯದಲ್ಲಿ 'ಕೆಟ್ಟ ಪರಂಪರೆ'ಗೆ ಕಾಂಗ್ರೆಸ್ ಕೈಹಾಕಿದೆ ಎನ್ನುವುದು ಸ್ಪಷ್ಟ.

ಹಾಗೇ ನೋಡಿದರೆ, ಇತ್ತೀಚಿನ ವರ್ಷಗಳಲ್ಲಿ ಹಲವು ರಾಜ್ಯಗಳಲ್ಲಿ ಸರಕಾರ ಹಾಗೂ ರಾಜ್ಯಪಾಲರ ನಡುವೆ ಈ ರೀತಿಯ ತಿಕ್ಕಾಟ ನಡೆಯುತ್ತಿರುವುದು ಸಹಜ ಎನಿಸಿದೆ. ಈ ರೀತಿಯಾಗಲು ಕಾರಣವೂ ಇದೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಹಲವು ದಶಕಗಳ ಕಾಲ ಕಾಂಗ್ರೆಸ್ ಏಕಚಕ್ರಾಧಿಪತ್ಯ ನಡೆಸಿತ್ತು. ಕೆಲ ರಾಜ್ಯಗಳಲ್ಲಿ ಇತರೆ ಪಕ್ಷಗಳು ಅಧಿಕಾರಕ್ಕೆ ಬಂದರೂ, ದೊಡ್ಡ ಪ್ರಮಾಣದಲ್ಲಿ ವಿರೋಧಿಸುವ ಶಕ್ತಿ ಇರಲಿಲ್ಲ. ಕಾಂಗ್ರೆಸೇತರ ಪಕ್ಷಗಳು ಅಧಿಕಾರಕ್ಕೆ ಬಂದರೂ, ಅಲ್ಲಿನ ಸರಕಾರಗಳು 'ಹೊಂದಾಣಿಕೆ' ಮಾಡಿಕೊಂಡು ಹೋಗುತ್ತಿದ್ದರಿಂದ ರಾಜಕೀಯವಾಗಿ ಮುಂದೊಂದು ದಿನ ರಾಜ್ಯಪಾಲರ ಭಾಷಣ ಬಹುದೊಡ್ಡ ಸಮಸ್ಯೆಯಾಗುತ್ತದೆ ಎಂದು ಭಾವಿಸಿರಲಿಲ್ಲ. ಅಟಲ್ ಬಿಹಾರಿ ವಾಜಪೇಯಿ ಸರಕಾರವಿದ್ದಾಗಲೂ, ಈ ಪ್ರಮಾಣದಲ್ಲಿ ರಾಜಕೀಯ ಕಿತ್ತಾಟವಿರದ ಕಾರಣ ಸಮಸ್ಯೆಯಾಗಲಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಸೈದ್ಧಾಂತಿಕ ವಿಷಯದಲ್ಲಿ ಹೋರಾಟಗಳು ತೀವ್ರ ಸ್ವರೂಪ ಪಡೆಯುತ್ತಿರುವುದರಿಂದ ರಾಜ್ಯ ಸರಕಾರ ಹಾಗೂ ರಾಜ್ಯಪಾಲರ ನಡುವೆ ಈ ಪ್ರಮಾಣದಲ್ಲಿ ತಿಕ್ಕಾಟ ತೀವ್ರಗೊಂಡಿದೆ ಎಂದರೆ ತಪ್ಪಾಗುವುದಿಲ್ಲ.

ರಾಜ್ಯ ಸರಕಾರ ಹಾಗೂ ರಾಜ್ಯಪಾಲರ ನಡುವಿನ ಈ ಗುದ್ದಾಟ ಕರ್ನಾಟಕದ ಮಟ್ಟಿಗೆ ಹೊಸದಾದರೂ, ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ದಕ್ಷಿಣ ಭಾರತದ ತಮಿಳುನಾಡು, ಕೇರಳ ರಾಜ್ಯಗಳು ಹಾಗೂ ಬಿಜೆಪಿಯೇತರ ರಾಜ್ಯಗಳಲ್ಲಿ ಇದು ಹೊಸದೇನಲ್ಲ. ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ರಾಜ್ಯಪಾಲರ ಮೇಲೆ ದಾಳಿ ನಡೆದಿರುವ ಅಥವಾ ರಾಜ್ಯಪಾಲರು ಸರಕಾರಕ್ಕೆ 'ಪರ್ಯಾಯ'ವಾಗಿ ಗಲಭೆ ಪೀಡಿತ ಜಾಗಗಳಿಗೆ ಭೇಟಿ ನೀಡಿದ ಉದಾಹರಣೆಗಳಿವೆ. ಆದರೆ ಕರ್ನಾಟಕದ ಕಳೆದ ಎರಡುವರೆ ದಶಕದ ಇತಿಹಾಸದಲ್ಲಿ ಹಂಸರಾಜ್ ಭಾರದ್ವಾಜ್ ಬಳಿಕ ಈ ಪ್ರಮಾಣದಲ್ಲಿ ಸಂಘರ್ಷಗಳು ಇರಲಿಲ್ಲ. ಇದೀಗ ಭಾಷಣದ ಈ ಮುಸುಕಿನ ಗುದ್ದಾಟ ಸದ್ಯಕ್ಕೆ ಶಾಂತವಾಗಿದ್ದರೂ, ಮುಂದೆ ಭುಗಿಲೇಳುವುದಿಲ್ಲ ಎಂದಲ್ಲ. ಸಂವಿಧಾನದಲ್ಲಿರುವ ಈ ರೀತಿಯ ಹತ್ತಾರು 'ಗ್ರೇ ಏರಿಯಾ'ಗಳಿಗೆ ಸಂವಿಧಾನಿಕ ಪೀಠದಲ್ಲಿಯೇ ಪರಿಹಾರ ಪಡೆದಿರುವ ಭಾರತ, ರಾಜ್ಯಪಾಲರ ಭಾಷಣದ ಈ ಗೊಂದಲವನ್ನೂ ಇಂದಲ್ಲ ನಾಳೆ ಅಲ್ಲಿಯೇ ಪರಿಹರಿಸಿಕೊಳ್ಳುವುದೊಂದೇ ಉಳಿದಿರುವ ಮಾರ್ಗ ಎಂದರೆ ತಪ್ಪಾಗುವುದಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನವಿರು ಮಾತಿನ ತೋರಣ

ವನಭೋಜನದ ಸ್ವಾರಸ್ಯ, ಆಚರಣೆ, ಸೊಗಡುಗಳ ಕುರಿತಾಗಿ ಶ್ರೀವತ್ಸ ಜೋಶಿಯವರು ತಮ್ಮ 'ತಿಳಿರು ತೋರಣ' ಅಂಕಣದಲ್ಲಿ (ಜ.25) ನವಿರಾಗಿ ಮಾತಿನ ತೋರಣ ಕಟ್ಟಿ ಹೇಳಿದ್ದಾರೆ! ಇದನ್ನು ಓದಿ ಮುಗಿಸಿದಾಗ, ಬಾಲ್ಯದಲ್ಲಿ ನಾವು ವಠಾರದವರೆಲ್ಲ ಸೇರಿ ಮಾಡುತ್ತಿದ್ದ ಬೆಳದಿಂಗಳ ಊಟ ನೆನಪಿಗೆ ಬಂದಿತು. ಎಲ್ಲ ಮನೆಯವರು ಸೇರಿ ವೆಚ್ಚವನ್ನು ಹಂಚಿಕೊಂಡು, ನಾನಾ ಭಕ್ಷ್ಯಗಳನ್ನು ತಯಾರಿಸಿ ವಠಾರದಲ್ಲಿಯೇ ದೊಡ್ಡದಾದ ನಮ್ಮ ಮನೆಯ ವಿಶಾಲ ತಾರಸಿಯ ಮೇಲೆ ಬಾಳೆಲೆ ಹಾಕಿ ಬಡಿಸಿಕೊಂಡು, ಹರಟುತ್ತ, ಹಾಡು ಹೇಳುತ್ತ, ನಗೆಯ ಹೊನಲಲ್ಲಿ ಮೀಯುತ್ತ ಊಟ ಸವಿಯುತ್ತಿದ್ದೆವು. ಅಬ್ಬಾ, ಆ ಬೆಳದಿಂಗಳ ಊಟ ಅದೆಷ್ಟು ಸ್ವಾದಿಷ್ಟವಾಗಿ ಇರುತ್ತಿತ್ತು!

ಇದರಿಂದ ನಮ್ಮ ನಡುವಿನ ಅನುಬಂಧ, ಒಗ್ಗಟ್ಟು, ಆರೋಗ್ಯ ಸುಧಾರಿಸುತ್ತಿತ್ತು. ಪರಸ್ಪರ ಸಹಾಯದ ಪ್ರವೃತ್ತಿ ಹೆಚ್ಚುತ್ತಿತ್ತು. ಇಂದು ಒಂದು ಮನೆ ನಾಲಕ್ಕು ಆಗಿದೆ; ವಠಾರದ ಕಥೆ ಬಿಡಿ, ಒಂದೇ ಮನೆಯ ಎಲ್ಲರೂ ಮನೆಯ ಒಳಗೇ ಒಟ್ಟಾಗಿ ಕುಳಿತು ಊಟ ಮಾಡುವ ದೃಶ್ಯವೂ ವಿರಳವಾಗಿದೆ. 'ಕಾಲಾಯ ತಸ್ಮೈ ನಮಃ' ಎನ್ನೋಣವೇ?

- ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಒಂದು ನೆನಪು

ಸುಮಾರು 22 ವರ್ಷಗಳ ಹಿಂದಿನ ಮಾತು. ಶತಾವಧಾನಿ ಗಣೇಶ್ ಅವರ ಮನೆಗೆ ಒಂದು ಸಂಜೆ ಹೋಗಿದ್ದೆ. ಅವರು ತಮ್ಮ ಪುಸ್ತಕಗಳ ಕೋಣೆಯಲ್ಲಿ ನನ್ನನ್ನು ಕುಳಿತುಕೊಳ್ಳಲು ಹೇಳಿ ಯಾವುದೋ ಮನೆಕೆಲಸದ ನಿಮಿತ್ತ ಒಳಗೆ ಹೋದರು. ಅವರ ತಾಯಿ ಅದೇ ವೇಳೆಯಲ್ಲಿ ಒಳಗಿನಿಂದ ಬಂದು ನನ್ನ ಜತೆ ಮಾತನಾಡಲು ಪ್ರಾರಂಭಿಸಿದರು. ಆಗ ತಾನೇ ಅವರಿಗೆ ಅಲ್ಜೈಮರ್ಸ್ ಪ್ರಾರಂಭವಾಗಿತ್ತು; ಅದರಿಂದ ಸ್ವಲ್ಪ ಅರಳುಮರಳು.

ನನಗೆ ಹೇಳಿದರು: ''ನಿನಗೆ ಗೊತ್ತಾಪ್ಪಾ? ನಾವು ಫ್ಲೈಟ್‌ನಲ್ಲಿ ಡೆಲ್ಲಿಗೆ ಹೋಗಿದ್ದೆವು. ಉದ್ದಕ್ಕೆ ನಡೆದುಕೊಂಡು ಹೋಗಬೇಕು. ಅಲ್ಲಿ ರಾಷ್ಟ್ರಪತಿ ಭವನದಲ್ಲಿ I, the President of India, do hereby confer upon R Ganesh... ಎಂದು ಪ್ರಶಸ್ತಿ ಕೊಟ್ಟಾಗ ನಮ್ಮ ಗಣಿ ಬಗ್ಗೆ ನನಗೆ ಸ್ವಲ್ಪ ಸಮಾಧಾನವಾಯಿತು...''. ಗಣೇಶರ ತಾಯಿ ಮಾತಾಡುತ್ತಿದ್ದದ್ದು ತಮ್ಮ ಮಗನಿಗೆ ಆಗತಾನೇ ಸಂದಿದ್ದ 'ಬಾದರಾಯಣ ವ್ಯಾಸ ಪುರಸ್ಕಾರ'ದ ಬಗ್ಗೆ. ಅವರು ನನಗೆ ಸ್ವಲ್ಪ ಸಮಾಧಾನವಾಯಿತು ಎನ್ನುತ್ತಿದ್ದಂತೆ ಒಳಗಿದ್ದ ಗಣೇಶರು ಹೊರಬಂದು ನಗುತ್ತಾ 'ಹೌದಾಮ್ಮಾ, ನಿನಗೆ ಸಮಾಧಾನವಾದರೆ ನನಗೂ ಸಮಾಧಾನ' ಎಂದು ಆಕೆಯನ್ನು ಪ್ರೀತಿಯಿಂದ ಅಪ್ಪಿಕೊಂಡರು. ಗಣೇಶರ ತಾಯಿ ತೀರಿಕೊಂಡು 10-12 ವರ್ಷಗಳಾಗಿವೆ. ಅನಾರೋಗ್ಯದ ಕಡೆಯ ವರ್ಷಗಳಲ್ಲಿ ಎಂಥ ಒಲುಮೆಯಿಂದ ಆ ತಾಯಿಯನ್ನು ಆ ಮಗ ಕಂಡು ಕಾಪಾಡಿಕೊಂಡರು ಎಂಬುದನ್ನು ನಾನು ದಿನದಿನವೂ ನೋಡುತ್ತಿದ್ದೆ. ಪದ್ಮಭೂಷಣ ಪ್ರಶಸ್ತಿ ತಮ್ಮ ಗಣಿಯನ್ನು ಅರಸಿಬಂತೆಂದು ಪುಣ್ಯಲೋಕಗಳಲ್ಲೆಲ್ಲೋ ಆ ತಾಯಿ ಸಮಾಧಾನಪಟ್ಟುಕೊಳ್ಳುತ್ತಿರಬಹುದು. 'ಮಂದ್ರ' ಕಾದಂಬರಿಯಲ್ಲಿ ರಬೇಕು, ಒಂದು ಮಾತು ಬರುತ್ತದೆ: 'ನಾವು ಎಂಥ ಮೇಲ್ಮೆ ಪಡೆದರೂ ಅದನ್ನು ನೋಡಿ ದಿಟವಾಗಿ ಹರ್ಷಿಸುವ ಜೀವ ತಾಯಿ, ತಾಯಿ ಇರಬೇಕು'. ಗಣಪತಿಗೆ ಹರಕೆ ಹೊತ್ತು ನಮ್ಮ ಶತಾವಧಾನಿಗಳನ್ನು ಪಡೆದ ಆ ತಾಯಿಗೆ ನಮಸ್ಕಾರ.

- ಜಿ.ಎಲ್.ಕೃಷ್ಣ, ಬೆಂಗಳೂರು

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ವಿನಮ್ರತೆಯಿಂದ ಕೇಳುತ್ತಿದ್ದೇನೆ..... ಎಲ್ಲಿದ್ದೀರಾ ಸುದೀಪ್?

ಪದಸಾಗರ

ನವೀನ್ ಸಾಗರ್
vveditoped@gmail.com

ಎಲ್ಲಿದ್ದೀರಾ ಯಶ್?

ಏಳೆಂಟು ವರ್ಷಗಳ ಹಿಂದೆ ಟ್ರೆಂಡಿಂಗ್ ಆದ ಡೈಲಾಗ್ ಇದು! ಮಹದಾಯಿ ಹೋರಾಟಕ್ಕೋ ಕಾವೇರಿ ಹೋರಾಟಕ್ಕೋ ಬರಲಿಲ್ಲ ಎಂಬ ಕಾರಣಕ್ಕೆ ಪಬ್ಲಿಕ್ ಟಿವಿ ಗುಟುರು ಹಾಕಿತ್ತು. ಯಶ್ ಮತ್ತು ಪಬ್ಲಿಕ್ ಟಿವಿ ರಂಗಣ್ಣ ನಡುವೆ ಮಾತಿನ ಚಕಮಕಿಯ ಸರಣಿಯೇ ನಡೆದಿತ್ತು. ಆನಂತರದಲ್ಲಿ ಯಶ್ ಮತ್ತು ರಂಗಣ್ಣ ನಡುವೆ ಸೌಹಾರ್ದ ಏರ್ಪಟ್ಟಿತು. ಪ್ರಕರಣ ಸುಖಾಂತ್ಯವೂ ಆಯ್ತು. ಆದರೆ ಕಾವೇರಿ ಮತ್ತು ಮಹದಾಯಿ ಸಮಸ್ಯೆ ಬಗೆಹರಿಯಿತಾ? ಇಲ್ಲ. ಅದು ಎಲ್ಲಿತ್ತೋ ಅಲ್ಲಿಯೇ ಇದೆ. ಬಹುಶಃ ಅಲ್ಲಿಯೇ ಇರುತ್ತದೆ. ಈ ಘಟನೆಯ ನಂತರ ಯಶ್ ವೃತ್ತಿಜೀವನದ ಗ್ರಾಫ್ ಯದ್ವಾತದ್ವಾ ಏರುಗತಿಯಲ್ಲಿ ಸಾಗಿಬಿಟ್ಟಿತು. ಕನ್‌ಫ್ಯೂಸ್ ಆಗಬೇಡಿ; ಈ ಘಟನೆಯಿಂದಾಗಿ ಯಶ್‌ಗೆ ಯಶಸ್ಸು ಸಿಕ್ಕಿತು ಅಂತ ಹೇಳ್ತಿಲ್ಲ. ಯಶ್ ಯಾವ ಮೀಡಿಯಾಗೂ ಕೇರ್ ಮಾಡದಷ್ಟು, ಯಾವ ಮೀಡಿಯಾಗೂ ಅಗ್ಗಕ್ಕೆ ಸಿಗದಷ್ಟು ಬೆಳೆದದ್ದೂ ಆಯ್ತು.

ಸಿನಿಮಾರಂಗಕ್ಕೆ ಸಂಬಂಧಿಸದ ಸಂಗತಿಗಳಿಗೆ, ಯಾವ್ಯಾವುದೋ ಹೋರಾಟಗಳಿಗೆ ಸಿನಿಮಾ ನಟ-ನಟಿಯರು ಬರಬೇಕು ಎಂಬ ನಿರೀಕ್ಷೆಯೇ ತಪ್ಪು. ಅಂದಿಗೆ ರಾಜ್‌ಕುಮಾರ್ ನಮ್ಮ ಸಾಂಸ್ಕೃತಿಕ ರಾಯಭಾರಿ ಎಂಬಂತಿದ್ದರು. ಅವರ ಸಿನಿಮಾಗಳು, ಅವರ ಸಾರ್ವಜನಿಕ ನಡವಳಿಕೆ, ಅವರ ಭಾಷಾಶುದ್ಧತೆ ಇವೆಲ್ಲವೂ ರಾಜ್ಯದ ಹಿರಿಮೆ ಹೆಚ್ಚಿಸುವಂತಿದ್ದವು. ಹೀಗಾಗಿ ಅವರು ಗೋಕಾಕ್ ಚಳವಳಿಯ ನೇತೃತ್ವ ವಹಿಸಲಿ ಅಂತ ನಿರೀಕ್ಷಿಸೋದ್ರಲ್ಲೂ ಅರ್ಥವಿತ್ತು. ಅವರು ಮುಂದಾಳತ್ವ ವಹಿಸಿದ್ದೂ ಸರಿಯಾಗಿಯೇ ಇತ್ತು. ಆ ಹೋರಾಟಕ್ಕೆ ಗೆಲುವೂ ಸಿಕ್ಕಿತು. ಆದರೆ ಅದನ್ನೇ ಉದಾಹರಣೆಯಾಗಿಟ್ಟುಕೊಂಡು ಇಂದಿನ ಸಿನಿಮಾ ನಟರನ್ನು ನದಿ ಉಳಿಸೋಕೆ, ಗಡಿವಿವಾದ ಬಗೆಹರಿಸೋಕೆ, ಇನ್ಯಾವುದೋ ಭಾಷೆ ವಿರುದ್ಧ ಹರಿಹಾಯೋಕೆ ಬನ್ನಿ ಅಂತ ಕರೆಯೋದು ನಾನ್ ಸೆನ್ಸ್. ಸಿನಿಮಾದವರನ್ನು ನೆಟ್ಟಗೆ ಸಿನಿಮಾ ಮಾಡ್ಕೊಂಡ್ ಇರಿ ಅಂತಷ್ಟೇ ಹೇಳಿ ಬಿಡಬೇಕೇ ಹೊರತು ಅವರನ್ನು ಅದರಾಚೆಗೆ ಯಾವುದಕ್ಕೂ ಎಳೆಯಕೂಡದು. ಅವರಿಗೆ ಯೋಗ್ಯತೆ, ತಿಳಿವಳಿಕೆ, ಆಸಕ್ತಿ ಇದ್ದು ಬಂದರೆ ಬರಲಿ. ಅಷ್ಟೇ

ಆದರೆ, ಸಿನಿಮಾರಂಗ ಸಮಸ್ಯೆ ಎದುರಿಸುತ್ತಿರುವಾಗ ಸಿನಿಮಾರಂಗದವರು ಜವಾಬ್ದಾರಿ ಹೊತ್ತು ಬರಲೇಬೇಕು.

ಎಲ್ಲಿದ್ದೀರಾ ಯಶ್ ಸ್ಲೋಗನ್ ಇಂದು ನೆನಪಾಗೋಕೆ ಕಾರಣ ಇದೆ.

ಇಂದು ನಾನು ಎಲ್ಲಿದ್ದೀರಾ ಯಶ್ ಎಂದು ಕೇಳುವುದಿಲ್ಲ, ಯಶ್ ಎಲ್ಲಿದ್ದಾರೆ ಅಂತ ಇಡೀ ಭಾರತಕ್ಕೆ ಗೊತ್ತಿದೆ. ಭಾರತೀಯ ಚಿತ್ರರಂಗವೇ ಯಶ್‌ರ 'ಟಾಕ್ಸಿಕ್' ಚಿತ್ರಕ್ಕಾಗಿ ಕಾಯುತ್ತಿದೆ. ಎಲ್ಲಿದ್ದೀರಾ ದರ್ಶನ್ ಅಂತಲೂ ನಾನು ಕೇಳುವುದಿಲ್ಲ. ಯಾಕಂದ್ರೆ ದರ್ಶನ್ ಎಲ್ಲಿದ್ದಾರೆ ಅಂತ ಇಡೀ ಕರ್ನಾಟಕಕ್ಕೆ ಗೊತ್ತು. ಅಲ್ಲೇ ಇರಲಿ ಬಿಡಿ. ಆದರೆ 'ಎಲ್ಲಿದ್ದೀರಾ ಸುದೀಪ್' ಎಂದು ನಾನು ಗಟ್ಟಿಯಾಗಿ ಕೂಗಿ ಕೇಳುತ್ತೇನೆ. ಸಿಸಿಎಲ್ ಗ್ರೌಂಡ್‌ಗೆ ರೀಚ್ ಆಗುವಷ್ಟು ಜೋರಾಗಿ ಕೂಗಿ ಕೇಳುತ್ತೇನೆ. ಯಾಕಂದ್ರೆ, ಇದೇ ಸುದೀಪ್ ಕಳೆದ ತಿಂಗಳಲ್ಲಿ ಸಿನಿಮಾರಂಗದ ಉದ್ಧಾರಕರಂತೆ ಅಬ್ಬರಿಸಿದ್ದರು. ಇಂದು ಕ್ರಿಕೆಟ್ ಅಂಗಣದಲ್ಲಿ ಕುಣಿಯುತ್ತಾ ಬ್ಯುಸಿಯಾಗಿದ್ದಾರೆ.

ಎಲ್ಲಿದ್ದೀರಿ ಸುದೀಪ್?

'ಮಾರ್ಕ್' ಬಿಡುಗಡೆಯಾಗುವ ಸಮಯದಲ್ಲಿ ಕನ್ನಡ ಚಿತ್ರರಂಗವನ್ನು ತಲೆಮೇಲೆ ಹೊತ್ತವರಂತೆ ಮಾತನಾಡುತ್ತಿದ್ದವರು, ಎರಡು ವಾರಗಳಲ್ಲಿ ಸಿನಿಮಾ ಇಂಡಸ್ಟ್ರಿಗೂ ತಮಗೂ ಸಂಬಂಧವೇ ಇಲ್ಲವೆಂಬಂತೆ, ತಾವು ವೃತ್ತಿಪರ ಕ್ರಿಕೆಟ್ ಆಟಗಾರರೇನೋ ಎಂಬಂತೆ ಮೈದಾನದಲ್ಲಿ ಆಡಿ ಹಾಡಿ ಕುಣಿಯುತ್ತಿದ್ದಾರೆ ಸುದೀಪ್. ಸುದೀಪ್‌ಗೆ ಮತ್ತೆ ತಾವು ಸಿನಿಮಾ ನಟ ಅಂತ ನೆನಪಾಗೋಕೆ ಬಹುಶಃ ಸಿಸಿಎಲ್ ಮುಗಿದು, ಬಿಗ್ ಬಾಸ್ ಮುಗಿದು ಇನ್ನೊಂದು ಡಿಸೆಂಬರ್ ಬರಬೇಕೇನೋ!

ಕಳೆದ ಡಿಸೆಂಬರ್ ಇಪ್ಪತ್ತೈದಕ್ಕೆ 'ಮಾರ್ಕ್' ಬಿಡುಗಡೆಯಾಯ್ತು. ಸುದೀಪ್ ವೃತ್ತಿ ಜೀವನದ ಹಲವು ಆವರೇಜ್ ಅಥವಾ ಬಿಲೋ ಆವರೇಜ್ ಸಿನಿಮಾಗಳಲ್ಲಿ ಮಾರ್ಕ್ ಕೂಡಾ ಒಂದು. ಅದರ ಜತೆಜತೆಗೆ ಬಿಡುಗಡೆಯಾದ '45' ಸಿನಿಮಾ ಬಗ್ಗೆ ಮಾತನಾಡುವಂತೆಯೇ ಇಲ್ಲ. ಅಷ್ಟು ಅದ್ಭುತ ಸಿನಿಮಾ. ಇವೆರಡಕ್ಕೂ ಹೋಲಿಸಿ ನೋಡಿದರೆ ದರ್ಶನ್ ಅಭಿನಯದ 'ಡೆವಿಲ್' ಎಷ್ಟೋ ಬೆಟರ್ ಅನ್ನೋದು ನೈಜ ಚಿತ್ರಪ್ರೇಮಿಗಳ ಅಭಿಪ್ರಾಯ. ವರ್ಷಾಂತ್ಯದಲ್ಲಿ ಈ ಮೂರು ಸಿನಿಮಾಗಳನ್ನು ನೋಡಿದ ಪ್ರೇಕ್ಷಕ ಎಷ್ಟು ಹತಾಶನಾಗಿದ್ದ ಅಂದರೆ ಕನ್ನಡ ಸಿನಿಮಾಗಳ ಸಹವಾಸವೇ ಬೇಡ ಎಂಬಂತಾಗಿದ್ದ. ಇಂಥ ಚಿತ್ರಗಳಿಂದ ದುಷ್ಪರಿಣಾಮ ಆಗಿದ್ದು ಯಾರಿಗೆ? ಮಾರ್ಕ್, 45 ಬಿಡುಗಡೆಯಾದ ಮರುವಾರ ಬಿಡುಗಡೆಯಾದ 'ತೀರ್ಥರೂಪ ತಂದೆಯವರಿಗೆ' ಎಂಬ ಹೃದಯಸ್ಪರ್ಶಿ ಚಿತ್ರಕ್ಕೆ. 'ಕನ್ನಡ ಸಿನಿಮಾನಾ? ಬೇಡ ಗುರೂ ಮೊನ್ನೆ ಮಾರ್ಕ್, 45, ಡೆವಿಲ್ ನೋಡಿ ಸುಧಾರಿಸಿಕೊಳ್ತಾ ಇದೀವಿ. ಇನ್ನು ಸದ್ಯ ಥಿಯೇಟರ್ ಕಡೆ ತಲೆ ಹಾಕಲ್ಲ' ಎಂದುಬಿಟ್ಟ ಪ್ರೇಕ್ಷಕ.

ಸ್ಟಾರ್ ಸಿನಿಮಾಗಳಿಗೆ ಹೇಗಾದ್ರೂ ಇರಲಿ ಮೊದಲ ದಿನ ನೋಡಿಬಿಡೋಣ ಅಂತ ನುಗ್ಗುವ ಪ್ರೇಕ್ಷಕ ಸ್ಟಾರ್‌ಗಳಿಲ್ಲದ ಒಳ್ಳೆಯ ಸಿನಿಮಾಗೆ ಕಾಲಿಗೆ ಬಿದ್ದು ಕರೆದರೂ ಬರೋದಿಲ್ಲ. ಸುತ್ತಲಿನ ಜನ ಚೆನ್ನಾಗಿದೆ ಅಂತ ಹೇಳಿದರೂ ಬರೋದಿಲ್ಲ. ಸ್ಟಾರ್‌ಗಳ ಕೆಟ್ಟ ಚಿತ್ರಗಳಿಂದ ಒದೆ ತಿನ್ನೋದು ಹೊಸಬರ ಉತ್ತಮ ಚಿತ್ರಗಳು. ಕಡೇಪಕ್ಷ ಈ ನೈತಿಕ ಹೊಣೆಯನ್ನಾದರೂ ಸ್ಟಾರ್‌ಗಳು ಹೊರಬೇಕಲ್ವಾ? ಅದಕ್ಕೇ ನಾನು 'ಎಲ್ಲಿದ್ದೀರಾ ಸುದೀಪ್?' ಎಂದು ಪ್ರಶ್ನಿಸುತ್ತಿದ್ದೇನೆ.

ಸುದೀಪ್‌ಗೆ ಸಿನಿಮಾ ಪಾರ್ಟ್ ಟೈಂ ಎಂಬಂತಾಗಿದೆ. ವರ್ಷದ ನಾಲ್ಕು ತಿಂಗಳು ಬಿಗ್ ಬಾಸ್, ಇನ್ನು ನಾಲ್ಕು ತಿಂಗಳು ಕ್ರಿಕೆಟ್, ಮಿಕ್ಕಿರೋ ನಾಲ್ಕು ತಿಂಗಳಲ್ಲಿ ಟೈಂ ಸಿಕ್ಕರೆ ಸಿನಿಮಾ ಎಂಬಂತಿದ್ದಾರೆ. ಉಪೇಂದ್ರರಿಗೆ 'ಪ್ರಜಾಕೀಯ'ದ ಮೂಲಕ ರಾಜಕೀಯದಲ್ಲೇನೋ ಗಳಿಸುವ ಹಂಬಲ, ಅದಕ್ಕೆ ಸಿನಿಮಾ ಮೆಟ್ಟಿಲಷ್ಟೆ. ಶಿವಣ್ಣನಂಥ ಅಪ್ಪಟ ಸಿನಿಮಾಜೀವಿಯನ್ನು ರಿಯಾಲಿಟಿ ಶೋಗಳಿಗೆ ಎಳಕೊಂಡು ಹೋಗಿ ಮುಗಿಸಲಾಗುತ್ತಿದೆ. ರವಿಚಂದ್ರನ್ ಏಕಾಂಗಿಯಾಗಿ ಪ್ರೇಮಲೋಕದೊಳಗೆ ಮುಳುಗಿಹೋಗಿದ್ದಾರೆ. ಒಂದಷ್ಟು ಕಿಡಿ ಇರುವ ಜಗ್ಗೇಶ್ ಮಾತಿಗೆ ಇಂಡಸ್ಟ್ರಿ ಬೆಲೆ ಕೊಡುವುದಿಲ್ಲ. ಎಲ್ಲರೂ ತಮ್ಮ ಸುತ್ತಲೇ ಸುತ್ತಿಕೊಳ್ಳುತ್ತಿದ್ದಾರೆ. ತಾವು ಗೆದ್ದರೆ ಮಾತ್ರ ಇಂಡಸ್ಟ್ರಿ ಗೆದ್ದಂತೆ ಎಂದು ಭಾವಿಸುತ್ತಾರೆ. ಚಿತ್ರರಂಗದಲ್ಲಿ ಬರುತ್ತಿರುವ ಹೊಸ ಸಿನಿಮಾಗಳನ್ನು ಗೆಲ್ಲಿಸಿಕೊಳ್ಳುವ ಮನಸ್ಥಿತಿ ಇಲ್ಲ. ಹೊಸಬರನ್ನು ಬೆಳೆಸುವ ಗುಣಗಳೂ ಇಲ್ಲ. ತಮ್ಮದೇ 'ಇಗೋ' ಕೋಟೆಯೊಳಗೆ, ಅಭದ್ರತೆಯ ಭಾವಗಳೊಂದಿಗೆ ತೊಳಲಾಡುತ್ತಿದ್ದಾರೆ.

ಈ ಸ್ಟಾರ್ ನಟರು ತಾವಾಗಿ ಥಿಯೇಟರ್‌ಗೆ ಹೋಗಿ ನೋಡಿ ಎಂದಾದರೂ ಹೊಸಬರ ಒಳ್ಳೆಯ ಸಿನಿಮಾಗಳನ್ನು ಪ್ರೋತ್ಸಾಹಿಸಿದ ಉದಾಹರಣೆ ಇದೆಯಾ? ಸ್ಟಾರ್ ನಟರಿಗೆ ಸಿನಿಮಾ ತೋರಿಸಬೇಕು ಅಂದ್ರೆ, ಬಹುಶಃ ಒಂದು ಚಿಕ್ಕ ಬಜೆಟ್ ಸಿನಿಮಾದಷ್ಟೇ ಖರ್ಚು ಮಾಡಬೇಕು. ಅವರು ಕೈಗೆ ಸಿಗೋದಿಲ್ಲ, ಮಧ್ಯವರ್ತಿಗಳನ್ನು ದಾಟಿ ಹೋಗಲಾಗುವುದಿಲ್ಲ. ಅವರಿಗೆ ಶೋ ಅರೇಂಜ್ ಮಾಡಬೇಕು ಅಂದ್ರೆ ಅವರ ಸುತ್ತ ಬೌನ್ಸರ್‌ಗಳನ್ನು ಅರೇಂಜ್ ಮಾಡಬೇಕು. ಅದನ್ನು ಪ್ರಚಾರ ಮಾಡಬೇಕು. ಅವರ ಹಿಂಬಾಲಕರಿಗೂ ಎಲ್ಲ ಸೌಕರ್ಯ ಕೊಡಬೇಕು. ಇಷ್ಟೆಲ್ಲದರ ನಂತರವೂ ಆತ ಸಿನಿಮಾದ ಬಗ್ಗೆ ಮಾತನಾಡುವುದಿಲ್ಲ. ತಾನು ಬಂದಿರೋದೇ ಒಂದು ಸುದ್ದಿ. ತಾನು ನೋಡಿದೀನಿ ಅನ್ನೋದೇ ಸಿನಿಮಾದ ಕಲೆಕ್ಷನ್ ಹೆಚ್ಚಿಸುತ್ತೆ ಎಂಬಂತೆ ಆಡುತ್ತಾನೆ.

ಸಿನಿಮಾರಂಗದ ಹಿರಿಯ ಅಂದರೆ ಆತ ಇಂಡಸ್ಟ್ರೀಲಿ ಯಾವ್ ಒಳ್ಳೆ ಸಿನಿಮಾಗಳು ಬರ್ತಾ ಇವೆ. ಅವುಗಳನ್ನು ಗೆಲ್ಲಿಸಿಕೊಳ್ಳೋಕೆ ನಾನೇನು ಮಾಡಬೇಕು ಅಂತ ಸ್ವಯಂಪ್ರೇರಿತನಾಗಿ ಯೋಚಿಸಬೇಕು. ಅದರಿಂದಾಗಿ ಮುಂದೆ ಆತನ ಸಿನಿಮಾಗೂ ಬೆಲೆ ಬರುತ್ತದೆ.

ರಾಮೇನಹಳ್ಳಿ ಜಗನ್ನಾಥ ಈ ಹಿಂದೆ 'ಹೊಂದಿಸಿ ಬರೆಯಿರಿ' ಎಂಬ ಚಿತ್ರ ಮಾಡಿದ್ದವರು. ಬಹಳ ಸೆನ್ಸಿಬಲ್ ಮತ್ತು ಕಾವ್ಯಾತ್ಮಕ ನಿರೂಪಣೆಯಿಂದಾಗಿ ಅದು ಪ್ರೇಕ್ಷಕರ ಮನಗೆದ್ದಿತ್ತು. ಆದರೆ ಸ್ಟಾರ್ ಕ್ಯಾಸ್ಟ್ ಇಲ್ಲದ ಕಾರಣ ಥಿಯೇಟರ್‌ಗೆ ಜನರನ್ನು ಸೆಳೆಯುವಲ್ಲಿ ಸೋತಿತ್ತು. ಅದೇ ಸಿನಿಮಾವನ್ನು ಓಟಿಟಿಯಲ್ಲಿ ಪ್ರೇಕ್ಷಕರು ಮತ್ತೆ ಮತ್ತೆ ನೋಡಿ ಖುಷಿಪಟ್ಟಿದ್ದರು. ಇಂಥ ಚಿತ್ರವನ್ನು ನಾವ್ಯಾಕೆ ಥಿಯೇಟರ್‌ನಲ್ಲಿ ನೋಡಲಿಲ್ಲ ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಂಡಿದ್ದರು. ಚಿತ್ರಮಂದಿರದ ಕಲೆಕ್ಷನ್‌ಗಿಂತ ಹೆಚ್ಚು ಕಲೆಕ್ಷನ್ ಓಟಿಟಿಯಿಂದ ಬಂದಿತ್ತು.

ಈಗ ಅದೇ ರಾಮೇನಹಳ್ಳಿ ಜಗನ್ನಾಥ್ 'ತೀರ್ಥರೂಪ ತಂದೆಯವರಿಗೆ' ಎಂಬ ಚಿತ್ರ ಮಾಡಿದ್ದಾರೆ. ರಾಜೇಶ್ ನಟರಂಗ, ಹಿರಿಯ ನಟಿ ಸಿತಾರಾ, ರವೀಂದ್ರ ವಿಜಯ್ ಅದ್ಭುತ ಅಭಿನಯ ನೀಡಿದ್ದಾರೆ. ನಿಹಾರ್ ಮುಕೇಶ್ ಮತ್ತು ರಚನಾ ಇಂದರ್ ಜೋಡಿಯ ಅಭಿನಯವೂ ಹಿತಕರ. ಎಲ್ಲಕ್ಕಿಂತ ಹೆಚ್ಚಾಗಿ, ಇಂದಿನ ಪ್ರೇಕ್ಷಕ ನಿರೀಕ್ಷಿಸುವ ಸೋ ಕಾಲ್ಡ್ 'ಕಂಟೆಂಟ್' ಈ ಚಿತ್ರದಲ್ಲಿದೆ. ಚಿತ್ರ ನಗಿಸುತ್ತದೆ, ಅಳಿಸುತ್ತದೆ, ಆಲೋಚನೆಗೆ ಹಚ್ಚುತ್ತದೆ. ಕುಟುಂಬಸಮೇತ ನೋಡುವಂತಿದೆ. ರಕ್ತಪಾತ, ಲಾಂಗುಮಚ್ಚು, ಗನ್ನು, ಅತಿಮಾನುಷ ಕ್ಯಾರೆಕ್ಟರ್‌ಗಳು ಇಂಥವುಗಳಿಂದ ಹೊರತಾಗಿದೆ. ಇಂಥ ಚಿತ್ರಕ್ಕೆ ಸಿನಿರಂಗದ ಬೆಂಬಲವೇ ಇಲ್ಲ. ನಿರ್ದೇಶಕ ಮತ್ತು ನಿರ್ಮಾಪಕರಿಗೆ ಇಂಡಸ್ಟ್ರಿಯ ಕಾಂಟ್ಯಾಕ್ಟ್‌ಗಳಿಲ್ಲ. ಸ್ಟಾರ್ ನಟರ ಸಂಪರ್ಕ ಇಲ್ಲ. ಪ್ರಾಮಾಣಿಕ ಪ್ರಚಾರ ಮಾಡಿ ಸಾಧ್ಯವಾದಷ್ಟು ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಕರೆತಂದಿದ್ದಾರೆ. ಇದು ಬೇರೆ ಯಾವುದಾದರೂ ಭಾಷೆಯಲ್ಲಿ ಬಂದಿದ್ದರೆ ಸುದೀಪ್ ಅಥವಾ ಇತರ ನಟರಿಗೆ ರೀಮೇಕ್ ಮಾಡಬಲ್ಲ ಸರಕಾಗಿ ಕಂಡಿರುತ್ತೇನೋ. ಹಿತ್ತಲ ಗಿಡವಾಗಿದ್ದಕ್ಕೆ ಈ ಮದ್ದು ಕಾಣುತ್ತಿಲ್ಲ.

ನಾನು ಸ್ಟಾರ್‌ಗಳನ್ನು ಕೇಳುತ್ತೇನೆ..... ನಿಮ್ಮ ಸಿನಿಮಾ ಸೋತಾಗಿದೆ. ಅಥವಾ ನಿಮ್ಮ ಖುಷಿಗಾಗಿ ಹೇಳುತ್ತೇನೆ. ನಿಮ್ಮ ಸಿನಿಮಾ ಗೆದ್ದಿದೆ. ಅಷ್ಟೇ ಸಾಕಾ? ಈ ವರ್ಷ ಇನ್ನು ನಿಮ್ಮ ಸಿನಿಮಾ ಬರೋ ತನಕ ನಿಮಗೂ ಇಂಡಸ್ಟ್ರಿಗೂ ಸಂಬಂಧವೇ ಇಲ್ವಾ? ನಿಮ್ಮ ಸಿನಿಮಾಗಳು ಮಾತ್ರ ಇಂಡಸ್ಟ್ರಿಯ ಅಸ್ಮಿತೆಯಾ? ನಿಮ್ಮ ಸಿನಿಮಾ ಗೆದ್ದರೆ ಮಾತ್ರ ಕನ್ನಡ ಚಿತ್ರರಂಗ, ಭಾಷೆ, ನೆಲ ಜಲ ಉಳಿಸಿ ಬೆಳೆಸಿದಂತೆಯಾ?

ಕೆಟ್ಟ ಸಿನಿಮಾ ಮಾಡಿದವರನ್ನು ಕರೆದು ಬಯ್ದು ತಿದ್ದುವ, ಒಳ್ಳೇ ಸಿನಿಮಾ ಮಾಡಿದಾಗ ನೀವಾಗಿ ಅವರ ಪ್ರಾಡಕ್ಟ್ ಮತ್ತು ಕೆಲಸ ನೋಡಿ ಕರೆದು ಬೆನ್ನುತಟ್ಟುವ ಕೆಲಸ ಮಾಡಿದರೆ ಹೊಸಬರು ಬೆಳೆಯುತ್ತಾರೆ. ಆ ಹೊಸಬರಲ್ಲೇ ನಿಮಗೊಬ್ಬ ಕಥೆಗಾರ, ನಿರ್ದೇಶಕ ಸಿಗಬಹುದು. ಪರಭಾಷಾ ತಂತ್ರಜ್ಞರನ್ನು ಕರೆದು ಸಿನಿಮಾ ಮಾಡುವ ದರ್ದು ಬರುವುದಿಲ್ಲ. ಪರಭಾಷೆಗಳಲ್ಲಿ ತಮ್ಮದೇ ಚಿತ್ರರಂಗದ ಹೊಸಬರನ್ನು ಗುರುತಿಸುವ ಕೆಲಸವಾಗಿದೆ. ಹೊಸಬರ ಚಿತ್ರಗಳನ್ನು ಸ್ಟಾರ್‌ಗಳು ಯಾವ ಅಜೆಂಡಾ, ಗ್ರೂಪಿಸಂ ಇಲ್ಲದೆ ಮೆಚ್ಚಿ ಪ್ರೋತ್ಸಾಹಿಸುವ ಕಾರ್ಯ ನಡೆದಿದೆ. ರಜನಿಕಾಂತ್ ಥರದ ನಟರು ಪಾ ರಂಜಿತ್ ಥರದ ಹುಡುಗರ ಮೇಲೆ ವಿಶ್ವಾಸವಿಟ್ಟು ಕೋಟಿಗಟ್ಟಲೆ ಬಜೆಟ್ಟಿನ ಸಿನಿಮಾ ಮಾಡಿದ್ದಾರೆ. ಕನ್ನಡದ ಕಥೆಗಾರರು, ನಿರ್ದೇಶಕರು ಮಾತ್ರ ಕೈಲಿ ಕಥೆ ಇಟ್ಕೊಂಡು ಸ್ಟಾರ್‌ಗಳನ್ನು ತಲುಪಲಾಗದೇ, ಹೊಸಬರನ್ನು ಹಾಕಿಕೊಂಡು ಚೆನ್ನಾಗಿಯೇ ಸಿನಿಮಾ ಮಾಡಿದರೂ ಗೆಲ್ಲಲಾಗದೇ ಒಂದು ಎರಡು ಚಿತ್ರಗಳಿಗೆ ಸುಸ್ತಾಗಿ ಸಿನಿಮಾ ಸಹವಾಸವೇ ಬೇಡ ಎಂದು ನಿರ್ಧರಿಸುತ್ತಿದ್ದಾರೆ. ಸ್ಟಾರ್ ನಟರು ಕೆಟ್ಟ ಸಿನಿಮಾಗಳನ್ನು ಮಾಡಿ ಫೇಕ್ ಓಪನಿಂಗ್ ತೋರಿಸಿ ತಮ್ಮ ಸಂಭಾವನೆ ಹೆಚ್ಚಿಸಿಕೊಂಡು ಇನ್ನೊಂದು ಸಿನಿಮಾ ಬುಕ್ ಮಾಡಿಕೊಂಡು, ವರ್ಷವಿಡೀ ಅದರ ಲಕ್ಷುರಿಯಲ್ಲೇ ಕಾಲ ಕಳೆಯುತ್ತಾರೆ. ಸ್ಟಾರ್ ನಟನನ್ನು ಹಾಕಿಕೊಂಡು ಕೋಟಿಗಟ್ಟಲೆ ಸುರಿದ ನಿರ್ಮಾಪಕ ದಿಕ್ಕುತೋಚದೇ ಬೀದಿಗೆ ಬರುತ್ತಾನೆ. ಬುದ್ಧಿ ಕಲಿಯುವುದಿಲ್ಲ. ಮತ್ತೆ ಕೆಟ್ಟ ಚಿತ್ರಗಳ ಮೇಲೆ ಸ್ಟಾರ್‌ಗಳ ಮೇಲೆ ಹಣ ಸುರಿಯುತ್ತಾನೆ. ಹೊಸಬರು ಒಂದೊಳ್ಳೆ ಸಿನಿಮಾ ಮಾಡಿಕೊಡುತ್ತೇನೆ ಎಂದು ಕಾಲಿಗೆ ಬಿದ್ದರೂ ಅವರಿಗೆ ನಿರ್ಮಾಪಕರು ಸಿಗುವುದಿಲ್ಲ. ಸ್ಟಾರ್ ನಟರಿಗೂ ಕಂಟೆಂಟ್ ಬೇಕಾಗಿಲ್ಲ. ಫ್ಯಾನ್ ಸಂಖ್ಯೆ ಹೆಚ್ಚಿಸೋ ಬಿಲ್ಡಪ್ ಸಿನಿಮಾಗಳೇ ಬೇಕಾಗಿವೆ. ಅಂಥ ನಿರ್ದೇಶಕರಿಗಷ್ಟೇ ಮಣೆ ಹಾಕುತ್ತಾರೆ.

'ತೀರ್ಥರೂಪ ತಂದೆಯವರಿಗೆ' ಚಿತ್ರದ ಬಗ್ಗೆ ಒಬ್ಬೇ ಒಬ್ಬ ಸ್ಟಾರ್ ನಟ ಸ್ವಯಂಪ್ರೇರಿತವಾಗಿ ಮೆಚ್ಚಿ ಮಾತನಾಡಿದ್ದಿದ್ದರೆ ಇಷ್ಟೆಲ್ಲ ಬರೆಯಬೇಕಾಗಿರಲಿಲ್ಲ. ಕನ್ನಡ ಸಿನಿರಂಗದ ಕಲಾವಿದರು ಎಷ್ಟರ ಮಟ್ಟಿಗೆ ಕನ್ನಡ ಸಿನಿಮಾಗಳನ್ನು ನೋಡುತ್ತಿದ್ದಾರೆ ಎಂಬುದಕ್ಕೆ ಇದು ಸಾಕ್ಷಿ. ಅಪರೂಪಕ್ಕೊಂದು ಹೊಸಬರ ಒಳ್ಳೆಯ ಚಿತ್ರ ಯಾವುದೋ ಮ್ಯಾಜಿಕ್‌ನಿಂದಾಗಿ, ಗಿಮಿಕ್‌ನಿಂದಾಗಿ ಓಪನಿಂಗ್ ಪಡೆಯಬಹುದು. ಆದರೆ ಎಲ್ಲ ಚಿತ್ರಗಳಿಗೂ ಅದು ಸಾಧ್ಯವಿಲ್ಲ. ಅದಕ್ಕೆ ಇಂಡಸ್ಟ್ರಿಯ ದೊಡ್ಡತಲೆಗಳ ಬೆಂಬಲ ಬೇಕಾಗುತ್ತದೆ. ಚಿತ್ರಕ್ಕೆ ಪ್ರಚಾರ ಕೊಡಿಸುವಲ್ಲಿ, ಚಿತ್ರಮಂದಿರಗಳನ್ನು ಶೋಗಳನ್ನು ಕೊಡಿಸುವಲ್ಲಿ ಇಂಡಸ್ಟ್ರಿಯ ಬೆಂಬಲ ಬೇಕಾಗುತ್ತದೆ. ಅದರಲ್ಲೂ ಮಲ್ಟಿಪ್ಲೆಕ್ಸ್ ಜಮಾನದಲ್ಲಿ ಸಿನಿಮಾ ಉಳಿಸಿಕೊಳ್ಳುವುದು ಸುಲಭವಿಲ್ಲ. ಸ್ಟಾರ್‌ಗಳು, ವಾಣಿಜ್ಯಮಂಡಳಿ ಎಲ್ಲರೂ ಹೊಸಬರ ಚಿತ್ರಗಳನ್ನು ಬೆಂಬಲಿಸಿ ಜತೆಗೆ ನಿಲ್ಲದೇ ಹೋದರೆ ಚಿತ್ರರಂಗ ಸಂಪೂರ್ಣ ನಾಶವಾಗುತ್ತದೆ. ಕೆಜಿಎಫ್, ಕಾಂತಾರ ಸಾವಿರ ಕೋಟಿ ಗಳಿಸಿ ಮಿಕ್ಕಿರೋ ಇನ್ನೂರೈವತ್ತು ಚಿತ್ರಗಳಿಂದ ಚಿತ್ರರಂಗಕ್ಕೆ ಒಂದೂವರೆ ಸಾವಿರ ಕೋಟಿ ನಷ್ಟವಾದರೆ, ಅದನ್ನು ಹೆಲ್ದೀ ಇಂಡಸ್ಟ್ರಿ ಅನ್ನುವುದಿಲ್ಲ. ಹಿರಿಯ ನಟರು ಇಲ್ಲಿ ಮೆಂಟರ್ ಆಗಬೇಕಿದೆ. ನಿರ್ಮಾಪಕರಿಗೆ, ನಿರ್ದೇಶಕರಿಗೆ ಮಾರ್ಗದರ್ಶಿಯಾಗಿ ನಿಲ್ಲಬೇಕಿದೆ. ಸ್ಟಾರ್‌ಗಿರಿಯ ಭ್ರಮೆಯಿಂದ ಹೊರಬಂದು ಎಲ್ಲರೊಳಗೊಬ್ಬರಾಗಿ ಸಿನಿಮಾರಂಗದಲ್ಲಿ ಸಕ್ರಿಯರಾಗಿ ತೊಡಗಿಸಿಕೊಳ್ಳಬೇಕಿದೆ. ಮೊದಲು ನಮ್ಮ ತಾರೆಗಳು 'ತೀರ್ಥರೂಪ ತಂದೆಯರಿಗೆ' ಚಿತ್ರ ನೋಡಲಿ. 'ಇಗೋ' ಸೈಡಿಗಿಟ್ಟು ಈ ಬರಹವನ್ನು ಆತ್ಮಾವಲೋಕನದಂತೆ ಓದಿಕೊಂಡಲ್ಲಿ ಕೋಪ ಬರಲಿಕ್ಕಿಲ್ಲ. ಇಲ್ಲವಾದಲ್ಲಿ.. Fine..That's ok.

ಭಟ್ಟರ್ ಸ್ಕಾಚ್

- **ಶಿವಕುಮಾರ ಸಿ.,(ಇಮೇಲ್ ಮೂಲಕ)**
ಭಟ್ರೇ, ರನ್ನಪಿತನ ರೂಮಿಗೆ ಕಾಲಿಡುವ ಮುನ್ನ ಬರುವವರು ಯಾವ ಭಾವನೆ ಹೊಂದಿರುತ್ತಿದ್ದರು?
– **ಪೂಜಿಸಲೆಂದೇ ಹೂಗಳ ತಂದೆ ತೆರೆಯೋ ಬಾಗಿಲನು!**

- **ರಾಘೋಬ, ಮೈಸೂರು**
ಭಟ್ರೇ, ವಿಶ್ವವಾಣಿ ಹಾಗೂ ಲೋಕಧ್ವನಿ ಭಟ್ಟರ ಎರಡು ಕಣ್ಣುಗಳಾದರೆ, ಅವರ ಪ್ರಪಂಚ?
– **‘ಪ್ರವಾಸಿ ಪ್ರಪಂಚ’!**

- **ಶ್ರೀಧರ ಗುಡಿ, ಭದ್ರಾವತಿ**
ಭಟ್ರೇ, ಗುರುನಿಂದನೆ ಕೇಳಿ ಮನನೊಂದ ಶಿಷ್ಯರು ಪ್ರಾಯಶ್ಚಿತ್ತಕ್ಕಾಗಿ ಹಾಡಿಕೊಳ್ಳುವ ಹಾಡು?
– **‘ಆಚಾರವಿಲ್ಲದ ನಾಲಿಗೆ ನಿನ್ನ ನೀಚಬುದ್ಧಿ ಬಿಡು ನಾಲಿಗೆ, ವಿಚಾರವಿಲ್ಲದೆ ಪರರ ದೂಷಿಸುವ...’**

- **ರುಕ್ಕು, ಚಾಮರಾಜಪೇಟೆ**
ಭಟ್ರೇ, ಗೂಗಲ್ ಸರ್ಚ್ ಅನ್ನೂ ಬೆಚ್ಚಿ ಬೀಳಿಸಿರುವ ಆ ಎರಡು ಸಂಗತಿಗಳು ಯಾವುವು?
– **ಡಿಕೆಶಿ ಹೋಗದೇ ಇರುವ ದೇವಸ್ಥಾನಗಳು, ವಿಶ್ವೇಶ್ವರ ಭಟ್ಟರು ಹೋಗಿ ಬಂದಿರುವ ದೇಶಗಳು!**

- **ನಾ.ವಿಘ್ನೇಶ್ವರ, ಮೈಸೂರು**
ಭಟ್ರೇ, ಹೆಸರಿನಲ್ಲಿ ‘ಹರಿ’ ಇಟ್ಟುಕೊಂಡಿರುವ ಯಾರಿಬ್ಬರು ಹರಿಬರಿಗೆ ಒಳಗಾದವರು?
– **ಶ್ರೀಗಳ ಬಾಯಲ್ಲಿ ಹರಿದಾಸ ಭಟ್ಟರು, ಶಾಸನ ಸಭೆಯಲ್ಲಿ ಹರಿಪ್ರಸಾದರು!**

- **ಸಂತೋಷ ಹೆಗಡೆ, ಶಿರಸಿ**
ಭಟ್ರೇ, ಸಾಲ ಕೊಟ್ಟವನು ಮತ್ತು ಸಾಲ ತಗೊಂಡವನ ಮಧ್ಯೆ ಇರುವ ವ್ಯತ್ಯಾಸ?
– **ಸಾಲ ಕೊಟ್ಟವನಿಗೆ ‘ನೆನಪು’ ಜಾಸ್ತಿ, ತಗೊಂಡವನಿಗೆ ‘ಮರೆವು’ ಜಾಸ್ತಿ!**

- **ಜಿ.ಲಕ್ಷ್ಮೀನಾರಾಯಣ, ಹರಿಹರ**
ಭಟ್ರೇ, ಮದುವೆಗೂ ಜೈಲಿಗೂ ಏನು ವ್ಯತ್ಯಾಸ?
– **ಜೈಲಿನಲ್ಲಿ ತಪ್ಪು ಮಾಡಿದ ಮೇಲೆ ಶಿಕ್ಷೆ ಅನುಭವಿಸಬೇಕು, ಮದುವೆಯಲ್ಲಿ ಶಿಕ್ಷೆ ಅನುಭವಿಸುತ್ತಲೇ ತಪ್ಪು ಹುಡುಕಬೇಕು!**

- **ಪಿ.ರಾಜು, (ಇಮೇಲ್ ಮೂಲಕ)**
ಭಟ್ರೇ, ಈ ಕಾಲದಲ್ಲಿ ಅಪರಿಚಿತ ಅಂದ್ರೆ ಯಾರು?
– **ಯಾರ ಹತ್ತಿರ ಇನ್‌ಸ್ಟಾಗ್ರಾಮ್ ಅಕೌಂಟ್ ಇಲ್ವೋ ಅವನೇ!**

- **ಹರೀಶ ಮೇಲಿನಮನೆ, (ಇಮೇಲ್ ಮೂಲಕ)**
ಭಟ್ರೇ, ನಾವು ಸತ್ತ ಮೇಲೆ ಈ ಜಗತ್ತು ಏನಾಗುತ್ತದೆ?
– **ಜಗತ್ತಿನ ಕಥೆ ಹಾಳಾಗಲಿ, ನಮ್ಮ ಫೇಸ್‌ಬುಕ್ ಅಕೌಂಟ್ ಏನಾಗುತ್ತೆ ಮೊದಲು ಹೇಳು!**

ರಿಜೆಕ್ಟ್ ದಿ ರಿಜೆಕ್ಷನ್: ನಿರಾಕರಣೆಯನ್ನು ನಿರಾಕರಿಸಿ!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ನಮ್ಮ ಎಲ್ಲಾ ರೀತಿಯ ಕೆಲಸಗಳ ಕಾರಣ ಮತ್ತು ಫಲಿತಾಂಶವೇ ನಾವು ಎನ್ನಬಹುದು. ಬಹಳ ಸರಳವಾಗಿ ಇದನ್ನು, ಬೇವಿನ ಬೀಜವನ್ನು ಬಿತ್ತಿ ಮಾವಿನ ಫಲ ನಿರೀಕ್ಷಿಸಿದರೆ ಹೇಗೆ ಅದು ಸಾಧ್ಯವಿರುವುದಿಲ್ಲವೋ, ಥೇಟ್ ಹಾಗೆ ನಮ್ಮ ಒಟ್ಟು ಕರ್ಮಫಲಗಳು ನಾವು ಎನ್ನಬಹುದು. ಇದೇನೂ ದೊಡ್ಡ ರಹಸ್ಯವಲ್ಲ. ಬಹಳ ಹಿಂದಿನಿಂದ ನಮ್ಮ ಪೂರ್ವಜರು ಈ ಮಾತುಗಳನ್ನು ಹೇಳಿಕೊಂಡು ಬಂದಿದ್ದಾರೆ. ಆದರೆ ಈ ಗುಣವನ್ನು ಒಂದು ಕಿವಿಯಲ್ಲಿ ಕೇಳಿ ಇನ್ನೊಂದರಲ್ಲಿ ಬಿಡುವವರ ಸಂಖ್ಯೆ ಅಸಂಖ್ಯ. ಯಾರು ಈ ಗುಣವನ್ನು, ಲಕ್ಷಣವನ್ನು ತಮ್ಮದಾಗಿಸಿಕೊಂಡಿದ್ದಾರೋ ಅವರು ಬದುಕಿನಲ್ಲಿ ತಮಗೂ ಮತ್ತು ಇತರರಿಗೂ ಸೃಷ್ಟಿಸಿದ್ದಾರೆ. ಆಶ್ಚರ್ಯ ಎನ್ನಿಸುತ್ತದೆ, ಆದರೆ ಒಂದು ಸತ್ಯವೇನು ಗೊತ್ತೇ? ಒಮ್ಮೆ ನಾವು ಇಂಥ ಒಂದು ಅಂಶವನ್ನು ಸೃಷ್ಟಿಸಿಬಿಟ್ಟರೆ ಸಾಕು ಅದು ಬಹುದೂರ ಸಾಗುತ್ತದೆ. ನಮ್ಮ ಅರಿವಿಗೂ, ಊಹೆಗೂ ನಿಲುಕದ ರೀತಿಯಲ್ಲಿ ಬೇರೆಯವರನ್ನು ತಲುಪುತ್ತದೆ. ಯೋಚಿಸಲಾಗದ ರೀತಿಯಲ್ಲಿ ಅದು ದುಪ್ಪಟ್ಟುಗೊಳ್ಳುತ್ತಾ ತನ್ನ ಫಲಿತಾಂಶವನ್ನು ನೀಡುತ್ತದೆ.

ಕೊನೆಯ ಫಲಿತಾಂಶ ಅಥವಾ ಎಂಡ್ ರಿಸಲ್ಟ್ ಎಂದು ನಾವು ಏನನ್ನು ಕರೆಯುತ್ತೇವೋ ಅದು ಆಕಸ್ಮಿಕವಾಗಿರಲು ಸಾಧ್ಯವಿಲ್ಲ. ಅದು ನಿಗದಿತ ಕೆಲಸವನ್ನು ಪದೇ ಪದೆ, ನಿಗದಿತ ಫಲಿತಾಂಶ ಸಿಗುವವರೆಗೆ ಬೇಸರವಿಲ್ಲದೆ ಮಾಡುವ ಕ್ರಿಯೆ. ಈ ಸಾಲುಗಳನ್ನು ಮನನ ಮಾಡಿಕೊಳ್ಳುವುದು ಉತ್ತಮ. ಬೇಕಿದ್ದಲ್ಲಿ ಇದನ್ನು ಬರೆದು ಓದುವ ಕೋಣೆಯಲ್ಲಿ, ಕಂಪ್ಯೂಟರ್ ಮೇಲೆ, ಫ್ರಿಜ್ ಮೇಲೆ ಎಲ್ಲಾದರೂ ಸರಿಯೇ ನಿತ್ಯವೂ ಕಣ್ಣಿಗೆ ಕಾಣಿಸುವಂತೆ ಅಂಟಿಸಿಕೊಳ್ಳುವುದು ಕೂಡ ಮಾಡಬಹುದು. ನಿತ್ಯವೂ ಹತ್ತಾರು ಬಾರಿ ಇದನ್ನು ಓದುವುದರಿಂದ ಅದು ಮನಸ್ಸಿಗೆ ಹೆಚ್ಚು ನಾಟುತ್ತದೆ. ಈಗ ನೀವೇ ಪ್ರಶ್ನಿಸಿಕೊಂಡು ನೋಡಿ, ಹಿಡಿದ ಕೆಲಸದಲ್ಲಿ ಬಯಸಿದ ಫಲಿತಾಂಶ ಸಿಗದೆ ಹೋದರೆ ನಾವು ನಿರಾಶರಾಗುತ್ತೇವೆ. ಇದರ ಸಹವಾಸ ಸಾಕು ಎಂದು ಬೇರೊಂದು ಪ್ರಯತ್ನಕ್ಕೆ ಕೈಹಾಕುತ್ತೇವೆ ಅಲ್ಲವೇ? ಉತ್ತರದಲ್ಲಿ ಪ್ರಾಮಾಣಿಕತೆಯಿರಲಿ. ಇದರಲ್ಲಿ ನಾಚಿಕೆ ಪಟ್ಟುಕೊಳ್ಳುವಂಥದ್ದು ಏನಿಲ್ಲ. ಜಗತ್ತಿನ 99 ಪ್ರತಿಶತ ಜನ ಮಾಡುವುದು ಇದನ್ನೇ! ನಾವು 99ರಿಂದ 1 ಪ್ರತಿಶತ ಜನರಲ್ಲಿ ಒಬ್ಬರಾಗಬೇಕು ಎಂದರೆ ನಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು. ಸುಲಭವಾಗಿ ಎಲ್ಲವನ್ನೂ ಬಿಟ್ಟು ಮುಂದೆ ಹೋಗುವುದು ಉತ್ತಮ ಲಕ್ಷಣವಲ್ಲ. ಹಿಡಿದ ಕೆಲಸವು ಬಯಸಿದ ಫಲಿತಾಂಶವನ್ನು ಕೊಡುವವರೆಗೆ ದುಡಿಯಬೇಕು. ದಣಿವಿನಲ್ಲೂ ದೃಢತೆ ಕಳೆದುಕೊಳ್ಳಬಾರದು.

ನಾವು ಪ್ರತಿ ಕೆಲಸವನ್ನು ಶುರುಮಾಡಲು ಒಂದು ಕಾರಣವಿರುತ್ತದೆ. ಆ ಕಾರಣದ ಸಲುವಾಗಿ ನಾವು ಮಾಡುವ ಕೆಲಸವು ಫಲವನ್ನು ನೀಡುತ್ತದೆ. ಫಲಿತಾಂಶ ಯಾವಾಗಲೂ ನಾವು ಬಯಸಿದಂತೆಯೇ ಇರಬೇಕು ಎನ್ನುವಂತಿಲ್ಲ. ನಾವು ಬಯಸಿದ ಫಲಿತಾಂಶ ಸಿಕ್ಕರೆ ನಮ್ಮ ಸಿದ್ಧತೆ ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಪ್ರೋಸೆಸ್ ಸರಿಯಾಗಿದೆ ಎಂದರ್ಥ. ಅದಿಲ್ಲದೆ ವ್ಯತಿರಿಕ್ತ ಫಲಿತಾಂಶ ಬಂದಿದ್ದರೆ, ನಮ್ಮ ಕೆಲಸದಲ್ಲಿ, ನಮ್ಮ ಪ್ರೋಸೆಸ್‌ನಲ್ಲಿ ಏನೋ ಎಡವಟ್ಟಾಗಿದೆ ಎಂದರ್ಥ. ಹೀಗಾಗಿ ಫಲಿತಾಂಶ ಏನೇ ಇರಲಿ ಅದು ಆಕ್ಸಿಡೆಂಟ್ ಅಲ್ಲ. ಅಚಾನಕ್ಕಾಗಿ ಏನೂ ಆಗುವುದಿಲ್ಲ. ಅದು ಒಂದಲ್ಲ ಹತ್ತಾರು ಸೂಚನೆಗಳನ್ನು ಕೊಟ್ಟಿರುತ್ತದೆ.

ಆದರೆ ನಾವು ಅದನ್ನು ಅರಿತುಕೊಳ್ಳುವಲ್ಲಿ ಸೋತಿರುತ್ತೇವೆ. ಹಾಗೆ ನೋಡಲು ಹೋದರೆ ಆಕ್ಸಿಡೆಂಟ್ ಅಥವಾ ಅಪಘಾತ ಕೂಡ ನಿಜಾರ್ಥದಲ್ಲಿ ಅಪಘಾತವಲ್ಲ. ಅದು ಕೂಡ ಸೂಚನೆ ಕೊಟ್ಟಿರುತ್ತದೆ. ನಿದ್ದೆ ಬರುತ್ತಿದ್ದರೂ ಡ್ರೈವ್ ಮಾಡುವುದು, ಮಿತಿಮೀರಿದ ವೇಗ, ಅಥವಾ ಮೆಕ್ಯಾನಿಕ್ ನಿಮ್ಮ ವಾಹನವು ದೂರ ಪ್ರಯಾಣಕ್ಕೆ ಯೋಗ್ಯವಲ್ಲ ಎಂದಿರುವುದು ಹೀಗೆ ಹಲವಾರು ಸೂಚನೆಗಳನ್ನು ನಿರ್ಲಕ್ಷಿಸಿ ವಾಹನ ಚಾಲನೆ ಮಾಡಿ ಅಪಘಾತಕ್ಕೆ ತುತ್ತಾದರೆ ಅದನ್ನು ಅಪಘಾತ ಎನ್ನುವುದು ಹೇಗೆ? ಗೊತ್ತಿಲ್ಲದೇ ಆಗುವುದು ಆಕ್ಸಿಡೆಂಟ್ ಎನ್ನಿಸುತ್ತದೆ. ಮುಕ್ಕಾಲು ಪಾಲು ಫಲಿತಾಂಶಗಳು ಆಕ್ಸಿಡೆಂಟ್ ಆಗಿರುವುದಿಲ್ಲ.

ಮನುಷ್ಯನ ಚಿಂತನೆಗಳಿಗೆ ಅಗಾಧ ಶಕ್ತಿಯಿದೆ. ಅದು ಬೇಕಾದ್ದನ್ನು ಸೃಷ್ಟಿಸುವ ಅಥವಾ ನಾಶಮಾಡುವ ಶಕ್ತಿಯನ್ನು ಖಂಡಿತ ಹೊಂದಿದೆ. ನಮಗೇನೂ ಬೇಡ ಎಂದು ಕುಳಿತುಕೊಳ್ಳುವ ಚಿಂತನೆ ಕೂಡ

ಅದರದೇ ಆದ ಸನ್ನಿವೇಶವನ್ನು ಸೃಷ್ಟಿಸುತ್ತದೆ. ಹೀಗಾಗಿ ನಾವು ಚಲನೆಯಲ್ಲಿರಲಿ ಅಥವಾ ಜಡತ್ವವನ್ನು ಒಪ್ಪಿಕೊಂಡಿರಲಿ ಎರಡೂ ಬೇರೆ ಬೇರೆ ರೀತಿಯ ಫಲಿತಾಂಶವನ್ನು ನೀಡುತ್ತವೆ. ನಮ್ಮ ಚಿಂತನೆಯು ನಮ್ಮನ್ನು ಸಮಾಜದಲ್ಲಿ ಉನ್ನತಿಯ ಕಡೆಗೂ, ಅವನತಿಯ ಕಡೆಗೂ ಕರೆದೊಯ್ಯುವ ಶಕ್ತಿಯನ್ನು ಹೊಂದಿವೆ. ಇಷ್ಟೆಲ್ಲಾ ಹೇಳುವುದಕ್ಕೆ ಕಾರಣ ಕೆಳಗಿನ ಸಾಲುಗಳಲ್ಲಿವೆ.

ಕೆಲಸಕ್ಕಾಗಿ ಬೆಂಗಳೂರಿನ ಬೀದಿ ಬೀದಿಗಳನ್ನು ಅಲೆದಿದ್ದೇನೆ. ಕೆಲಸಕ್ಕೆ ಅರ್ಜಿ ಹಾಕಿದ ಕಡೆಯಿಂದ ಇಂಟರ್ವ್ಯೂಗೆ ಕರೆ ಬಂದರೆ ಖುಷಿಯಾಗುತ್ತಿತ್ತು. ಏಕೆಂದರೆ ಹತ್ತರಲ್ಲಿ ನಾಲ್ಕೈದು ಕಡೆಯಿಂದ ಮಾತ್ರ ಕರೆ ಬರುತ್ತಿತ್ತು. ಸಂದರ್ಶನದಲ್ಲಿ ನಪಾಸು ಆಗುವುದು ಕೂಡ ಸಾಮಾನ್ಯವಾಗಿತ್ತು. ಯಾರೂ ಕಾರಣ ಹೇಳುತ್ತಿರಲಿಲ್ಲ. ಆದರೆ ಕೆಲಸ ಮಾತ್ರ ಯಾರೂ ಕೊಡಲಿಲ್ಲ. ಅದೊಂದು ದಿನ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯಿಂದ ಸಂದರ್ಶನಕ್ಕೆ ಕರೆ ಬಂದಿತ್ತು. ಬಹಳ ಖುಷಿಯಿಂದ, ಶ್ರದ್ಧೆಯಿಂದ, ಸಂದರ್ಶನದಲ್ಲಿ ಏನೆಲ್ಲಾ ಕೇಳಬಹುದು ಎನ್ನುವುದನ್ನು ಊಹಿಸಿಕೊಂಡು ಅದಕ್ಕೆ ತಯಾರಿ ಮಾಡಿಕೊಂಡು ಹೋಗಿದ್ದೆ. ಜಪಾನಿಯರ ಬಗ್ಗೆ ಕೂಡ ಒಂದಷ್ಟು ತಿಳಿದುಕೊಂಡು ಹೋಗಿದ್ದೆ. ಸಂದರ್ಶಕರು ಜಪಾನಿಯರು ಆಗಿರಬಹುದು ಎನ್ನುವ ಊಹೆ ಕೂಡ ಮಾಡಿಕೊಂಡಿದ್ದೆ. ನನ್ನ ಊಹೆ ನಿಜವಾಗಿತ್ತು. ಜಪಾನಿಯರು ಸಂದರ್ಶನಕ್ಕೆ ಕುಳಿತಿದ್ದರು. ಜಗತ್ತಿನ ಅರಿವಿಲ್ಲದ ವಯಸ್ಸದು. ಮೆಜೆಸ್ಟಿಕ್, ಎಂಜಿ ರಸ್ತೆ ನೋಡಿರದ ಬದುಕು. ಅವರು ಕೇಳಿದಕ್ಕೆ ಸರಿಯಾಗಿ ಉತ್ತರಿಸುವುದು ದೂರದ ಮಾತು, ಏನು ಕೇಳುತ್ತಿದ್ದಾರೆ ಎನ್ನುವುದೇ ಅರ್ಥವಾಗಲಿಲ್ಲ. ಫಲಿತಾಂಶ ಹೇಳಬೇಕಾಗಿಲ್ಲ ಎಂದುಕೊಳ್ಳುವೆ. ರಿಜೆಕ್ಷನ್ ಎನ್ನುವುದು ಈ ವೇಳೆಗೆ ಅಭ್ಯಾಸವಾಗಿ ಹೋಗಿಬಿಟ್ಟಿತ್ತು. ‘ಪರವಾಗಿಲ್ಲ’ ಎನ್ನುವ ಎಲ್ಲಾ ಸಂಸ್ಥೆಗಳಲ್ಲೂ ನನ್ನನ್ನು ತಿರಸ್ಕರಿಸಿದ್ದರು.

ಮಲ್ಲೇಶ್ವರಂನಿಂದ ಯಶವಂತಪುರದ ಕಡೆಗೆ ನಡೆಯುತ್ತಾ ನನಗೆ ಗೊತ್ತಿಲ್ಲದೆ ಕಣ್ಣಲ್ಲಿ ನೀರು ಹರಿಯುತ್ತಿತ್ತು. ಎಲ್ಲಾ ಸಿರಿವಂತರೂ ನೆಟ್‌ವರ್ಕ್ ಸೃಷ್ಟಿಸಿಕೊಂಡಿರುತ್ತಾರೆ ಮತ್ತು ಅಲ್ಲಿ ತಮ್ಮ ವಂಶದ ಕುಡಿಗಳಿಗೆ ಹೆಚ್ಚಿನ ಅವಕಾಶ ಕೊಡುತ್ತಾರೆ; ಹೀಗಾಗಿ ನಾವೆಷ್ಟೇ ಪ್ರಯತ್ನ ಪಟ್ಟರೂ ನಮಗೆ ಅವರಿಗೆ ಸಿಕ್ಕಿದ ಅವಕಾಶ ಸಿಕ್ಕುವುದಿಲ್ಲ ಎನ್ನುವುದನ್ನು ಬಲವಾಗಿ ನಂಬಿದ್ದೆ. ಬದುಕಿನಲ್ಲಿ ಅಂದುಕೊಂಡ ಯಾವ ಕಾರ್ಯವೂ ಸುಗಮವಾಗಿ ಆಗುತ್ತಿರಲಿಲ್ಲ. ಇದೆಲ್ಲದರ ಜತೆಗೆ ಮನೆಯಲ್ಲಿ ಬಡತನವೂ ಇದ್ದರೆ ಕೀಳರಿಮೆ ಎನ್ನುವುದು ಬಹುಬೇಗ ಮನಸ್ಸಿನ ಮೇಲೆ ನಿಯಂತ್ರಣವನ್ನು ಸಾಧಿಸಿಬಿಡುತ್ತದೆ. ಹೀಗೆ ವಿಶ್ವಾಸವಿಲ್ಲದ ಮನಸ್ಸಿಗೆ ಹೇಳುವ ಯಾವ ಧನಾತ್ಮಕ ಮಾತುಗಳೂ ರುಚಿಸುವುದಿಲ್ಲ. ಬದಲಿಗೆ ಹಾಗೆ ಹೇಳಿದವರ ಮೇಲೂ ವೃಥಾ ಕೋಪ ಬರುತ್ತದೆ. ನದಿಯನ್ನು ದಾಟಿ ಆ ಬದಿಗೆ ನಿಂತ ಮೇಲೆ ಈ ರೀತಿ ಬುದ್ಧಿ ಹೇಳುವುದು ಸುಲಭ ಎಂದು ಬುದ್ಧಿ ಹೇಳಿದವರ ಕುರಿತು ಕೂಡ ನಾವು ಕೇವಲವಾಗಿ ಮಾತನಾಡುತ್ತೇವೆ. ಈಗ ನಿಮ್ಮ ಪರಿಸ್ಥಿತಿ ಹೀಗಿದ್ದರೆ ಅದಕ್ಕೆ ಬೇಸರ ಪಟ್ಟುಕೊಳ್ಳಬೇಡಿ. ಮೊದಲೇ ಹೇಳಿದಂತೆ ನನ್ನ ಬದುಕಿನ ಪ್ರಥಮ 23 ವರ್ಷ ನಾನೂ ಕೂಡ ಇದೆ ರೀತಿಯ ಮನಸ್ಥಿತಿ ಹೊಂದಿದ್ದೆ! ಈ ರೀತಿಯ ಮನಸ್ಥಿತಿ ಹೊಂದಿದ್ದರೆ ಅದು ನಿಮ್ಮ ತಪ್ಪಲ್ಲ. ನಮಗೆ ಆದ ಅನುಭವದ ಆಧಾರದ ಮೇಲೆ ನಾವು ಬದುಕನ್ನು ವಿವರಿಸುತ್ತಾ ಹೋಗುತ್ತೇವೆ.

ಮಲ್ಲೇಶ್ವರಂ ಮತ್ತು ಯಶವಂತಪುರದ ಮಧ್ಯದಲ್ಲಿ ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಆಫೀಸ್ ಕಣ್ಣಿಗೆ ಕಂಡಿತು. ಆ ಸಂಸ್ಥೆಯ ಹೆಸರು ಇಂದಿಗೂ ನನ್ನ ನೆನಪಲ್ಲಿ ಭದ್ರವಾಗಿದೆ. ಇವತ್ತಿಗೆ ಹೆಸರು ಬೇಕಿಲ್ಲ. ಘಟನೆ ಹೇಳುತ್ತೇನೆ. ಆ ಆಫೀಸ್ ಎದುರು ‘ಆಡಿಟ್ ಅಸಿಸ್ಟೆಂಟ್ಸ್ ಬೇಕಾಗಿದ್ದಾರೆ’ ಎಂದು ಬೋರ್ಡ್ ತೂಗುಹಾಕಿದ್ದರು. ಅದನ್ನು ಕಂಡು ಒಳಹೋಗಿದ್ದೆ. ಅವತ್ತಿಗೆ ನಾನು 140 ಕೆ.ಜಿ. ತೂಗುತ್ತಿದ್ದೆ. ನನ್ನ ಡ್ರೆಸ್ಸಿಂಗ್ ಸೆನ್ಸ್ ಆ ದೇವರಿಗೇ ಪ್ರೀತಿ! ನನ್ನ ಸರ್ಟಿಫಿಕೇಟ್ ನೋಡಿ, ‘‘ಇದು ನಿನ್ನದೇನು?’’ ಎಂದು ಪ್ರಶ್ನಿಸಿದರು. ಹೌದು ಎಂದದ್ದಕ್ಕೆ, ಒಂದೆರಡು ಪ್ರಶ್ನೆ ಕೇಳಿದರು. ಗೊತ್ತಿದ್ದಷ್ಟು ಉತ್ತರಿಸಿದೆ. ಆದರೂ ಅವರಿಗೆ ಸಮಾಧಾನವಾಗಲಿಲ್ಲ. ಇಂಗ್ಲಿಷ್ ಪತ್ರಿಕೆಯನ್ನು ನನ್ನ ಕೈಗಿಟ್ಟು, ಹತ್ತಾರು ಸಾಲು ಓದಲು ಹೇಳಿದರು. ಯಾವ ಪ್ರತಿಷ್ಠಿತ ಸಂಸ್ಥೆಗಳು ಕೂಡ ನನಗೆ ಕೆಲಸ ಕೊಡುತ್ತಿರಲಿಲ್ಲ, ಕಾರಣ ಕೂಡ ಹೇಳುತ್ತಿರಲಿಲ್ಲ, ಏಕೆ ಎನ್ನುವುದು ಅವರು ಕೈಗೆ ಇಂಗ್ಲಿಷ್ ಪತ್ರಿಕೆ ಇಟ್ಟಕ್ಷಣ ನನಗೆ ಅರಿವಾಯ್ತು. ನನ್ನ ದೇಹಭಾಷೆ ಮತ್ತು ನನ್ನ ವಿದ್ಯಾಭ್ಯಾಸದ ಸರ್ಟಿಫಿಕೇಟ್ ಹೊಂದಾಣಿಕೆ ಯಾಗುತ್ತಿರಲಿಲ್ಲ! ಇಂಗ್ಲಿಷ್ ಪತ್ರಿಕೆಯನ್ನು ಚೆನ್ನಾಗಿ ಓದಿದೆ. ಆತ ನನಗೆ ಕೆಲಸ ಆಫರ್ ನೀಡಿದರು. ಅವರು ಹೇಳಿದ ವೇತನ ನನಗೆ ತುಂಬಾ ಕಡಿಮೆ ಎನ್ನಿಸಿ ಬೇಡ ಎಂದು ಹೊರಬಂದಿದ್ದೆ! ಕೆಲಸಗಳು ಸಿಗದೆ ರಿಜೆಕ್ಷನ್ ಅನುಭವಿಸಿದ್ದ ನಾನು, ಸಿಕ್ಕ ಕೆಲಸವನ್ನು ರಿಜೆಕ್ಟ್ ಮಾಡಿದ್ದೆ. ಇವತ್ತಿಗೆ ಆ ನನ್ನ ನಿರ್ಧಾರ ನೆನಪಿಸಿಕೊಂಡು ಹೆಮ್ಮೆ ಎನ್ನಿಸುತ್ತದೆ. ಅವತ್ತು ಆ ಕೆಲಸಕ್ಕೆ ನಾನು ಅಡ್ಜಸ್ಟ್ ಮಾಡಿಕೊಂಡಿದ್ದರೆ?

ನಮ್ಮ ಬದುಕಿನಲ್ಲಿ ಯಾವುದೂ ನಾವೆಂದುಕೊಂಡಂತೆ ಆಗುತ್ತಿಲ್ಲ ಎಂದರೆ, ಅದು ಹೊಸ ಬದುಕಿಗೆ ನಮ್ಮನ್ನು ಸಜ್ಜು ಮಾಡುತ್ತಿದೆ ಎಂದರ್ಥ. ಭಾರತದಲ್ಲಿ ಅನ್ನ ಹುಟ್ಟಿಸಿಕೊಳ್ಳುವ ಭಾಗ್ಯ ಅಂದಿಗೆ ನನಗೆ ಇರಲಿಲ್ಲ. ಆದರೆ ಅದು ಗೊತ್ತಾಗುವುದಾದರೂ ಹೇಗೆ? ಅಂದಿನ ವಯಸ್ಸಿನಲ್ಲಿ ಒಂದಲ್ಲ ಹತ್ತಾರು ಗುರುಗಳನ್ನು ಭೇಟಿ ಮಾಡಿದ್ದೆ. ತಿಳಿದವರು ಅನ್ನಿಸಿದವರನ್ನೆಲ್ಲಾ ಮಾತನಾಡಿಸಿದ್ದೆ. ಇನ್ನಷ್ಟು ಸಂಶಯ ಹೆಚ್ಚಾಗಿ ನೊಂದುಕೊಂಡಿದ್ದೆ. ಇಂಥ ಬದುಕನ್ನು ನನಗೇಕೆ ಕೊಟ್ಟೆ ಭಗವಂತ ಎಂದು ದೇವರನ್ನು ಕೂಡ ಬಯ್ದುಕೊಂಡಿದ್ದೆ! ಸಹಜವಾಗೇ ಎಲ್ಲರಿಗೂ ಆಗುವಂತೆ ನನಗೂ ಯಶಸ್ವಿಯಲ್ಲದ ಅಪ್ಪನ ಬಗ್ಗೆ ಬೇಸರ ಕೂಡ ಹುಟ್ಟಿತ್ತು. ಈತ ತನ್ನ ವೇಳೆಯನ್ನು ಸರಿಯಾಗಿ ದುಡಿಸಿಕೊಂಡಿದ್ದರೆ? ನನಗೆ ಇಂಥ ಕಷ್ಟ ಬರುತ್ತಿರಲಿಲ್ಲ ಎನ್ನುವ ಸ್ವಾನುಕಂಪದಿಂದ ತಾಸುಗಟ್ಟಲೆ ಅತ್ತಿದ್ದೇನೆ.

ನಮ್ಮ ಬದುಕನ್ನು ಬದಲಿಸುವ ದಿವ್ಯಮಂತ್ರ ನಮ್ಮ ಬಳಿಯಿದೆ. ಯಾವ ಗುರುವೂ ನೀಡಲಾಗದ ಉಪದೇಶವನ್ನು ಕೂಡ ನಮ್ಮ ಮನಸ್ಸು ನಮಗೆ ನೀಡಬಲ್ಲದು ಎನ್ನುವುದರ ಅರಿವು ನಮಗಾಗಬೇಕು. ಅದಾಗುವವರೆಗೂ ಬದುಕು ಜಾಳು ಜಾಳು. ಬ್ರಿಟಿಷರು ನಮ್ಮಲ್ಲಿ ಅವರ ಶಿಕ್ಷಣದ ಮೂಲಕ ಒಂದಂಶವನ್ನು ಬಹಳವಾಗಿ ತಲೆಯಲ್ಲಿರಿಸಿ ಹೋಗಿದ್ದಾರೆ. ವಂಶವಾಹಿನಿಯಿಂದ ಬರುವುದು ಕೇವಲ ಕಾಯಿಲೆಗಳು ಎನ್ನುವುದು ಆ ಅಂಶ. ಕಾಯಿಲೆಗಳು ಬರುತ್ತವೆ ಎನ್ನುವುದು ನಿಜ. ಅದರ ಜತೆಗೆ ಸುಪ್ತವಾಗಿರುವ ಅನೇಕ ಶಕ್ತಿಗಳು ಕೂಡ ಬಂದಿರುತ್ತವೆ. ನಾವು ನಮ್ಮ ಬಗ್ಗೆ ಅಂದುಕೊಂಡದ್ದಕಿಂತ ಹೆಚ್ಚಿನ ಬಲಶಾಲಿಗಳೂ, ಬುದ್ಧಿವಂತರೂ ಆಗಿದ್ದೇವೆ ಎನ್ನುವುದರ ಅರಿವಾಗುವುದಿಲ್ಲ. ಆದರೆ ಇದು ನಿಜ. ಕೇವಲ ರಿಜೆಕ್ಷನ್‌ಗಳನ್ನು ಕಂಡಿದ್ದ ಬದುಕಿನಲ್ಲಿ ಪ್ರಥಮ ಬಾರಿಗೆ ಸಿಕ್ಕ ಕೆಲಸವನ್ನು ರಿಜೆಕ್ಟ್ ಮಾಡಿದ್ದು ಒಂದು ರೀತಿಯಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿತು.

ಬದುಕು ನನಗಾಗಿ ಒಂದು ಬದುಕನ್ನು ಹೆಣೆಯುತ್ತಿತ್ತು. ಇದರ ಅರಿವಿಲ್ಲದ ನಾನು, ನನ್ನ ಸೋಲಿಗೆ ಕಾರಣವನ್ನು ಕಂಡುಕೊಂಡಿದ್ದೆ. ಹೀಗಾಗಿ ಅವುಗಳನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೆ. ಸಿಕ್ಕ ಕೆಲಸವನ್ನು ರಿಜೆಕ್ಟ್ ಮಾಡಿದ ಒಂದೆರಡು ತಿಂಗಳಲ್ಲಿ ಸಂದರ್ಶನದಲ್ಲಿ ಪಾಸಾಗಿ ದುಬೈ ತಲುಪಿದೆ. ದುಬೈನಲ್ಲಿ ಕೂಡ ಮೂರು ತಿಂಗಳು ಕಳೆಯುವುದರಲ್ಲಿ ಯುರೋಪು ಸೇರಿಕೊಂಡೆ. ಅಂದುಕೊಂಡದ್ದು ಏನೂ ಆಗುತ್ತಿರದ ಬದುಕಿನಲ್ಲಿ ಅಂದುಕೊಳ್ಳದೆ ಬಹಳಷ್ಟು ಬದಲಾವಣೆಗಳು ಆಗ ತೊಡಗಿದವು. ನಮ್ಮ ಸಮಯ ಬರುವವರೆಗೂ ತಾಳ್ಮೆಯಿಂದ ಕಾಯುವುದನ್ನು, ತಪ್ಪುಗಳು ಎನ್ನಿಸಿದರೆ ಅದನ್ನು ತಿದ್ದಿಕೊಳ್ಳುವುದನ್ನು ಮಾತ್ರ ನಿಲ್ಲಿಸಬಾರದು ಎನ್ನುವುದು ಬದುಕು ನನಗೆ ಕಲಿಸಿದ ಪಾಠ. ಇದೇನೋ ನಾನು ಮಹತ್ತರ ಸಾಧಿಸಿದ್ದೇನೆ ಎನ್ನುವುದರ ಬಗ್ಗೆಯಲ್ಲ. ಇವತ್ತಿಗೆ ರಿಜೆಕ್ಷನ್ ಅನುಭವಿಸುತ್ತಿರುವವರಿಗೆ ಸಣ್ಣ ಸಮಾಧಾನ ಸಿಕ್ಕರೆ ಸಾಕು ಎನ್ನುವ ಭಾವನೆ ಅಷ್ಟೇ.

ವರ್ತಮಾನ

ಡಾ. ನಿರಂಜನ ಪೂಜಾರ್

ಎಡಪಂಥೀಯರ ನೂತನ ಅಸ್ತ್ರ

ಆಫ್ರಿಕಾದ ಆಡುಭಾಷೆಯಲ್ಲಿ ‘ವೋಕ್’ (Woke) ಎಂಬ ಶಬ್ದವು ಆರಂಭದಲ್ಲಿ ಕೇವಲ ಸಾಮಾಜಿಕ ಜಾಗೃತಿಗೆ ಸೀಮಿತವಾಗಿತ್ತು. ಆದರೆ, ಸಮಕಾಲೀನ ರಾಜಕೀಯ ಪಡಸಾಲೆಯಲ್ಲಿ ‘ವೋಕಿಸಂ’ ಎಂಬುದು ತನ್ನ ಅರ್ಥವನ್ನೇ ಬದಲಿಸಿಕೊಂಡಿದೆ. ಅದೀಗ ಜಗತ್ತಿನ ಮೇಲೆ ಪ್ರಭುತ್ವ ಸಾಧಿಸಲು ಶತಮಾನಗಳಿಂದಲೂ ನಡೆಯುತ್ತಿರುವ ಯುದ್ಧದ ಅತ್ಯಂತ ಅಪಾಯಕಾರಿ ಮತ್ತು ಮಾರಕ ಆಯುಧವಾಗಿ ರೂಪಾಂತರಗೊಂಡಿದೆ. ಇದು ದೇಶದ ಗಡಿಗಳಲ್ಲಿ ನಡೆಯುವ ಯುದ್ಧವಲ್ಲ; ನಾಗರಿಕತೆಯ ಅಸ್ಮಿತೆ, ಕುಟುಂಬ ವ್ಯವಸ್ಥೆ ಮತ್ತು ವ್ಯಕ್ತಿಯ ಆಲೋಚನಾಲಹರಿಯ ಮೇಲೆ ನಡೆಯುತ್ತಿರುವ ‘ಐದನೇ ತಲೆಮಾರಿನ ಯುದ್ಧ’.

ಜಗತ್ತಿನ ಮೇಲೆ ಏಕಚಕ್ರಾಧಿಪತ್ಯ ಸಾಧಿಸಬೇಕೆಂಬ ದಾಹ ಇಂದಿನದಲ್ಲ. ರೋಮನ್ ಸಾಮ್ರಾಜ್ಯವು ಖಡ್ಗ ಮತ್ತು ಕಾನೂನಿನ ಮೂಲಕ ಇದನ್ನು ಸಾಧಿಸಲು ಯತ್ನಿಸಿತು. ಅಬ್ರಹಾಮಿಕ್ ಮತಗಳು ‘ಕ್ರುಸೇಡ್’ ಮತ್ತು ‘ಜಿಹಾದ್’ಗಳ ಮೂಲಕ ಧಾರ್ಮಿಕ ಸಾಮ್ರಾಜ್ಯಶಾಹಿಯನ್ನು ವಿಸ್ತರಿಸಿದವು. ತದನಂತರದ ಶತಮಾನಗಳಲ್ಲಿ ಯುರೋಪಿನ ವಸಾಹತುಶಾಹಿಗಳು ವ್ಯಾಪಾರದ ಮೂಲಕ ಜಗತ್ತನ್ನು ಲೂಟಿ ಮಾಡಿದವು. ಇವೆಲ್ಲವೂ ಭೌತಿಕ ಯುದ್ಧಗಳಾಗಿದ್ದವು. ಆದರೆ, 17ರಿಂದ 20ನೇ ಶತಮಾನದ ಅವಧಿಯಲ್ಲಿ ಯುದ್ಧದ ಸ್ವರೂಪ ಬದಲಾಯಿತು. ಜಾತ್ಯತೀತತೆ, ಜ್ಞಾನೋದಯ ಮತ್ತು ಬಂಡವಾಳಶಾಹಿಗಳಂಥ ಸಿದ್ಧಾಂತಗಳು ಹುಟ್ಟಿಕೊಂಡವು. ಇವೆಲ್ಲದರ ನಡುವೆ, ಸಮಾಜವನ್ನು ಆಮೂಲಾಗ್ರವಾಗಿ ಒಡೆಯಲು ಜನ್ಮತಾಳಿದ ಅತ್ಯಂತ ಪ್ರಬಲ ಸಿದ್ಧಾಂತವೇ ‘ಕಮ್ಯುನಿಸಂ’ (ಸಮತಾವಾದ). ಸೋವಿಯತ್ ಒಕ್ಕೂಟದ ಪತನದೊಂದಿಗೆ ಕಮ್ಯುನಿಸಂ ಸತ್ತಿತು ಎಂದು ಜಗತ್ತು ಭಾವಿಸಿತು. ಆದರೆ ವಾಸ್ತವದಲ್ಲಿ ಅದು ಸಾಯಲಿಲ್ಲ, ರೂಪಾಂತರಗೊಂಡಿತು. ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮತ್ತು ಪ್ರಜಾಪ್ರಭುತ್ವವನ್ನು ಕೆಡವಲು ಅದು 3 ಹಂತಗಳಲ್ಲಿ ದಾಳಿ ನಡೆಸಿತು.

ಕಮ್ಯುನಿಸಂನ ಮೊದಲ ಹಂತವು ಶಾಸ್ತ್ರೀಯ ಮಾರ್ಕ್ಸ್‌ವಾದವಾಗಿತ್ತು. ಸಮಾಜದ ಆರ್ಥಿಕ ಬುನಾದಿಯನ್ನು ನಾಶಪಡಿಸುವುದು ಇದರ ಏಕೈಕ ಗುರಿ. ಶ್ರಮಜೀವಿಗಳು ಮತ್ತು ಬಂಡವಾಳಶಾಹಿಗಳ ನಡುವೆ ರಕ್ತಸಿಕ್ತ ಕ್ರಾಂತಿಯನ್ನು ಪ್ರಚೋದಿಸುವ ಮೂಲಕ ಅಧಿಕಾರ ಹಿಡಿಯುವ ತಂತ್ರವಿದು. ರಷ್ಯಾ ಮತ್ತು ಚೀನಾದಂಥ ರಾಷ್ಟ್ರಗಳಲ್ಲಿ ಇದು ಯಶಸ್ವಿಯಾಯಿತು.

ಆದರೆ, ಅಮೆರಿಕ ಮತ್ತು ಯುರೋಪ್‌ನಲ್ಲಿ ಈ ತಂತ್ರ ವಿಫಲವಾಯಿತು. ಕಾರಣ, ಅಲ್ಲಿನ ಬಂಡವಾಳಶಾಹಿ ವ್ಯವಸ್ಥೆ ಮತ್ತು ಬಲವಾದ ಸ್ಥಳೀಯ ಸಂಸ್ಕೃತಿಯು ಜನಸಾಮಾನ್ಯರಿಗೆ ಉತ್ತಮ ಜೀವನಮಟ್ಟವನ್ನು ನೀಡಿತ್ತು. ಹೊಟ್ಟೆ ತುಂಬಿದ ಕಾರ್ಮಿಕರು ಕ್ರಾಂತಿಗೆ ಸಿದ್ಧರಿರಲಿಲ್ಲ. ಹೀಗಾಗಿ, ಎಡಪಂಥೀಯ ಬುದ್ಧಿಜೀವಿಗಳು ಯುದ್ಧದ ಹಾದಿಯನ್ನು ಬದಲಿಸಲು ನಿರ್ಧರಿಸಿದರು.

ಆರ್ಥಿಕವಾಗಿ ಸಮಾಜವನ್ನು ಒಡೆಯಲು ಸಾಧ್ಯವಾಗದಿದ್ದಾಗ, ಎಡಪಂಥೀಯರು ಗುರಿ ಇಟ್ಟಿದ್ದು ಸಂಸ್ಕೃತಿಯ ಮೇಲೆ. ಇದನ್ನೇ ಸಾಂಸ್ಕೃತಿಕ ಮಾರ್ಕ್ಸ್‌ವಾದ ಎಂದು ಕರೆಯಲಾಗುತ್ತದೆ. ಫ್ರಾಂಕ್‌ಫರ್ಟ್ ಶಾಲೆಯ ಚಿಂತಕರು ರೂಪಿಸಿದ ಈ ತಂತ್ರದ ಪ್ರಕಾರ, ಒಂದು ದೇಶವನ್ನು ಸೋಲಿಸಬೇಕಾದರೆ ಅದರ ಸೇನೆಯನ್ನು ಸೋಲಿಸಬೇಕಿಲ್ಲ; ಬದಲಾಗಿ ಆ ದೇಶದ ಜನರಿಗೆ ತಮ್ಮದೇ ಇತಿಹಾಸ, ಧರ್ಮ ಮತ್ತು ಪರಂಪರೆಯ ಬಗ್ಗೆ ಕೀಳರಿಮೆ ಮೂಡುವಂತೆ ಮಾಡಿದರೆ ಸಾಕು. ವಿಶ್ವವಿದ್ಯಾಲಯಗಳು, ಮಾಧ್ಯಮ ಮತ್ತು ಮನರಂಜನಾ ಕ್ಷೇತ್ರಗಳನ್ನು ವಶಪಡಿಸಿಕೊಳ್ಳುವ ಮೂಲಕ, ಅವರು ವರ್ಗ ಹೋರಾಟದ ಬದಲಿಗೆ ಗುರುತಿನ ರಾಜಕಾರಣವನ್ನು ಮುನ್ನೆಲೆಗೆ ತಂದರು. ಸ್ತ್ರೀವಾದ, ಜಾತಿ ಮತ್ತು ಪ್ರಗತಿಪರತೆಯ ಮುಖವಾಡ ಧರಿಸಿ ಸ್ಥಳೀಯ ಸಂಸ್ಕೃತಿಯನ್ನು ಅವಹೇಳನ ಮಾಡುವುದು ಇವರ ದಿನನಿತ್ಯದ ಕಾಯಕವಾಯಿತು.

ನಾವೀಗ ಕಮ್ಯುನಿಸಂನ ಅತ್ಯಂತ ವಿನಾಶಕಾರಿ ಹಂತದಲ್ಲಿದ್ದೇವೆ. ಆರ್ಥಿಕತೆ ಮತ್ತು ಸಂಸ್ಕೃತಿಯನ್ನು ನಿಯಂತ್ರಿಸಿದ ನಂತರ, ಎಡಪಂಥೀಯ ಸಿದ್ಧಾಂತಕ್ಕೆ ಉಳಿದಿರುವ ಏಕೈಕ ತಡೆಗೋಡೆ ಎಂದರೆ ಕುಟುಂಬ ವ್ಯವಸ್ಥೆ. ಕುಟುಂಬವು ನಾಗರಿಕತೆಯ ಮೂಲ ಘಟಕ. ಎಲ್ಲಿಯವರೆಗೆ ಕುಟುಂಬ ವ್ಯವಸ್ಥೆ ಭದ್ರವಾಗಿರುತ್ತದೆಯೋ, ಅಲ್ಲಿಯವರೆಗೆ ವ್ಯಕ್ತಿಯು ತನ್ನ ಪೋಷಕರಿಗೆ ಮತ್ತು ಪೂರ್ವಜರಿಗೆ ನಿಷ್ಠನಾಗಿರುತ್ತಾನೆ ಹೊರತು ಪ್ರಭುತ್ವಕ್ಕಲ್ಲ. ಈ ಕಾರಣಕ್ಕಾಗಿಯೇ ‘ವೋಕಿಸಂ’ ಕುಟುಂಬವನ್ನು ಗುರಿಯಾಗಿಸಿಕೊಂಡಿದೆ. ಇದಕ್ಕಾಗಿ ಅವರು ಲಿಂಗತ್ವ ಮತ್ತು ಲೈಂಗಿಕತೆಯನ್ನು ಅಸ್ತ್ರವಾಗಿ ಬಳಸುತ್ತಿದ್ದಾರೆ. ಗಂಡು-ಹೆಣ್ಣು ಎಂಬುದು ನೈಸರ್ಗಿಕವಲ್ಲ, ಅದು ಕೇವಲ ಸಾಮಾಜಿಕ ಕಲ್ಪನೆ ಎಂಬ ಅವೈಜ್ಞಾನಿಕ ವಾದವನ್ನು ಮಕ್ಕಳ ತಲೆಯಲ್ಲಿ ತುಂಬಲಾಗುತ್ತಿದೆ. ಪೋಷಕರ ವಿರೋಧವನ್ನೂ ಲೆಕ್ಕಿಸದೆ ಮಕ್ಕಳು ತಮ್ಮ ಲಿಂಗ ಬದಲಾವಣೆಗೆ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಪ್ರಚೋದಿಸಲಾಗುತ್ತಿದೆ. ಇದು ತಂದೆ-ತಾಯಿ ಮತ್ತು ಮಕ್ಕಳ ನಡುವಿನ ಸಂಬಂಧವನ್ನು ಶಾಶ್ವತವಾಗಿ ನಾಶಮಾಡುವ ಹುನ್ನಾರ. ಛಿದ್ರಗೊಂಡ ಕುಟುಂಬಗಳು ಮತ್ತು ಗೊಂದಲಕ್ಕೀಡಾದ ಯುವ ಪೀಳಿಗೆಯನ್ನು ಆಳುವುದು ಜಾಗತಿಕ ಶಕ್ತಿಗಳಿಗೆ ಅತ್ಯಂತ ಸುಲಭ.

ಎಲ್ಲಿ ಬಂದೂಕುಗಳು ಮತ್ತು ಆರ್ಥಿಕ ಸಿದ್ಧಾಂತಗಳು ಸೋತವೋ, ಅಲ್ಲಿ ‘ವೋಕಿಸಂ’ ಗೆದ್ದಿದೆ. ಅಮೆರಿಕ ಮತ್ತು ಯುರೋಪ್‌ಗಳಲ್ಲಿ ಸಾಂಪ್ರದಾಯಿಕ ಕಮ್ಯುನಿಸಂ (ಆರ್ಥಿಕ ಮಾರ್ಕ್ಸ್‌ವಾದ) ನೆಲಕಚ್ಚಿತ್ತು; ಆದರೆ ಇಂದು ಅದೇ ರಾಷ್ಟ್ರಗಳು ‘ಸಾಂಸ್ಕೃತಿಕ ಮಾರ್ಕ್ಸ್‌ವಾದ’ದ ಮುಂದೆ ಮಂಡಿಯೂರಿವೆ. ಅಲ್ಲಿನ ಸಮಾಜವನ್ನು ನಿಯಂತ್ರಿಸುತ್ತಿರುವುದು ಈಗ ಸರಕಾರಗಳಲ್ಲ, ಬದಲಾಗಿ Politically Correct ಎಂದು ಹಠ ಹಿಡಿಯುವ ಸಣ್ಣ ಉಗ್ರಗಾಮಿ ಸಿದ್ಧಾಂತವಾದಿಗಳ ಗುಂಪುಗಳು. ಅಮೆರಿಕದಲ್ಲಿ ಇಂದು ಗಂಡು ಹೆಣ್ಣಾಗಲು ಸಾಧ್ಯವಿಲ್ಲ ಎಂಬ ನಗ್ನಸತ್ಯವನ್ನು ಹೇಳಿದರೆ ಸಾಕು, ಆ ವ್ಯಕ್ತಿ ತನ್ನ ಕೆಲಸವನ್ನೇ ಕಳೆದುಕೊಳ್ಳುತ್ತಾನೆ. ಇದಕ್ಕೆ ಅವರು ಇಟ್ಟಿರುವ ಹೆಸರೇ ‘ಕ್ಯಾನ್ಸಲ್ ಕಲ್ಚರ್’. ಅಲ್ಲಿನ ಬಹುಸಂಖ್ಯಾತರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಭಯಪಡುವ ವಾತಾವರಣ ನಿರ್ಮಾಣವಾಗಿದೆ. ಲಿಂಗಅಲ್ಪಸಂಖ್ಯಾತ ಅಸ್ಮಿತೆಯ ಗುಂಪುಗಳು, ಭಾವನಾತ್ಮಕತೆಯನ್ನೇ ಬಂಡವಾಳವನ್ನಾಗಿಸಿಕೊಂಡು, ಮಾಧ್ಯಮ ಮತ್ತು ಶಿಕ್ಷಣ ಸಂಸ್ಥೆಗಳ ಮೂಲಕ ಇಡೀ ಸಮಾಜದ ನೈತಿಕತೆಯನ್ನು ನಿಯಂತ್ರಿಸುತ್ತಿವೆ. ಹೀಗೆ, ಯುದ್ಧವಿಲ್ಲದೆಯೇ ಪಾಶ್ಚಿಮಾತ್ಯ ನಾಗರಿಕತೆ ಒಳಗಿನಿಂದಲೇ ಕುಸಿಯುತ್ತಿದೆ.

ಇಂದು ಈ ಸೈದ್ಧಾಂತಿಕ ಯುದ್ಧವನ್ನು ನಡೆಸುತ್ತಿರುವುದು ಕೇವಲ ಬೀದಿ ಹೋರಾಟಗಾರರಲ್ಲ; ಜಗತ್ತಿನ ಬೃಹತ್ ಕಾರ್ಪೊರೇಟ್ ಕಂಪನಿಗಳು ಈ ಯುದ್ಧದ ರೂವಾರಿಗಳು. ಪ್ರಜಾಪ್ರಭುತ್ವವಾದಿ ಸಮಾಜವಾದ, ಸುಸ್ಥಿರ ಅಭಿವೃದ್ಧಿ ಗುರಿಗಳು ಮುಂತಾದ ಸುಂದರ ಹೆಸರುಗಳ ಅಡಿಯಲ್ಲಿ ವಿನಾಶಕಾರಿ ನೀತಿಗಳನ್ನು ಜಾರಿಗೊಳಿಸಲಾಗುತ್ತಿದೆ. ESG (ಪರಿಸರ, ಸಾಮಾಜಿಕ ಮತ್ತು ಆಡಳಿತ)- ಇದೊಂದು ರೀತಿಯಲ್ಲಿ ಕಂಪನಿಗಳಿಗೆ ನೀಡುವ ನಡವಳಿಕೆಯ ಅಂಕಪಟ್ಟಿ. ಯಾವ ಕಂಪನಿಯು ‘ವೋಕ್’ ಅಜೆಂಡಾವನ್ನು ಬೆಂಬಲಿಸುವುದಿಲ್ಲವೋ, ಅದಕ್ಕೆ ಬಂಡವಾಳ ಹೂಡಿಕೆ ಸಿಗುವುದಿಲ್ಲ. ಇದು ಮುಕ್ತ ಮಾರುಕಟ್ಟೆಯ ಕುತ್ತಿಗೆ ಹಿಸುಕುವ ತಂತ್ರ. DEI (ವೈವಿಧ್ಯತೆ, ಸಮಾನತೆ ಮತ್ತು ಸೇರ್ಪಡೆ)- ಸಮಾನತೆಯ ಹೆಸರಿನಲ್ಲಿ, ಅರ್ಹತೆ ಮತ್ತು ದಕ್ಷತೆಯನ್ನು ಬದಿಗಿಟ್ಟು, ಕೇವಲ ಜಾತಿ, ಲಿಂಗ ಮತ್ತು ಅಸ್ಮಿತೆಯ ಆಧಾರದ ಮೇಲೆ ಹುದ್ದೆಗಳನ್ನು ನೀಡುವ ವ್ಯವಸ್ಥೆ ಇದಾಗಿದೆ. ಇದು ಸಂಸ್ಥೆಗಳ ಗುಣಮಟ್ಟವನ್ನು ಕುಸಿಯುವಂತೆ ಮಾಡುತ್ತದೆ ಮತ್ತು ಸಮಾಜದಲ್ಲಿ ಹೊಸ ರೀತಿಯ ಅಸಮಾನತೆಯನ್ನು ಸೃಷ್ಟಿಸುತ್ತದೆ. ವೋಕಿಸಂ ಕೇವಲ ಒಂದು ಪಾಶ್ಚಿಮಾತ್ಯ ಟ್ರೆಂಡ್ ಅಲ್ಲ; ಅದೊಂದು ಜಾಗತಿಕ ಪಿಡುಗು. ರಾಷ್ಟ್ರಗಳ ಸಾರ್ವಭೌಮತ್ವವನ್ನು ನಾಶಪಡಿಸಿ, ಇತಿಹಾಸವಿಲ್ಲದ, ಧರ್ಮವಿಲ್ಲದ ಮತ್ತು ಕುಟುಂಬವಿಲ್ಲದ ‘ಜಾಗತಿಕ ಪ್ರಜೆ’ಗಳನ್ನು ಸೃಷ್ಟಿಸುವುದು ಇದರ ಅಂತಿಮ ಉದ್ದೇಶ.

ಭಾರತದಂಥ ಸನಾತನ ಸಂಸ್ಕೃತಿಯುಳ್ಳ ರಾಷ್ಟ್ರಕ್ಕೆ ಇದು ಬಲುದೊಡ್ಡ ಸವಾಲು. ನಮ್ಮ ಕುಟುಂಬ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದು, ನಮ್ಮ ಪರಂಪರೆಯನ್ನು ಗೌರವಿಸುವುದು ಮತ್ತು ಈ ‘ನಕಲಿ ಪ್ರಗತಿಪರ’ ಸಿದ್ಧಾಂತಗಳ ಹಿಂದಿರುವ ರಾಜಕೀಯ ಹುನ್ನಾರವನ್ನು ಅರ್ಥಮಾಡಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ. ಸಮಾಜವು ಈಗಲಾದರೂ ಮೌನ ಮುರಿದು, ಈ ಬೌದ್ಧಿಕ ಆಕ್ರಮಣದ ವಿರುದ್ಧ ಧ್ವನಿ ಎತ್ತದಿದ್ದರೆ, ಮುಂದಿನ ಪೀಳಿಗೆ ತನ್ನತನವನ್ನು ಕಳೆದುಕೊಂಡು ಪಶ್ಚಿಮದಂತೆ ದಾಸ್ಯಕ್ಕೆ ಜಾರುವುದರಲ್ಲಿ ಅನುಮಾನವಿಲ್ಲ.

(ಲೇಖಕರು ಕೇಂದ್ರೀಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು)

ಅಪಾಯದಲ್ಲಿ ಢೋಂಗಿ ಜಾತ್ಯತೀತರ ವೋಟುಬ್ಯಾಂಕ್

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು ಪಶ್ಚಿಮ ಬಂಗಾಳದ ಬೆಹರಾಮ್‌ಪುರ ಲೋಕಸಭಾ ಕ್ಷೇತ್ರದಿಂದ 1999ರಿಂದ 2019ರವರೆಗೆ ಐದು ಬಾರಿ ಆಯ್ಕೆಯಾಗಿದ್ದವರು. 2019ರಲ್ಲಿ ಲೋಕಸಭೆಯ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕರಾಗಿದ್ದವರು. ಇವರು ಪ್ರತಿನಿಧಿಸುತ್ತಿದ್ದ ಬೆಹರಾಮ್‌ಪುರ ಕ್ಷೇತ್ರದಲ್ಲಿ ಶೇ.70ರಷ್ಟು ಮುಸ್ಲಿಂ ಮತದಾರರು, ಅಂದರೆ ಇಲ್ಲಿನ ಚುನಾವಣಾ ಗೆಲುವಿನಲ್ಲಿ ಮುಸ್ಲಿಮರ ಮತಗಳೇ ನಿರ್ಣಾಯಕ.

ಮಮತಾ ಬ್ಯಾನರ್ಜಿಯವರ ಕಟುಟೀಕಾಕಾರರಾಗಿದ್ದ ಅಧೀರ್ ರಂಜನ್‌ರನ್ನು 2024ರ ಲೋಕಸಭಾ ಚುನಾವಣೆಯಲ್ಲಿ ಸೋಲಿಸಲು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ಕ್ರಿಕೆಟಿಗ ಯೂಸಫ್ ಪಠಾಣ್‌ಗೆ ಟಿಕೆಟ್ ನೀಡಿತು. ಯೂಸಫ್ ಪಠಾಣ್ ಅವರು ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೋಲ್ಕತಾ ನೈಟ್‌ರೈಡರ್ಸ್ ತಂಡದ ಪರವಾಗಿ ಆಡಿದವರು ಕೂಡ. ಮೊದಲ ಬಾರಿಗೆ ರಾಜಕೀಯಕ್ಕೆ ಪದಾರ್ಪಣೆ ಮಾಡಿದ್ದ ಈ ಯೂಸಫ್ ಪಠಾಣ್, ತಾವೊಬ್ಬ ಅಪ್ಪಟ ಜಾತ್ಯತೀತವಾದಿ ಎಂದು ಬೀಗುತ್ತಿದ್ದ ಅಧೀರ್ ರಂಜನ್ ಚೌಧರಿಯವರನ್ನು ಪರಾಭವಗೊಳಿಸಿದರು. ಐದು ಬಾರಿ ‘ಕೈ’ ಪಕ್ಷದ ಕೈಹಿಡಿದಿದ್ದ ಮುಸ್ಲಿಂ ಮತದಾರರು, ಟಿಎಂಸಿಯಿಂದ ಯೂಸಫ್ ಪಠಾಣ್ ಸ್ಪರ್ಧೆ ಮಾಡಿದ ಕೂಡಲೇ ತಮ್ಮ ಆಯ್ಕೆಯನ್ನೂ ಬದಲಾಯಿಸಿದರು.

ಮುಸ್ಲಿಂ ಮತದಾರರ ಒಲವು, ಜಡ್ಡುಗಟ್ಟಿರುವ ಜಾತ್ಯತೀತ ಪಕ್ಷಗಳಿಂದ ವಿಮುಖವಾಗಿ ಮೂಲಭೂತವಾದವನ್ನು ಪ್ರತಿನಿಧಿಸುವ ಪಕ್ಷದತ್ತ ವಾಲುತ್ತಿರುವ ಆತಂಕದ ಬೆಳವಣಿಗೆಯ ಆರಂಭವಾಗಿದೆ ಬೆಹರಾಮ್‌ಪುರ ಕ್ಷೇತ್ರದಲ್ಲಿನ ಈ ಗೆಲುವು. ಮಹಾರಾಷ್ಟ್ರದ 29 ನಗರಪಾಲಿಕೆಗಳ ಚುನಾವಣೆಯಲ್ಲಿ ಅಲ್ಪಸಂಖ್ಯಾತ ಮತದಾರರ ಬದಲಾಗುತ್ತಿರುವ ಪ್ರವೃತ್ತಿ ಇದಕ್ಕೆ ತಾಜಾ ಉದಾಹರಣೆ. ಮುಂಬೈ ಮಹಾನಗರ ಪಾಲಿಕೆಯ ಈ ಬಾರಿಯ ಚುನಾವಣೆಯಲ್ಲಿ ಅಲ್ಪಸಂಖ್ಯಾತರ ಮೊದಲ ಆಯ್ಕೆಯು ಕಾಂಗ್ರೆಸ್ ಅಥವಾ ಸಮಾಜವಾದಿ ಪಾರ್ಟಿ ಆಗಿರಲಿಲ್ಲ; ಮುಸ್ಲಿಂ ನಾಯಕತ್ವದ ಪಕ್ಷಗಳಾದ ‘ಇಂಡಿಯನ್ ಸೆಕ್ಯುಲರ್ ಲಾರ್ಜೆಸ್ಟ್ ಅಸೆಂಬ್ಲಿ ಆಫ್ ಮಹಾರಾಷ್ಟ್ರ ಪಾರ್ಟಿ’ (ಇಸ್ಲಾಂ ಪಾರ್ಟಿ) ಮತ್ತು ಓವೈಸಿ ಅವರ ‘ಆಲ್ ಇಂಡಿಯಾ ಮಜ್ಲಿಸ್-ಎ-ಇತ್ತೆಹಾದುಲ್ ಮುಸ್ಲಿಮೀನ್’ (ಎಐಎಂಐಎಂ) ಪಕ್ಷಗಳ ಕಡೆಗೆ ಅವರು ಒಲವು ತೋರಿದರು.

ಶೇ.80ರಷ್ಟು ಅಲ್ಪಸಂಖ್ಯಾತರಿರುವ ಮುಂಬ್ರಾ-ಕಲ್ವಾ ವಿಧಾನಸಭಾ ಕ್ಷೇತ್ರವನ್ನು ಎನ್‌ಸಿಪಿ ಶಾಸಕ ಜಿತೇಂದ್ರ ಅವಧ್ ಅವರು ಕಳೆದ ಎರಡು ದಶಕಗಳಿಂದ ಪೋಷಿಸುತ್ತಿದ್ದರು. ತಮ್ಮ ಮತಬ್ಯಾಂಕ್ ಅನ್ನು ಗಟ್ಟಿಪಡಿಸಿಕೊಳ್ಳಲು ತಮ್ಮ ಜಾತ್ಯತೀತ ನೀತಿಯನ್ನು ಪ್ರಖರವಾಗಿ ತೋರ್ಪಡಿಸಿ, ಹಿಂದೂಗಳನ್ನು ಅವಹೇಳನ ಮಾಡಿ ತಮ್ಮ ಮತಬ್ಯಾಂಕ್‌ಗೆ ಖುಷಿ ಕೊಡುತ್ತಿದ್ದರು. ರಾಮಮಂದಿರದ ಬಗ್ಗೆ ಕೇವಲವಾಗಿ ಮಾತನಾಡುವುದಕ್ಕೂ ಅವರು ಹಿಂಜರಿಯಲಿಲ್ಲ, ಗುಜರಾತಿನಲ್ಲಿ ಪೊಲೀಸರ ಎನ್‌ಕೌಂಟರ್‌ನಲ್ಲಿ ಮೃತಪಟ್ಟ, ಲಷ್ಕರ್ ಗುಂಪಿಗೆ ಸೇರಿದ್ದ ಇಶ್ರತ್ ಜಹಾನ್ ಎಂಬ ಭಯೋತ್ಪಾದಕಿಯನ್ನು ಬೆಂಬಲಿಸಲೂ ಹೇಸಲಿಲ್ಲ. ಇಂಥ ಜಿತೇಂದ್ರ ಅವಧ್, ತಮ್ಮ ಮೂವತ್ತು ವರ್ಷಗಳ ಸ್ನೇಹಿತ ಯೂನಸ್ ಶೇಖ್‌ರ ಮಗಳಿಗೆ ಮತ್ತು ಅವರ ಬೆಂಬಲಿಗರಿಗೆ ಪಾಲಿಕೆಯ ಚುನಾವಣೆಗೆ ಟಿಕೆಟ್ ಅನ್ನು ನಿರಾಕರಿಸಿದಾಗ, ಜಿತೇಂದ್ರರ ವಿರುದ್ಧವೇ ಬಂಡಾಯವೆದ್ದು ‘ಎಐಎಂಐಎಂ’ ಪಕ್ಷದ ಟಿಕೆಟ್ ಪಡೆದು ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರು. ಜಿತೇಂದ್ರ ಅವಧ್‌ರ ಮುಂಬ್ರಾ-ಕಲ್ವಾ ಕ್ಷೇತ್ರದ ಆರು ವಾರ್ಡ್‌ಗಳ ಪೈಕಿ ಆಷ್ಟರಲ್ಲೂ ‘ಎಐಎಂಐಎಂ’ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದರು. ಈ ಪೈಕಿ ಯೂನಸ್ ಶೇಖ್ ಮಗಳಾದ ಸೆಹರ್ ಶೇಖ್ ಸಾಧಿಸಿದ ಗೆಲುವು ಭರ್ಜರಿಯಾಗಿತ್ತು. ಪಾಪ! ತಮ್ಮ ಮತಬ್ಯಾಂಕ್ ಅನ್ನು ಕಾಪಾಡಿಕೊಳ್ಳಲು ಇನ್ನಿಲ್ಲದ ಕಸರತ್ತು ಮಾಡುತ್ತಿದ್ದ ಅವಧ್‌ರವರ ತುಷ್ಟೀಕರಣ ರಾಜಕಾರಣವು ಅವರ ಸಹಾಯಕ್ಕೆ ಬರಲೇ ಇಲ್ಲ. ಅಲ್ಪಸಂಖ್ಯಾತರ ಮತಗಳಿಗಾಗಿ ಹಿಂದೂಗಳನ್ನು ಟೀಕಿಸಿ ಅವರಿಂದಲೂ ದೂರವಾಗಿದ್ದ ಅವಧ್‌ರವರು, ಈಗ ಮುಸ್ಲಿಂ ಮತಗಳೂ ಇಲ್ಲವಾಗಿ ಅತಂತ್ರ ಸ್ಥಿತಿಯನ್ನು ತಲುಪಿದ್ದಾರೆ.

ಪಾಲಿಕೆ ಚುನಾವಣೆ ಗೆದ್ದಿರುವ ಸೆಹರ್ ಶೇಖ್ ತಮ್ಮ ಗೆಲುವನ್ನು ಸಂಭ್ರಮಿಸುತ್ತಾ, ‘‘ಮುಂದಿನ ಐದು ವರ್ಷದಲ್ಲಿ ಇಡೀ ಮುಂಬ್ರಾ ಕ್ಷೇತ್ರವನ್ನು ಹಸಿರುಮಯ ಮಾಡುತ್ತೇವೆ. ಮುಂದಿನ ಐದು ವರ್ಷದಲ್ಲಿ ಮುಂಬ್ರಾದ ಎಲ್ಲಾ ಕ್ಷೇತ್ರಗಳು ನಮ್ಮ ‘ಮಜ್ಲಿಸ್ ಪಾರ್ಟಿ’ಯ ಪಾಲಾಗಬೇಕು’’ ಎಂದು ಅಬ್ಬರಿಸಿದರು. ಈಕೆಯ ಆಕ್ರಮಣಕಾರಿ ನಿಲುವು ವೈರಲ್ ಆಗಿ, ತಮ್ಮ ಹೇಳಿಕೆಯ ಬಗ್ಗೆ ಆಕೆ ಸ್ಪಷ್ಟೀಕರಣ ಕೊಡಬೇಕಾಗಿ ಬಂತು. ಹಸಿರು ಬಳಿಯುವುದಾಗಿ ಸೆಹರ್ ಶೇಖ್ ಅವರೇನೋ ಹೇಳಿಕೊಂಡಿದ್ದಾರೆ, ಆದರೆ ಮಹಾರಾಷ್ಟ್ರದಲ್ಲಿರುವುದು ಬಿಜೆಪಿಯ ಸರಕಾರ ಎಂಬುದನ್ನು ಅವರು ಮರೆತಹಾಗೆ ಕಾಣುತ್ತದೆ!

ಮಹಾರಾಷ್ಟ್ರದ ಮಾಲೇಗಾಂವ್ ನಗರಪಾಲಿಕೆಯಲ್ಲಿ ಎನ್‌ಸಿಪಿಯ ಮಾಜಿ ಶಾಸಕ ಆಸಿಫ್ ಶೇಖ್ ಹೊಸದಾಗಿ ಆರಂಭಿಸಿರುವ ರಾಜಕೀಯ ಪಕ್ಷದ ಹೆಸರು ‘ಇಂಡಿಯನ್ ಸೆಕ್ಯುಲರ್ ಲಾರ್ಜೆಸ್ಟ್ ಅಸೆಂಬ್ಲಿ ಆಫ್ ಮಹಾರಾಷ್ಟ್ರ ಪಾರ್ಟಿ’ ಅಥವಾ ISLAM PARTY; ತಮ್ಮ ಪಕ್ಷದ ಹೆಸರಲ್ಲಿ ‘ಇಸ್ಲಾಂ’ ಎಂಬ ಶಬ್ದ ಬರಬೇಕು ಎಂಬ ಏಕೈಕ ಕಾರಣಕ್ಕೆ ಇಂಥ ಅಸಂಬದ್ಧ ಹೆಸರನ್ನು ಇಟ್ಟುಕೊಂಡು ಮೊದಲ ಬಾರಿ ಚುನಾವಣಾ ಕಣಕ್ಕಿಳಿದ ಮಹಾಶಯರು ಇವರು. ಈ ಪಕ್ಷವು 35 ಸ್ಥಾನದಲ್ಲಿ ಜಯಗಳಿಸಿದ್ದರೆ, ಅಸಾದುದ್ದೀನ್ ಓವೈಸಿ ಅವರ ‘ಎಐಎಂಐಎಂ’ ಪಕ್ಷ 21 ಸ್ಥಾನಗಳನ್ನು ಗಳಿಸಿದೆ. ಈ ಹಿಂದೆ ಮಾಲೇಗಾಂವ್‌ನಲ್ಲಿ ಕಾಂಗ್ರೆಸ್ ಮತ್ತು ಸಮಾಜವಾದಿ ಪಾರ್ಟಿಗಳ ಪ್ರಾಬಲ್ಯವಿತ್ತು; ಆದರೆ ಮುಸ್ಲಿಂ ನೇತೃತ್ವದ ಈ ಎರಡೂ ಪಕ್ಷಗಳು ಸ್ಪರ್ಧೆಮಾಡಿದ ಕೂಡಲೇ ಕಾಂಗ್ರೆಸ್ ಮತ್ತು ಸಮಾಜವಾದಿ ಪಾರ್ಟಿಗಳನ್ನು ಮುಸ್ಲಿಂ ಮತದಾರರು ನೆಲ ಕಚ್ಚಿಸಿದ್ದಾರೆ.

ಈಗ ‘ಸಂಭಾಜಿ ನಗರ’ ಅಂತ ಮರುನಾಮಕರಣಗೊಂಡಿರುವ ಕ್ಷೇತ್ರವು ಹಿಂದೆ ‘ಔರಂಗಾಬಾದ್’ ಎಂದು ಕರೆಸಿಕೊಳ್ಳುತ್ತಿತ್ತು. ಇಲ್ಲಿನ 115 ಸೀಟುಗಳಲ್ಲಿ ಕಾಂಗ್ರೆಸ್ ಗೆದ್ದಿರುವುದು ಕೇವಲ ಒಂದೇ ಸೀಟು; ಆದರೆ ‘ಎಐಎಂಐಎಂ’ ಪಕ್ಷವು 33 ಸೀಟುಗಳನ್ನು ಗೆದ್ದಿದೆ. ಅಲ್ಲಿಗೆ, ಮುಸ್ಲಿಂ ಬಾಹುಳ್ಯವಿರುವ ಕ್ಷೇತ್ರಗಳಲ್ಲಿ ಅವರ ಆಯ್ಕೆಯು ‘ಮುಸ್ಲಿಂ ನೇತೃತ್ವದ ಪಕ್ಷ’ವೇ ಆಯಿತೇ ಹೊರತು, ಕಾಂಗ್ರೆಸ್-ಎನ್‌ಸಿಪಿ ಆಗಲಿಲ್ಲ. ಈ ಮೊದಲು ಸಮಾಜವಾದಿ ಪಾರ್ಟಿಯು ಅಲ್ಪಸಂಖ್ಯಾತ ಸಮುದಾಯದ ಮೊದಲ ಆಯ್ಕೆಯಾಗಿತ್ತು. ಮುಸ್ಲಿಂ ನಾಯಕತ್ವದ ಪಕ್ಷಗಳು ಸ್ಪರ್ಧೆ ಮಾಡಿದ ಕೂಡಲೇ, ಈ ಸಮುದಾಯದವರ ಆಯ್ಕೆ ಬದಲಾಗಿ, ಮತವೆಲ್ಲಾ ನೇರವಾಗಿ ‘ಇಸ್ಲಾಂ ಪಾರ್ಟಿ’, ‘ಎಐಎಂಐಎಂ’ ಪಕ್ಷಗಳ ಪಾಲಾಯಿತು!

ಮುಂಬೈ ಪಾಲಿಕೆಯಲ್ಲಿ ಕಾಂಗ್ರೆಸ್ 24 ಸೀಟುಗಳನ್ನು ಗೆದ್ದಿದ್ದು, ಅದರಲ್ಲಿ 14 ಸ್ಥಾನಗಳಲ್ಲಿರುವುದು ಮುಸ್ಲಿಂ ಅಭ್ಯರ್ಥಿಗಳೇ ಆಗಿದ್ದಾರೆ. ಎಲ್ಲಿ ಮುಸ್ಲಿಂ ಪಕ್ಷದ ಆಯ್ಕೆ ಇಲ್ಲವೋ ಅಲ್ಲಿ

ಮಾತ್ರ ಕಾಂಗ್ರೆಸ್‌ಗೆ ಅಥವಾ ಉದ್ಧವ್ ಠಾಕ್ರೆ ಬಣದ ಶಿವಸೇನೆಗೆ ಈ ಸಮುದಾಯದವರು ಮತ ನೀಡಿದ್ದಾರೆ. 2017ರಲ್ಲಿ ನಡೆದ ಮಹಾರಾಷ್ಟ್ರದ ನಗರಪಾಲಿಕೆಯ ಚುನಾವಣೆಯಲ್ಲಿ ಓವೈಸಿಯವರ ಪಕ್ಷವು 84 ಸ್ಥಾನಗಳಲ್ಲಿ ಜಯಗಳಿಸಿತ್ತು. 2026ರಲ್ಲಿ ಅದೀಗ 124 ಸ್ಥಾನಕ್ಕೆ ಏರಿದೆ. ಇದರರ್ಥ, ಢೋಂಗಿ ಜಾತ್ಯತೀತವಾದಿಗಳು ತಮ್ಮ ರಾಜಕೀಯ ಲಾಭಕ್ಕೆ ಅಲ್ಪಸಂಖ್ಯಾತರನ್ನು ಬಳಕೆ ಮಾಡಿಕೊಳ್ಳುವ ಪರಿಪಾಠಕ್ಕೆ ಅಂತ್ಯಕಾಲ ಸನ್ನಿಹಿತವಾಗಿ, ಧರ್ಮದ ಆಧಾರದ ಮೇಲೆ ಧ್ರುವೀಕರಣವಾಗುವ ಅಪಾಯಕಾರಿ ಪ್ರವೃತ್ತಿಗೆ ಅದು ದಾರಿಮಾಡಿಕೊಟ್ಟಿದೆ.

ಮುಸಲ್ಮಾನರು ಕಾಂಗ್ರೆಸ್ ಅಥವಾ ಸಮಾಜವಾದಿ ಪಕ್ಷವನ್ನು ತಿರಸ್ಕರಿಸಿ, ಓವೈಸಿ ಅವರ ಪಕ್ಷವನ್ನು ಅಥವಾ ‘ಇಸ್ಲಾಂ ಪಾರ್ಟಿ’ಯನ್ನು ಬೆಂಬಲಿಸುವುದು ತಪ್ಪೇನಲ್ಲ; ಆದರೆ ಕಾಂಗ್ರೆಸ್ ನಾಯಕರು ವಿಧಾನಸಭಾ ಚುನಾವಣೆಯಲ್ಲಿ ‘ಎಐಎಂಐಎಂ’ ಪಕ್ಷವನ್ನು, ‘‘ಇದು ಬಿಜೆಪಿಯ ‘ಬಿ’ ಟೀಮ್; ಇದು ಕೇವಲ ಮುಸ್ಲಿಂ ಮತಗಳನ್ನು ಒಡೆದು ಬಿಜೆಪಿಗೆ ಪರೋಕ್ಷವಾಗಿ ಬೆಂಬಲಿಸುತ್ತಿದೆಯಷ್ಟೇ’’ ಎಂದು ಆರೋಪಿಸುತ್ತಿದ್ದರು. ಪರಿಸ್ಥಿತಿ ಬದಲಾಗಿ ಮೂರಂಕಿ ದಾಟಿರುವ ಓವೈಸಿಯವರ ‘ಎಐಎಂಐಎಂ’ ಪಕ್ಷವು ಮುಂದಿನ ಎಲ್ಲಾ ಚುನಾವಣೆಗಳಲ್ಲಿ ಅಲ್ಪಸಂಖ್ಯಾತರ ಪ್ರಾಬಲ್ಯವಿರುವ ಕ್ಷೇತ್ರಗಳಿಂದ ಸ್ಪರ್ಧಿಸಿ, ಢೋಂಗಿ ಜಾತ್ಯತೀತ ಪಕ್ಷಗಳ ನಿದ್ರೆಗೆಡಿಸುವುದಂತೂ ಖಚಿತ!

ಬಿಹಾರದ ವಿಧಾನಸಭಾ ಚುನಾವಣೆಯ ಫಲಿತಾಂಶವು ಢೋಂಗಿಗಳಿಗೆ ಎಚ್ಚರಿಕೆಯ ಗಂಟೆಯಾಗಿತ್ತು. ಇದರಲ್ಲಿ ಕಾಂಗ್ರೆಸ್ 6 ಸ್ಥಾನದಲ್ಲಿ ಗೆದ್ದರೆ ‘ಎಐಎಂಐಎಂ’ ಪಕ್ಷ 5 ಸ್ಥಾನದಲ್ಲಿ ಗೆದ್ದಿತ್ತು. ಬಿಹಾರದಲ್ಲಿಯೂ, ಅಲ್ಪಸಂಖ್ಯಾತರ ಮತಗಳ ಪ್ರಾಬಲ್ಯವಿದ್ದ ಕ್ಷೇತ್ರಗಳಲ್ಲಿ ಮುಸ್ಲಿಮರ ಮೊದಲ ಆಯ್ಕೆ ಓವೈಸಿಯವರ ಪಕ್ಷವಾಯಿತೇ ವಿನಾ ಕಾಂಗ್ರೆಸ್ ಆಗಲಿಲ್ಲ. ಅತಿರೇಕವೆಂಬಷ್ಟರ ಮಟ್ಟಿಗೆ ಅಲ್ಪಸಂಖ್ಯಾತರ ತುಷ್ಟೀಕರಣ ಮಾಡಿ, ಹಿಂದೂಗಳ ಧ್ವನಿಯನ್ನೇ ಉಡುಗಿಸಿದ್ದ ಕಾಂಗ್ರೆಸ್ ಪಕ್ಷವು ಮುಸ್ಲಿಂ ಮತದಾರರಿಂದ ದೂರವಾಗುತ್ತಿದೆ. ಇದರ ಲಾಭವು ‘ಇಸ್ಲಾಂ ಪಾರ್ಟಿ’ ಅಥವಾ ‘ಎಐಎಂಐಎಂ’ ಪಕ್ಷಗಳಿಗೆ ದಕ್ಕುತ್ತಿದೆ. ದುರಂತವೆಂದರೆ, ಕಾಂಗ್ರೆಸ್‌ಗಾಗಲೀ ಅಥವಾ ಸಮಾಜವಾದಿ ಪಕ್ಷಕ್ಕಾಗಲೀ ಇದು ಅರ್ಥವಾಗುತ್ತಿಲ್ಲ!

ಮಹಾರಾಷ್ಟ್ರ ಪಾಲಿಕೆಯ ಚುನಾವಣೆಯ ಯಶಸ್ಸು ‘ಎಐಎಂಐಎಂ’ ಅಥವಾ ಮುಸ್ಲಿಂ ನೇತೃತ್ವದ ಪಕ್ಷಗಳಿಗೆ ಮಾದರಿಯಾಗುತ್ತದೆ. ಕರ್ನಾಟಕದಲ್ಲಿಯೂ ಎಸ್‌ಡಿಪಿಐ ಪಾರ್ಟಿ ಮುಸ್ಲಿಂ ಬಾಹುಳ್ಯವಿರುವ ಕ್ಷೇತ್ರಗಳಲ್ಲಿ ಈಗಾಗಲೇ ತಳವೂರುತ್ತಿದೆ. ಬದಲಾಗುತ್ತಿರುವ ಆಯ್ಕೆಯು ಅಲ್ಪಸಂಖ್ಯಾತರ ಮತಗಳ ಮೇಲೆ ಸದಾ ಕಣ್ಣಿಟ್ಟಿರುವ ಕಾಂಗ್ರೆಸ್‌ಗೆ ಮಾರಣಾಂತಿಕ ಬೆಳವಣಿಗೆಯಾಗಿದೆ.

2026ರಲ್ಲಿ ಅಸ್ಸಾಂ ವಿಧಾನಸಭಾ ಚುನಾವಣೆ ನಡೆಯಲಿದೆ. ಇಲ್ಲಿ 30-35 ಕ್ಷೇತ್ರಗಳಲ್ಲಿ ಮುಸ್ಲಿಮರ ಪ್ರಾಬಲ್ಯವಿದೆ. ಪ್ರಸ್ತುತ ಅಲ್ಲಿ ಒಂದೇ ಒಂದು ಪ್ರಬಲವಾದ ಮುಸ್ಲಿಂ ಪಕ್ಷವಿಲ್ಲದಿದ್ದರೂ, ಬದ್ರುದ್ದೀನ್ ಅಜ್ಮಲ್ ನೇತೃತ್ವದ ‘ಆಲ್ ಇಂಡಿಯಾ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್’ (AIUDF) ಪಕ್ಷವು ವಿಶೇಷವಾಗಿ ಕೆಳ ಅಸ್ಸಾಂ ಮತ್ತು ಬರಾಕ್ ಕಣಿವೆಯಲ್ಲಿ ಅನೇಕ ಬಂಗಾಳಿ ಮುಸ್ಲಿಮರನ್ನು (ಮಿಯಾ ಮುಸ್ಲಿಮರು) ಪ್ರತಿನಿಧಿಸುವ ರಾಜಕೀಯ ಶಕ್ತಿಯಾಗಿದ್ದು, ಅಲ್ಪಸಂಖ್ಯಾತರ ಹಿತಾಸಕ್ತಿಗಳ ಮೇಲೆ ಇದು ಗಮನವನ್ನು ಕೇಂದ್ರೀಕರಿಸಿ ಪ್ರಮುಖ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸುತ್ತಿದೆ. ‘ರಾಷ್ಟ್ರೀಯ ಉಲೆಮಾ ಮಂಡಳಿ’ (RUC) 2026ರ ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಯೋಜನೆಯನ್ನು ಪ್ರಕಟಿಸಿದ್ದು, 15 ಜಿಲ್ಲೆಗಳಲ್ಲಿ ಮುಸ್ಲಿಂ ಪ್ರಾಬಲ್ಯದ 30-35 ಸ್ಥಾನಗಳನ್ನು ಗುರಿಯಾಗಿಸಿಕೊಂಡಿದೆ. ಈ ಬಾರಿಯ ಫಲಿತಾಂಶವು ಕಾಂಗ್ರೆಸ್ ಪಕ್ಷದ ಭವಿಷ್ಯದ ಮೇಲೆ ದಟ್ಟ ಪರಿಣಾಮ ಬೀರುವುದು ನಿಶ್ಚಿತ. ಮುಸ್ಲಿಮರ ಪ್ರಾಬಲ್ಯವಿರುವ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋತರೆ ದೇಶವ್ಯಾಪಿಯಾಗಿ ಅದರ ಪರಿಣಾಮವಾಗುವುದರಲ್ಲಿ ಸಂದೇಹ ಬೇಡ.

ಮಹಾರಾಷ್ಟ್ರ ಚುನಾವಣೆಯು ಢೋಂಗಿ ಜಾತ್ಯತೀತ ಪಕ್ಷಗಳಿಗೆ ಪಾಠವಾಗಬೇಕು. ಕೇವಲ ವೋಟಿಗಾಗಿ ಮಾಡುವ ಓಲೈಕೆ ರಾಜಕಾರಣವು ಇನ್ನು ಮುಂದೆ ನಡೆಯುವುದಿಲ್ಲ; ಏಕೆಂದರೆ ಅಲ್ಪಸಂಖ್ಯಾತರು ತಮ್ಮದೇ ನಾಯಕತ್ವದ ಪಕ್ಷದ ಕಡೆಗೆ ಒಲವು ತೋರುತ್ತಿದ್ದಾರೆ. ಹಾಗೆಯೇ, ಜನಸಂಖ್ಯೆಯ ವ್ಯತ್ಯಾಸದಿಂದ ನೆಲಸ್ತರದಲ್ಲಿ ನಮ್ಮ ಮಣ್ಣಿನ ಸಂಸ್ಕೃತಿಯ ಮೇಲಾಗುವ ದುಷ್ಪರಿಣಾಮದ ಬಗ್ಗೆಯೂ ಬಹುಸಂಖ್ಯಾತರಿಗೆ ಜ್ಞಾನೋದಯ ಆಗಬೇಕಿದೆ.

(ಲೇಖಕರು ಬಿಜೆಪಿಯ ವಕ್ತಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 265

ಸಮಾಚಾರ ಸಣ್ಣದಲ್ಲ

ಗಣತಂತ್ರ: ರಾಹುಲ್, ಖರ್ಗೆಗೆ 3ನೇ ಸಾಲಲ್ಲಿ ಸ್ಥಾನ, ಕಾಂಗ್ರೆಸ್ ಕಿಡಿ

ದೆಹಲಿ: ಭಾರತದ 77ನೇ ಗಣರಾಜ್ಯೋತ್ಸವ ಸಮಾರಂಭ ಇದೀಗ ವಿವಾದವೊಂದಕ್ಕೆ ಕಾರಣವಾಗಿದೆ. ಕರ್ತವ್ಯಪಥದಲ್ಲಿ ಸೇನಾ ಪರೇಡ್ ವೀಕ್ಷಿಸಲು ಗಣ್ಯರಿಗೆ ಕಲ್ಪಿಸಿದ್ದ ಆಸನ ವ್ಯವಸ್ಥೆಯಲ್ಲಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆಗೆ ಮೂರನೇ ಸಾಲಿನಲ್ಲಿ ಆಸನ ಕೊಟ್ಟಿರುವುದು ವಿವಾದವನ್ನು ಹುಟ್ಟುಹಾಕಿದೆ. ಇದರಿಂದ ಕೆರಳಿರುವ ಕಾಂಗ್ರೆಸ್, ಮೋದಿ ಸರಕಾರ ಉದ್ದೇಶಪೂರ್ವಕವಾಗಿ ಶಿಷ್ಟಾಚಾರದ ಉಲ್ಲಂಘನೆ ಮಾಡಿದೆ ಎಂದು ಆರೋಪಿಸಿದೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ದೇಶದಲ್ಲಿ ವಿರೋಧ ಪಕ್ಷದ ನಾಯಕರಿಗೆ ಇಂತಹ ವರ್ತನೆ ತೋರುವುದು ಯಾವುದೇ ಸಭ್ಯತೆ, ಸಂಪ್ರದಾಯ ಮತ್ತು ಶಿಷ್ಟಾಚಾರದ ಮಾನದಂಡಗಳನ್ನು ಪೂರೈಸುತ್ತದೆಯೇ? ಇದು ಕೀಳರಿಮೆಯಿಂದ ಬಳಲುತ್ತಿರುವ ಸರಕಾರದ ಹತಾಶೆಯನ್ನು ಮಾತ್ರ ಬಹಿರಂಗಪಡಿಸುತ್ತದೆ ಎಂದು ಕೇಂದ್ರ ಸರಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಔಪಚಾರಿಕ ನಿಯಮದ ಪ್ರಕಾರ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲರು, ಮಾಜಿ ರಾಷ್ಟ್ರಪತಿಗಳು, ಉಪಪ್ರಧಾನಮಂತ್ರಿ, ಸಿಜೆಐ, ಲೋಕ ಸಭೆಯ ಸ್ಪೀಕರ್, ಕ್ಯಾಬಿನೆಟ್ ಮಂತ್ರಿಗಳು, ಮುಖ್ಯ ಮಂತ್ರಿಗಳು, ಮಾಜಿ ಪ್ರಧಾನಿಗಳಿಗೆ, ಆ ಬಳಿಕ ವಿರೋಧ ಪಕ್ಷದ ನಾಯಕರಿಗೆ ಆಸನವನ್ನು ಕೊಡಲಾಗುತ್ತದೆ.

ಮುಂಬೈ ವಿಮಾನ ನಿಲ್ದಾಣದಲ್ಲಿ ಮಲೇಷ್ಯಾ ಪಾತಕಿಗಳ ಸಂಘರ್ಷ

ಮುಂಬೈ: ಇಲ್ಲಿನ ಛತ್ರಪತಿ ಶಿವಾಜಿ ವಿಮಾನನಿಲ್ದಾಣದಲ್ಲಿ ಮಲೇಷ್ಯಾ ಮೂಲದ ದೇಶಭ್ರಷ್ಟ ಭೂಗತ ಪಾತಕಿಗಳು ಶನಿವಾರ ಭದ್ರತಾ ಸಿಬ್ಬಂದಿಯೊಂದಿಗೆ ಭಾರೀ ಸಂಘರ್ಷ ನಡೆಸಿದ್ದಾರೆ. ನವೀಂದ್ರನ್ ರಾಜ್ ಕುಮರಸನ್, ಶ್ರೀಧರನ್ ಸುಬ್ರಮಣಿಯನ್, ಪ್ರತೀಫ್‌ಕುಮಾರ್ ಸೆಲ್ವರಾಜ್‌ರನ್ನು ಬಂಧಿಸಿಡಲಾಗಿದೆ. ಇವರನ್ನು ಮಲೇಷ್ಯಾ ವಶಕ್ಕೆ ತೆಗೆದುಕೊಳ್ಳಲಿದೆ. ಭಾರೀ ಭೂಗತ ಚಟುವಟಿಕೆ ನಡೆಸಿದ್ದ ಅವರನ್ನು ಮಲೇಷ್ಯಾ ಸರಕಾರ ದೇಶಭ್ರಷ್ಟರೆಂದು ಘೋಷಿಸಿತ್ತು. ಅವರು ಮಲೇಷ್ಯಾ ದಾಟಿ ಇಂಗ್ಲೆಂಡ್‌ಗೆ ತಲುಪಿದ್ದರು. ಆದರೆ ಇವರನ್ನು ಪತ್ತೆಹಚ್ಚಿದ ಇಂಗ್ಲೆಂಡ್ ಕೂಡಲೇ ಇವರನ್ನು ಹಾಗಿಂದ ಹಾಗೆಯೇ ಮುಂಬೈಗೆ ಕಳುಹಿಸಿತ್ತು. ಇವರು ಮಲೇಷ್ಯಾದಿಂದ ತಪ್ಪಿಸಿಕೊಂಡು ಮುಂಬೈ ಮೂಲಕ ಇಂಗ್ಲೆಂಡ್ ತಲುಪಿದ್ದು ಇದಕ್ಕೆ ಕಾರಣ.

ಮಸ್ಸೂರಿಯಲ್ಲಿ ದರ್ಗಾ ಧ್ವಂಸ, ಪರಿಸ್ಥಿತಿ ಉದ್ವಿಗ್ನ

ಮಸ್ಸೂರಿ: ಉತ್ತರಾಖಂಡದ ಮಸ್ಸೂರಿಯ ವಿನ್ ಅಲೆನ್‌ಬರ್ಗ್ ಶಾಲೆಯಲ್ಲಿದ್ದ ದರ್ಗಾವೊಂದನ್ನು ಒಡೆ ದುಹಾಕಲಾಗಿದೆ. ಇದರಿಂದ ಪರಿಸ್ಥಿತಿ ಬಿಗುವಿನಿಂದ ಕೂಡಿದೆ. ಒಟ್ಟು 27 ವ್ಯಕ್ತಿಗಳು ಖಾಸಗಿ ಅರಣ್ಯಪ್ರದೇಶಕ್ಕೆ ಸೇರಿದ್ದ ಜಾಗದಲ್ಲಿದ್ದ ದರ್ಗಾಕ್ಕೆ ಹಾನಿ ಮಾಡಿದ್ದಾರೆ. ಈ ಪೈಕಿ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಈ ಜಾಗದಲ್ಲಿ ಯಾವುದೇ ನಿರ್ಮಾಣ ಕಾರ್ಯ ಮಾಡುವಂತಿಲ್ಲವೆಂದು ಹಿಂದೆಯೇ ಹೇಳಲಾಗಿತ್ತು. ಇತ್ತೀಚೆಗೆ ಅರಣ್ಯ ಇಲಾಖೆಯಿಂದ ದರ್ಗಾಕ್ಕೆ ನೋಟಿಸ್ ಕೂಡ ನೀಡಲಾಗಿತ್ತು. ಇದರ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ.

ನಕ್ಸಲ್ ನಿಗ್ರಹ: 11 ಯೋಧರಿಗೆ ಗಾಯ

ಬಿಜಾಪುರ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ಶನಿವಾರ ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ 11 ಯೋಧರು ಗಾಯಗೊಂಡಿದ್ದಾರೆ. ಅವರನ್ನು ವಿಮಾನದ ಮೂಲಕ ರಾಯಪುರದ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಿಜಾಪುರದ ಉಸುರ್‌ನಲ್ಲಿ ಮಾವೋವಾದಿಗಳು ಸೇರಿಕೊಂಡಿದ್ದಾರೆ ಎಂಬ ಮಾಹಿತಿಯ ಹಿನ್ನೆಲೆಯಲ್ಲಿ ಡಿಆರ್‌ಜಿ, ಸಿಆರ್‌ಪಿಎಫ್, ಕೋಬ್ರಾ ಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿದ್ದವು. ಇವೆಲ್ಲ ಮಾವೋವಾದಿಗಳು ಗುಂಡು ಹಾರಿಸಿದ್ದಾರೆ.

ಚೀನಾದ ಉನ್ನತ ಸೇನಾಧಿಕಾರಿ ವಜಾ?

ಬೀಜಿಂಗ್: ಬಾಹ್ಯ ಜಗತ್ತಿಗೆ ಗೊತ್ತಾಗದಂತೆ ತನ್ನೆಲ್ಲ ಸುದ್ದಿಗಳನ್ನು ಗುಪ್ತವಾಗಿಡುವ ಚೀನಾ, ತನ್ನ ಹಿರಿಯ ಸೇನಾಧಿಕಾರಿ ಜನರಲ್ ಝಾಂಗ್ ಯೂಕ್ಸಿಯಾರನ್ನು ವಜಾ ಮಾಡಿ ವಿಚಾರಣೆ ನಡೆಸುತ್ತಿದೆಯಾ? ಹೌದು ಎಂದು ಅಮೆರಿಕದ ವಾಲ್‌ಸ್ಟ್ರೀಟ್ ಜರ್ನಲ್ ವರದಿ ಮಾಡಿದೆ. ದೇಶದ ಅಣ್ವಸ್ತ್ರ ಯೋಜನೆಗಳ ಮಾಹಿತಿಯನ್ನು ಅಮೆರಿಕಕ್ಕೆ ಅವರು ಸೋರಿಕೆ ಮಾಡಿದ್ದೇ ಈ ಕ್ರಮಕ್ಕೆ ಕಾರಣವೆಂದು ಪತ್ರಿಕೆ ಹೇಳಿದೆ. ಅಮೆರಿಕದ ಪೆಂಟಗನ್ ಕೇವಲ ಒಂದು ತಿಂಗಳ ಹಿಂದೆ ಪ್ರಕಟಿಸಿದ್ದ ವರದಿಯಲ್ಲಿ ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ ತನ್ನ ಕೆಲವು ಸೇನಾಧಿಕಾರಿಗಳನ್ನು ತೆಗೆದುಹಾಕಲಾಗುವುದು ಎಂದು ಹೇಳಲಾಗಿತ್ತು. ಇದರ ಬೆನ್ನಲ್ಲೇ ವಾಲ್ ಸ್ಟ್ರೀಟ್ ಜರ್ನಲ್ ಈ ವರದಿ ಮಾಡಿದೆ.

ವಂದೇ ಮಾತರಂ ಗೀತೆಯೇ 77ನೇ ಗಣರಾಜ್ಯೋತ್ಸವದ ಮೂಲಮಂತ್ರ, ಎಲ್ಲ ಕಡೆ ಗೀತೆಯ ಸಾಲುಗಳ ಕಲಾತ್ಮಕ ಪ್ರದರ್ಶನ
ಭಾರತದ ಸೇನಾಶಕ್ತಿ ದರ್ಶನ | ರಾಷ್ಟ್ರಪತಿ ಮುರ್ಮು, ಪ್ರಧಾನಿ ಮೋದಿ, ಯೂರೋಪಿಯನ್ ಒಕ್ಕೂಟದ ಮುಖ್ಯಸ್ಥರು ಭಾಗಿ

ಗಣರಾಜ್ಯೋತ್ಸವದಲ್ಲಿ ವಂದೇ ಮಾತರಂ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯ ಕರ್ತವ್ಯ ಪಥವೂ ಸೇರಿ ಇಡೀ ದೇಶಾದ್ಯಂತ 77ನೇ ಗಣರಾಜ್ಯೋತ್ಸವದ ಸಂಭ್ರಮ ಸೋಮವಾರ ದೇಶವಾಸಿಗಳನ್ನು ಆವರಿಸಿಕೊಂಡಿತ್ತು. ಕರ್ತವ್ಯಪಥದಲ್ಲಿ ದೇಶದ ಸೇನಾಶಕ್ತಿಯ ಅನಾವರಣವಾಯಿತು. ಆಪರೇಶನ್ ಸಿಂದೂರದ ಮೂಲಕ ಪಾಕಿಸ್ತಾನವನ್ನು ಕಂಗಾಲುಗೊಳಿಸಿದ ಸ್ತಬ್ಧಚಿತ್ರ ದೊಡ್ಡ ಸದ್ದು ಮಾಡಿತು. ದೇಶದ ವಿವಿಧ ಭಾಗಗಳ ಸಾಂಸ್ಕೃತಿಕ ವೈಭವದ ಅನಾವರಣವಾಯಿತು. ಸಂಪೂರ್ಣ ಕಾರ್ಯಕ್ರಮವನ್ನು 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ್ದನ್ನು ಹಿನ್ನೆಲೆಯಾಗಿಟ್ಟುಕೊಂಡು ರೂಪಿಸಲಾಗಿತ್ತು. ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ಯೂರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೆಯೆನ್, ಯೂರೋಪಿಯನ್ ಸಮಿತಿ ಅಧ್ಯಕ್ಷ ಆ್ಯಂಟೋನಿಯೊ ಕೋಸ್ಟಾ ಪಾಲ್ಗೊಂಡಿದ್ದರು.

ರಾಷ್ಟ್ರಧ್ವಜ ಅನಾವರಣ, ಗನ್ ಸೆಲ್ಯೂಟ್
ಪದ್ಧತಿಯಂತೆ ಮೊದಲು ರಾಷ್ಟ್ರಧ್ವಜಾ ರೋಹಣ ನೆರವೇರಿತು. ಈ ವೇಳೆ ರಾಷ್ಟ್ರಗೀತೆ ಮೊಳಗಿತು. 21 ಸುತ್ತು ಗುಂಡು ಹಾರಿತು. ದೇಶೀಯ ನಿರ್ಮಿತ ಆರ್ಟಿಲ್ಲರಿ ವ್ಯವಸ್ಥೆ ಮೂಲಕ 105 ಎಂಎಂ ಗಾತ್ರದ ಗುಂಡನ್ನು ಹಾರಿಸಲಾಯಿತು. 172 ಫೀಲ್ಡ್ ರೆಜಿಮೆಂಟ್ 21 ಗನ್ ಸೆಲ್ಯೂಟ್ ಕಾರ್ಯಕ್ರಮವನ್ನು ನಡೆಸಿಕೊಟ್ಟಿತು.

ಮೈನವಿರೇಳಿಸಿದ ಆಪರೇಶನ್ ಸಿಂದೂರ

2025, ಮೇನಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ನಡೆಸಿದ ಆಪರೇಶನ್ ಸಿಂದೂರ ಕಾರ್ಯಾಚರಣೆಯ ಸ್ತಬ್ಧಚಿತ್ರ ಪ್ರದರ್ಶನವಾಯಿತು. ಭಾರತದ ಕ್ಷಿಪಣಿ ದಾಳಿ ನಿರ್ದಿಷ್ಟವಾಗಿ ಪಾಕ್ ಉಗ್ರರ ನೆಲೆಗಳನ್ನು ನಾಶ ಮಾಡಿದ ಚಿತ್ರಗಳು ಇದರಲ್ಲಿದ್ದವು.

ದೇಶವಾಸಿಗಳಿಗೆ ಮೋದಿ ಶುಭಾಶಯ

ಭಾರತ 77ನೇ ಗಣರಾಜ್ಯೋತ್ಸವದ ಪ್ರಯುಕ್ತ ದೆಹಲಿಯ ಕರ್ತವ್ಯಪಥದಲ್ಲಿ ಹತ್ತಾರು ವಿಶೇಷತೆಗಳೊಂದಿಗೆ ಗಣರಾಜ್ಯೋತ್ಸವ ಆಚರಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಭಾರತದ ಹೆಮ್ಮೆ ಮತ್ತು ವೈಭವದ ಸಂಕೇತವಾದ ಈ ರಾಷ್ಟ್ರೀಯ ಹಬ್ಬ ನಿಮ್ಮೆಲ್ಲರ ಜೀವನದಲ್ಲಿ ಹೊಸ ಶಕ್ತಿ ಮತ್ತು ಉತ್ಸಾಹವನ್ನು ತುಂಬಲಿ ಎಂದು ಶುಭಹಾರೈಸಿದ್ದಾರೆ.

100 ಸಾಂಸ್ಕೃತಿಕ ಕಲಾವಿದರ ಪ್ರದರ್ಶನ

ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರದರ್ಶಿಸಲು 100 ಕಲಾವಿದರು ಪ್ರದರ್ಶನ ನೀಡಿದರು. ಭಾರತದ ಸಂಸ್ಕೃತಿಕ ಶಕ್ತಿಯನ್ನು ತೋರಿಸುವ ಅಮೋಘ ಸಂಗೀತ ಕೇಳಿ ಬಂತು.

ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಮೋದಿ ನಮನ

ಪ್ರಧಾನಿ ನರೇಂದ್ರ ಮೋದಿ ದೇಶಕ್ಕಾಗಿ ಸೇವೆ ಸಲ್ಲಿಸಿ ಹುತಾತ್ಮರಾದ ಯೋಧರ ರಾಷ್ಟ್ರೀಯ ಸ್ಮಾರಕ ಅಮರ್ ಜವಾನ್‌ಗೆ ತೆರಳಿ ನಮನ ಸಲ್ಲಿಸಿದರು. ಅಲ್ಲಿಂದ ಕಾರ್ಯಕ್ರಮಗಳು ಆರಂಭವಾದವು.

ಎಲ್ಲೆಲ್ಲೂ ವಂದೇ ಮಾತರಂ ನೋಟ

ವಂದೇ ಮಾತರಂ ಗೀತೆ ರಚನೆಯಾಗಿ ಕಳೆದ ನವೆಂಬರ್‌ಗೆ 150 ವರ್ಷಗಳು ಭರ್ತಿಯಾಗಿವೆ. ಈ ಹಿನ್ನೆಲೆಯಲ್ಲಿ ಒಂದು ವರ್ಷ ವಂದೇ ಮಾತರಂ ಸಂಭ್ರಮಾಚರಣೆ ದೇಶದಲ್ಲಿ ನಡೆಯುತ್ತಿದೆ. ಹಾಗಾಗಿ ಸೋಮವಾರ ಸಂಪೂರ್ಣ ಗಣರಾಜ್ಯೋತ್ಸವ ವಂದೇ ಮಾತರಂ ಮಯವಾಗಿತ್ತು. ರಾಷ್ಟ್ರಪತಿ ಭವನದಿಂದ ಹಿಡಿದು ರಾಷ್ಟ್ರೀಯ ಯುದ್ಧಸ್ಮಾರಕದ ವರೆಗೆ ಹರಡಿಕೊಂಡಿರುವ ಕರ್ತವ್ಯಪಥದ ಎಲ್ಲ ಕಡೆ ವಂದೇ ಮಾತರಂ ಕಾಣುತ್ತಿತ್ತು. ಕಲಾತ್ಮಕವಾಗಿ ವಂದೇ ಮಾತರಂನ ಸಾಲುಗಳನ್ನು ಪ್ರದರ್ಶಿಸಲಾಗಿತ್ತು.

ಸೇನಾ ವ್ಯೂಹದ ಅನಾವರಣ

ಇದೇ ಮೊದಲ ಬಾರಿಗೆ ಭಾರತೀಯ ಸೇನೆಯ ಯುದ್ಧವ್ಯೂಹವನ್ನು ಹಂತಹಂತವಾಗಿ ಪ್ರದರ್ಶಿಸಲಾಯಿತು. ಇದರಲ್ಲಿ ವೈಮಾನಿಕ ಪ್ರದರ್ಶನವೂ ಇತ್ತು. 61ನೇ ಕುದುರೆ ದಳವೂ ಸಕ್ರಿಯ ಸೇನಾ ಸಮವಸ್ತ್ರದಲ್ಲಿ ಪರೇಡ್ ನಡೆಸಿತು. ಕುದುರೆದಳ ಪ್ರಸ್ತುತ ಸಕ್ರಿಯ ಸೇನಾ ವಿಭಾಗವಲ್ಲದಿದ್ದರೂ, ಹಿಂದಿನ ನೆನಪನ್ನು ಮಾಡಿಕೊಟ್ಟಿತು. ಆಪರೇಶನ್ ಸಿಂದೂರದ ಧ್ವಜ ಹೊತ್ತಿದ ಧ್ರುವ ಹೆಲಿಕಾಪ್ಟರ್ ಹಾರಾಟ ನಡೆಸಿತು.

ಶೌರ್ಯ ಪದಕ ಪುರಸ್ಕೃತರ ಉಪಸ್ಥಿತಿ

ದೇಶದ ಪರಮೋಚ್ಚ ಶೌರ್ಯ ಪದಕ ಪುರಸ್ಕೃತರು ಕಾರ್ಯಕ್ರಮದಲ್ಲಿದ್ದರು. ಪರಮ ವೀರ ಚಕ್ರ ಪಡೆದ ಸುಬೇದಾರ್ ಮೇಜರ್ ಯೋಗೇಂದ್ರ ಸಿಂಗ್ ಯಾದವ್, ಸುಬೇದಾರ್ ಮೇಜರ್ ಸಂಜಯ್ ಕುಮಾರ್, ಅಶೋಕ ಚಕ್ರ ಪಡೆದಿರುವ ಮೇಜರ್ ಜನಲರ್ ಪಿಥಾವಾಲಿಯಾ, ಕರ್ನಲ್ ಡಿ. ಶ್ರೀರಾಮ್ ಕುಮಾರ್ ಕೂಡ ಇದ್ದರು.

ಭಾರತದಿಂದ ಜಗತ್ತು ಸುರಕ್ಷಿತ: ಇಯು ಮುಖ್ಯಸ್ಥೆ

77ನೇ ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿರುವ ಯೂರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ಲೆಯೆನ್, ಭಾರತದ ಸೇನಾ ಸಾಮರ್ಥ್ಯ ಕಂಡು ಬೆರಗಾಗಿದ್ದಾರೆ. ಕರ್ತವ್ಯ ಪಥದಲ್ಲಿ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಸಶಸ್ತ್ರ ಪಡೆಗಳ ಕವಾಯತು ವೀಕ್ಷಿಸಿದ ಇಯು ಮುಖ್ಯಸ್ಥೆ, ಭಾರತದ ಅಗಾಧ ಮಿಲಿಟರಿ ಸಾಮರ್ಥ್ಯವನ್ನು ಕೊಂಡಾಡಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಗಣರಾಜ್ಯೋತ್ಸವದ ಮುಖ್ಯ ಅತಿಥಿಗಳಾಗಿ ಭಾಗವಹಿಸುವುದು ಜೀವಮಾನದ ಗೌರವ. ಯಶಸ್ವಿ ಭಾರತವು ಜಗತ್ತನ್ನು ಹೆಚ್ಚು ಸ್ಥಿರ, ಸಮೃದ್ಧ ಮತ್ತು ಸುರಕ್ಷಿತಗೊಳಿಸುತ್ತದೆ. ಇದರಿಂದ ನಾವೆಲ್ಲ ಪ್ರಯೋಜನ ಪಡೆಯುತ್ತೇವೆ ಎಂದಿದ್ದಾರೆ.

ಅಮೆರಿಕದ ಕ್ಯಾತೆ ನಡುವೆ ಭಾರತ- ಕೆನಡಾ ಪ್ರೀತಿ
18.7 ಸಾವಿರ ಕೋಟಿ ರು. ಒಪ್ಪಂದಕ್ಕೆ ಸಹಿ ಸಾಧ್ಯತೆ

ಮಾರ್ಚ್‌ನಲ್ಲಿ ಭಾರತಕ್ಕೆ ಕೆನಡಾ ಪ್ರಧಾನಿ ಕಾರ್ನಿ ಮಹತ್ವದ ಭೇಟಿ

ದೆಹಲಿ: ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಅವರು ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ. ಈ ಮಹತ್ವದ ಭೇಟಿಯ ಸಂದರ್ಭದಲ್ಲಿ ಯುರೇನಿಯಂ ಪೂರೈಕೆ, ಇಂಧನ, ಕೃತಕ ಬುದ್ಧಿಮತ್ತೆ (ಎಐ) ಮತ್ತು ಪ್ರಮುಖ ಖನಿಜಗಳಿಗೆ ಸಂಬಂಧಿಸಿದಂತೆ ಹಲವು ನಿರ್ಣಾಯಕ ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ ಎಂದು ಕೆನಡಾದಲ್ಲಿರುವ ಭಾರತದ ಹೈಕಮಿಷನರ್ ದಿನೇಶ್ ಪಟ್ನಾಯಕ್ ತಿಳಿಸಿದ್ದಾರೆ.

ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊ ಅವರ ಅವಧಿಯಲ್ಲಿ ಹದಗೆಟ್ಟಿದ್ದ ಭಾರತ-ಕೆನಡಾ ಸಂಬಂಧವನ್ನು ಮರುರೂಪಿಸಲು ಮಾರ್ಕ್ ಕಾರ್ನಿ ಮುಂದಾಗಿದ್ದಾರೆ. 2023ರಲ್ಲಿ ಸಿಖ್ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತ ಸರ್ಕಾರದ ಕೈವಾಡವಿದೆ ಎಂದು ಟ್ರುಡೊ ಆರೋಪಿಸಿದ್ದರು. ಆದರೆ ಭಾರತ ಇದನ್ನು ತಳ್ಳಿಹಾಕಿತ್ತು. ಈಗ ಕಾರ್ನಿ ಅವರು ಹಳೆಯ ಕಹಿ ಘಟನೆಗಳನ್ನು ಬದಿಗಿಟ್ಟು, ಭಾರತದೊಂದಿಗೆ ಹೊಸ ಮೈತ್ರಿ ಬೆಳೆಸಲು ಉತ್ಸುಕರಾಗಿದ್ದಾರೆ. ಕಳೆದ ವರ್ಷ ಕಾರ್ನಿ ಅವರ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಜಿ-7 ಶೃಂಗಸಭೆಯಲ್ಲಿ ಭಾಗವಹಿಸಿದ್ದು ಇದಕ್ಕೆ ಸಾಕ್ಷಿಯಾಗಿದೆ.

ಬೃಹತ್ ಯುರೇನಿಯಂ ಒಪ್ಪಂದ: ಪಟ್ನಾಯಕ್ ಅವರ ಪ್ರಕಾರ, ಕಾರ್ನಿ ಅವರ ಭೇಟಿಯ ವೇಳೆ ಸುಮಾರು 2.8 ಶತಕೋಟಿ ಕೆನಡಿಯನ್ ಡಾಲರ್ ಮೌಲ್ಯದ 10 ವರ್ಷಗಳ ಯುರೇನಿಯಂ ಪೂರೈಕೆ ಒಪ್ಪಂದಕ್ಕೆ ಸಹಿ ಬೀಳುವ ಸಾಧ್ಯತೆಯಿದೆ. ಇನ್ನೂ ಹಲವು ಒಪ್ಪಂದಗಳಿಗೆ ಸಹಿ ಬೀಳುವ ನಿರೀಕ್ಷೆಯಿದೆ.

ವಂದೇ ಮಾತರಂ ಹಾಡುವಾಗ ಎದ್ದು ನಿಲ್ಲುವುದು ಕಡ್ಡಾಯ?: ಕೇಂದ್ರ ಸರಕಾರ ಚಿಂತನೆ

ವಂದೇ ಮಾತರಂಗೂ ಜನಗಣಮನ ಗೌರವ?

ದೆಹಲಿ: ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಕಿಚ್ಚು ಹಚ್ಚಿದ್ದ 'ವಂದೇ ಮಾತರಂ' ಗೀತೆಗೆ 150 ವರ್ಷ ಭರ್ತಿಯಾಗಿರುವುದರಿಂದ ಕೇಂದ್ರ ಸರ್ಕಾರ ಮಹತ್ವದ ನಿರ್ಧಾರವೊಂದನ್ನು ತೆಗೆದುಕೊಳ್ಳುವ ಸಾಧ್ಯತೆಯಿದೆ. ರಾಷ್ಟ್ರಗೀತೆ 'ಜನಗಣಮನ' ಹಾಡುವಾಗ ಹೇಗೆ ಎದ್ದು ನಿಂತು ಗೌರವ ಸೂಚಿಸುವುದು ಹೇಗೆ ಕಡ್ಡಾಯವೋ, ಅದೇ ನಿಯಮಗಳನ್ನು ರಾಷ್ಟ್ರೀಯ ಹಾಡು 'ವಂದೇ ಮಾತರಂ'ಗೂ ಅನ್ವಯಿಸಲು ಚಿಂತನೆ ನಡೆಸಿದೆ.

'ವಂದೇ ಮಾತರಂ' ಎಂದರೆ 'ತಾಯೇ, ನಿನಗೆ ವಂದಿಸುವೆ' ಎಂದರ್ಥ. ಇದು ಕೇವಲ ಒಂದು ಹಾಡಲ್ಲ, ಬದಲಿಗೆ ರಾಷ್ಟ್ರೀಯತೆ, ದೇಶಭಕ್ತಿ ಮತ್ತು ಭಾರತೀಯ ಅಸ್ಮಿತೆಯನ್ನು ಬೆಸೆಯುವ ಭಾವನಾತ್ಮಕ ಕೊಂಡಿಯಾಗಿದೆ. ಬಂಕಿಮಚಂದ್ರ ಚಟ್ಟೋಪಾಧ್ಯಾಯ ಅವರು ಬರೆದ ಪ್ರಸಿದ್ಧ ಕಾದಂಬರಿ 'ಆನಂದಮಠ'ದ ಭಾಗವಾಗಿದ್ದ ಈ ಗೀತೆ, ಬ್ರಿಟಿಷರ ವಸಾಹತುಶಾಹಿ ಆಳ್ವಿಕೆಯಿಂದ ಭಾರತವನ್ನು ಮುಕ್ತಗೊಳಿಸಲು ಸ್ವಾತಂತ್ರ್ಯ ಹೋರಾಟಗಾರರಿಗೆ ಪ್ರಮುಖ ಅಸ್ತ್ರವಾಗಿತ್ತು. 1950ರಲ್ಲಿ ಇದನ್ನು ಅಧಿಕೃತವಾಗಿ ಭಾರತದ 'ರಾಷ್ಟ್ರೀಯ ಗಾನ' ಎಂದು ಸ್ವೀಕರಿಸಲಾಯಿತು.

ಪ್ರಸ್ತುತ ಇರುವ ಕಾನೂನು ಏನು?: ಸದ್ಯ ರಾಷ್ಟ್ರಗೀತೆ ಮತ್ತು ರಾಷ್ಟ್ರಗಾನದ ನಡುವೆ ಕಾನೂನಾತ್ಮಕವಾಗಿ ಕೆಲವು ವ್ಯತ್ಯಾಸಗಳಿವೆ. ರಾಷ್ಟ್ರಗೀತೆ (ಜನ ಗಣ ಮನ): 'ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ ಕಾಯ್ದೆ, 1971' ಮತ್ತು ಸಂವಿಧಾನದ 51(ಎ) ವಿಧಿಯು ರಾಷ್ಟ್ರಗೀತೆಯನ್ನು ಗೌರವಿಸುವುದನ್ನು ಕಡ್ಡಾಯಗೊಳಿಸಿದೆ. ಯಾರಾದರೂ ರಾಷ್ಟ್ರಗೀತೆಗೆ ಅಗೌರವ ತೋರಿದರೆ ಅಥವಾ ಹಾಡುವುದನ್ನು ತಡೆದರೆ ಅವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸುವ ಅವಕಾಶವಿದೆ. ಅಲ್ಲದೆ, ರಾಷ್ಟ್ರಗೀತೆ ಹಾಡುವಾಗ ಎದ್ದು ನಿಲ್ಲುವುದು ಮತ್ತು ನಿರ್ದಿಷ್ಟ ಸಮಯದೊಳಗೆ ಹಾಡುವುದು ಕಡ್ಡಾಯವಾಗಿದೆ.

ರಾಷ್ಟ್ರ ಗಾನ(ವಂದೇ ಮಾತರಂ): ಆದರೆ, 'ವಂದೇ ಮಾತರಂ' ಹಾಡುವಾಗ ಎದ್ದು ನಿಲ್ಲಲೇಬೇಕು ಅಥವಾ ಅದನ್ನು ಕಡ್ಡಾಯವಾಗಿ ಹಾಡಲೇಬೇಕು ಎಂಬ ಯಾವುದೇ ನಿರ್ದಿಷ್ಟ ಕಾನೂನು ಸದ್ಯಕ್ಕೆ ಜಾರಿಯಲ್ಲಿಲ್ಲ. ಈ ಹಾಡಿಗೆ ಸಂಬಂಧಿಸಿದಂತೆ ಯಾವುದೇ ಪ್ರತ್ಯೇಕ ಶಿಷ್ಟಾಚಾರ ಅಥವಾ ದಂಡದ ವಿಧಿಗಳಿಲ್ಲ.

ಹೊಸ ಪ್ರಸ್ತಾವನೆ ಏನು?

ಕೇಂದ್ರ ಗೃಹ ಸಚಿವಾಲಯವು 'ಜನ ಗಣ ಮನ'ಕ್ಕೆ ಇರುವ ನಿಯಮಗಳನ್ನೇ 'ವಂದೇ ಮಾತರಂ'ಗೂ ವಿಸ್ತರಿಸಲು ಚರ್ಚಿಸುತ್ತಿದೆ. ಇದರರ್ಥ ಈ ಪ್ರಸ್ತಾವನೆ ಜಾರಿಯಾದರೆ, ಸಾರ್ವಜನಿಕವಾಗಿ ವಂದೇ ಮಾತರಂ ಹಾಡುವಾಗ ಪ್ರತಿಯೊಬ್ಬರೂ ಎದ್ದು ನಿಲ್ಲುವುದು ಕಡ್ಡಾಯವಾಗಬಹುದು ಮತ್ತು ಅಗೌರವ ತೋರುವವರಿಗೆ ಕಾನೂನಿನ ಅಡಿ ಶಿಕ್ಷೆಯಾಗಬಹುದು. ಈ ಹಿಂದೆ ಹಲವು ಬಾರಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ವಂದೇ ಮಾತರಂಗೆ ಸಮಾನ ಸ್ಥಾನಮಾನ ನೀಡಬೇಕೆಂದು ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಆಗ ಸರ್ಕಾರವು 'ನಿಯಮಗಳು ಕೇವಲ ರಾಷ್ಟ್ರಗೀತೆಗೆ ಮಾತ್ರ ಅನ್ವಯವಾಗುತ್ತವೆ' ಎಂದು ಹೇಳಿತ್ತು. ಆದರೆ ಈಗ ಸರ್ಕಾರ ತನ್ನ ನಿಲುವನ್ನು ಬದಲಿಸುವ ಸೂಚನೆ ನೀಡಿದೆ.

'ವಂದೇ ಮಾತರಂ' ಗೀತೆಯು ರಾಜಕೀಯ ಮತ್ತು ಧಾರ್ಮಿಕ ವಿವಾದಗಳಿಂದ ಹೊರತಾಗಿಲ್ಲ. ಕೆಲವು ಮುಸ್ಲಿಂ ಸಂಘಟನೆಗಳು ಈ ಹಾಡನ್ನು ಹಾಡಲು ವಿರೋಧ ವ್ಯಕ್ತಪಡಿಸುತ್ತಾ ಬಂದಿವೆ. ಈ ಹಾಡಿನಲ್ಲಿ ಮೂರ್ತಿ ಪೂಜೆ ಅಥವಾ ದೇವಿಯ ಆರಾಧನೆಯ ಅಂಶಗಳಿರುವುದರಿಂದ ಇದು ಇಸ್ಲಾಂ ಧರ್ಮದ ನಂಬಿಕೆಗಳಿಗೆ ವಿರುದ್ಧವಾಗಿದೆ ಎಂಬುದು ಅವರ ವಾದ.

ಕೆಲ ದಿನಗಳ ಹಿಂದೆ 2 ಗಂಟೆಗಳ ಕಾಲ ದಿಢೀರ್ ಭಾರತ ಭೇಟಿ ಮಾಡಿದ್ದ ಯುಇಎ ಅಧ್ಯಕ್ಷ ನಹ್ಯಾನ್

ಪಾಕ್ ಜತೆಗಿನ ಒಪ್ಪಂದವನ್ನೇ ರದ್ದು ಮಾಡಿದ ಯುಎಇ

ಅಬುಧಾಬಿ: ಕೆಲವೇ ದಿನಗಳ ಹಿಂದೆ ಯುಎಇ ಅಧ್ಯಕ್ಷ ಶೇಖ್ ಅಲ್ ನಹ್ಯಾನ್ ಕೇವಲ 2 ಗಂಟೆಗಳ ಮಟ್ಟಿಗೆ ಭಾರತಕ್ಕೆ ಭೇಟಿ ನೀಡಿ, ಪ್ರಧಾನಿ ಮೋದಿಯೊಂದಿಗೆ ಗುಪ್ತ ಚರ್ಚೆ ನಡೆಸಿದ್ದರು. ಇದೀಗ ಆ ದೇಶ ಪಾಕಿಸ್ತಾನದೊಂದಿಗೆ ಇಸ್ಲಾಮಾಬಾದ್ ವಿಮಾನ ನಿಲ್ದಾಣಗಳ ನಿರ್ವಹಣೆಯ ಒಪ್ಪಂದವನ್ನೇ ರದ್ದು ಮಾಡಿಕೊಂಡಿದೆ. ಈ ಬೆಳವಣಿಗೆ ಪಾಕಿಸ್ತಾನಕ್ಕೆ ತೀವ್ರ ಮುಖಭಂಗವನ್ನುಂಟು ಮಾಡಿದೆ.

ಈಗ ಪಾಕ್ ವಿಮಾನನಿಲ್ದಾಣ ನಿರ್ವಹಣೆಗೆ ನಕಾರ, ಪಾಕ್‌ಗೆ ಶಾಕ್

ಕಳೆದ ಜ.19ರಂದು ಯುಎಇ ಅಧ್ಯಕ್ಷ ಮೂರು ಗಂಟೆಗಳ ಅವಧಿಗೆ ಭಾರತ ಪ್ರವಾಸ ಕೈಗೊಂಡಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಖುದ್ದಾಗಿ ನವದೆಹಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ, ಶೇಖ್ ಮೊಹಮ್ಮದ್‌ರನ್ನು ಆತ್ಮೀಯವಾಗಿ ಸ್ವಾಗತಿಸಿದ್ದರು. ಆ ಬಳಿಕ ಇಬ್ಬರೂ ನಾಯಕರು ದ್ವಿಪಕ್ಷೀಯ ರಾಜತಾಂತ್ರಿಕ ಸಂಬಂಧ ವೃದ್ಧಿಯ ಬಗ್ಗೆ ಚರ್ಚೆ ನಡೆಸಿದ್ದರು. ಪ್ರಧಾನಿ ಮೋದಿ ಅವರು ಯುಎಇ ಅಧ್ಯಕ್ಷರನ್ನು ಸಹೋದರ ಎಂದು ಕರೆದಿದ್ದರು. ಈ ತುರ್ತು ಭೇಟಿ ಜಾಗತಿಕ ಮಟ್ಟದಲ್ಲಿ ಸದ್ದು ಮಾಡಿತ್ತು.

ಕಳೆದ 2025ರ ಆಗಸ್ಟ್‌ನಲ್ಲಿ ಯುಎಇ ಮತ್ತು ಪಾಕಿಸ್ತಾನ ಇಸ್ಲಾಮಾಬಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ವಹಿಸುವ ಒಪ್ಪಂದಕ್ಕೆ ಸಹಿ ಹಾಕಿದ್ದವು. ತನಗೆ ಪಾಕಿಸ್ತಾನದಲ್ಲಿ ಯೋಜನೆಯನ್ನು ನಿರ್ವಹಿಸುವಂತಹ ಸ್ಥಳೀಯ ಪಾಲುದಾರರು ಸಿಗುತ್ತಿಲ್ಲ, ಆದ್ದರಿಂದ ತಾನಿದರಲ್ಲಿ ಮುಂದುವರಿಯಲಾರೆ ಎಂದು ಯುಎಇ ಹೇಳಿದೆ. ಜಾಗತಿಕವಾಗಿ ಪಾಕಿಸ್ತಾನ ಸೌದಿ ಜೊತೆಗೆ ಇಸ್ಲಾಮಿಕ್ ನ್ಯಾಟೋ ರಚಿಸುವ ಒಪ್ಪಂದಕ್ಕೆ ಸಹಿ ಹಾಕಿದೆ. ಸೌದಿ ಮತ್ತು ಯುಎಇ ಮುಂಚಿನಿಂದಲೂ ಸಂಬಂಧ ಚೆನ್ನಾಗಿಟ್ಟುಕೊಂಡಿಲ್ಲ.

ಹಣವಿಲ್ಲ, ಆ್ಯಂಬುಲೆನ್ಸ್ ಸಿಕ್ಕಿಲ್ಲ | ಹೋಗಿ ಬರಲು ಸೇರಿ 600 ಕಿಮೀ ರಿಕ್ಷಾ ಚಾಲನೆ

ಪತ್ನಿಯ ಆಸ್ಪತ್ರೆಗೆ ಒಯ್ಯಲು 300 ಕಿ.ಮೀ. ಸೈಕಲ್ ತುಳಿತ

ಭುವನೇಶ್ವರ/ಕಟಕ್: ನಮ್ಮ ದೇಶವು 3ನೇ ಆರ್ಥಿಕ ಶಕ್ತಿಯಾಗುವತ್ತ ದಾಪುಗಾಲಿಡುತ್ತಿದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳು ಇನ್ನೂ ಮರೀಚಿಕೆಯಾಗಿಯೇ ಇವೆ. ಇದಕ್ಕೆ ತಾಜಾ ಉದಾಹರಣೆಯೆಂಬಂತೆ, ಒಡಿಶಾದಲ್ಲಿ 70 ವರ್ಷದ ವೃದ್ಧನೊಬ್ಬ ತನ್ನ ರೋಗಗ್ರಸ್ತ ಪತ್ನಿಗೆ ಹೆಚ್ಚಿನ ಚಿಕಿತ್ಸೆ ಕೊಡಿಸುವ ಸಲುವಾಗಿ ತನ್ನ ಸೈಕಲ್ ರಿಕ್ಷಾದಲ್ಲಿ ಪತ್ನಿಯನ್ನು ಕೂರಿಸಿಕೊಂಡು ಸುಮಾರು 300 ಕಿ.ಮೀ.ವರೆಗೆ ಪ್ರಯಾಣಿಸಿದ್ದಾನೆ. ಹೋಗಿ ಬರಲು ಸೇರಿ 600 ಕಿಮೀ ರಿಕ್ಷಾ ತುಳಿದಿದ್ದಾರೆ. ಬರೀ ಹೋಗುವುದಕ್ಕೇ 9 ದಿನಗಳು ಆಗಿವೆ. ಇವರ ಹೆಸರು ಬಾಬು ಲೋಹರ್. ಪತ್ನಿಯ ಹೆಸರು ಜ್ಯೋತಿ. ಈ ದಂಪತಿಯು ಒಡಿಶಾದ ಸಂಭಲ್ಪುರದ ಮೋದಿಪಾಡಾ ಎಂಬ ಗ್ರಾಮದಲ್ಲಿ ಜೀವನ ನಡೆಸುತ್ತಿದ್ದಾರೆ. ಆಕೆಗೆ ಕಳೆದ ನವೆಂಬರ್‌ನಲ್ಲಿ ಪಾರ್ಶ್ವವಾಯು ಸಮಸ್ಯೆ ಕಾಣಿಸಿಕೊಂಡಿತ್ತು. ಸ್ಥಳೀಯ ಗ್ರಾಮೀಣ ವೈದ್ಯರು ಆಕೆಯನ್ನು ಪರೀಕ್ಷಿಸಿ, ಕಟಕ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಯಾದ ಎಸ್‌ಸಿಬಿ ವೈದ್ಯಕೀಯ ಆಸ್ಪತ್ರೆಗೆ ಕರೆದೊಯ್ಯುವಂತೆ ಸೂಚಿಸಿದ್ದರು. ಆದರೆ ಬಾಬು ಲೋಹರ್ ಬಳಿ ಒಂದು ವಾಹನವನ್ನು ಬುಕ್ ಮಾಡಿಕೊಂಡು ತನ್ನ ಪತ್ನಿಯನ್ನು ಕರೆದೊಯ್ಯುವಷ್ಟು ಆರ್ಥಿಕ ಶಕ್ತಿಯಿರಲಿಲ್ಲ. ಮತ್ತೊಂದೆಡೆ ಆ್ಯಂಬುಲೆನ್ಸ್ ಲಭ್ಯವಾಗಲಿಲ್ಲ. 9 ದಿನಗಳವರೆಗೆ ಸತತವಾಗಿ ಸೈಕಲ್ ತುಳಿದು ಕಟಕ್‌ನ ಎಸ್ ಸಿಬಿ ಆಸ್ಪತ್ರೆ ತಲುಪಿದರು.

ಪತಿಯ ಕ್ರೂರ ಕೃತ್ಯ ಬಿಚ್ಚಿಟ್ಟ ಪತ್ನಿ, ಆರೋಪಿ ಬಂಧನ

ಲೈಂಗಿಕ ಕ್ರಿಯೆಗೆ ಅಡ್ಡಿಯೆಂದು ಮಗುವನ್ನೇ ಕೊಂದ ಅಪ್ಪ

ತಿರುವನಂತಪುರಂ: ಇತ್ತೀಚೆಗಷ್ಟೇ ತಿರುವನಂತಪುರಂನ ನೆಯ್ಯಟ್ಟಿಂಕರದಲ್ಲಿ ನಡೆದಿದ್ದ 1 ವರ್ಷದ ಮಗುವಿನ ಸಾವಿನ ಪ್ರಕರಣದಲ್ಲಿ ಸ್ಫೋಟಕ ರಹಸ್ಯ ಬಯಲಾಗಿದೆ. ಪತ್ನಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸುತ್ತಿದ್ದಾಗ, ಅಡ್ಡಿಯಾಯಿತೆಂದು ತಂದೆಯೇ ಮಗುವನ್ನು ಕೊಲೆಗೈದಿರುವುದು ಗೊತ್ತಾಗಿದೆ.

ಜನವರಿ 16ರಂದು ಐಕಾರವಿಳಕ್ಕಂನ ಕವಲಕುಲಂನಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಶಿಜಿಲ್ ಮತ್ತು ಕೃಷ್ಣಪ್ರಿಯಾ ದಂಪತಿ ತಮ್ಮ 1 ವರ್ಷದ ಮಗು ಇಹಾನ್‌ನನ್ನು ಆಸ್ಪತ್ರೆಗೆ ಕರೆತಂದಿದ್ದರು. ಬಿಸ್ಕೆಟ್, ದ್ರಾಕ್ಷಿ ತಿಂದ ಬಳಿಕ ಮಗು ಕುಸಿದು ಬಿದ್ದಿದೆ ಎಂದು ಇಬ್ಬರೂ ಹೇಳಿದ್ದರು. ಬಳಿಕ ತುರ್ತು ವಿಭಾಗದಲ್ಲಿ ಇಹಾನ್‌ನನ್ನು ಪರೀಕ್ಷಿಸಿದ ವೈದ್ಯರು ಅವನ ಹೊಟ್ಟೆ ಭಾಗದಲ್ಲಿ ಗಾಯವಾಗಿರುವುದನ್ನ ಪತ್ತೆಹಚ್ಚಿದ್ದರು. ಇದು ಸಾಕಷ್ಟು ಅನುಮಾನಗಳಿಗೆ ಕಾರಣವಾಯಿತು. ಪೊಲೀಸರು ತನಿಖೆ ಕೈಗೆತ್ತಿಕೊಂಡರು. ಪ್ರಾಥಮಿಕ ವಿಚಾರಣೆ ಬಳಿಕ ದಂಪತಿಯನ್ನು ಮನೆಗೆ ಕಳಿಸಿದ್ದ ಪೊಲೀಸರು ಮರಣೋತ್ತರ ಪರೀಕ್ಷಾ ವರದಿ ಹಾಗೂ ಫೊರೆನ್ಸಿಕ್ ರಿಪೋರ್ಟ್ ಬಂದ ಬಳಿಕ ಪುನಃ ವಿಚಾರಣೆಗೆ ಕರೆಸಿದರು. ಈ ಸಂದರ್ಭದಲ್ಲಿ ಪತ್ನಿ ನೀಡಿದ ಹೇಳಿಕೆ ಪ್ರಕರಣಕ್ಕೆ ತಿರುವು ನೀಡಿತು.

2ನೇ ಬಾರಿಗೆ ವಿಚಾರಣೆಗೆ ಹಾಜರಾದಾಗ, ಘಟನೆ ನಡೆದ ದಿನ ರಾತ್ರಿ ಗಂಡ ಹೆಂಡತಿ ಲೈಂಗಿಕ ಕ್ರಿಯೆ ವೇಳೆ ಮಗು ಅಳುವುದಕ್ಕೆ ಶುರುಮಾಡಿತು. ಇದರಿಂದ ಸಿಟ್ಟಿಗೆದ್ದ ತಂದೆ ಮಗುವನ್ನು ಮಡಿಲಲ್ಲಿಟ್ಟುಕೊಂಡು ಹೊಟ್ಟೆ, ಎದೆ ಭಾಗಕ್ಕೆ ಕೈಯಲ್ಲಿ ಗುದ್ದಿದ್ದಾನೆ. ಈ ಹಿಂದೆಯೂ ಮಗುವನ್ನು ಜೊತೆಯಲ್ಲಿ ಮಲಗಿಸಿದಾಗ ಬೆಡ್ ಶೀಟ್‌ನಿಂದ ಮಗುವಿನ ಮುಖಮುಚ್ಚಿದ್ದ ಅಂತ ಪತ್ನಿ ಕೃಷ್ಣಪ್ರಿಯಾ ಹೇಳಿದ್ದಳು. ಈ ಬೆನ್ನಲ್ಲೇ ಪೋಸ್ಟ್‌ಮಾರ್ಟಂ ವರದಿಯಲ್ಲೂ ಮಗು ಆಂತರಿಕ ರಕ್ತಸ್ರಾವದಿಂದ ಸಾವನ್ನಪ್ಪಿರುವುದು ದೃಢವಾಗಿತ್ತು. ವರದಿ ಆಧರಿಸಿ ತನಿಖೆ ನಡೆಸಿದಾಗ ತಂದೆ ಶಿಜಿಲ್ ಸತ್ಯ ಬಾಯ್ಬಿಟ್ಟಿದ್ದಾನೆ. ಸದ್ಯ ಆರೋಪಿಯನ್ನು ಬಂಧಿಸಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

77ನೇ ಗಣರಾಜ್ಯೋತ್ಸವ ಸಂಭ್ರಮ | ಬಡವರ ಸಬಲೀಕರಣಕ್ಕೆ ಸರಕಾರ ಬದ್ಧ, ಶೀಘ್ರದಲ್ಲೇ ಮತ್ತಷ್ಟು ಮನೆಗಳ ಹಂಚಿಕೆ: ಸಚಿವ

ಸರಕಾರದ 6ನೇ ಗ್ಯಾರಂಟಿ ವಸತಿ ಭಾಗ್ಯ

ಹೊಸಪೇಟೆ: ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಐದು ಗ್ಯಾರಂಟಿಗಳನ್ನು ಯೋಜನೆಗಳನ್ನು ಅಧಿಕಾರಕ್ಕೆ ಬಂದ ಒಂದು ತಿಂಗಳಲ್ಲಿ ಜಾರಿಗೊಳಿಸಿದೆ. ಸರಕಾರವು ಬಡವರ, ಹಿಂದುಳಿದವರಿಗೆ, ವಸತಿ ರಹಿತರ ಕಾಳಜಿಗೆ ವಿಶೇಷವಾಗಿ ಒತ್ತು ನೀಡಿದ್ದು 2026 ರಅಂತ್ಯದೊಳಗೆ ವಸತಿ ರಹಿತರಿಗೆ ಸೂರು ಕಲ್ಪಿಸಲಾಗುತ್ತದೆ. ಇದು ಸರಕಾರದ ಆರನೇ ಗ್ಯಾರಂಟಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಈ ಹಿಂದೆ 2024ರ ಮಾರ್ಚ್ ಮಾಹೆಯಲ್ಲಿ ವಿವಿಧ ಯೋಜನೆಗಳಡಿ 36,780 ಹಾಗೂ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ 42,345 ಮನೆ ಹಂಚಿಕೆ ಮಾಡಲಾಗಿದ್ದು, ಒಟ್ಟಾರೆ 80 ಸಾವಿರ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ಎಂದರು.

ಸಂಡೂರಿನಲ್ಲಿ ಆಯೋಜನೆ ಮಾಡಿದ ಕಾರ್ಯಕ್ರಮದಲ್ಲಿ ರೂ.1600 ಕೋಟಿ ಮತ್ತು ಕೊಪ್ಪಳದಲ್ಲಿ ರೂ.1310 ಕೋಟಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿಗಳು ಚಾಲನೆ ನೀಡಿದ್ದಾರೆ. ರಾಜೀವ್ ಗಾಂಧಿ ಮತ್ತು ಆಶ್ರಯ ಯೋಜನೆಯಡಿ ಬಡವರಿಗೆ, ವಸತಿ ರಹಿತರಿಗೆ ನಿರ್ಗತಿಕರಿಗೆ, ಕೂಲಿ ಕಾರ್ಮಿಕರಿಗೆ ಸರಕಾರದ ವತಿಯಿಂದಲೇ ಸೂರು ಕಲ್ಪಿಸಲಾಗುವುದು ಎಂದು ಹೇಳಿದರು.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಮೀರ್‌ಅಹ್ಮದ್ ಖಾನ್ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯ ಯುವ ಸಂಸತ್ ಭವನದಲ್ಲಿ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿ ಚಿರು ಅವರಿಗೆ ರು.50 ಸಾವಿರ ನಗದು ಬಹುಮಾನ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪರೇಡ್ ಕಮಾಂಡರ್‌ಗೋವಿಂದ್ ನೇತೃತ್ವದಲ್ಲಿ ಪೊಲೀಸ್ ಇಲಾಖೆ, ಗೃಹರಕ್ಷದಳ, ಎನ್ ಸಿಸಿ, ಸ್ಕೌಟ್ಸ್ ಮತ್ತು ಗೈಡ್ಸ್, ಸೇವಾದಳ ಸೇರಿ ವಿವಿಧ ಶಾಲೆಗಳ ವಿದ್ಯಾರ್ಥಿಗಳ ತಂಡಗಳಿಂದ ಆಕರ್ಷಕ ಪಥಸಂಚಲನ ನಡೆಸಲಾಯಿತು. ವಿವಿಧ ಶಾಲಾ ಮಕ್ಕಳಿಂದ ಕನ್ನಡ ಭಾಷೆ ಮತ್ತು ನಾಡು, ನುಡಿಯ ದೇಶ ಭಕ್ತಿ ಮೂಡಿಸುವ ನೃತ್ಯ ಸಂಯೋಜನೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಇಮಾಮ್ ನಿಯಾಜಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಶಿವಮೂರ್ತಿ,ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಜಿಪಂ ಸಿಇಒ ಮೊಹಮ್ಮದ್ ಅಲಿ ಅಕ್ರಮ್ ಷಾ, ಪ ಜಿಲ್ಲಾ ಎಸ್‌ಪಿ ಜಾಹ್ನವಿ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಸಹಾಯಕ ಆಯುಕ್ತ ಪಿ.ವಿವೇಕಾನಂದ ಇದ್ದರು.

ರಾಜೀವ್ ಗಾಂಧಿ ವಸತಿ ಯೋಜನೆ

ಈಗಾಗಲೇ ಮುಖ್ಯಮಂತ್ರಿಗಳಿಗೆ ಸಮಗ್ರ ವರದಿ ಸಲ್ಲಿಸಲಾಗಿದ್ದು, ಅನುಮೋದನೆ ನೀಡುವ ಭರವಸೆಯೂ ಇದೆ. ಇದಕ್ಕಾಗಿ ಬೆಂಗಳೂರಿನಲ್ಲಿ ಬಡಜನತೆಯ ಅನುಕೂಲವಾಗುವ ನಿಟ್ಟಿನಲ್ಲಿ 2016 ರಲ್ಲಿ 1023 ಎಕರೆಯನ್ನು ರಾಜೀವ್ ಗಾಂಧಿ ವಸತಿ ಯೋಜನೆಗೆ ನೀಡಿ ಬಡಜನರಿಗೆ ಸ್ವಂತ ನಿವಾಸ ಕಟ್ಟಿಕೊಳ್ಳಲು ಸಹಕಾರ ನೀಡಲಾಗಿದೆ ಎಂದು ಜಮೀರ್‌ಅಹ್ಮದ್ ಖಾನ್ ತಿಳಿಸಿದರು.

ನಮ್ಮ ಸರಕಾರ ಹೆಚ್ಚು ಬಡವರ ಅಭಿವೃದ್ದಿಗೆ ಶ್ರಮಿಸುವ ಸರಕಾರವಾಗಿದೆ. ಸರಕಾರದ ಮಹತ್ವಾಕಾಂಕ್ಷಿ ಯೋಜನೆಗಳಾದ ಪಂಚ ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ ಸರಿ ಸುಮಾರು ರು.60 ಸಾವಿರ ಕೋಟಿ ವೆಚ್ಚ ಮಾಡಲಾಗುತ್ತಿದೆ.

-ಜಮೀರ್‌ಅಹ್ಮದ್ ಖಾನ್, ಜಿಲ್ಲಾ ಉಸ್ತುವಾರಿ ಸಚಿವ

ಸಮಾಚಾರ ಸಣ್ಣದಲ್ಲ

ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಬಿಡುವುದಿಲ್ಲ

ರಾಯಚೂರು: ಜಿಲ್ಲೆಯಲ್ಲಿ ಅಣುವಿದ್ಯುತ್ ಸ್ಥಾವರ ಘಟಕದ ಸ್ಥಾಪನೆಗೆ ಅವಕಾಶ ಮಾಡಿಕೊಡುವುದಿಲ್ಲ. ಕೇಂದ್ರದ ತಂಡ ಆರ್‌ಟಿ ಪಿ ಎಸ್ ಗೆ ಆಗಮಿಸಿ ಪರಿಶೀಲನೆ

ನಡೆಸಿರುವುದು ನಮ್ಮ ಗಮನಕ್ಕೆ ಬಂದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ ಹೇಳಿದರು. ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು.ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಫಲಿತಾಂಶ ಸುಧಾರಿಸುವ ಪ್ರಯತ್ನದ ಭಾಗವಾಗಿ ಕಾರ್ಯಕ್ರಮ ರೂಪಿಸಲು ಎನ್ ಜಿಒ ಜತೆಗೆ ಚರ್ಚಿಸಿ ಕಾರ್ಯಯೋಜನೆ ರೂಪಿಸುವ ಚಿಂತನೆಯಿದೆ ಎಂದು ಹೇಳಿದರು.ಕೇರಳ ಮತ್ತು ಕರ್ನಾಟಕ ಹೊರತುಪಡಿಸಿ ದೇಶದ ಎಲ್ಲ ರಾಜ್ಯಗಳಿಗೂ ಏಮ್ಸ್ ನೀಡಲಾಗಿದೆ. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರಕ್ಕೆ ಪತ್ರ ಬರೆದು ಕರ್ನಾಟಕದ ರಾಯಚೂರಲ್ಲಿ ಏಮ್ಸ್ ಸ್ಥಾಪನೆಗೆ ಒತ್ತಡ ಹಾಕುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಶಾಸಕ ಬಸನಗೌಡ ದದ್ದಲ್, ಎ ವಸಂತಕುಮಾರ, ಮಲ್ಲಿಕಾರ್ಜುನ ಗೌಡ, ಬಸೀರ್ ಅಹ್ಮದ್, ಪವನ ಕಿಶೋರ ಪಾಟೀಲ, ಜಿಲ್ಲಾಧಿಕಾರಿ ನಿತೀಶ್ ಕೆ.,ಜಿಪಂ ಸಿಇಒ ಈಶ್ವರ್‌ಕಾಂದೂ, ಅರುಣಾಂಗ್ಶು ಗಿರಿ, ಜುಬಿನ್ ಮೊಹಪಾತ್ರ, ಪುರುರಾಜ ಸಿಂಗ್, ಡಾ.ರಝಾಕ್ ಉಸ್ತಾದ್ ಇದ್ದರು.

ಕವಿಗೋಷ್ಠಿಗೆ ಅರ್ಜಿ ಆಹ್ವಾನ

ಹೊಸಪೇಟೆ: ಫೆ. 13 ರಿಂದ 15ರವರೆಗೆ ನಡೆಯಲಿರುವ ಹಂಪಿ ಉತ್ಸವದ ಅಂಗವಾಗಿ ವಿರೂಪಾಕ್ಷ ವೇದಿಕೆಯಲ್ಲಿ ಕವಿಗೋಷ್ಠಿ ಏರ್ಪಡಿಸಲಾಗಿದೆ. ಕವಿಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಸ್ವ-ರಚಿತ ಕವನ ಹಾಗೂ ಸ್ವ-ವಿವರಗಳನ್ನು ನೇರವಾಗಿ ಅಥವಾ ಅಂಚೆಯ ಮೂಲಕ ನಗರದ ಬಸವೇಶ್ವರ ಬಡಾವಣೆಯಲ್ಲಿನ ಬಸವಣ್ಣ ಕಾಲುವೆ ಹಾಗೂ 100 ಹಾಸಿಗೆ ರಸ್ತೆ ಮಾತಾ ಆಸ್ಪತ್ರೆ ಹತ್ತಿರದ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಕಚೇರಿಗೆ ಫೆ 2ರೊಳಗಾಗಿ ಸಲ್ಲಿಸಬಹುದಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕವಿಗೋಷ್ಠಿಯಲ್ಲಿ ಭಾಗವಹಿಸಿದವರಿಗೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 9900745857 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ನಾನಾ ಕಡೆ ವಿದ್ಯುತ್ ವ್ಯತ್ಯಯ

ಬಳ್ಳಾರಿ: ನಗರ ಜೆಸ್ಕಾಂ ಉಪವಿಭಾಗ-1 ರ ವ್ಯಾಪ್ತಿಯ 110/11ಕೆವಿ ಬಿಸಿಲಹಳ್ಳಿ ವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಫೀಡರ್‌ಎಫ್-63, ಎಫ್-64, ಎಫ್-52, ಎಫ್-53 ರ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಜ.27 ರಂದು ಬೆಳಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ನಗರದ ರೂಪನಗುಡಿ ರಸ್ತೆ, ಬಿಸಿಲಹಳ್ಳಿ, ಗ್ರಾಂಡ್ ಫಂಕ್ಷನ್ ಹಾಲ್, ವೆಂಕಟರಮಣ ನಗರ, ನಬೀ ಕಾಲೋನಿ, ಅಂಜಿನಪ್ಪ ನಗರ, ಶ್ರೀರಾಂಪುರ ಕಾಲೋನಿ, ಗೋನಾಳ್, ವರಬಸಪ್ಪ ಗುಡಿ ಸೇರಿದಂತೆ ಹಲವು ಕಡೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ತಾ ಇಲಾಖೆಯಲ್ಲಿ 77ನೇ ಗಣರಾಜ್ಯೋತ್ಸವ

ಬಳ್ಳಾರಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿ ಅವರಣದಲ್ಲಿ 77ನೇ ಗಣರಾಜ್ಯೋತ್ಸವದ ದಿನಾಚರಣೆ ಅಂಗವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ವಿ.ಸಿ.ಗುರುರಾಜ ಧ್ವಜಾರೋಹಣ ನೆರವೇರಿಸಿದರು. ಇದೇ ಸಂದರ್ಭದಲ್ಲಿ ಗಣರಾಜ್ಯೋತ್ಸವದ ದಿನಾಚರಣೆಯ ಶುಭಾಷಯ ಕೋರಿದರು. ಈ ವೇಳೆ ಕಚೇರಿಯ ಸಿಬ್ಬಂದಿಗಳಾದ ಹನುಮೇಶ್.ಎಚ್., ವಿಜಯಕುಮಾರ್.ಎಚ್., ರೋಜ ಮೇರಿ, ವಿ.ಹನುಮಂತು, ಮಲ್ಲೇಶಪ್ಪ, ಶ್ರೀಧರ್ ಕವಾಲಿ, ಪತ್ರಕರ್ತರಾದ ಪೀರಸಾಬ್, ಮುರಳಿಕಾಂತ ರಾವ್ ಇದ್ದರು.

ಗೋ ಹೆರಿಟೇಜ್ ಓಟಕ್ಕೆ ಡಿಸಿ ಕವಿತಾ ಚಾಲನೆ

ಹೊಸಪೇಟೆ: ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಅವರು ವಿಶ್ವ ಪರಂಪರೆ, ಪ್ರವಾಸೋದ್ಯಮ ಮತ್ತು ಫಿಟ್ನೆಸ್ ಅನ್ನು ಉತ್ತೇಜಿಸುವ ನಿಟ್ಟಿನಲ್ಲಿ ಭಾನುವಾರ ಹಂಪಿಯಲ್ಲಿ 21 ಕಿಮೀ ಮತ್ತು 12 ಕಿಮೀ ಮತ್ತು 5 ಕಿಮೀ ಓಟಗಳ ಗೋ ಹೆರಿಟೇಜ್ ಓಟಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ, ಹಂಪಿ ಬೌಲ್ಡರ್ಸ್ ರೆಸಾಟರ್‌ನ ಸಂಸ್ಥಾಪಕಿ ಅನ್ನಪೂರ್ಣ,ಎಂಎಸ್‌ಪಿಎಲ್ ಲಿಮಿಟೆಡ್ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಬಲ್ಡೋಟಾ ಮತ್ತಿತರರು ಇದ್ದರು.

{ಜಿ. ಪರಮೇಶ್ವರ್ } ಗೃಹ ಸಚಿವ

ತುಮಕೂರು ಜಿಲ್ಲೆಯ ಶೈಕ್ಷಣಿಕ, ನೀರಾವರಿ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳ ಸಮಗ್ರ ಅನುಷ್ಠಾನಕ್ಕಾಗಿ ಮತ್ತು ಜನಪರ ಯೋಜನೆಗಳ ಜಾರಿಗೆ ಮುಂಬರುವ ಬಜೆಟ್‌ನಲ್ಲಿ 500 ಕೋಟಿ ರು. ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇನೆ.

ಸಮಾನತೆ, ಸಾರ್ವಭೌಮತೆ ಸಾರುವ ಸಂವಿಧಾನ

ಹರಪನಹಳ್ಳಿ: ದೇಶದಲ್ಲಿ ಸಮಾನತೆಯನ್ನು ಸಾರುವುದರ ಜತೆಗೆ ಜ್ಯಾತ್ಯಾತೀತವಾಗಿ ಸಾಮಾಜಿಕವಾಗಿ, ಮತ್ತು ಶೈಕ್ಷಣಿಕವಾಗಿ ನ್ಯಾಯದ ಮೌಲ್ಯವನ್ನು ಸಂವಿಧಾನ ಎತ್ತಿ ತೋರುವುದೆ ಗಣರಾಜ್ಯೋತ್ಸವ ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ಪ್ರತಿಪಾಧಿಸಿದರು.

ನಗರದ ತಾಲೂಕು ಕ್ರೀಡಾಂಗಣದಲ್ಲಿ ತಾಲೂಕು ಆಡಳಿದವತಿಯಿಂದ ಏರ್ಪಡಿಸಲಾಗಿದ್ದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸ್ವಾತಂತ್ರ್ಯ ದಿನವು ರಾಜಕೀಯ ಸ್ವಾತಂತ್ರ್ಯವನ್ನು ಗುರುತಿಸಿದರೆ, ಗಣರಾರಾಜ್ಯೋತ್ಸವ ರಾಷ್ಟ್ರದ ಕಾನೂನು ಮತ್ತು ಸಾಂವಿಧಾನಿಕ ಅಡಿಪಾಯವನ್ನು ಪ್ರತಿನಿಧಿಸುತ್ತದೆ ಎಂದು ನುಡಿದರು.

ಕಂದಾಯ ಉಪವಿಭಾಗಾಧಿಕಾರಿ ಟಿ. ಸುರೇಶಕುಮಾರ ಧ್ವಜಾರೋಹಣ ನೆರವೇರಿಸಿ ಮಾತನಾಡಿ ಸರ್ವರಿಗೂ ಸಮಾನತೆಯನ್ನು ಸಂವಿಧಾನ ನೀಡಿದೆ, ಸಂವಿಧಾನ ಯಾರ ಸ್ವತ್ತಲ್ಲ, ಪ್ರತಿಯೊಬ್ಬರೂ ಸಂವಿಧಾನ ಗೌರವಿಸಬೇಕು ಎಂದು ತಿಳಿಸಿದರು. ಗಣತಿ ಕಾರ್ಯಯಶಸ್ವಿಗೊಳಿಸಿದ್ದಕ್ಕಾಗಿ ಬಿಇಒ ಲೇಪಾಕ್ಷಪ್ಪ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಭೀಮಪ್ಪ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಗಂಗಪ್ಪ, ಅಪರಾಧ ಪತ್ತೆ ಹಚ್ಚುವಲ್ಲಿ ಸಾಧನೆಗೈದ ಪಿಎಸ್ ಐ ಶಂಭುಲಿಂಗಹಿರೇಮಠ ಸನ್ಮಾನಿಸಲಾಯಿತು.ರವೀಂದ್ರ ಹಿರೇಮಠ, ,ರವಿ, ಪ್ರಕಾಶ, ದಿವಾಕರ, ಸಂಗಪ್ಪ, ಬಿಸಿಎಂನ ಕರಿಬಸಮ್ಮ, ಸಿಡಿಪಿಒ ದೇವಿಕಾ, ರಾಘವೇಂದ್ರ, ಎನ್.ಬಸವರಾಜ, ಗುರುರಾಜ ಸನ್ಮಾನಿಸಲಾಯಿತು. ತಹಶೀಲ್ದಾರ ಬಿ.ವಿ. ಗಿರೀಶಬಾಬು, ಡಿವೈಎಸ್‌ಪಿ ಸಂತೋಷ ಚವ್ಹಾಣ್, ತಾ.ಪಂ ಇಒ ಚಂದ್ರಶೇಖರ ವೈ.ಎಚ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಉದಯಶಂಕರ, ಉಪಸ್ಥಿತರಿದ್ದರು.

ಹರಪನಹಳ್ಳಿ ನಗರದ ತಾಲೂಕು ಕ್ರೀಡಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಲಾಗಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ ತೆರೆದ ವಾಹನದಲ್ಲಿ ಪರೇಡ್ ವೀಕ್ಷಿಸಿದರು.

77ನೇ ಗಣರಾಜ್ಯೋತ್ಸವ ಆಚರಣೆ ಸಂಭ್ರಮ

ಮುದಗಲ್: ಪುರಸಭೆ, ನಾಡ ಕಾರ್ಯಾಲಯ, ಆರಕ್ಷಕ ಠಾಣೆ, ಸಮುದಾಯ ಆರೋಗ್ಯ ಕೇಂದ್ರ, ಪಶು ಆಸ್ಪತ್ರೆ, ರೈತ ಸಂಪರ್ಕ ಕೇಂದ್ರ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಪ್ರಥಮ ದರ್ಜೆ ಕಾಲೇಜ್,ಬಸ್ ನಿಲ್ದಾಣ, ಮಾಜಿ ಶಾಸಕರ ಕಾರ್ಯಾಲಯ, ಸೇರಿದಂತೆ ವಿವಿಧಡೆ 77ನೇ ಗಣರಾಜ್ಯೋತ್ಸವ ಸಡಗರ ಸಂಭ್ರಮದಿಂದ ಆಚರಣೆ ಮಾಡಲಾಯಿತು.

ಸಂವಿಧಾನ ಶಿಲ್ಪಿ ಡಾ. ಬಿ. ಆರ್ ,ಅಂಬೇಡ್ಕರ್,ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ಪುರಸಭೆ ಮುಖ್ಯಾಧಿಕಾರಿ ಪ್ರವೀಣಕುಮಾರ ಬೋಗಾರ, ಉಪತಹಸೀಲ್ದಾರ ತುಳಜಾರಮ ಸಿಂಗ್,ಪ್ರಾಚಾರ್ಯ ಡಾ.ಸಿದ್ದರಾಮ ಪಾಟೀಲ್, ಪಿಎಸ್‌ಐ ವೆಂಕಟೇಶ ಮಾಡಗೇರಿ,ಪಶು ವೈದ್ಯಾಧಿಕಾರಿ ಶರಣಪ್ಪ ನಾಯಕ, ವೈದ್ಯಾಧಿಕಾರಿ ಡಾ. ಗೀತಾಂಜಲಿ ಸಾರಿಗೆ ಇಲಾಖೆ ಸಿಬ್ಬಂದಿ ಜಾಫರ್ ಸಂತೆಕೆಲ್ಲೂರು ರವರು ಹೂ ಮಾಲೆ ಹಾಕಿ ಪೂಜೆ ಸಲ್ಲಿಸಿ ನಂತರ ಧ್ವಜಾರೋಹಣ ನೆರವೇರಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಘಟಕ ಅಧ್ಯಕ್ಷರ ಕರಿಯಪ್ಪ ಯಾದವ, ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷ ಅರುಣಕುಮಾರ,ಕಾಂಗ್ರೆಸ್ ಯುವ ಘಟಕ ಅಧ್ಯಕ್ಷರ ಅಬ್ದುಲ್ ಖದೀರ, ಕೆಡಿಪಿ ಸದಸ್ಯ ರಾಘವೇಂದ್ರ ಕುದರಿ, ಮುನ್ನಬಾಯಿ,ಬಸವರಾಜ ಜೆಲ್ಲಿ, ತಮ್ಮಣ್ಣ ಗುತ್ತೇದಾರ, ಬಸವರಾಜ ಬಂಕದಮನಿ, ಶರಣಪ್ಪ ಕಟ್ಟಿಮನಿ ಡಾ: ವಿನೋದಕುಮಾರ, ಸಾರಿಗೆ ಇಲಾಖೆ ಸಿಬ್ಬಂದಿ ಚಂದ್ರಶೇಖರಗೌಡ ಲೆಕ್ಕಿಹಾಳ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ಇದ್ದರು.

ಪುರಸಭೆ, ನಾಡ ಕಾರ್ಯಾಲಯದಲ್ಲಿ 77ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ತಹಸೀಲ್ದಾರ್‌ಗೆ ಚುನಾವಣಾ ಪ್ರಶಸ್ತಿ ಪ್ರದಾನ

ಸಂಡೂರು: ಕರ್ನಾಟಕ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಗಳ ಕಚೇರಿಯು ನೀಡುವ ಪ್ರತಿಷ್ಠಿತ 16 ನೇ ರಾಷ್ಟ್ರೀಯ ಮತದಾರರ ದಿನದ ಅತ್ಯುತ್ತಮ ಚುನಾವಣಾ ಅಭ್ಯಾಸ ಪ್ರಶಸ್ತಿಗೆ ಸಂಡೂರು ತಾಲೂಕಿನ ತಹಸೀಲ್ದಾರ್‌ಅನಿಲ್ ಕುಮಾರ್‌ಜಿ. ಭಾಜನರಾಗಿದ್ದಾರೆ.

ಚುನಾವಣಾ ಪ್ರಕ್ರಿಯೆಯಲ್ಲಿ ತಂದ ಸುಧಾರಣೆಗಳು, ಮತದಾನದ ಜಾಗೃತಿಗಾಗಿ ಹಮ್ಮಿಕೊಂಡ ವಿನೂತನ ಕಾರ್ಯಕ್ರಮಗಳು ಮತ್ತು ಪ್ರಾಮಾಣಿಕ ಆಡಳಿತ ವೈಖರಿಯನ್ನು ಗುರುತಿಸಿ ಈ ಗೌರವವನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ತಾಲೂಕಿನಾದ್ಯಂತ ಅಭಿನಂದನೆಗಳ ಮಹಾಪೂರವೇ ಹರಿದುಬರುತ್ತಿದೆ.ಅನಿಲ್ ಕುಮಾರ್‌ಅವರ ಸಾಧನೆಗೆ ಸಂಡೂರು ತಾಲೂಕು ಆಡಳಿತದ ಸಮಸ್ತ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹರ್ಷ ವ್ಯಕ್ತಪಡಿಸಿದ್ದಾರೆ. ಅನಿಲ್ ಕುಮಾರ್‌ಅವರ ಸಮರ್ಪಿತ ಸೇವೆ ಮತ್ತು ಚುನಾವಣಾ ಕರ್ತವ್ಯದಲ್ಲಿನ ನವೀನ ಪ್ರಯೋಗಗಳು ಇಡೀ ತಾಲೂಕಿಗೆ ಹೆಮ್ಮೆ ತಂದಿವೆ. ಅವರ ಈ ಸಾಧನೆ ಉಳಿದ ಅಧಿಕಾರಿಗಳಿಗೆ ಪ್ರೇರಣೆಯಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆ, ಡಾ. ಐ. ಆರ್. ಅಕ್ಕಿ. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಪಂಚಾಯತಿ, ಮಡಗಿನ ಬಸಪ್ಪ ಶ್ಲಾಘಿಸಿದ್ದಾರೆ.

16 ನೇ ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ತಹಸೀಲ್ದಾರ್ ಅನಿಲ್ ಕುಮಾರ್‌ಜಿ.ಗೆ ಅತ್ಯುತ್ತಮ ಚುನಾವಣಾ ಅಭ್ಯಾಸ ಪ್ರಶಸ್ತಿ ನೀಡಿ ಗೌರವಿಸಲಾಯಿತು

ಬಲಿಷ್ಠ ರಾಷ್ಟ್ರ ಕಟ್ಟಲು ಎಲ್ಲರೂ ಕೈ ಜೋಡಿಸಿ

ಮಸ್ಕಿ: ಇಲ್ಲಿಯ ಸರಕಾರಿ ಕೇಂದ್ರ ಶಾಲೆ ಮೈದಾನದಲ್ಲಿ 77 ನೇ ಗಣ ರಾಜ್ಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ತಹಸೀಲ್ದಾರ್‌ಮಂಜುನಾಥ ಭೋಗಾವತಿ ರಾಷ್ಟ್ರ ಧ್ವಜಾರೋಹರಣ ನೆರವೇರಿಸಿದರು. ಶಾಸಕ ಬಸನ ಗೌಡ ತುರ್ವಿ ಹಾಳ ಅವರು ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿ ದೇಶ ಪ್ರೇಮ ಬೆಳೆಸಿ ಕೊಳ್ಳ ಬೇಕು, ಬಲಿಷ್ಠ ರಾಷ್ಟ್ರ ಕಟ್ಟಲು ಎಲ್ಲರೂ ಕೈ ಜೋಡಿಸ ಬೇಕು ಎಂದರು.

ವೇದಿಕೆಯಲ್ಲಿ ಪುರಸಭೆ ಅಧ್ಯಕ್ಷ ಸುರೇಶ ಹರಸೂರು, ಸಿಪಿಐ ರಾಮಣ್ಣ ಜಬಲ ಗೇರಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸಿದ್ದನ ಗೌಡ ತುರ್ವಿಹಾಳ, ತಾಪಂ. ಅಧಿಕಾರಿ ಅಮರೇಶ ಯಾದವ್, ಪುರಸಭೆ ಮುಖ್ಯಾಧಿಕಾರಿ ನರಸ ರೆಡ್ಡಿ, ನೀರಾವರಿ ನಿಗಮ ಎಂಜಿನಿಯರ್ ದಾವೂದ್, ಗುರುಮೂರ್ತಿ,ಡಿಪೋ ಮ್ಯಾನೇಜರ್‌ಆದಪ್ಪ ಕುಂಬಾರ , ಜೆಸ್ಕಾಂ ಎಂಜಿನಿಯರ್‌ವೆಂಕಟೇಶ ಸೇರಿದಂತೆ ನಾನಾ ಇಲಾಖೆಯ ಅಧಿಕಾರಿಗಳು, ಗಣ್ಯರು ಇದ್ದರು.

ಗಣ ರಾಜ್ಯೋತ್ಸವ ನಿಮಿತ್ತ ಮಸ್ಕಿಯ ಕೇಂದ್ರ ಶಾಲೆ ಬಳಿ ಧ್ವಜಾ ರೋಹಣ ನೆರವೇರಿಸಲಾಯಿತು.

ಹೊಡಿ ಬಡಿ ರಾಜಕಾರಣ ರಾಜ್ಯಕ್ಕೆ ಕಳಂಕ

ಗಂಗಾವತಿ: ಸಭ್ಯ ರಾಜಕಾರಣಕ್ಕೆ ಹೆಸರಾಗಿದ್ದ ಕರ್ನಾಟಕದಲ್ಲಿ ಈಗ ಎಲ್ಲಿ ನೋಡಿದರೂ ಬರೀ ಹೊಡಿ-ಬಡಿ ರಾಜಕಾರಣ ಶುರುವಾಗಿದ್ದು, ರಾಜ್ಯ ಕುಖ್ಯಾತಿ ಪಡೆಯುತ್ತಿದೆ ಎಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಬೇಸರ ವ್ಯಕ್ತಪಡಿಸಿದರು.

ನಗರದ ತಾಲೂಕು ಕ್ರೀಡಾಂಗಣಲ್ಲಿ ನಡೆದ 77ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇಶದಲ್ಲಿ ಸಂವಿಧಾನ ಅಸ್ತಿತ್ವಕ್ಕೆ ಬಂದ ಪವಿತ್ರ ದಿನವಿದು. ಸ್ವಾತಂತ್ರ್ಯ ಸಿಕ್ಕ ದಿನವನ್ನು ಎಷ್ಟು ಸಂಭ್ರಮದಿಂದ ಆಚರಿಸುತ್ತೇವೋ ಅಷ್ಟೇ ಸಂಭ್ರಮದಿಂದ ಈ ದಿನ ಆಚರಿಸುತ್ತೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷ ನಡುವೆ ಆರೋಪ-ಪ್ರತ್ಯಾರೋಪ ಸಹಜ. ಬಳ್ಳಾರಿಯಲ್ಲಿ ನನ್ನ ಮನೆಯ ಮೇಲೆ ದಾಳಿಯಲ್ಲಿ 25 ವರ್ಷದ ಯುವಕನ ಕೊಲೆಯಯಾದಾಗ ಉಪ ಮುಖ್ಯಮಂತ್ರಿಯಂತ ಉನ್ನತ ಸ್ಥಾನದಲ್ಲಿರುವ ಡಿ.ಕೆ.ಶಿವಕುಮಾರ ಮಾತಿನ ರೀತಿ ಬೇಜವಾಬ್ದಾರಿತನದ್ದು. ರೆಡ್ಡಿ ಬೇಕಿದ್ದರೆ ಅಮೆರಿಕಾ, ಇರಾನ್, ರಷ್ಯಾದಂತ ದೇಶದಿಂದ ಭದ್ರತೆ ಪಡೆಯಲಿ ಎಂದು ಸಲಹೆ ನೀಡಿದ್ದು ದುರಂತ. ರಾಜ್ಯ ಎತ್ತ ಸಾಗುತ್ತಿದೆ ಎಂಬುವುದು ಆತಂಕ ತಂದಿದೆ ಎಂದು ಎಂದರು. ಚುನಾಯಿತ ಪ್ರತಿನಿಧಿಗಳಿಗೆ- ಅಧಿಕಾರಿಗಳಿಗೆ ಈ ರಾಜ್ಯದಲ್ಲಿ ಸುರಕ್ಷರತೆ ಇಲ್ಲ. ಇನ್ನು ಜನ ಸಾಮಾನ್ಯರ ಕಥೆ ಏನು? ಅಭಿವೃದ್ಧಿ ಕೆಲಸದಿಂದ ಸರಕಾರ ವಿಮುಖ ವಾಗಿದೆ ಎಂದರು.ತಹಸೀಲ್ದಾರ್ ಯು. ನಾಗರಾಜ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಬಿ. ನಟೇಶ್, ನಗರಸಭೆಯ ಪೌರಾಯುಕ್ತ ಆರ್. ವಿರೂಪಾಕ್ಷಮೂರ್ತಿ,ಡಿವೈಎಸ್‌ಪಿ ಜೆ.ಎಸ್. ನ್ಯಾಮಗೌಡ, ತಾಲ್ಲೂಕು ಪಂಚಾಯಿತಿ ಇಒ ರಾಮರೆಡ್ಡಿ ಪಾಟೀಲ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಇಲಿಯಾಸ್ ಖಾದ್ರಿ ಸೇರಿದಂತೆ ಇದ್ದರು.

ಗಂಗಾವತಿ ತಾಲೂಕು ಕ್ರೀಡಾಂಗಣದಲ್ಲಿ ನಡೆದ 77ನೇ ಗಣರಾಜ್ಯೋತ್ಸವದಲ್ಲಿ ಶಾಸಕ ಜನಾರ್ದನ ಭಾಗವಹಿಸಿದ್ದರು.

ಶೀಘ್ರದಲ್ಲಿ ಕನಕಗಿರಿ ರಸ್ತೆಯಲ್ಲಿ ಜಿಲ್ಲಾ ಮಟ್ಟದ ಸ್ಯಾಟ್ಲೈಟ್ ಬಸ್ ನಿಲ್ದಾಣ, 25 ಕೋಟಿ ವೆಚ್ಚದಲ್ಲಿ ರೈಲ್ವೆ ನಿಲ್ದಾಣ ಮೇಲ್ದರ್ಜೆಗೆ, ಕೆಕೆಆರ್‌ಡಿಯ 30 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ, ನಗರದಲ್ಲಿರುವ 100 ಬೆಡ್ ಆಸ್ಪತ್ರೆಯಿಂದ 150 ಬೆಡ್ ಮತ್ತು ಮಕ್ಕಳ 50 ಬೆಡ್ ಆಸ್ಪತ್ರೆ ನಿರ್ಮಾಣ ಕಾಮಗಾರಿ ಶೀಘ್ರವೇ ಆರಂಭಿಸಲಾಗುವುದು.

-ಗಾಲಿ ಜನಾರ್ದನ ರೆಡ್ಡಿ, ಶಾಸಕ

ನಮ್ಮದು ವಿಶ್ವದ ಅತಿ ದೊಡ್ಡ ಲಿಖಿತ ಸಂವಿಧಾನ

ಲಿಂಗಸೂಗೂರು: 1950 ರ ಜನವರಿ 26 ರಂದು ಲಿಖಿತ ಸಂವಿಧಾನ ಮತ್ತು ಕಾನೂನುಗಳು ಜಾರಿಗೆ ಬಂದಿದ್ದು. ಅಂದಿನಿಂದ ಭಾರತವು ಗಣರಾಜ್ಯ ಎಂದು ಘೋಷಿಸಲ್ಪಟ್ಟಿತು. ಈ ದಿನವನ್ನು ನಾವು ದೇಶಾದ್ಯಂತ ಅತ್ಯಂತ ಸಂಭ್ರಮ ಮತ್ತು ದೇಶಭಕ್ತಿಯಿಂದ ಗಣರಾಜ್ಯೋತ್ಸವ ದಿನವನ್ನಾಗಿ ಆಚರಿಸುತ್ತೇವೆ ಎಂದು ಶಾಸಕ ಮಾನಪ್ಪ ವಜ್ಜಲ್ ಹೇಳಿದರು.

ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲ ಹೋರಾಟಗಾರ ಫಲವಾಗಿ ಭಾರತವು ಸ್ವತಂತ್ರ ವಾಯಿತು. ಭಾರತೀಯರಾದ ನಮಗೆ ಜ. 26 ರಾಷ್ಟ್ರದ ಅಸ್ಮಿತೆ ಮತ್ತು ಸಾರ್ವಭೌಮತ್ವದ ಸಂಕೇತ.

ನಮಗೆ ನಮ್ಮದೇ ಆದ ಲಿಖಿತ ಸಂವಿಧಾನ ಮತ್ತು ಕಾನೂನುಗಳು ಜಾರಿಗೆ ಬಂದಿದ್ದು 1950ರ ಜನವರಿ 26 ರಂದು ಅಂದಿನಿಂದ ಭಾರತವು ಗಣರಾಜ್ಯ ಎಂದು ಘೋಷಿಸಲ್ಪಟ್ಟಿತು. ಈ ದಿನವನ್ನು ನಾವು ದೇಶಾದ್ಯಂತ ಅತ್ಯಂತ ಸಂಭ್ರಮ ಮತ್ತು ದೇಶಭಕ್ತಿಯಿಂದ ಗಣರಾಜ್ಯೋತ್ಸವ ದಿನವನ್ನಾಗಿ ಆಚರಿಸುತ್ತೇವೆ. ಭಾರತದ ಸಂವಿಧಾನವು ವಿಶ್ವದ ಅತಿದೊಡ್ಡ ಲಿಖಿತ ಸಂವಿಧಾನವಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದ ಕರಡು ಸಮಿತಿಯು ಅವಿರತ ಶ್ರಮವಹಿಸಿ ಈ ಸಂವಿಧಾನವನ್ನು ರಚಿಸಿತು ಎಂದು ಹೇಳಿದರು.

ಸಹಾಯಕ ಆಯುಕ್ತ ಬಸವಣೆಪ್ಪ ಕಲಶೆಟ್ಟಿ ಮಾತನಾಡಿ ಭಾರತವು ವೇಗವಾಗಿ ಆರ್ಥಿಕವಾಗಿ ಬೆಳೆಯುವ ದೇಶವಾಗಿದೆ ಇದರ ಹೇಳಿಗೆ ಸಹಿಸದ ಅಮೇರಿಕಾ ಆರ್ಥಿಕವಾಗಿ ಕುಗ್ಗಿಸಲು ಯತ್ನಿಸುತ್ತಿದೆ ಅದಕ್ಕೆ ತಕ್ಕ ಉತ್ತರ ನೀಡುತ್ತ ಭಾರತವು ಇಂದು ಆರ್ಥಿಕವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ 4ನೇ ಸ್ಥಾನದಲ್ಲಿದೆ ಎಲ್ಲರೂ ಆರ್ಥಿಕವಾಗಿ ಸದೃಡರಾಗಬೇಕು. ಸರ್ದಾರ್ ವಲ್ಲಭಭಾಯಿ ಪಟೇಲರು ಏಕತೆಗಾಗಿ ಶ್ರಮಿಸಿದ ದಿಮಂತ ನಾಯಕರು,ಬಂಕಿಂ ಚಂದ್ರ ಚಟರ್ಜಿ ಅವರು ವಂದೇ ಮಾತರಂ ರಚಿಸಿ ಇಂದಿಗೆ 150 ವರ್ಷದ ಪೂರೈಸಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಎಲ್ಲ ಮಹನಿಹರಿಗೆ ನಮಿಸುತ್ತ ಸಂವಿಧಾನ ರಚಿಸಿದ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸ್ಮರಿಸಿದರು.

ಹತ್ತನೇಯ ತರಗತಿಯಲ್ಲಿ ಉತ್ತಮ ಅಂಕಗಳಿಸಿದ ವಿಧ್ಯಾರ್ಥಿಗಳಿಗೆ, ಕ್ರೀಡೆಯಲ್ಲಿ ಸಾಧನೆ ಮಾಡಿದವರಿಗೆ ಸನ್ಮಾನಿಸಲಾಯಿತು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಈ ಸಂದರ್ಭದಲ್ಲಿ ತಹಸೀಲ್ದಾರ ಕು.ಸತ್ಯಮ್ಮ, ಪೊಲೀಸ್ ಉಪಾಧಿಕ್ಷ ದತ್ತಾತ್ರೇಯ ಕಾರ್ನಾಡ, ತಾ. ಪಂ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ , ಅಬಕಾರಿ ಅಧಿಕಾರಿ ಲಕ್ಷ್ಮೀದೇವಿ, ಕ್ಷೇತ್ರ ಶಿಕ್ಷಣ ಅಧಿಕಾರಿ ಸುಜಾತ ಹೂನೂರ,ಮುಖಂಡರಾದ ಪಾಮಯ್ಯ ಮುರಾರಿ, ಭೂಪನಗೌಡ ಪಾಟೀಲ, ಇದ್ದರು.

ತಾಲೂಕು ಕ್ರೀಡಾಂಗಣದಲ್ಲಿ ಧ್ವಜಾ ರೋಹಣ ಕಾರ್ಯಕ್ರಮವನ್ನು ಶಾಸಕ ಮಾನಪ್ಪ ವಜ್ಜಲ್ ನೆರವೇರಿಸಿದರು.

ಬುದ್ಧಿ ಇಲ್ಲದ ಬಿಜೆಪಿ ಜಿಲ್ಲಾಧ್ಯಕ್ಷನಿಗೆ ಉತ್ತರಿಸಲ್ಲ: ಸಚಿವ

ಕೊಪ್ಪಳ: ಬಿಜೆಪಿಗರು ವ್ಯವದಾನದಿಂದ ವಾಸ್ತವ ತಿಳಿಯದೇ ಮಾತನಾಡುತ್ತಿದ್ದಾರೆ. ಇನ್ನು ಈ ಬುದ್ಧಿ ಇಲ್ಲದ ಬಿಜೆಪಿ ಜಿಲ್ಲಾಧ್ಯಕ್ಷನಿಗೆ ಶಿಕ್ಷಣವೂ ಇಲ್ಲ, ತಿಳಿವಳಿಕೆನೂ ಇಲ್ಲ. ಇನ್ನು ಮುಂದೆ ನಾನು ಈತನಿಗೆ ಉತ್ತರಿಸುವ ಅಗತ್ಯ ಇಲ್ಲ ಎಂದು ಸಚಿವ ಶಿವರಾಜ ತಂಗಡಗಿ ತಿರುಗೇಟು ನೀಡಿದ್ದಾರೆ.

ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಈ ಪುಣ್ಯಾತ್ಮ ಮಾರ್ಚ್ ನಲ್ಲಿ ಮುಂಗಾರು ಮಳೆ ಶುರು ಆಗುತ್ತವೆ ಅಂತಿದ್ದಾನೆ.

ಎಲ್ಲಾದ್ರೂ ಮಾರ್ಚ್ ನಲ್ಲೊ ಮಳೆ ಆಗ್ತವೇನ್ರಿ? ಜೂನ್ ಫಸ್ಟ್ ವೀಕ್ ನಲ್ಲಿ ಮಳೆ ಶುರು ಆಗ್ತವೆ. ಈ ಪುಣ್ಯಾತ್ಮ, ಗೇಟ್ ನಿರ್ಮಾಣ ಆಗದಿದ್ದರೆ ಕಾರಟಗಿಯಿಂದ ಪಾದಯಾತ್ರೆ ಮಾಡುತ್ತೇನೆ ಎಂದು ಹೇಳಿದ್ದಾನೆ. ಬಿಜೆಪಿಗರ ಕಾಲು ಜಂಗ್ ಹಿಡಿದಿವೆ. ಇವರಿಂದ ಪಾದಯಾತ್ರೆ ಮಾಡಿಸಬೇಕು ಎಂಬುದು ನನ್ನ ಆಸೆ. ಆದರೆ, ರೈತರಿಗೆ ಸಮಸ್ಯೆ ಆಗಲಿದೆ ಅಂತಾ ಕಾಮಗಾರಿ ಪೂರ್ಣ ಮಾಡುತ್ತೇವೆ ಎಂದು ಮಾಜಿ ಶಾಸಕ ಬಸವರಾಜ ಧಡೆಸುಗೂರ ಅವರಿಗೆ ಪರೋಕ್ಷವಾಗಿ ಟಾಂಗ್ ನೀಡಿದರು.

ಜ.30ರ ಒಳಗೆ ತುಂಗಭದ್ರ ಡ್ಯಾಂ ನ 6 ಹೊಸ ಗೇಟ್ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳಲಿದೆ. ಈಗಾಗಲೇ 18ನೇ ಗೇಟ್ ನ ಟ್ರಯಲ್ ರನ್ ಯಶಸ್ವಿಯಾಗಿದೆ. ಫೆಬ್ರವರಿಯಲ್ಲಿ 10 ಹೊಸ ಕ್ರಸ್ಟ್ ಗೇಟ್ ನಿರ್ಮಾಣದ ಗುರಿ ಇದೆ ಎಂದು ಜಿಲ್ಲಾ ಉಸ್ತುವಾರಿ ಮಂತ್ರಿ ಶಿವರಾಜ ತಂಗಡಗಿ ಸ್ಪಷ್ಟಪಡಿಸಿದ್ದರು.

ಬಿಜೆಪಿಗರು ಆರೋಪ ಮಾಡುವ ಮೊದಲು ದಾಖಲಾತಿ ನೋಡಬೇಕು ಎಂದು ಜಿಲ್ಲಾ ಉಸ್ತುವಾರಿ ಮಂತ್ರಿ, ಖಜಾನೆಯಿಂದ ಟಿಬಿ ಬೋರ್ಡ್ ಗೆ 10 ಕೋಟಿ ರು. ಬಿಡುಗಡೆ ಮಾಡಿರುವ ದಾಖಲಾತಿ ಪ್ರದರ್ಶಿಸಿದರು.

ಶಾಸಕ ಕೆ.ರಾಘವೇಂದ್ರ ಹಿಟ್ನಾಳ, ಸಂಸದ ಕೆ.ರಾಜಶೇಖರ ಹಿಟ್ನಾಳ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ರೆಡ್ಡಿ ಶ್ರೀನಿವಾಸ, ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ, ಜಿಪಂ ಸಿಇಒ ವರ್ಣಿತ್ ನೇಗಿ, ಎಸ್‌ಪಿ ಡಾ.ರಾಮ್ ಎಲ್. ಅರಸಿದ್ಧಿ, ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ತಹಸೀಲ್ದಾರ್‌ವಿಠ್ಠಲ ಚೌಗಲಾ ಇದ್ದರು.



ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ಸುದ್ದಿಗಾರರೊಂದಿಗೆ ಸಚಿವ ಶಿವರಾಜ ತಂಗಡಗಿ ಮಾತನಾಡಿದರು.

ಸ್ವತಂತ್ರ ಗಣತಂತ್ರ ಆಡಳಿತ ವ್ಯವಸ್ಥೆ ನಮ್ಮದು

ಕಾರಟಗಿ: ಡಾ.ಬಿ.ಆರ್.ಅಂಬೇಡ್ಕರ್ ಸೇರಿ ಇನ್ನಿತರ ಮಹನೀಯರ ಸತತ ಪರಿಶ್ರಮದಿಂದ ದೇಶ ಸಂವಿಧಾನ ಹೊಂದಿ, ಸರ್ವ,ಸ್ವತಂತ್ರ ಗಣರಾಜ್ಯವಾಗಿ ಘೋಷಣೆ ಮಾಡಿಕೊಂಡಿದೆ ಎಂದು ತಹಸೀಲ್ದಾರ್‌ಎಂ.ಕುಮಾರಸ್ವಾಮಿ ಹೇಳಿದರು. ಪಟ್ಟಣದ ಸಿದ್ದೇಶ್ವರ ರಂಗ ಮಂದಿರದಲ್ಲಿ ತಾಲೂಕಾಡಳಿತದಿಂದ ಹಮ್ಮಿಕೊಂಡಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿರಲಿಲ್ಲ. ಮೊದಲು ರಾಜಮನೆತನಗಳು ಬಳಿಕ ಪರಕೀಯರ ಆಡಳಿತಕ್ಕೆ ಒಳಪಟ್ಟಿದ್ದೆವು. ಈ ಎಲ್ಲ ರಾಜ ಮನೆತನಗಳನ್ನು ಒಟ್ಟುಗೂಡಿಸಿ ಗಣರಾಜ್ಯ ವನ್ನಾಗಿ ಮಾಡಲಾಯಿತು. ನಂತರ ಸಂವಿಧಾನದ ಮೂಲಕ ನಮಗೆ ನಾವೇ ಶಕ್ತಿ ಕೊಟ್ಟುಕೊಂಡ ಮಹಾ ಸುದಿನ ಈ ದಿನ. ಈ ಪವಿತ್ರ ದಿನವನ್ನು ನಾವೆಲ್ಲ ಭಾರತೀಯರು ಬಹಳ ಸಂಭ್ರಮ ದಿಂದ ಆಚರಿಸಬೇಕು ಎಂದರು. ಈ ವೇಳೆ ಪುರಸಭೆ ಅಧ್ಯಕ್ಷ ಮಂಜುನಾಥ್ ಮೇಗೂರು, ಅಗ್ನಿ ಶಾಮಕ ಇಲಾಖೆಯ ದಯಾನಂದಗೌಡ, ಉಪಾಧ್ಯಕ್ಷೆ ಸುಜಾತಾ ನಾಗರಾಜ್ ಭಜಂತ್ರಿ, ಪಿಐ ಸುಧೀರ್‌ಬೆಂಕಿ, ಇಸಿಒ ಶಶಿಧರಸ್ವಾಮಿ, ಗ್ಯಾರಂಟಿ ಸಮಿತಿ ಜಿಲ್ಲಾ ಸಮಿತಿ ಸದಸ್ಯ ಸೋಮನಾಥ್ ದೊಡ್ಡಮನಿ, ಕೆಡಿಪಿ ನಾಮ ನಿರ್ಧೇಶಿತ ಸದಸ್ಯರಾದ ಬಸವರಾಜ ಗುಂಡೂರು ಹೋಟೆಲ್, ಬಸವರಾಜ ಉಳೇನೂರು, ಚಂದ್ರಶೇಖರ ಉಪ್ಪಾರ, ಭೂನ್ಯಾಯ ಮಂಡಳಿಯ ಸದಸ್ಯ ದೇವರಾಜ್ ನಾಯಕ ತೊಂಡಿಹಾಳ, ಶೇಷಗಿರಿ ಕಟ್ಟಿಮನಿ ವಕೀಲರು, ಸಿ.ಆರ್.ಪಿ ಮಂಜುನಾಥ್ ಚಿಕೇನಕೊಪ್ಪ, ತಿಮ್ಮಣ್ಣ ನಾಯಕ, ಶಿಕ್ಷಕ, ಜನಪದ ಅಕಾಡೆಮಿ ಸದಸ್ಯ ಮಹಿಬೂಬ್ ಕಿಲ್ಲೆದಾರ್‌ಇದ್ದರು.

ಸಮಾಚಾರ ಸಣ್ಣದಲ್ಲ

ಎಲ್ಲ ಚುನಾವಣೆಗಳಿಗೂ ರಾಜ್ಯದಿಂದಲೇ ಹಣ

ಯಾದಗಿರಿ: ರಾಜ್ಯದ ಹಣ ಲೂಟಿ ಮಾಡಿ ಬೇರೆ ರಾಜ್ಯದ ಎಲ್ಲಾ ಚುನಾವಣೆಗೂ ಕರ್ನಾಟಕದಿಂದಲೇ ಕಾಂಗ್ರೆಸ್ ಹಣ ರವಾನೆ ಮಾಡುತ್ತಿದೆ ಎಂದು

ಮೇಲ್ಮನೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ. ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಗಣರಾಜ್ಯೋತ್ಸವ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್‌ನವರು ಸುಳ್ಳ ಹೇಳುವುದರಲ್ಲಿ ನಿಸ್ಸಿಮರು, ಸಿದ್ದರಾಮಯ್ಯನವರು ಸುಳ್ಳಿನ ಸರದಾರರು. ರಾಜ್ಯವನ್ನು ಲೂಟಿ ಹೊಡೆದು ಸರಕಾರ ನಡೆಸುವ ಪರಿಸ್ಥಿತಿ ಎದುರಾಗಿದೆ ಎಂದು ದೂರಿದ್ದಾರೆ. ಮಹಾರಾಷ್ಟ್ರದ ಗಡಿ ಭಾಗದಲ್ಲಿ 400 ಕೋಟಿ ರು. ಹೈಜಾಕ್ ಮಾಡಲಾಗಿದೆ ಎನ್ನಲಾಗುತ್ತಿದೆ. ಇದರ ಹಿಂದೆ ಕಾಂಗ್ರೆಸ್ ನಾಯಕರ ಕೈವಾಡ ಇದೆ. ಮಹಾರಾಷ್ಟ್ರದಲ್ಲಿ ಬಿಜೆಪಿ ಸರಕಾರವಿದ್ದರೂ ರಾಜ್ಯದ ಕಾಂಗ್ರೆಸ್ ನಾಯಕರ ಪ್ರಾಬಲ್ಯ ಹಾಗೂ ಲೂಟಿತನದಿಂದ ಮಹಾರಾಷ್ಟ್ರದವರೆಗೂ ತಮ್ಮ ಲೂಟಿತನದ ಅಜಾನುಭಾವು ಚಾಚಿ ಸರಕಾರ ನಡೆಸುವ ದುಸ್ಥಿತಿಗೆ ಇಳಿದಿದ್ದಾರೆ ಎಂದು ಆರೋಪಿಸಿದರು.

ಬಾಗಲಕೋಟೆ: 10 ಜನರಿಗೆ ನಾಯಿ ಕಡಿತ

ಬಾಗಲಕೋಟೆ: ಪ್ರವಚನ ಮುಗಿಸಿಕೊಂಡು ಬರುತ್ತಿದ್ದ 10 ಜನರಿಗೆ ನಾಯಿ ಕಡೆದಿರುವ ಘಟನೆ ಹಳೇ ನಗರದ ಟೀಕಿನ ಮಠದ ಬಳಿ ಜರುಗಿದೆ. ಟೀಕಿನ ಮಠದಲ್ಲಿ ಪ್ರವಚನ ಸಮಾರಂಭ ಮುಗಿಸಿ ಮನೆಗೆ ಹೊರಟಾಗ ಮಕ್ಕಳು, ಮಹಿಳೆಯರು, ಯುವಕರ ಮೇಲೆ ನಾಯಿಯೊಂದು ಕಚ್ಚಿಗಾಯಿಗೊಳಿಸಿರುವುದು ಕಂಡು ಬಂದಿದೆ. ಬಹುತೇಕ ಕೈ-ಕಾಲು ಭಾಗದಲ್ಲಿ ಕಚ್ಚಿಗಾಯಗೊಳಿಸಿದ್ದು, ಭಾರೀ ಪ್ರಮಾಣದ ಗಾಯಗಳಾಗಿವೆ. ಶ್ರೀಮಠದ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಜರುಗಿಸುವ ನಿಟ್ಟಿನಲ್ಲಿ ಸಂಸದ ಪಿ.ಸಿ.ಗದ್ದಿಗೌಡರ ನೇತೃತ್ವದಲ್ಲಿ ಸ್ವಾಗತ ಸಮಿತಿಯನ್ನು ರಚಿಸಲಾಗಿದ್ದು, ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಇತ್ತೀಚೆಗೆ ನಗರಸಭೆ ಸಿಬ್ಬಂದಿಗೆ ಸ್ವಚ್ಛತೆ ಕಾಯ್ದುಕೊಳ್ಳುವಂತೆ ಸೂಚಿಸಿದ್ದರು. ಅದೆಲ್ಲದರ ನಡುವೆ ನಾಯಿ ದಾಳಿ ಮಾಡಿರುವುದು ಆತಂಕಕ್ಕೆ ಕಾರಣವಾಗಿದೆ. ನಾಯಿಯನ್ನು ನಗರಸಭೆ ಸಿಬ್ಬಂದಿ ಸೆರೆಹಿಡಿದಿರುವ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಪದೇ, ಪದೇ ನಗರದಲ್ಲಿ ಇಂಥ ಘಟನೆಗಳು ಜರುಗುತ್ತಿದ್ದರೂ ನಗರಸಭೆ ಸಿಬ್ಬಂದಿ ತೋರುತ್ತಿರುವ ನಿರ್ಲಕ್ಷ್ಯದ ಬಗ್ಗೆ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರಶಸ್ತಿಗಳ ಮೂಲಕ ಬಿಜೆಪಿ ರಾಜಕೀಯ

ದೆಹಲಿ: ಕೇಂದ್ರ ಸರಕಾರ ಈ ಬಾರಿ ಸಾಧಕರಿಗೆ ನೀಡಿರುವ ಪದ್ಮ ಪುರಸ್ಕಾರಗಳು ಈಗ ವಿವಾದಕ್ಕೆ ಕಾರಣವಾಗಿದೆ. ಮುಂಬರುವ ಕೇರಳ, ತಮಿಳುನಾಡು,

ಪಶ್ಚಿಮ ಬಂಗಾಳ ವಿಧಾನ ಸಭಾ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪದ್ಮ ಪ್ರಶಸ್ತಿ ನೀಡಲಾಗಿದೆ ಎಂಬ ಆರೋಪ ಕೇಳಿ ಬಂದಿದ್ದು, ರಾಷ್ಟ್ರೀಯ ಗೌರವಗಳನ್ನು ಚುನಾವಣಾ ಸಾಧನವನ್ನಾಗಿ ಬಿಜೆಪಿ ಬಳಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ಟೀಕಿಸಿದೆ. ಬಿಜೆಪಿಯನ್ನು ಸದಾ ವಿರೋಧಿಸುತ್ತಿದ್ದ ಮಾಜಿ ಸಿಎಂ ಕಮ್ಯುನಿಸ್ಟ್ ನಾಯಕ ದಿವಂಗತ ಅಚ್ಯುತಾನಂದನ್‌ಗೆ ಮರಣೋತ್ತರ ಪದ್ಮ ವಿಭೂಷಣ ಸೇರಿ ಕೇರಳಕ್ಕೆ 8 ಪದ್ಮ ಪುರಸ್ಕಾರ ನೀಡಿದೆ, ತಮಿಳುನಾಡಿಗೆ 13, ಪಶ್ಚಿಮ ಬಂಗಾಳಕ್ಕೆ 11 ಸಾಧಕರಿಗೆ ಪುರಸ್ಕಾರ ನೀಡಿದೆ. ಕಾಂಗ್ರೆಸ್ ಡೇಟಾ ವಿಶ್ಲೇಷಣೆ ವಿಭಾಗದ ಮುಖ್ಯಸ್ಥ ಪ್ರವೀಣ್ ಚಕ್ರವರ್ತಿ ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಕೇಂದ್ರದ ನಿರ್ಧಾರವನ್ನು ಟೀಕಿಸಿದ್ದಾರೆ. ಇದು ಪದ್ಮ ಪ್ರಶಸ್ತಿಗಳ ಚುನಾವಣೆ. ಮೋದಿ ಸರಕಾರ ಪದ್ಮ ಪ್ರಶಸ್ತಿಗಳನ್ನೂ ಸಹ ಚುನಾವಣಾ ಅಸ್ತ್ರವನ್ನಾಗಿ ಪರಿವರ್ತಿಸಿದೆ. ಈ ವರ್ಷದ ಪದ್ಮ ಪ್ರಶಸ್ತಿ ಪುರಸ್ಕೃತರಲ್ಲಿ 37%ರಷ್ಟು ಚುನಾವಣಾ ರಾಜ್ಯಗಳಿಂದ ಬಂದವರಾಗಿದ್ದಾರೆ, ಜನಸಂಖ್ಯೆಯಲ್ಲಿ ಅವರ ಪಾಲು ಕೇವಲ 18%ರಷ್ಟಿದೆ. ಈ ಮಾದರಿಯು ನಿರಂತರವಾಗಿ ಪುನರಾವರ್ತನೆಯಾಗುತ್ತಿದೆ ಎಂದು ಹೇಳಿದ್ದಾರೆ.

ರಷ್ಯಾ ತೈಲ ಖರೀದಿ : ರಿಲಾಯನ್ಸ್ ದೂರ

ದೆಹಲಿ: ಭಾರತದ ಅತೀ ದೊಡ್ಡ ರಷ್ಯಾದ ಕಚ್ಚಾ ತೈಲ ಖರೀದಿದಾರ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, ಜನವರಿಯಲ್ಲಿ ರಷ್ಯಾದಿಂದ ಯಾವುದೇ ಬ್ಯಾರೆಲ್

ಗಳನ್ನು ಖರೀದಿಸಿಲ್ಲ. ಆದರೆ ಸರಕಾರಿ ಸ್ವಾಮ್ಯದ ಸಂಸ್ಕರಣಾಗಾರಗಳು ಬ್ಯಾರೆಲ್‌ಗೆ ಸುಮಾರು 7 ಡಾಲರ್ ತಲುಪಿದ ರಿಯಾಯಿತಿಗಳ ಪರಿಣಾಮವಾಗಿ ರಷ್ಯಾದಿಂದ ಆಮದುಗಳನ್ನು ಹೆಚ್ಚಿಸಿವೆ. ಇದು 2025ರ ಮಧ್ಯದಲ್ಲಿ ಕಂಡುಬಂದ ಮಟ್ಟವನ್ನು ಮೂರು ಪಟ್ಟು ಹೆಚ್ಚಿಸಿದೆ. 2025ರಲ್ಲಿ ದಿನಕ್ಕೆ ಸುಮಾರು 600,000 ಬ್ಯಾರೆಲ್‌ಗಳಷ್ಟು ಸಮುದ್ರದ ಮೂಲಕ ರಷ್ಯಾದ ತೈಲವನ್ನು ವಿಶ್ವದ ಅತಿದೊಡ್ಡ ಖರೀದಿದಾರ ಎಂದು ಬಿಂಬಿಸಲ್ಪಟ್ಟ ರಿಲಯನ್ಸ್, ಜನವರಿಯ ಮೊದಲ ಮೂರು ವಾರಗಳಲ್ಲಿ ಯಾವುದೇ ರಷ್ಯಾದ ಕಚ್ಚಾ ತೈಲವನ್ನು ಖರೀದಿ ಸಲಿಲ್ಲ ಎಂದು ಉದ್ಯಮ ಮೂಲಗಳು ತಿಳಿಸಿವೆ ಮತ್ತು ಹಡಗು ಟ್ರ್ಯಾಕಿಂಗ್ ಡೇಟಾ ತೋರಿಸಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಸರಕಾರಿ ಅಧಿಕಾರಿಯ ನಿಸ್ವಾರ್ಥ ಸೇವೆ | ಭಾವಿಕೇರಿಯ ರಾಘವೇಂದ್ರ ಭಟ್ ಕಾರ್ಯಕ್ಕೆ ಶ್ಲಾಘನೆ

ಗಡಿ ಕಾಯುತ್ತಿವೆ ಅಂಕೋಲಾದ 40 ಶ್ವಾನಗಳು!

ಕಾರವಾರ: ದೇಶದ ಗಡಿಯಲ್ಲಿ ಜೀವ ಪಣಕ್ಕಿಟ್ಟು ಕರ್ತವ್ಯ ನಿರ್ವಹಿಸುವ ಸೈನಿಕರ ಸೇವೆ ಎಷ್ಟು ಅಮೂಲ್ಯವೋ, ಅವರೊಂದಿಗೆ ಹೆಜ್ಜೆ ಹಾಕಿ ಅಪಾಯಕಾರಿ ಕಾರ್ಯಾಚರಣೆಗಳಲ್ಲಿ ಪಾಲ್ಗೊಳ್ಳುವ ಮೂಲಕ ಶತ್ರುಗಳನ್ನ ಸದೆಬಡಿದು, ಆಪತ್ತನ್ನು ನೀಗಿಸುವ ಸೈನ್ಯದಲ್ಲಿನ ಶ್ವಾನಗಳ ಸೇವೆಯೂ ಅಷ್ಟೇ ಮಹತ್ವದ್ದಾಗಿದೆ.

ಬಾಂಬ್ ಪತ್ತೆ, ಮಾದಕ ವಸ್ತು ಶೋಧನೆ, ಉಗ್ರರ ಪತ್ತೆ ಕಾರ್ಯಾಚರಣೆಗಳಲ್ಲಿ ಮಾನವನಿಗಿಂತ ವೇಗವಾಗಿ ಮತ್ತು ನಿಖರವಾಗಿ ಕಾರ್ಯನಿರ್ವಹಿಸುವ ಈ ಶ್ವಾನಗಳು ದೇಶರಕ್ಷಣೆಯ ಮೌನ ಯೋಧರಂತೆ ಕಾರ್ಯನಿರ್ವಹಿಸುತ್ತಿವೆ. ಇಂತಹ ಶ್ವಾನಗಳನ್ನು ದೇಶಸೇವೆಗೆ ಸಮರ್ಪಿಸುವ ಅಪರೂಪದ ಕಾರ್ಯವನ್ನು ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲೂಕಿನ ಭಾವಿಕೇರಿ ಗ್ರಾಮದ ರಾಘವೇಂದ್ರ ಭಟ್ ಅವರು ಮಾಡುತ್ತಿದ್ದಾರೆ.

ರಾಘವೇಂದ್ರ ಭಟ್ ಅವರಿಗೆ ಸೈನ್ಯ ಸೇರಿ ದೇಶಸೇವೆ ಮಾಡುವ ಅಪಾರ ಆಸೆ ಇತ್ತು. ಆದರೆ ವಿವಿಧ ಕಾರಣಗಳಿಂದ ಆ ಕನಸು ನನಸಾಗಲಿಲ್ಲ. ಆದರೂ ದೇಶಕ್ಕಾಗಿ ಏನಾದರೂ ಮಾಡಬೇಕು ಎಂಬ ಹಂಬಲ ಅವರ ಮನದಲ್ಲಿ ಸದಾ ಜೀವಂತವಾಗಿತ್ತು. ಬಳಿಕ ಅವರು ಜಿಲ್ಲಾ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದರೂ, ದೇಶರಕ್ಷಣೆಗೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡಬೇಕೆಂಬ ಆಲೋಚನೆ ಅವರನ್ನು ಬಿಡಲಿಲ್ಲ. ಶ್ವಾನ ಪ್ರಿಯರಾಗಿದ್ದ ರಾಘು ಭಟ್, ಆರಂಭದಲ್ಲಿ ಮನೆಯಲ್ಲೇ ಕೆಲವು ತಳಿಯ ಶ್ವಾನಗಳನ್ನು ಸಾಕಿದ್ದರು. ತಮ್ಮ ಶ್ವಾನಗಳನ್ನು ಡಿಫೆನ್ಸ್‌ಗೆ ನೀಡಬೇಕು. ದೇಶಸೇವೆ ಮಾಡಬೇಕು ಎಂಬ ಹಂಬಲದಲ್ಲಿ ಈ ಬಗ್ಗೆ ಡಿಫೆನ್ಸ್‌ಗೆ ಮನವಿ ಮಾಡಿದ್ದರು.

ಹೀಗಾಗಿ ಅವರು ಸೈನ್ಯದಲ್ಲಿ ಬಳಸಲಾಗುವ ಶ್ವಾನಗಳ ತಳಿ, ಗುಣಲಕ್ಷಣಗಳ ಬಗ್ಗೆ ಅಧ್ಯಯನ ನಡೆಸಿ, ಸೈನ್ಯಕ್ಕೆ ಅತ್ಯುತ್ತಮವಾಗಿ ಹೊಂದಿಕೊಳ್ಳುವ ಬೆಲ್ಜಿಯಂ ಮೆಲಿನೋವಾ ತಳಿಯ ಮೇಲೆ ಗಮನಹರಿಸಿದರು. ಅದಕ್ಕಾಗಿಯೇ ವಿದೇಶದಿಂದ ಲಕ್ಷಾಂತರ ರುಪಾಯಿ ವ್ಯಯಿಸಿ ಬೆಲ್ಜಿಯಂ ಮೆಲಿನೋವಾ ತಳಿಯ ಮರಿಗಳನ್ನು ಮನೆಗೆ ತಂದರು.

2020ರಲ್ಲಿ ಆರಂಭವಾದ ದೇಶಸೇವೆಯ ಪಯಣ : ಸೈನ್ಯದ ಕಠಿಣ ಮಾನದಂಡಗಳನ್ನು ಪೂರೈಸುವ ಶ್ವಾನಗಳ ಅಗತ್ಯತೆಯನ್ನು ಅರಿತ ರಾಘವೇಂದ್ರ ಭಟ್, 2020ರಲ್ಲಿ ಹೊರದೇಶದಿಂದ ಎರಡು ಬೆಲ್ಜಿಯಂ ಮೆಲಿನೋವಾ ತಳಿಯ ಶ್ವಾನಗಳನ್ನು ತರಿಸಿಕೊಂಡರು. ಇವುಗಳನ್ನು ವೈಜ್ಞಾನಿಕವಾಗಿ, ಪ್ರೀತಿಯಿಂದ ಮತ್ತು ಶಿಸ್ತುಬದ್ಧವಾಗಿ ಸಾಕಿ, ಅವುಗಳ ಮರಿಗಳನ್ನು ದೇಶಸೇವೆಗೆ ನೀಡುವ ದೃಢ ನಿರ್ಧಾರ ಕೈಗೊಂಡರು. ಡಿಫೆನ್ಸ್ ಇಲಾಖೆಯನ್ನು ಸಂಪರ್ಕಿಸಿ ತಮ್ಮ ಶ್ವಾನಗಳನ್ನು ದೇಶಸೇವೆಗೆ ನೀಡುವ ಮನವಿ ಮಾಡಿಕೊಂಡರು. ಇದಕ್ಕೆ ಸ್ಪಂದಿಸಿದ ಸೇನೆ, ತಾವೇ ಖುದ್ದಾಗಿ ಅಂಕೋಲಾದ ಇವರ ನಿವಾಸಕ್ಕೆ ಬಂದು ಶ್ವಾನಗಳ ಪರೀಕ್ಷೆ ನಡೆಸಿತು. ಮೊದಲ ಹಂತದಲ್ಲೇ ಎರಡು ಶ್ವಾನದ ಮರಿಗಳು ಸೈನ್ಯದ ಕಠಿಣ ಪರೀಕ್ಷೆಗಳನ್ನು ಉತ್ತೀರ್ಣಗೊಂಡು ಆಯ್ಕೆಯಾದವು. ಶ್ವಾನಗಳ ಕಾರ್ಯಕ್ಷಮತೆ, ಬುದ್ಧಿಮತ್ತೆ ಹಾಗೂ ಶಿಸ್ತು ಕಂಡು ಸಂತೃಪ್ತಗೊಂಡ ಸೇನೆ ಶ್ವಾನಗಳ ಬೇಡಿಕೆ ಇಟ್ಟಿತು.

ಲೀಸಾ, ಟೈನಿ, ಕ್ಲಿಯಾ, ಕಿಂಗ್ ಫೈಟರ್ ಮತ್ತು ಡೆವಿಲ್ ಎಂಬ ಐದು ಬೆಲ್ಜಿಯಂ ಮೆಲಿನೋವಾ ಶ್ವಾನಗಳು ಇವರ ಮನೆಯಲ್ಲಿದ್ದು, ಅತೀ ಹೆಚ್ಚು ಲೀಸಾ ಶ್ವಾನದಿಂದಲೇ 20 ಮರಿಗಳನ್ನು ಅಸ್ಸಾಂ ರೈಫಲ್‌ಗೆ ಉಚಿತವಾಗಿ ನೀಡಲಾಗಿದೆ. ಉಳಿದ ಶ್ವಾನಗಳು ಸಿ.ಆರ್.ಪಿ.ಎಫ್ ಸೇರಿದಂತೆ ಇತರೆ ವಿಭಾಗಕ್ಕೆ ನೀಡಿದ್ದು ಐದು ವರ್ಷದಲ್ಲಿ 40 ಶ್ವಾನಗಳನ್ನು ನೀಡಿದ ಹೆಗ್ಗಳಿಕೆ ಇವರದ್ದಾಗಿದ್ದು ದೇಶದ ಗಡಿಯಲ್ಲಿ ಸೇವೆ ಸಲ್ಲಿಸುತ್ತಿವೆ.

ಐದು ವರ್ಷಗಳಲ್ಲಿ 40 ಶ್ವಾನಗಳು ದೇಶಸೇವೆಗೆ

ಡಿಫೆನ್ಸ್‌ನಿಂದ ಇವರಿಗೆ ಬೇಡಿಕೆ ಹೆಚ್ಚಾದಂತೆ ಈವರೆಗೆ ರಾಘವೇಂದ್ರ ಭಟ್ ಅವರು 40 ಬೆಲ್ಜಿಯಂ ಮೆಲಿನೋವಾ ತಳಿಯ ಶ್ವಾನದ ಮರಿಗಳನ್ನು ಉಚಿತವಾಗಿ ಭಾರತೀಯ ಸೈನ್ಯಕ್ಕೆ ನೀಡಿದ್ದಾರೆ. ಈ ಶ್ವಾನಗಳು ಇಂದು ಅಸ್ಸಾಂ, ಜಮ್ಮು-ಕಾಶ್ಮೀರ ಸೇರಿದಂತೆ ದೇಶದ ವಿವಿಧ ಗಡಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿವೆ. ಬಾಂಬ್ ಪತ್ತೆ, ಮಾದಕ ವಸ್ತು ಶೋಧನೆ, ಶಂಕಿತ ಪ್ರದೇಶಗಳ ತಪಾಸಣೆ ಸೇರಿದಂತೆ ಅನೇಕ ಅಪಾಯಕಾರಿ ಕಾರ್ಯಾಚರಣೆಗಳಲ್ಲಿ ಸೈನಿಕರ ಜತೆ ಹೆಗಲು ಕೊಟ್ಟು ಕಾರ್ಯನಿರ್ವಹಿಸುತ್ತಿವೆ. ಇದೇ ತಳಿಯ ಶ್ವಾನಗಳನ್ನು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಲ್ಲೂ ನಿಯೋಜಿಸಲಾಗಿದ್ದು, ಬೆಳಗಾವಿ ಹಾಗೂ ಬೆಂಗಳೂರಿನಲ್ಲಿ ಬಾಂಬ್ ಮತ್ತು ಡ್ರಗ್ಸ್ ಪತ್ತೆ ಕಾರ್ಯದಲ್ಲಿ ಬಳಕೆಯಾಗುತ್ತಿವೆ.

ಕುಟುಂಬದ ಬೆಂಬಲವೇ ಶಕ್ತಿ

ರಾಘು ಭಟ್ ಅವರ ಈ ದೇಶಸೇವೆಯ ಕಾರ್ಯದಲ್ಲಿ ಪತ್ನಿ ರಾಜೇಶ್ವರಿ ಅವರು ಸಂಪೂರ್ಣ ಬೆಂಬಲ ನೀಡುತ್ತಿದ್ದಾರೆ. ಶ್ವಾನಗಳ ಆರೈಕೆ, ಆರೋಗ್ಯ, ಮರಿಗಳ ಪಾಲನೆ ಸೇರಿದಂತೆ ಎಲ್ಲ ಕಾರ್ಯಗಳಲ್ಲಿ ಪತಿಯ ಜೊತೆಗೇ ಪತ್ನಿ ಹಾಗೂ ಕುಟುಂಬ ನಿಂತಿದ್ದಾರೆ. ಮನೆಯಲ್ಲೇ ಬೆಲ್ಜಿಯಂ ಮೆಲಿನೋವಾ ತಳಿ ಅಭಿವೃದ್ಧಿ ಕೇಂದ್ರ ಸ್ಥಾಪಿಸಿರುವ ಈ ಕುಟುಂಬ, ಪ್ರತಿ ವರ್ಷ ಹುಟ್ಟುವ ಮರಿಗಳನ್ನು ಆರೋಗ್ಯಪೂರ್ಣವಾಗಿ ಬೆಳೆಸಿ ದೇಶಸೇವೆಗೆ ಸಮರ್ಪಿಸುತ್ತಿದೆ.

ಹಿಂದೂಯೇತರರಿಗೆ ಬದರಿನಾಥ, ಕೇದಾರನಾಥ ಪ್ರವೇಶ ನಿಷೇಧ?

ದೆಹಲಿ: ಉತ್ತರಾಖಂಡದ ಗಂಗೋತ್ರಿ ಧಾಮಕ್ಕೆ ಹಿಂದೂಯೇತರರಿಗೆ ಪ್ರವೇಶ ನಿಷೇಧಿಸಲಾಗಿದೆ. ಗಂಗೋತ್ರಿ ದೇವಸ್ಥಾನ ಸಮಿತಿ ಈ ನಿರ್ಧಾರವನ್ನು ಕೈಗೊಂಡಿದೆ. ಈ ನಿರ್ಬಂಧವು ಶತಮಾನಗಳಷ್ಟು ಹಳೆಯ ಬದರಿನಾಥ ಮತ್ತು ಕೇದಾರನಾಥ ದೇವಾಲಯಗಳಿಗೂ ಹಾಗೂ ಗಂಗಾ ಮಾತೆಯ ಚಳಿಗಾಲದ ವಾಸಸ್ಥಾನವಾದ ಮುಖ್ಬಾಗೂ ಅನ್ವಯಿಸುತ್ತದೆ ಎಂದು ಸಮಿತಿ ತಿಳಿಸಿದೆ.

ಹಿಂದೂಯೇತರರಿಗೆ ಪ್ರವೇಶ ನಿಷೇಧ: ಗಂಗೋತ್ರಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಸುರೇಶ್ ಸೆಮ್ವಾಲ್ ಅವರು ಧಾಮ ಮತ್ತು ಮುಖ್ಬಾಗೆ ಹಿಂದೂಯೇತರರ ಪ್ರವೇಶ ನಿರ್ಬಂಧವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುವುದು ಎಂದು ಖಚಿತಪಡಿಸಿದ್ದಾರೆ. ಇದೇ ವೇಳೆ, ಬಿಜೆಪಿ ನಾಯಕರೂ, ಬದರಿನಾಥ-ಕೇದಾರನಾಥ ದೇವಸ್ಥಾನ ಸಮಿತಿ ಅಧ್ಯಕ್ಷರೂ ಆದ ಹೇಮಂತ್ ದ್ವಿವೇದಿ ಅವರು, ಬಿಕೆಟಿಸಿ ವ್ಯಾಪ್ತಿಯಲ್ಲಿ ಬರುವ ಬದರಿನಾಥ, ಕೇದಾರನಾಥ ಮತ್ತು ಇತರ ಎಲ್ಲಾ ದೇವಾಲಯಗಳಿಗೆ ಹಿಂದೂಯೇತರರಿಗೆ ಪ್ರವೇಶವನ್ನು ನಿಷೇಧಿಸುವ ಪ್ರಸ್ತಾವವನ್ನು ಸಮಿತಿಯ ಮುಂದಿನ ಸಭೆಯಲ್ಲಿ ಮಂಡಿಸಲಾಗುವುದು ಎಂದು ಘೋಷಿಸಿದ್ದಾರೆ.

ದ್ವಿವೇದಿ ಅವರು, ಉತ್ತರಾಖಂಡದ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಸಂರಕ್ಷಿಸುವುದು ಅತ್ಯಂತ ಮುಖ್ಯ ಎಂದು ಒತ್ತಿ ಹೇಳಿದರು. ಐತಿಹಾಸಿಕವಾಗಿ, ಕೇದಾರನಾಥ ಮತ್ತು ಮಾನ ಪ್ರದೇಶದ ದೇವಾಲಯಗಳಿಗೆ ಹಿಂದೂಗಳಿಗೆ ಮಾತ್ರ ಪ್ರವೇಶ ಸೀಮಿತವಾಗಿತ್ತು. ಬಿಜೆಪಿ ಸರ್ಕಾರವಲ್ಲದಿದ್ದಾಗ, ಈ ಸಂಪ್ರದಾಯಗಳನ್ನು ನಿರ್ಲಕ್ಷಿಸಲಾಗುತ್ತಿತ್ತು. ಈಗ ಸಂಪೂರ್ಣ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು.

ದ್ವಿವೇದಿ ಅವರು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ರಾಜ್ಯಾದ್ಯಂತ ಅಕ್ರಮ ಧಾರ್ಮಿಕ ಸ್ಥಳಗಳನ್ನು ತೆರವುಗೊಳಿಸಲು ನೀಡಿದ ನಿರ್ದೇಶನಗಳನ್ನು ಶ್ಲಾಘಿಸಿದರು. ಇದು ಉತ್ತರಾಖಂಡದ ಧಾರ್ಮಿಕ ಗುರುತು, ಸಾಂಸ್ಕೃತಿಕ ಪರಂಪರೆ ಮತ್ತು ಕಾನೂನು-ಸುವ್ಯವಸ್ಥೆಯನ್ನು ಬಲಪಡಿಸುವ ಮಹತ್ವದ ಹೆಜ್ಜೆ ಎಂದು ವ್ಯಾಖ್ಯಾನಿಸಿದರು. ರಾಜ್ಯ ಸರ್ಕಾರ ಮತ್ತು ದೇವಸ್ಥಾನ ಸಮಿತಿಗಳ ನಡುವಿನ ಸಮನ್ವಯವು ಉತ್ತರಾಖಂಡದ ದೇವಾಲಯಗಳು ಮತ್ತು ಸಂಪ್ರದಾಯಗಳ ಪವಿತ್ರತೆಯನ್ನು ಇನ್ನಷ್ಟು ರಕ್ಷಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

- ಉತ್ತರಾಖಂಡದ ಗಂಗೋತ್ರಿ ದೇವಸ್ಥಾನ ಸಮಿತಿಯಿಂದ ಪ್ರಸ್ತಾವ
- ಬದರಿ-ಕೇದಾರ ಸಮಿತಿಯ ಮುಂದಿನ ಸಭೆಯಲ್ಲಿ ಅಂತಿಮ ನಿರ್ಧಾರ

ಮೆಫೆಡ್ರೋನ್ ಉತ್ಪಾದನಾ ಘಟಕ ಪತ್ತೆಹಚ್ಚಿದ ಅಧಿಕಾರಿಗಳು

ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ ₹55 ಕೋಟಿ ಮೌಲ್ಯದ ಡ್ರಗ್ಸ್ ವಶ

ಮುಂಬೈ: ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ ಮೊಬೈಲ್ ಮೆಫೆಡ್ರೋನ್ ಉತ್ಪಾದನಾ ಘಟಕವನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ ಪತ್ತೆ ಹಚ್ಚಿ 55 ಕೋಟಿ ರು. ಮೌಲ್ಯದ ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡಿದೆ ಮತ್ತು ಐದು ಜನರನ್ನು ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಾಹಿತಿಯ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಕರಾಡ್ ತಹಸಿಲ್‌ನ ದೂರದ ಹಳ್ಳಿಯಲ್ಲಿ ಆಪರೇಷನ್ ಸಹ್ಯಾದ್ರಿ ಚೆಕ್‌ಮೇಟ್ ನಡೆಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ದೇಶದ ಪ್ರಮುಖ ಕಳ್ಳಸಾಗಣೆ ವಿರೋಧಿ ಸಂಸ್ಥೆಯ ತಂಡಗಳು ದಾಳಿ ನಡೆಸಿ, ಕೋಳಿ ಸಾಕಣೆ ಕೇಂದ್ರದಂತೆ ಮರೆಮಾಚಲಾದ ಮೆಫೆಡ್ರೋನ್ ಉತ್ಪಾದನೆಗೆ ಸಜ್ಜುಗೊಂಡ ಸಂಪೂರ್ಣ ಕಾರ್ಯಾಚರಣೆಯ ಪ್ರಯೋಗಾಲಯವನ್ನು ಪತ್ತೆಹಚ್ಚಿದವು. ಪತ್ತೆಯಿಂದ ತಪ್ಪಿಸಿಕೊಳ್ಳಲು ಘಟಕವು ಆಗಾಗ್ಗೆ ಸ್ಥಳಗಳನ್ನು ಬದಲಾಯಿಸುತ್ತಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಶಪಡಿಸಿಕೊಂಡ ಔಷಧದಲ್ಲಿ ದ್ರವ ರೂಪದಲ್ಲಿ 11.848 ಕೆಜಿ, ಅರೆ ದ್ರವ ರೂಪದಲ್ಲಿ 9.326 ಕೆಜಿ ಮತ್ತು ಸ್ಪಟಿಕದ ರೂಪದಲ್ಲಿ 738 ಗ್ರಾಮ್, ಜೊತೆಗೆ ಸುಮಾರು 55 ಕೋಟಿ ರು. ಮೌಲ್ಯದ 15 ಕೆಜಿ ಮೆಫೆಡ್ರೋನ್ ಉತ್ಪಾದಿಸುವ ಸಾಮರ್ಥ್ಯವಿರುವ 71.5 ಕೆಜಿ ಕಚ್ಚಾವಸ್ತುಗಳು ಸೇರಿವೆ ಎಂದು ಅಧಿಕಾರಿ ತಿಳಿಸಿದ್ದಾರೆ. ಮೆಫೆಡ್ರೋನ್ ಒಂದು ಸಂಶ್ಲೇಷಿತ ಉತ್ತೇಜಕವಾಗಿದ್ದು, ಇದನ್ನು ಸಾಮಾನ್ಯವಾಗಿ ಪಾರ್ಟಿ ಡ್ರಗ್ ಎಂದು ವಿವರಿಸಲಾಗುತ್ತದೆ. ಇದು ಗಂಭೀರ ಆರೋಗ್ಯ ಅಪಾಯಗಳನ್ನುಂಟು ಮಾಡುತ್ತದೆ. ತಯಾರಕ, ಹಣಕಾಸು ಉಸ್ತುವಾರಿ, ರವಾನೆದಾರ ಮತ್ತು ಕೋಳಿ ಸಾಕಣೆ ಕೇಂದ್ರದ ಮಾಲೀಕರು ಸೇರಿದಂತೆ ಮೂವರು ವ್ಯಕ್ತಿಗಳನ್ನು ಸ್ಥಳದಲ್ಲೇ ಬಂಧಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೊದಲ ಬ್ಯಾಚ್ ಕಳ್ಳಸಾಗಣೆ ವಸ್ತುವನ್ನು ತೋಟದ ಮಾಲೀಕರ ಮನೆಯಲ್ಲಿ ಬಚ್ಚಿಡಲಾಗಿತ್ತು ಎಂದು ಅವರು ಹೇಳಿದರು. ನಂತರದ ಕಾರ್ಯಾಚರಣೆಯಲ್ಲಿ, ದಟ್ಟವಾದ ಅರಣ್ಯ ಪ್ರದೇಶದ ಹಳೆಯ ಆಕ್ಟ್ರಾಯ್ ಟೋಲ್ ನಾಕಾ ಬಳಿ ಅಂತಿಮ ಉತ್ಪನ್ನವನ್ನು ಸಂಗ್ರಹಿಸಲು ಹೋಗುತ್ತಿದ್ದಾಗ ಡಿಆರ್‌ಐ ಅಧಿಕಾರಿಗಳು ಇನ್ನಿಬ್ಬರನ್ನು ಬಂಧಿಸಿದ್ದಾರೆ ಎಂದು ಅವರು ಹೇಳಿದರು. ಐದು ಆರೋಪಿಗಳಲ್ಲಿ, ನಾಲ್ವರನ್ನು ಮಾದಕ ದ್ರವ್ಯಗಳು ಮತ್ತು ಮನೋವಿಕೃತ ವಸ್ತುಗಳ (ಎನ್‌ಡಿಪಿಎಸ್) ಕಾಯ್ದೆಯಡಿ ಅಥವಾ ಎಂಸಿಒಸಿಎ (ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ) ಅಡಿಯಲ್ಲಿ ಮೊದಲೇ ಬಂಧಿಸಲಾಗಿದೆ ಎಂದು ಅಧಿಕಾರಿ ಹೇಳಿದರು. ಕಳೆದ ಎರಡು ತಿಂಗಳಲ್ಲಿ ಸತಾರಾ ಜಿಲ್ಲೆಯ ಮಾದಕ ದ್ರವ್ಯ ಉತ್ಪಾದನಾ ಘಟಕದ ಮೇಲೆ ನಡೆದ ಎರಡನೇ ದಾಳಿ ಇದು. ಕಳೆದ ತಿಂಗಳು, ಮುಂಬೈ ಅಪರಾಧ ವಿಭಾಗವು ಜವಾಲಿಯಲ್ಲಿ ದಾಳಿ ನಡೆಸಿ ರಹಸ್ಯ ಔಷಧ ಉತ್ಪಾದನಾ ಘಟಕವನ್ನು ಭೇದಿಸಿದೆ.

ಭಾರತ-ಚೀನಾ ಉತ್ತಮ ನೆರೆಹೊರೆಯ ದೇಶಗಳು

ಬೀಜಿಂಗ್: ಭಾರತ ಮತ್ತು ಚೀನಾ ಉತ್ತಮ ನೆರೆಹೊರೆಯ ದೇಶಗಳಾಗಿದ್ದು, ಸ್ನೇಹಿತರು ಮತ್ತು ಪಾಲುದಾರರಾಗಿದ್ದೇವೆ ಎಂದು ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸೋಮವಾರ ಬಣ್ಣಿಸಿದ್ದಾರೆ. 77ನೇ ಗಣರಾಜ್ಯೋತ್ಸವದಂದು ತಮ್ಮ ಭಾರತೀಯ ಸಹವರ್ತಿ ದ್ರೌಪದಿ ಮುರ್ಮು ಅವರನ್ನು ಅಭಿನಂದಿಸಿ



ಸಂದೇಶ ನೀಡಿದ ಅವರು, ಭಾರತ-ಚೀನಾ ಸಂಬಂಧಗಳು ಸುಧಾರಿಸುತ್ತಿವೆ ಮತ್ತು ಅಭಿವೃದ್ಧಿ ಹೊಂದುತ್ತಿವೆ, ಎರಡೂ ದೇಶಗಳು ಮತ್ತು ಅವರ ಜನರ ಮೂಲಭೂತ ಹಿತಾಸಕ್ತಿಗಳೊಂದಿಗೆ ಹೊಂದಿಕೆಯಾಗುತ್ತವೆ. ವಿಶ್ವ ಶಾಂತಿ ಮತ್ತು ಸಮೃದ್ಧಿಯನ್ನು ಕಾಪಾಡಿಕೊಳ್ಳಲು ಮತ್ತು ಉತ್ತೇಜಿಸಲು ಹೆಚ್ಚಿನ ಮಹತ್ವದ್ದಾಗಿವೆ ಎಂದು ಚೀನಾ ಅಧ್ಯಕ್ಷರು ಬಣ್ಣಿಸಿದ್ದಾರೆ. ಚೀನಾ ಮತ್ತು ಭಾರತ ಸಹಕಾರ ಮತ್ತು ಅಭಿವೃದ್ಧಿ ಅವಕಾಶಗಳಲ್ಲಿ ಪಾಲುದಾರರು ಎಂಬ ಪ್ರಮುಖ ಒಮ್ಮತಕ್ಕೆ ಎರಡೂ ಕಡೆಯವರು ಬದ್ಧರಾಗಿರುತ್ತಾರೆ ಎಂದು ಅವರು ಆಶಯ ವ್ಯಕ್ತಪಡಿಸಿದ್ದಾರೆ. ಉಭಯ ದೇಶಗಳ ನಡುವಣ ಕಾರ್ಯತಂತ್ರದ ಸಂವಹನ ಗಟ್ಟಿಯಾಗುತ್ತೆ, ವಿನಿಮಯ ಮತ್ತು ಸಹಕಾರ ವಿಸ್ತರಣೆ ಆಗಲಿದೆ ಪರಸ್ಪರರ ಕಳವಳಗಳಿಗೆ ಪರಿಹಾರ ಸಿಗಲಿದೆ. ಚೀನಾ-ಭಾರತ ಸಂಬಂಧಗಳ ಆರೋಗ್ಯಕರ ಮತ್ತು ಸ್ಥಿರ ಅಭಿವೃದ್ಧಿಯನ್ನು ಉತ್ತೇಜನ ಸಿಗಲಿದೆ ಎಂದು ಅವರು ಆಶಾಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಚೀನಾ ಪ್ರಧಾನಿ ಲಿ ಕಿಯಾಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಭಿನಂದನಾ ಸಂದೇಶವನ್ನು ಕಳುಹಿಸಿದ್ದಾರೆ ಎಂದು ಕ್ಸಿನ್ಹುವಾ ವರದಿ ಮಾಡಿದೆ. ಪೂರ್ವ ಲಡಾಖ್ ಬಿಕ್ಕಟ್ಟಿನ ನಂತರ 2020ರಿಂದ ಸ್ಥಗಿತಗೊಂಡಿದ್ದ ಎರಡೂ ದೇಶಗಳ ನಡುವಿನ ಸಂಬಂಧಗಳು, ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಕ್ಸಿ ನಡುವಿನ ಎರಡು ಶೃಂಗಸಭೆಗಳ ನಂತರ ಸುಧಾರಿಸಲು ಪ್ರಾರಂಭಿಸಿವೆ.

ಬಿಎಸ್‌ಎನ್‌ಎಲ್ ನೆಟ್‌ವರ್ಕ್ ಕಿರಿಕಿರಿ: ಪರಿಹಾರಕ್ಕೆ ಆದೇಶ

ಮಂಗಳೂರು: ದೋಷಯುಕ್ತ 4ಜಿ ನೆಟ್‌ವರ್ಕ್ ಒದಗಿಸಿದ್ದ ಬಿಎಸ್‌ಎನ್‌ಎಲ್ ಕಂಪನಿಗೆ ದಂಡ ವಿಧಿಸಿ ಗ್ರಾಹಕನ ಪರ ದಕ್ಷಿಣ ಕನ್ನಡ ಗ್ರಾಹಕ ನ್ಯಾಯಾಲಯ ತೀರ್ಪು ನೀಡಿದೆ.

ಮಂಗಳೂರಿನಲ್ಲಿ ವಕೀಲ ವೃತ್ತಿಯನ್ನು ಮಾಡಿಕೊಂಡಿರುವ ಯುವ ವಕೀಲ ತೇಜ ಕುಮಾರ್ ಡಿ.ಯಂ. ಅವರು ಬಿಎಸ್‌ಎನ್‌ಎಲ್ ಕಂಪನಿಯ ಸಿಮ್ ನ್ನು 2014ರಿಂದ ಉಪಯೋಗಿಸುತ್ತಿದ್ದು, 2023 ರಿಂದ 4ಜಿ ನೆಟ್‌ವರ್ಕ್ ಸಿಮ್ ಗೆ ವಿಸ್ತರಿಸಿದ್ದರು. ವಿಸ್ತರಿಸಿದ ಕೆಲವು ತಿಂಗಳು 4ಜಿ ನೆಟ್‌ವರ್ಕ್ ಲಭ್ಯವಾಗಿತ್ತು. ನಂತರದಲ್ಲಿ 4ಜಿ ನೆಟ್‌ವರ್ಕ್ ಹಠಾತ್ತಾಗಿ ಸ್ಥಗಿತಗೊಳ್ಳುತ್ತಿತ್ತು. ಸ್ವಲ್ಪ ಸಮಯ ಬಳಿಕ ಬಿಟ್ಟು ಬಿಟ್ಟು 4ಜಿ ನೆಟ್‌ವರ್ಕ್ ಲಭ್ಯವಾಗಿತ್ತು. ಈ ಬಗ್ಗೆ ಗ್ರಾಹಕರು ಹಲವಾರು ಬಾರಿ ಕಂಪನಿಗೆ ದೂರು ನೀಡಿದ್ದರು.

4ಜಿ ನೆಟ್‌ವರ್ಕ್ ಸಮಸ್ಯೆ: ಆದರೆ ಬಿಟ್ಟು ಬಿಟ್ಟು ಬರುವ 4ಜಿ ನೆಟ್‌ವರ್ಕ್ ಸಮಸ್ಯೆಯಿಂದ ಗ್ರಾಹಕರು ತೀವ್ರ ಸಮಸ್ಯೆಗೆ ಗುರಿಯಾಗಿದ್ದರು. ಸಮಸ್ಯೆಯನ್ನು ಸರಿಪಡಿಸಲು ಹಳೆಯ ಬಿಎಸ್‌ಎನ್‌ಎಲ್ ಕಂಪನಿಯ ಸಿಮ್ ನ್ನು ಕಂಪನಿಯ ನಿರ್ದೇಶನದಂತೆ ಬದಲಾಯಿಸಿ ಹೊಸ 4ಜಿ ನೆಟ್‌ವರ್ಕ್ ಸಿಮ್ ಅನ್ನೂ ಖರೀದಿಸಿದರು. ಹೊಸ ಸಿಮ್ ಕಾರ್ಡ್ ಖರೀದಿಸಿದರೂ ಕೂಡ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು ಕಂಪನಿ ವಿಫಲವಾಗಿತ್ತು. ಈ ಹಿನ್ನೆಲೆಯಲ್ಲಿ ಗ್ರಾಹಕರು ಗ್ರಾಹಕರ ಪರಿಹಾರ ಆಯೋಗಕ್ಕೆ ತೇಜ್ ಕುಮಾರ್ ಮೊರೆ ಹೋದರು. ತೇಜ ಕುಮಾರ್ ಸಲ್ಲಿಸಿದ ದೂರನ್ನು ವಿಚಾರಣೆ ನಡೆಸಿದ ಗ್ರಾಹಕರ ನ್ಯಾಯಾಲಯ ಬಿಎಸ್‌ಎನ್‌ಎಲ್ ಸಂಸ್ಥೆಯು ನಿರಂತರವಾಗಿ ಗ್ರಾಹಕರಿಗೆ ನೀಡಬೇಕು. 4ಜಿ ನೆಟ್‌ವರ್ಕ್ ಒದಗಿಸವಲ್ಲಿ ನ್ಯೂನತೆ ತೋರಿದೆ ಎಂದು ತೀರ್ಪು ನೀಡಿತು.

ಎಷ್ಟು ದಂಡ?

ಪ್ರಮಾದ ಎಸಗಿದ ಬಿಎಸ್‌ಎನ್‌ಎಲ್ ಸಂಸ್ಥೆಯು ಅನಿರ್ಬಂಧಿತ 4ಜಿ ನೆಟ್‌ವರ್ಕ್ ನಿರಂತರವಾಗಿ ನೀಡಬೇಕು ಹಾಗೂ 4ಜಿ ನೆಟ್ ವರ್ಕ್ ರಿಚಾರ್ಜ್ 3,880 ರು.ವನ್ನು ಶೇಕಡಾ 6ರ ಬಡ್ಡಿ ಮತ್ತು ಇದರ ಜತೆಗೆ ಸೇವಾ ನ್ಯೂನ್ಯತೆಗಾಗಿ 10,000 ರು. ದಂಡ ಹಾಗೂ ಪ್ರಕರಣದ ವೆಚ್ಚವಾಗಿ 5,000 ರು.ವನ್ನು 65 ದಿನದೊಳಗೆ ಪಾವತಿಸಲು ಆದೇಶ ನೀಡಿದೆ. ಮಂಗಳೂರಿನ ವಕೀಲರಾದ ತೇಜ್ ಕುಮಾರ್ ಅವರು ಸ್ವತಃ ದೂರುದಾರರಾಗಿ ವಾದ ಮಂಡಿಸಿದ್ದರು.

ಭಾನುವಾರ ನಿರ್ಮಲಾ ಸೀತಾರಾಮನ್ ಬಜೆಟ್ | ಭಾರತದ ಆರ್ಥಿಕತೆ 7.3% ಬೆಳವಣಿಗೆ ನಿರೀಕ್ಷೆ

ಕೇಂದ್ರ ಬಜೆಟ್: ಹಲವು ವಲಯ, ನಿರೀಕ್ಷೆ ಅಪಾರ

ದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರವರಿ 1ರಂದು (ಭಾನುವಾರ) ತಮ್ಮ ಸತತ ಒಂಬತ್ತನೇ ಕೇಂದ್ರ ಬಜೆಟ್ ಅನ್ನು ಮಂಡಿಸಲಿದ್ದಾರೆ. ಭಾರತದ ಆರ್ಥಿಕತೆಯು 2026ರ ಆರ್ಥಿಕ ವರ್ಷದಲ್ಲಿ 7.3%ರಷ್ಟು ಬೆಳವಣಿಗೆ ಹೊಂದಲಿದೆ ಎಂದೂ ಅಂದಾಜಿಸಲಾಗುತ್ತಿದೆ. 2027ರ ಆರ್ಥಿಕ ವರ್ಷಕ್ಕೆ ಕೇಂದ್ರ ಸರಕಾರದ ವಿತ್ತೀಯ ಕೊರತೆ (ಸರಕಾರದ ಒಟ್ಟು ವೆಚ್ಚವು ಅದರ ಒಟ್ಟು ಆದಾಯಕ್ಕಿಂತ ಹೆಚ್ಚಾಗಿರುವ ಆರ್ಥಿಕ ಪರಿಸ್ಥಿತಿ) 4.4% ಇರಲಿದೆ ಎಂದು ಸಮೀಕ್ಷೆಯೊಂದು ತಿಳಿಸಿದೆ.

ಆಟೋಮೊಬೈಲ್‌ನಿಂದ ರಕ್ಷಣೆಯವರೆಗಿನ ವಲಯದ ನಿರೀಕ್ಷೆಗಳು ಹೆಚ್ಚುತ್ತಿವೆ. ಹಾಗಾದರೆ ಯಾವ್ಯಾವ ಕ್ಷೇತ್ರದ ನಿರೀಕ್ಷೆಗಳೇನು ಎಂಬ ವಿವರ ಇಲ್ಲಿದೆ.

ರಕ್ಷಣಾ ವಲಯ: ಇತ್ತೀಚಿನ ದಿನಗಳಲ್ಲಿ ಉದ್ಭವಿಸುತ್ತಿರುವ ಭೌಗೋಳಿಕ ರಾಜಕೀಯ ಸವಾಲುಗಳ ಹಿನ್ನೆಲೆಯಲ್ಲಿ ರಕ್ಷಣಾ ವಲಯಕ್ಕೆ ಹೆಚ್ಚಿನ ಅನುದಾನ ಹಂಚಿಕೆಯಾಗುವ ಸಾಧ್ಯತೆಯಿದೆ. ಕಳೆದ ವರ್ಷ ಭಾರತದ ಯಶಸ್ವಿ ಭಯೋತ್ಪಾದನಾ ವಿರೋಧಿ ಅಭಿಯಾನವಾದ ಆಪರೇಷನ್ ಸಿಂದೂರ್ ನಡೆಸಿ ಯಶಸ್ವಿಯಾಗಿತ್ತು. ಆ ಕಾರಣಕ್ಕೆ ಈ ಸಲ ರಕ್ಷಣಾ ವಲಯದ ಮೇಲೆ ವಿಶೇಷ ಗಮನ ಹರಿಸುವ ಸಾಧ್ಯತೆಯಿದೆ. ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಷರತ್ತುಗಳನ್ನು ಸರಕಾರ ಸಡಿಲಿಸುವ ಸಾಧ್ಯತೆಯಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಎಫ್‌ಡಿಐ ಮಿತಿಯನ್ನು ಪ್ರಸ್ತುತ ಶೇ. 49ರಿಂದ ಶೇ. 74ಕ್ಕೆ ಹೆಚ್ಚಿಸುವ ನಿರೀಕ್ಷೆಯಿದೆ. ರಕ್ಷಣಾ ವಲಯಕ್ಕೆ ಹೆಚ್ಚಿದ ಬಜೆಟ್ ಹಂಚಿಕೆಯನ್ನು ಸಶಸ್ತ್ರ ಪಡೆಗಳ ಅಗತ್ಯಗಳನ್ನು ಪೂರೈಸಲು ಬಳಸಬಹುದು. ಇದರಲ್ಲಿ ಅಗತ್ಯ ಖರೀದಿ, ಸಂಶೋಧನೆ ಮತ್ತು ಅಭಿವೃದ್ಧಿ ಸೇರಿವೆ. ಆದ್ದರಿಂದ ಮುಂಬರುವ ಬಜೆಟ್ ಈ ವಲಯಕ್ಕೆ ಹೆಚ್ಚಿನ ಹಂಚಿಕೆಯೊಂದಿಗೆ ಅದನ್ನು ಬಲಪಡಿಸುವ ಸಾಧ್ಯತೆಯಿದೆ.



ಲೋಹಗಳು ಮತ್ತು ಸಿಮೆಂಟ್: ಭಾರತದ ಅಮೂಲ್ಯ ಲೋಹ ಸಂಸ್ಕರಣಾಗಾರರು ಹಣಕಾಸು ಸಚಿವರಿಗೆ ತಮ್ಮ ನಿರೀಕ್ಷೆಗಳನ್ನು ಮಂಡಿಸಿದ್ದಾರೆ. ಸ್ಥಳೀಯ ಸಂಸ್ಕರಣಾಗಾರರಿಗೆ ಹೋಲಿಸಿದರೆ, ಆಮದುದಾರರಿಗೆ ಅನುಕೂಲಕರವಾದ ಪ್ರಸ್ತುತ ಸುಂಕ ರಚನೆಯಿಂದ ಮುಕ್ತ ವ್ಯಾಪಾರ ಒಪ್ಪಂದಗಳ ಮೂಲಕ ಪರಿಹಾರವನ್ನು ಈ ವಲಯವು ಬಯಸುತ್ತಿದೆ. ಬೆಳ್ಳಿ, ತಾಮ್ರ ಮತ್ತು ಸತುವಿನ ದೇಶೀಯ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಆಮದು ಅವಲಂಬನೆಯನ್ನು ಕಡಿತಗೊಳಿಸಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೊಸ ನೀತಿಯನ್ನು ರೂಪಿಸುತ್ತಾರೆ ಎಂಬ ನಿರೀಕ್ಷೆ ಇದೆ. ಸರಕಾರದ ಮೂಲಸೌಕರ್ಯ ಉತ್ತೇಜನದ ಮಧ್ಯೆ, ಸಿಮೆಂಟ್ ಮತ್ತು ಉಕ್ಕು ವಲಯಗಳಿಗೆ ಮಾಡುವ ವೆಚ್ಚವು ಪ್ರಮುಖ ಅಂಶವಾಗಿದೆ.

ಟೆಲಿಕಾಂ ವಲಯ: ಉದ್ಯಮವು ಪರವಾನಗಿ ಶುಲ್ಕವನ್ನು ಪ್ರಸ್ತುತ ಶೇ. 3ರಿಂದ 0.5%-1%ಗೆ ಇಳಿಸುವ ನಿರೀಕ್ಷೆಯಿದೆ. ಟೆಲಿಕಾಂ ಆಪರೇಟರ್‌ಗಳ ಶುಲ್ಕವು ಪ್ರಮುಖ ಆದಾಯ ಗಳಿಸುವ ಸಾಧನವಾಗಿ ಕಾರ್ಯನಿರ್ವಹಿಸುವ ಬದಲು ಸರಕಾರದ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಬೇಕು ಎಂದು ಹೇಳಿದ್ದಾರೆ. ಒಟ್ಟು ಆದಾಯ ಬಾಕಿಗಳಿಗೆ ಸಂಬಂಧಿಸಿದ ಸುಧಾರಣಾ ಪ್ಯಾಕೇಜ್, ಸುಪ್ರೀಂ ಕೋರ್ಟ್ ತೀರ್ಪಿನಿಂದ ಹೆಚ್ಚುತ್ತಿರುವ ಪರವಾನಗಿ ಶುಲ್ಕಗಳು ಮತ್ತು ಸ್ಪೆಕ್ಟ್ರಮ್ ಬಳಕೆಯ ಶುಲ್ಕಗಳ ಮೇಲಿನ ಸೇವಾ ತೆರಿಗೆ ವಿನಾಯಿತಿ, ಒಟ್ಟಾರೆ ಪರವಾನಗಿ ಶುಲ್ಕದಲ್ಲಿನ ಕಡಿತ ಈ ಕ್ಷೇತ್ರದ ಪ್ರಮುಖ ನಿರೀಕ್ಷೆಗಳಾಗಿವೆ. ವ್ಯವಹಾರ ನಷ್ಟಗಳಿಗೆ ಕ್ಯಾರಿ ಫಾರ್ವರ್ಡ್ ಅವಧಿಯನ್ನು ಎಂಟು ವರ್ಷಗಳಿಂದ 16 ವರ್ಷಗಳಿಗೆ ವಿಸ್ತರಿಸುವ ನಿರೀಕ್ಷೆಯಿದೆ ಎಂದು ವಿಶ್ಲೇಷಕರು ನಿರೀಕ್ಷಿಸುತ್ತಾರೆ.

ಇಂಧನ ಉತ್ಪಾದನೆ: ಹಿಂದಿನ ಹಣಕಾಸು ವರ್ಷದ ಬಜೆಟ್‌ನಿಂದ ಕೇಂದ್ರವು ಶುದ್ಧ ಇಂಧನ ಮೂಲಗಳ ಮೇಲೆ ಒತ್ತು ನೀಡಿದ್ದು, ಭಾರತ್ ಎನರ್ಜಿ ಸ್ಟೋರೇಜ್ ಸಿಸ್ಟಮ್ ಅಳವಡಿಕೆ, ಪರಮಾಣು (ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳು ಸೇರಿದಂತೆ) ಮತ್ತು ಪಂಪ್ಡ್ ಸ್ಟೋರೇಜ್ ಯೋಜನೆಗಳ ಮೇಲೆ ಒತ್ತು ನೀಡುವುದನ್ನು ಪುನರುಚ್ಚರಿಸುತ್ತದೆ.



ಆಟೋಮೊಬೈಲ್ ವಲಯ: ಜಿಎಸ್‌ಟಿ 2.0 ತೆರಿಗೆ ಜಾರಿಗೆ ಬಂದ ಬಳಿಕ ಭಾರತದ ಆಟೋಮೊಬೈಲ್ ಉದ್ಯಮವು ಅಕ್ಟೋಬರ್-ಡಿಸೆಂಬರ್ 2025 ತ್ರೈಮಾಸಿಕದಲ್ಲಿ ಉತ್ತಮ ಬೆಳವಣಿಗೆ ಕಂಡಿದೆ. ಕೈಗೆಟಕುವ ದರ, ಹಣಕಾಸು ಪರಿಸ್ಥಿತಿಗಳನ್ನು ಸರಾಗಗೊಳಿಸುವುದು ಮತ್ತು ಗ್ರಾಹಕ ಸ್ನೇಹಿ ದರ ನಿಗದಿಯಿಂದ ತ್ರೈಮಾಸಿಕದಲ್ಲಿ ಪ್ರಯಾಣಿಕ ವಾಹನಗಳು, ದ್ವಿಚಕ್ರ ವಾಹನಗಳು ಮತ್ತು ವಾಣಿಜ್ಯ ವಾಹನಗಳ ದಾಖಲೆಯ ಮಾರಾಟವಾಯಿತು. ಆದಾಗ್ಯೂ, ಹೆಚ್ಚುತ್ತಿರುವ ಕಚ್ಚಾ ವಸ್ತುಗಳ ವೆಚ್ಚಗಳು ಮುಂಬರುವ ತ್ರೈಮಾಸಿಕಗಳಲ್ಲಿ ಲಾಭದ ಮೇಲೆ ಪರಿಣಾಮ ಬೀರುವ ನಿರೀಕ್ಷೆಯಿದೆ ಎಂದು ತಜ್ಞರು ಹೇಳಿದ್ದಾರೆ. ಹೀಗಾಗಿ, ಜಿಎಸ್‌ಟಿ 2.0 ಅಡಿಯಲ್ಲಿ ವಿದ್ಯುತ್ ವಾಹನ (ಇವಿ) ಮೂಲಸೌಕರ್ಯಕ್ಕೆ ಹೆಚ್ಚಿನ ಬಜೆಟ್ ಬೆಂಬಲ ನೀಡುವುದು ಸೇರಿದಂತೆ ಹೆಚ್ಚಿನ ಸ್ಪಷ್ಟತೆ ಆಟೋಮೊಬೈಲ್ ವಲಯದ ಪ್ರಮುಖ ನಿರೀಕ್ಷೆಯಾಗಿದೆ.

ಸಾಮಾನ್ಯ ಗ್ರಾಹಕರ ನಿರೀಕ್ಷೆ

ತೆರಿಗೆ ವಿನಾಯಿತಿಯಿಂದ ಹಿಡಿದು ಅಗ್ಗದ ದಿನಸಿ ವಸ್ತುಗಳು ಮತ್ತು ಉತ್ತಮ ಆರೋಗ್ಯ ಸೇವೆಯ ವರೆಗೆ, ಕೇಂದ್ರ ಬಜೆಟ್ ಭಾರತದ ಮಧ್ಯಮ ವರ್ಗದ ದೈನಂದಿನ ಆರ್ಥಿಕ ಆಕಾಂಕ್ಷೆಗಳಿಗೆ ಪ್ರತಿಬಿಂಬವಾಗಿದೆ. ಈ ವರ್ಷ ಸಾಮಾನ್ಯ ಜನರ ಭರ್ಜರಿ ಕೊಡುಗೆಗಳ ಬಗ್ಗೆ ನಿರೀಕ್ಷೆ ಇಟ್ಟಿದ್ದಾರೆ. ಖರೀದಿ ಶಕ್ತಿಯನ್ನು ಬಲಪಡಿಸುವ, ದೈನಂದಿನ ಹಣದುಬ್ಬರವನ್ನು ನಿಯಂತ್ರಿಸುವ ಮತ್ತು ದೀರ್ಘಕಾಲೀನ ಜೀವನ ವೆಚ್ಚವನ್ನು ಕಡಿಮೆ ಮಾಡುವ ಕ್ರಮಗಳ ಬಗ್ಗೆ ನಿರೀಕ್ಷೆ ಹೊಂ

ಇಂಧನ ತೆರಿಗೆ ಏರಿಕೆ?

ಮುಂಬರುವ ಬಜೆಟ್‌ನಲ್ಲಿ ಇಂಧನ ತೆರಿಗೆಯಲ್ಲಿ ಲೀಟರ್‌ಗೆ 2 ರು. ಹೆಚ್ಚಳದ ನಿರೀಕ್ಷೆಯಿದೆ. ಆದರೆ ಅಂತಹದೊಂದು ಮಾಪಾರ್ಡಿಗೆ ಕೇಂದ್ರ ಮುಂದಾದರೆ ಸಾರ್ವಜನಿಕವಾಗಿ ತೀವ್ರ ಪ್ರತಿಭಟನೆ ಎದುರಿಬೇಕಾಗುವುದಂತೂ ಖಚಿತ. ಈಗಾಗಲೇ ಇಂಧನ ತೆರಿಗೆ ಇಳಿಸಿ ಅದನ್ನೂ ಜಿಎಸ್‌ಟಿ ವ್ಯಾಪ್ತಿಗೆ ತರಬೇಕೆನ್ನುವುದು ಸಾರ್ವತ್ರಿಕ ಬೇಡಿಕೆ. ನವೀಕರಿಸಬಹುದಾದ ಇಂಧನ ಯೋಜನೆಗೆ ಹೆಚ್ಚಿನ ಆದ್ಯತೆ ಅಗತ್ಯವಿದೆ.

ಹಣಕಾಸು ವಲಯ: ನಿರೀಕ್ಷೆ ಅಪಾರ

2026ರ ಬಜೆಟ್‌ನಲ್ಲಿ ಬ್ಯಾಂಕಿಂಗ್ ವಲಯದ ನಿರೀಕ್ಷೆಗಳ ಪಟ್ಟಿ ದೊಡ್ಡದಿದೆ. ಸಾಲದ ನಿರ್ಬಂಧಗಳು, ಉದ್ಯೋಗದ ಒತ್ತಡಗಳು ಮತ್ತು ನಿಯಂತ್ರಕ ಸವಾಲುಗಳನ್ನು ಪರಿಹರಿಸಲು ಉದ್ದೇಶಿತ ನೀತಿ ಬೆಂಬಲದ ಅಗತ್ಯವನ್ನು ಹಣಕಾಸು ವಲಯ ನಿರೀಕ್ಷಿಸಿದೆ. ಹಣಕಾಸು ವಲಯಕ್ಕೆ ಸಂಬಂಧಿಸಿದಂತೆ, ಡಿಜಿಟಲ್ ಪಾವತಿಗಳನ್ನು ಉತ್ತೇಜಿಸಲು ಪ್ರೋತ್ಸಾಹ ಅಗತ್ಯವಿದೆ. ಠೇವಣಿ ವರ್ಗಗಳಲ್ಲಿ ಬಡ್ಡಿ ಆದಾಯದ ಮೇಲಿನ ತೆರಿಗೆ ನಿರ್ವಹಣೆಯ ಸಮನ್ವಯ, ಎಂಎಸ್‌ಎಂಇಗಳಿಗೆ ಕ್ರೆಡಿಟ್ ಗ್ಯಾರಂಟಿ ಯೋಜನೆಗಳ ವಿಸ್ತರಣೆ ಅಗತ್ಯವಿದೆ. ಬಡ್ಡಿ ಸಬ್ಸಿಡಿಗಳನ್ನು ಪಡೆಯಲು ಹೆಚ್ಚಿದ ಬಜೆಟ್ ಹಂಚಿಕೆ ಮತ್ತು ಸರಳೀಕೃತ ಪ್ರಕ್ರಿಯೆಗಳು ಪ್ರಮುಖ ನಿರೀಕ್ಷೆಗಳಾಗಿವೆ, ಜತೆಗೆ ಜೀವ ವಿಮಾದಾರರಿಗೆ ತೆರಿಗೆ ದರವನ್ನು ಸಾಮಾನ್ಯ ಕಾರ್ಪೊರೇಟ್ ಮಟ್ಟಕ್ಕೆ ಹೆಚ್ಚಿಸುವ ಬೇಡಿಕೆಯೂ ಇದೆ.

ಚಿತ್ತವಿಹಾರ

ದಿವ್ಯ ಬಂಧ

ಮುಳ್ಳು ಗಿಡದ ಮೇಲೆ
ಕೆಂಪು ಹೂವದು ಅರಳಿ
ನಲಿಯುತಿದೆ ಅಂದದ ಸೆಳೆತ ಹೆಚ್ಚಿ...
ಅಂತರಂಗದ ತಮವ
ಕಳೆಯಲೆಂದೇ ನೀನು
ಅರಳಿ ನಿಂತಿಹ ಪರಿಯ ಮನವು ಮೆಚ್ಚಿ...

ಅರಳಿ ನಗುವ ಹೂವು
ಉಳಿಯುವುದೇ ಗಿಡದಲ್ಲಿ
ಉರಿವ ಬಿಸಿಲಿನ ನಡುವೆ ಮೆಲ್ಲ ಬಾಗಿ...
ನಿನ್ನ ದಳಗಳ ನಡುವೆ
ಹೊಳೆವ ಪನ್ನೀರ ಹನಿ
ಸೆಳೆಯದಿಹುದೇ ಮನವ ಕೂಗಿ...
ನಿನ್ನ ಗಾಳಿಯ ನಂಟು
ಗಂಧ ಸುಗಂಧದ ನಂಟು
ದೇವ-ಜೀವನನು ಬೆಸೆವ ಗಂಟು...

● **ಡಾ. ಮೈತ್ರಿ ಭಟ್, ವಿಟ್ಲ**

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಕ್ಯಾಲಿಗ್ರಫಿಯಲ್ಲಿ ಪಡಿಮೂಡಿದ ಸಂವಿಧಾನ



ಇದು ಬರೀ ಕಾನೂನು ದಸ್ತಾವೇಜು ಅಲ್ವೋ ಅಣ್ಣಾ..!

● **ರಶ್ಮಿ ಹೆಗಡೆ, ಮುಂಬೈ**

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತ. ನಮ್ಮ ಸಂವಿಧಾನವೂ ಅಷ್ಟೇ ಬೃಹತ್ತಾದುದು. ಅನೇಕ ಕಾನೂನು ತಜ್ಞರು, ಪಂಡಿತರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ರಾಜಕಾರಣಿಗಳ ಸಲಹೆ- ಸೂಚನೆಗಳ ಮೇರೆಗೆ ರಚಿಸಲ್ಪಟ್ಟ ನಮ್ಮ ಸಂವಿಧಾನವು 1949ರ ನವೆಂಬರ್ 26ರಂದು ಅಂಗೀಕಾರಗೊಂಡು, 1950ರ ಜನವರಿ 26ರಂದು ಜಾರಿಗೆ ಬಂದಿತು.

ಸಂವಿಧಾನ ಶಿಲ್ಪಿ

ಸಂವಿಧಾನ ರಚನೆಯ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರು 'ಭಾರತದ ಸಂವಿಧಾನ ಶಿಲ್ಪಿ' ಎಂದು ಕರೆಯಲ್ಪಡುತ್ತಾರೆ. ಅಂತೆಯೇ, ಡಾ. ಬಾಬು ರಾಜೇಂದ್ರ ಪ್ರಸಾದ್, ಮಂಗಳೂರು ಮೂಲದ ಸರ್ ಬೆನಗಲ್ ನರಸಿಂಗರಾವ್ (ಬಿ.ಎನ್.ರಾವ್), ಜವಾಹರಲಾಲ್ ನೆಹರು, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಟಿ.ಟಿ. ಕೃಷ್ಣಮಾಚಾರಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಗೋಪಾಲಸ್ವಾಮಿ ಅಯ್ಯಂಗಾರ್, ಕೆ.ಎಂ. ಮುನ್ಷಿ, ಸೈಯದ್ ಮೊಹಮ್ಮದ್ ಸಾದುಲ್ಲಾ, ದುರ್ಗಾಬಾಯಿ ದೇಶಮುಖ್ ಮುಂತಾದವರೂ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ.

ಅತ್ಯಮೂಲ್ಯ ಗ್ರಂಥ

ಭಾರತದ ಸಂವಿಧಾನವು ಕೇವಲ ದೇಶವನ್ನು ನಡೆಸುವ ಒಂದು ಕಾನೂನು ದಸ್ತಾವೇಜು ಅಥವಾ ಪುಸ್ತಕವಾಗಿರದೆ, ಭಾರತದ ಕಲೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಎತ್ತಿಹಿಡಿಯುವ ಅತ್ಯಮೂಲ್ಯ ಗ್ರಂಥ ಹಾಗೂ ಸುಂದರ ಹಸ್ತಪ್ರತಿಯಾಯಿತು. ಇದರ ಹಿಂದೆ ಸಾಕಷ್ಟು ಜನರ ಪ್ರಯತ್ನ, ತ್ಯಾಗ ಹಾಗೂ ರಾಷ್ಟ್ರ ಪ್ರೇಮದ ಇತಿಹಾಸವಿದೆ.

ಸಂವಿಧಾನದ ಕರಡುಪ್ರತಿ ಮುದ್ರಣಕ್ಕೆ ಸಿದ್ಧವಾದಾಗ, ಪ್ರಧಾನಮಂತ್ರಿ ನೆಹರುರವರು ಅದನ್ನು ಮುದ್ರಿಸುವ ಬದಲು ಸುಂದರವಾದ ಅಕ್ಷರದಲ್ಲಿ ಕೈಯಿಂದಲೇ ಬರೆಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. ಆಗ ಸಿಕ್ಕಿದ್ದೇ ಒಬ್ಬ ಇಟಾಲಿಕ್ ಕ್ಯಾಲಿಗ್ರಫಿಸ್ಟ್ (ಕೈಬರಹ ತಜ್ಞ), ದೆಹಲಿಯ ಪ್ರೇಮ್ ಬಿಹಾರಿ ನಾರಾಯಣ್ ರೈಜಾದಾ.

1901ರ ಡಿಸೆಂಬರ್ 17ರಂದು ಕ್ಯಾಲಿಗ್ರಫಿ (ಸುಂದರ ಬರಹ) ತಜ್ಞರ ಕುಟುಂಬದಲ್ಲಿ ಜನಿಸಿದ್ದ ಅವರು ಚಿಕ್ಕಂದಿನಲ್ಲೇ ತಂದೆ-ತಾಯಿಯನ್ನು ಕಳೆದುಕೊಂಡರು. ಇಂಗ್ಲಿಷ್ ಹಾಗೂ ಪರ್ಷಿಯನ್ ಭಾಷೆಯ ವಿದ್ವಾಂಸ ರಾಗಿದ್ದ ಅವರ ಅಜ್ಜ ಮಾಸ್ಟರ್ ರಾಮ್‌ಪ್ರಸಾದ್ ಸಕ್ಸೇನಾ ಅವರು ಮೊಮ್ಮಗನನ್ನು ಸಾಕಿ, ಬೆಳೆಸಿ, ನುರಿತ ಬರಹತಜ್ಞರನ್ನಾಗಿ ಮಾಡಿದರು.

ಸಂವಿಧಾನದ ಕರಡುಪ್ರತಿ ತಯಾರಾದಾಗ, 1949ರಲ್ಲಿ ನೆಹರುರವರು ಅದರ ಪ್ರತಿಯೊಂದು ಪುಟವನ್ನೂ ಸುಂದರವಾದ ಇಟಾಲಿಕ್ ಶೈಲಿಯಲ್ಲಿ ಇಂಗ್ಲಿಷ್‌ನಲ್ಲಿ ಬರೆಸಬೇಕೆಂದು ರೈಜಾದಾ ಅವರನ್ನು ಸಂಪರ್ಕಿಸಿ, ಅದಕ್ಕೆ ತಕ್ಕ ಸಂಭಾವನೆಯನ್ನು ಕೊಡುವುದಾಗಿ ಹೇಳಿದರು. ಆದರೆ ರೈಜಾದಾ ಅವರು, "ನನಗೆ ಸಂಭಾವನೆ ಬೇಡ. ಅದರ ಬದಲು, ನಾ ಬರೆಯುವ ಪ್ರತಿಯೊಂದು ಪುಟದ ಮೇಲೂ ನನ್ನ ಹೆಸರನ್ನೂ, ಕೊನೆಯ ಪುಟದ ಮೇಲೆ ನನ್ನ ಮತ್ತು ನನ್ನ ಅಜ್ಜನ ಹೆಸರನ್ನೂ ಬರೆಯಲು ಅನುಮತಿ ಕೊಟ್ಟರೆ ಸಾಕು" ಎಂದರು. ಅವರ ಆಶಯದಂತೆಯೇ ನಡೆಯಿತು. ಈಗಲೂ ಇಂಟರ್‌ನೆಟ್‌ನಲ್ಲಿ ಹುಡುಕಿದಾಗ ಕಾಣಸಿಗುವ ಮೂಲ ಸಂವಿಧಾನ ಪುಸ್ತಕದ ಪ್ರತಿಯೊಂದು ಪುಟದ ಕೆಳಗೆ ಎಡಬದಿಯಲ್ಲಿ 'ಪ್ರೇಮ್' ಎಂದು ಬರೆದಿದ್ದನ್ನು ಕಾಣಬಹುದು. ಆಗಿನ ಶಾಯಿ ಪೆನ್ನಿನ ನಿಬ್‌ನಿಂದ ಬರೆದ ಅತ್ಯಂತ ಸುಂದರ ಅಕ್ಷರಗಳನ್ನು ನೋಡುವುದೇ ಒಂದು ಅದ್ಭುತ ಅನುಭವ. ಕೇಂದ್ರ ಮತ್ತು ರಾಜ್ಯ ಸರಕಾರದ ಕೆಲವು ವೆಬ್‌ಸೈಟ್‌ಗಳಲ್ಲಿ ಇವು ಲಭ್ಯವಿವೆ.



395 ವಿಧಿಗಳು, 8 ಅನುಸೂಚಿಗಳು, 251 ಪುಟಗಳ ಈ ಸಂವಿಧಾನವನ್ನು ಅವರು ಸುಮಾರು 6 ತಿಂಗಳ ಅವಧಿಯಲ್ಲಿ, ಆಗಿನ Constitution Hall, ಅಂದರೆ ಈಗಿನ Constitution Club of Indiaದಲ್ಲಿ ಕುಳಿತು ಬರೆದು ಮುಗಿಸಿದರು. ಅದಕ್ಕೆ ಅವರು ಉಪಯೋಗಿಸಿದ್ದು ಒಟ್ಟಾರೆ 432 ನಿಬ್‌ಗಳು. ಅದರಲ್ಲಿ 303 ವಿಶೇಷ ಕ್ಯಾಲಿಗ್ರಫಿ ನಿಬ್‌ಗಳು. ಬರವಣಿಗೆಯ ಸ್ಥಿರತೆ, ಘನತೆ, ಬಣ್ಣದ ಮಟ್ಟ ಹಾಗೂ ಬರವಣಿಗೆಯನ್ನು ಕಾಪಾಡಲು ವಿಶೇಷ 'ಶಾಯಿ'ಯನ್ನು ಇಂಗ್ಲೆಂಡ್ ಮತ್ತು ಝೆಕೊಸ್ಲೋವಾಕಿಯಾ ದೇಶಗಳಿಂದ ಆಮದು ಮಾಡಿಕೊಳ್ಳಲಾಗಿತ್ತು.

ಹಿಂದಿ ಭಾಷೆಯಲ್ಲಿ ಸಂವಿಧಾನ ಪುಸ್ತಕವನ್ನು ಬರೆದವರು ವಸಂತ್ ಕೃಷ್ಣವೈದ್ಯ ಎಂಬುವವರು. ಇಂಗ್ಲಿಷ್ ಮತ್ತು ಹಿಂದಿ ಎರಡೂ ಕೈಬರಹದ ಪ್ರತಿಗಳು ಸಂವಿಧಾನ ಸಭೆಯ ಅಂಗೀಕಾರದ ನಂತರ ಕೈಬರಹ ರೂಪದಲ್ಲಿ ಸಂಗ್ರಹಿಸಲ್ಪಟ್ಟವು. ಈ ಹಸ್ತಪ್ರತಿಗಳು ಕೇವಲ ಅಕ್ಷರಗಳಿಂದಷ್ಟೇ ನಿರ್ಮಿತವಾಗಿರಲಿಲ್ಲ; ಅವುಗಳ ಚಿತ್ರಾಲಂಕಾರದ ಜವಾಬ್ದಾರಿ ಹೊತ್ತಿದ್ದು ಶಾಂತಿನಿಕೇತನದಲ್ಲಿದ್ದ ಪ್ರಸಿದ್ಧ ಕಲಾವಿದ ನಂದಲಾಲ್ ಬೋಸ್ ಹಾಗೂ ಅವರ ತಂಡ. ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳಾದ ದೀನನಾಥ್ ಭಾರ್ಗವ, ರಮಣೋಹರ ಸಿನ್ಹಾ ಸೇರಿದಂತೆ ಹಲವಾರು ಪ್ರತಿಭಾವಂತ ಕಲಾವಿದರು, ವಿವಿಧ ಅಧ್ಯಾಯಗಳಿಗೆ ಸಂಬಂಧಿಸಿದಂತೆ ಭಾರತದ ಕಲೆ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ರಾಮಾಯಣ, ಮಹಾಭಾರತ, ಗೌತಮ ಬುದ್ಧ ಮುಂತಾದ ಚಿತ್ರಗಳನ್ನು ಪ್ರತಿಯೊಂದು ಪುಟದಲ್ಲಿಯೂ ಕೈಯಿಂದ ಸುಂದರವಾಗಿ ಬಿಡಿಸಿದರು. ಸಂವಿಧಾನದ ಮೊದಲ ಭಾಗದ ಪುಟದಲ್ಲಿ ಕಾಣುವ ಅಶೋಕ ಸ್ತಂಭ/ರಾಷ್ಟ್ರಲಾಂಛನದ ಚಿತ್ರಣವನ್ನು ದೀನನಾಥ ಭಾರ್ಗವ ಅವರೇ ರಚಿಸಿದರು ಎಂಬುದು ಸಂಗ್ರಹದಲ್ಲಿ ದಾಖಲಾಗಿದೆ. ಮೂಲ ಇಂಗ್ಲಿಷ್ ಮತ್ತು ಹಿಂದಿ ಪ್ರತಿಗಳು, ಇಂದು ಸಂಸತ್ ಭವನದ ಗ್ರಂಥಾಲಯದಲ್ಲಿ, ಹೀಲಿಯಂ ಗ್ಯಾಸ್‌ನಲ್ಲಿರುವ ಗಾಜಿನ ಕೋಣೆಗಳಲ್ಲಿ, ತಾಪಮಾನ ಮತ್ತು ತೇವಾಂಶ ನಿಯಂತ್ರಣದಲ್ಲಿ ಭದ್ರವಾಗಿ ಸಂರಕ್ಷಿಸಲ್ಪಟ್ಟಿವೆ. ನಮ್ಮ ಹಕ್ಕುಗಳು, ಕರ್ತವ್ಯಗಳು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ತಿಳಿಸುವ, ಜಾಗೃತ ನಾಗರಿಕರನ್ನಾಗಿ ನಮ್ಮನ್ನು ರೂಪಿಸುವ ಸಂವಿಧಾನವನ್ನು ಪ್ರತಿಯೊಬ್ಬ ಭಾರತೀಯನೂ ಓದಿ ತಿಳಿದು ಕೊಳ್ಳಬೇಕು...

ಮುರಿದ ಮೂಳೆಗಳನ್ನೇ ಜೋಡಿಸುವ ಅಸ್ಥಿ ಶೃಂಖಲ!

● **ದೀಪಾ ಭಟ್ಟ**

ಮೊನ್ನೆ ಭಾನುವಾರ ಒಬ್ಬರು ಪರಿಚಯದವರ ಮನೆಗೆ ಹೋಗಿದ್ವಿ. ಹಾಗೆ ಮಾತಾಡುತ್ತಾ ಇರುವಾಗ, ಮಗಳು ಮೇಲ್ಗಡೆ ಟೆರೇಸ್‌ಗೆ ಹೋಗಬೇಕು ಅಂದಿದ್ದರಿಂದ ಎಲ್ಲರೂ ಮೇಲೆ ಹೋದೆವು. ಅಲ್ಲಿ ನೋಡಿದರೆ ಫುಲ್ ಗಿಡಗಳನ್ನ ಇಟ್ಕೊಂಡಿದಾರೆ. ಊರಲ್ಲಿ ಸಿಗುವ ಸೊಪ್ಪುಗಳು ಇದ್ದವಾದ್ದರಿಂದ ನನಗೂ ತಂಬುಳಿ ಮಾಡಲೆಂದು ಒಂದಷ್ಟು ಕೊಟ್ಟರು. ಹಾಗೆ ಅವರು ಒಂದು ಕ್ಯಾಕ್ಟಸ್ ಥರಹದ ಗಿಡವನ್ನ ನೋಡಿ 'ಇದನ್ನ ತಗೋ, ಚಟ್ನಿ ಮಾಡ್ಬಹುದು' ಅಂತ ಹೇಳ್ದಾಗ ನನಗೆ ನಿಜಕ್ಕೂ ಆಶ್ಚರ್ಯ ಅನಿಸ್ತು. 'ಇದೇನು ಕ್ಯಾಕ್ಟಸ್ ಅಲ್ವ, ಅದ್ರದ್ದು ಚಟ್ನಿ ಮಾಡ್ತಾರಾ?' ಅಂತ ಕೇಳಿದೆ. ಅದಕ್ಕೆ ಅವರು ಅದರ ಹೆಸರು ಹೇಳಿದ್ದು ನಂಗೆ ಗೊತ್ತಾಗ್ಲಿಲ್ಲ. ಮತ್ತೆ ಅವರೇ, 'ಇದು ನಮ್ಮ ಮೂಳೆಗಳಿಗೆ ತುಂಬ ಒಳ್ಳೆಯದು. ಮೂಳೆ ಮುರಿದಾಗ ಇದನ್ನ ಸೇವಿಸಿದರೆ ಮೂಳೆ ಕೂಡಿಕೊಳ್ಳುವಲ್ಲಿ ಸಹಾಯ ಮಾಡುತ್ತೆ' ಅಂತ ಹೇಳಿದರು. ಮತ್ತೆ ಅವರೇ, ಹೇಗೆ ಚಟ್ನಿ ಮಾಡೋದು ಅಂತ ರೆಸಿಪಿನೂ ಹೇಳಿಬಿಟ್ಟರು.

'ಕೆಸುವಿನ ಹಾಗೆ ತುರಿಕೆಯ ಗುಣ ಇರೋದ್ರಿಂದ ನಾರು ತೆಗೆಯುವಾಗ ಎಣ್ಣೆ ಹಚ್ಚಿಕೊಳ್ಳಬೇಕು' ಅಂತ ಅಂದರು. 'ಹುಳಿ, ಖಾರ, ಬೆಳ್ಳುಳ್ಳಿ ಎಲ್ಲ ಚೆನ್ನಾಗಿ ಹಾಕಿ ಮಾಡಿದ್ರೆ ತುಂಬಾ ಟೇಸ್ಟಿನೂ ಇರತ್ತೆ' ಅಂದರು. ನೆಡಲು ಬೇರುಸಹಿತ ಗಿಡವನ್ನೂ ಕೊಟ್ಟರು. ನಾನು ಮನೆಗೆ ಬಂದು ಗಿಡವನ್ನ ನೆಟ್ಟೆ. ಒಂದೆರಡು ದಿನದಲ್ಲಿ ಅವರು ಹೇಳಿದ ಹಾಗೆ ಚಟ್ನಿ ಮಾಡಿದೆ, ತುಂಬಾ ರುಚಿಯಾಗಿತ್ತು. ಮಗಳಿಗೂ ಇಷ್ಟವಾಯಿತು. ಇಷ್ಟಾದರೂ ಅದರ ಹೆಸರು ಗೊತ್ತಾಗಲೇ ಇಲ್ಲ. ನೆಟ್ಟ ಗಿಡವನ್ನ ಸ್ಕ್ಯಾನ್ ಮಾಡಿ ಗೂಗಲ್‌ನಲ್ಲಿ ನೋಡಿದೆ.



ಉಪಯೋಗಗಳು

- ಮೂಳೆಗಳ ಫ್ರಾಕ್ಚರ್ ಆದಾಗ, ಇದನ್ನು ಅರೆದು, ಪಟ್ಟಿ ಕಟ್ಟಿದರೆ ಬೇಗ ಗುಣವಾಗಲು ಸಹಾಯ ಮಾಡುತ್ತೆ.
- ದಿನನಿತ್ಯದ ಆಹಾರದಲ್ಲಿ ನಿಯಮಿತವಾದ ಬಳಕೆಯಿಂದ ಮೂಳೆಗಳು ಗಟ್ಟಿ ಆಗುವುದರ ಜತೆಗೆ, ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡಿಕೊಳ್ಳಬಹುದು.
- ಇದನ್ನು ಕಷಾಯವಾಗಿ ಅಥವಾ ಚೂರ್ಣವಾಗಿ ಕೂಡ ಬಳಸುವುದರಿಂದ, ನಮ್ಮ ರಕ್ತವನ್ನು ಶುದ್ಧಿ ಮಾಡುವುದರ ಜತೆಗೆ ಜೀರ್ಣಕ್ರಿಯೆಯನ್ನು ಕೂಡ ಸುಧಾರಿಸುತ್ತದೆ.
- ಇದರ ಬಳಕೆಯು ಮೂಲವ್ಯಾಧಿ, ಮಧುಮೇಹ, ಮಹಿಳೆಯರ ಮುಟ್ಟಿನ ಸಮಸ್ಯೆಗಳಿಗೂ ರಾಮಬಾಣವಾಗಿ ಕೆಲಸ ಮಾಡುತ್ತೆ.
- ಕೆಮ್ಮು, ಸಂಧಿವಾತ, ಅಸ್ತಮಾ, ಚರ್ಮದ ಸಮಸ್ಯೆ ಹಾಗೂ ಸೋಂಕು ನಿವಾರಣೆಯಲ್ಲಿ ಇದನ್ನು ಔಷಧವಾಗಿ ಬಳಸಬಹುದು.
- ಇದರ ನಿರ್ವಹಣೆ ಕೂಡ ಬಹಳ ಸುಲಭವಾದ್ದರಿಂದ, ಇದನ್ನು ಬಾಲ್ಕನಿಯಲ್ಲಿ ಕುಂಡಗಳಲ್ಲಿ ಕೂಡ ಬೆಳೆಸಿ ಬಳಸಬಹುದು.

ಅದರ ಬಗ್ಗೆ ಇರುವ ಮಾಹಿತಿ ನೋಡಿ ಅವಾಕ್ಕಾದೆ- ಇಷ್ಟೊಂದೆಲ್ಲ ಉಪಯೋಗಗಳಿದೆಯಾ ಅಂತ!

ಇದು ಕ್ಯಾಕ್ಟಸ್‌ನಂತೆ ಕಾಣುವುದಾದರೂ ಇದರ ಹೆಸರು cessus quandrangilus. ಮುರಿದ ಮೂಳೆಗಳನ್ನು ಜೋಡಿಸುವ ಗುಣವಿರುವುದಕ್ಕೆ ಈ ಗಿಡವನ್ನು ಸಂಸ್ಕೃತದಲ್ಲಿ 'ಅಸ್ಥಿ ಶೃಂಖಲಾ', 'ವಜ್ರಾಂಗಿ', 'ವಜ್ರವಲ್ಲಿ' ಎಂದು ಕರೆಯುತ್ತಾರೆ. ಕನ್ನಡದಲ್ಲಿ ಮಂಗರವಳ್ಳಿ ಗಿಡ, ಗುಂಗರಬಳ್ಳಿ, ಸಂದು ಬಳ್ಳಿ, ವಜ್ರಬಳ್ಳಿ ಅಂತಲೂ ಕರೆಯುತ್ತಾರೆ. ಈ ಗಿಡಗಳು ನೋಡುವುದಕ್ಕೂ ಹಾಗೆ ಮೂಳೆಗಳ ಜಾಯಿಂಟ್‌ಗಳ ಹಾಗೆ ಇರುತ್ತೆ ಮತ್ತು ಮುರಿದ ಮೂಳೆಯನ್ನು ಜೋಡಿಸುವ ಗುಣವಿರುವುದರಿಂದ, ಬೋನ್ ಸೆಟ್ಟರ್ (Bone setter) ಅಂತ ಕೂಡ ಹೇಳ್ತಾರೆ..

ಅಹಂಕಾರವೇ ಅವನತಿಯ ಅಡಿಪಾಯ!

● **ರಂಗನಾಥ್ ಗುಡಿಮನಿ**

ಈ ಬದುಕಿಗೆ ಇರುವಷ್ಟು ಬೆಲೆ ಜಗತ್ತಿನಲ್ಲಿ ಇನ್ನೊಂದಕ್ಕೆ ಇಲ್ಲ. ಬದುಕಿನ ಮೌಲ್ಯ ಗೊತ್ತಾದಾಗಲೇ ಮನುಷ್ಯನಿಗೆ ಹೇಗೆ ಬದುಕಬೇಕೆಂದು ತಿಳಿಯುತ್ತದೆ. ನಾವೆಲ್ಲರೂ ಇಲ್ಲಿಗೆ ಅವತರಿಸಿ ಬಂದಿರುವುದೇ, ಚೆನ್ನಾಗಿ ಬದುಕಲು. ಬದುಕಿ ಮತ್ತೊಬ್ಬರ ಕತ್ತಲೆಯ ಬಾಳಿಗೆ ಬೆಳಕಾಗಲು! ಯಾರಲ್ಲಿ ಸಹಾಯ ಮಾಡುವ ಮನಸ್ಸು, ಪರೋಪಕಾರಿ ಗುಣ, ತಗ್ಗಿ ಬಗ್ಗಿ ನಡೆಯುವ ಸಭ್ಯತೆಗಳು ಇರುತ್ತವೆಯೋ ಅವರೇ ಸಾಕ್ಷಾತ್ ದೇವರ ಪ್ರತಿರೂಪ. ಆದರೆ ಈ ಅಹಂಕಾರ ಎನ್ನುವ ವಿಷವೃಕ್ಷ ನಮ್ಮೊಳಗೆ ಅಂಕುರಿಸಿದರೆ, ಅದನ್ನು ಹಸಿ ಇದ್ದಾಗಲೇ ಚಿವುಟಿ ಹಾಕುವ ಮಹತ್ತರ ಕಾರ್ಯವನ್ನು ಮಾಡ ಬೇಕು. ವ್ಯಕ್ತಿಯೊಬ್ಬ ತನ್ನ ಬಗ್ಗೆ ತಾನು ಹೊಂದಿರುವ ಅತಿಯಾದ ಕಾಳಜಿ, ವಿಪರೀತವಾದ ಗರ್ವವೇ ಅಹಂಕಾರವಾಗಿದೆ. ನಮ್ಮಲ್ಲಿ ಅಹಂಕಾರ ತಲೆಯೆತ್ತಿದಾಗ ಇರುವ ಎರಡು ಕಣ್ಣುಗಳು ಕುರುಡಾಗಿ ನಮ್ಮನ್ನು ಹಳ್ಳಕ್ಕೆ ತಳ್ಳಿಬಿಡುತ್ತದೆ. ಮೇಲಾಗಿ ಅಹಂಕಾರವೇ ನಮ್ಮ ಸುಖಮಯ ಜೀವನಕ್ಕೆ ತುಂಬಾ ಮಾರಕ. ಮನುಷ್ಯನ ಬದುಕಿಗೆ ತುಂಬಾನೇ ಅಪಾಯಕಾರಿಯಾಗಿರುವಂಥದ್ದು ಈ ಅಹಂಕಾರ.

ನಾನು, ನನ್ನದು, ನನ್ನಿಂದ ಎನ್ನುವ ಹೊರಲಾಗದಂಥ ಭಾರ ಗಳಿಂದ ಅತ್ತ ಬದುಕಲೂ ಆಗದೇ, ಇತ್ತ ಸಾಯಲೂ ಆಗದೇ ನಟ್ಟ ನಡುವೆ ಸಿಲುಕಿ ವಿಲವಿಲನೇ ಒದ್ದಾಡುತ್ತಿದ್ದೇವೆ. ರಸ್ತೆಗಳಲ್ಲಿನ ಅವಸರವೇ ಘೋರ ಅಪಘಾತಕ್ಕೆ ಕಾರಣವಾಗುವಂತೆ, ನಮ್ಮ ಅವನತಿಯ ಮೂಲ ಅಡಿಪಾಯವೇ ನಮ್ಮೊಳಗಿನ ಅಹಂಕಾರವಾಗಿದೆ. ಮನುಷ್ಯನಿಗೆ ಅಹಂಕಾರ ಬರುವುದಕ್ಕಿರುವ ಪ್ರಮುಖ ಕಾರಣಗಳ ಪೈಕಿ ಒಂದು ಹಣವಾದರೆ, ಇನ್ನೊಂದು ಸೌಂದರ್ಯ. ಈ ಸಂದರ್ಭದಲ್ಲಿ ಪ್ರಖ್ಯಾತ ಹಾಸ್ಯ ಸಾಹಿತಿ ಬೀಚಿ ಅವರ ಒಂದು ನುಡಿಯು ನೆನಪಾಗುತ್ತದೆ- "ಮನುಷ್ಯ ಬಹಳ ವಿಚಿತ್ರ ಪ್ರಾಣಿ. ಅವನಿಗೆ ತನ್ನ ಜ್ಞಾನದ ಬಗ್ಗೆ ಅಹಂಕಾರವಿದೆ; ಆದರೆ ತನ್ನ ಅಹಂಕಾರದ ಬಗ್ಗೆ ಜ್ಞಾನವಿಲ್ಲ". ಈ ಮಾತು ಎಷ್ಟೊಂದು ಅರ್ಥ ಪೂರ್ಣ ಅಲ್ಲವೇ? ಅಹಂಕಾರಿ ಯಾವಾಗಲೂ ದುರಹಂಕಾರಿ. ಸುಖ, ಸಂಪತ್ತು ಜಾಸ್ತಿಯಾದಷ್ಟೂ ಮನುಷ್ಯನಲ್ಲಿ ಅಹಂಕಾರ ಹೆಚ್ಚುತ್ತಾ ಹೋಗುತ್ತದೆ.

ನಮ್ಮ ಜನಪದರು ಹೇಳುವಂತೆ- "ಮೆರೆದವನು ಮಂದಿಯೊಳಗೆ ಇರಲಾರ, ಉರಿದವನು ಊರೊಳಗೆ ಇರಲಾರ" ಎನ್ನುವ ಮಾತು ಅಕ್ಷರಶಃ ಸತ್ಯ. ಈ ಅಹಂಕಾರದ ಉದ್ಧಟತನ ನಮ್ಮನ್ನು ಸಂಪೂರ್ಣ ಸರ್ವನಾಶ ಮಾಡಿಬಿಡುತ್ತದೆ. ಅಹಂಭಾವ ಎಂಬುದು, ಸಜ್ಜು ಗೊಳಿಸಿದ ಫಲವತ್ತಾದ ಹೊಲದಲ್ಲಿ ಬೆಳೆದು ನಿಲ್ಲುವ ನಿರುಪಯುಕ್ತ ಕಳೆಯಂತೆ. ಎಲ್ಲಿಯವರೆಗೆ ನಾವು ಕಳೆಯನ್ನು ಬೇರು ಸಮೇತ ಕಿತ್ತು ಹಾಕುವುದಿಲ್ಲವೋ, ಅಲ್ಲಿಯವರೆಗೂ ಒಳ್ಳೆಯ ಬೆಳೆ ಬರಲು ಸಾಧ್ಯವಿಲ್ಲ. ಅಹಂಕಾರಿಗೆ ಗೆಲುವಿನ ಬದಲು ಸೋಲು, ಲಾಭದ ಬದಲು ಹಾನಿ, ಜಯದ ಬದಲು ಅಪಜಯವು ಕಟ್ಟಿಟ್ಟ ಬುತ್ತಿ. ಇಂಥ ಅಹಂಕಾರ ಕರಗಿದಾಗಲೇ ಬದುಕು ಬೆಳಗುತ್ತದೆ. ನಮ್ಮ ಗರ್ವ, ಅಹಂಕಾರ, ಸ್ವ-ಮಹತ್ವವನ್ನು ಕೆಳಗಿಳಿಸಿದಾಗಲೇ ನಾವು ಅನುಗ್ರಹಕ್ಕೆ ಪಾತ್ರರಾಗಿ, ಬೇರೊಬ್ಬರಿಗೆ ಮಾದರಿಯಾಗುತ್ತೇವೆ.

ಹಾಸ್ಯ ಲಾಸ್ಯ

ಪಕ್ಷಪಾತ

ಅವನು ಬಲ, ಅವಳು ಎಡ. ಆದರೂ ಅವರಿಬ್ಬರು ಪ್ರೀತಿಸಿದರು. ಆದರೆ ಮದುವೆಗೆ ಅವಳೊಂದು ಕಂಡೀಷನ್ ಹಾಕಿದಳು- "ನೀನಾಗಲಿ, ನಿನ್ನ ಮನೆಯವರಾಗಲಿ ನನಗೆ ಪಕ್ಷನಿಷ್ಠೆ ಬದಲಿಸಲು ಹೇಳಬಾರದು" ಎಂದು. ಅವನು ಒಪ್ಪಿದ, ಅವನ ಹೆತ್ತವರೂ ಒಪ್ಪಿದರು. ಮದುವೆಯಾಯಿತು. ಅವಳು ಮದುಮಗಳಾಗಿ ಅವನ ಮನೆಯ ಹೊಸ್ತಿಲು ದಾಟಲು ಬಂದಾಗ ಅವನಮ್ಮ ಅವಳಿಗೆ ಹೇಳಿದಳು "ನೋಡಮ್ಮ, ಬಲಗಾಲಿಟ್ಟು ಒಳಗೆ ಬಾ" ಎಂದು.

ಅವಳು "ಆಗಲ್ಲ, ನಾನು ಎಡ" ಎಂದಳು.

ಅಲ್ಲಿಗೆ ಕಥೆ ಮುಗಿಯಿತು...!!

● **ರಮೇಶ್ ಶೆಟ್ಟಿಗಾರ್**

ಪರೀಕ್ಷೆ... ಪರೀಕ್ಷೆ! ಒತ್ತಡ ಬೇಡ ಮಕ್ಕಳೇ

● **ವಾಣಿ, ಮೈಸೂರು**

ಹೇಳಿ ಕೇಳಿ ಇದು ವಾರ್ಷಿಕ ಪರೀಕ್ಷೆಗಳ ಸಮಯ. ಹೀಗಾಗಿ, "ಪರೀಕ್ಷೆ ಬಂತು ಪರೀಕ್ಷೆ, ಮಕ್ಕಳಿಗೆ ಓದಿಸಬೇಕು" ಎಂಬುದು ಬಹುತೇಕ ಮನೆಗಳಲ್ಲಿ ಸಾಮಾನ್ಯವಾಗಿ ಕೇಳಿಬರುವ ಕೂಗು. ಮಕ್ಕಳಿಗಿಂತ ಅವರ ಹೆತ್ತವರಿಗೇ ಒತ್ತಡ ಜಾಸ್ತಿ. ಮನೆಪಾಠಕ್ಕೆ ಹೋಗುವ ಮಕ್ಕಳ ಪೋಷಕರು ಸ್ವಲ್ಪ ನೆಮ್ಮದಿಯ ನಿಟ್ಟುಸಿರು ಬಿಡಬಹುದೇನೋ? ಆದರೆ ಮನೆಯಲ್ಲಿ ತಾವೇ ಹೇಳಿಕೊಡಬೇಕಿರುವ ಪೋಷಕರಿಗೆ ಒತ್ತಡ ಹೆಚ್ಚೇ ಎನ್ನಬೇಕು. ಮಕ್ಕಳಿಗೆ ಆದಷ್ಟೂ ಅವರ ಇಚ್ಛೆಯಂತೆ ಇರಲು ಬಿಡಬೇಕು; ಯಾವಾಗಲೂ 'ಓದು, ಓದು' ಅಂತಿದ್ರೆ ಅವರಿಗೆ ಹಿಂಸೆ ಆಗಿಬಿಡುತ್ತೆ, ಓದಿನ ಮೇಲೆ ಜುಗುಪ್ಸೆ ಬಂದುಬಿಡುತ್ತೆ. ಹೀಗಾಗಿ ಅವರು ನಿರಾಳವಾಗಿ ಇರಲು ಸ್ವಲ್ಪ ಸಮಯವನ್ನು ಕೊಡಬೇಕಾಗುತ್ತದೆ. ಏಕೆಂದರೆ ಚಿಕ್ಕಮಕ್ಕಳ ಮನಸ್ಥಿತಿಯೇ ಬೇರೆ.

ಒಣಪ್ರತಿಷ್ಠೆಗೆ ಒಡ್ಡಿಕೊಂಡಿರುವ ಕೆಲ ಪೋಷಕರು ಅತ್ಯುತ್ತಮ ಫಲಿತಾಂಶವನ್ನು ದಕ್ಕಿಸಿಕೊಳ್ಳುವಂತೆ ತಮ್ಮ ಮಕ್ಕಳ ಮೇಲೆ ಒತ್ತಡ ಹೇರುವುದುಂಟು. ಇದು ಅಪಾಯಕಾರಿ ಪ್ರವೃತ್ತಿ. ಏಕೆಂದರೆ ವಾರ್ಷಿಕ ಪರೀಕ್ಷೆಯ ಅವಧಿಯಲ್ಲಿ ಉಂಟಾಗುವ ಒತ್ತಡ ಮತ್ತು ಆತಂಕಗಳು, ವಿದ್ಯಾರ್ಥಿಗಳ ಏಕಾಗ್ರತೆ, ಸ್ಮರಣಶಕ್ತಿ ಮತ್ತು ಒಟ್ಟಾರೆ ಉತ್ಪಾದಕತೆಯ ಮೇಲೆ ಪರಿಣಾಮವನ್ನು ಬೀರ ಬಹುದು. ಪರೀಕ್ಷೆಯ ಅವಧಿಯಲ್ಲಿ ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳುವಂತಾಗಲು ಮಕ್ಕಳು ಶಾಂತಗೊಳಿಸುವ ಕೆಲವು ಚಟುವಟಿಕೆ ಗಳನ್ನು ತಮ್ಮ ದಿನಚರಿಯಲ್ಲಿ ಅಳವಡಿಸಿಕೊಳ್ಳುವುದಕ್ಕೆ ಪೋಷಕರು ಅನುವುಮಾಡಿಕೊಡಬೇಕು. ಅಂಥ ಕೆಲವು ಉಪಾಯಗಳು ಇಲ್ಲಿವೆ.



- ಓದುವ ನಡುವೆ ಆಗಾಗ ಬಿಡುವು ಮಾಡಿಕೊಳ್ಳಬೇಕು.
- ಒಂದು ಬಾರಿಗೆ 45 ನಿಮಿಷಗಳಿಗೂ ಹೆಚ್ಚಿನ ಕಾಲ ವ್ಯಾಸಂಗ ಮಾಡಬೇಡಿ.
- ಸಂಗೀತವನ್ನು ಆಲಿಸುವಿಕೆ, ಡ್ರೈಫ್ರೂಟ್‌ನಂಥ ಆರೋಗ್ಯಕರ ಪೂರಕಾಂಶಗಳ ಸೇವನೆ, ಹಗುರವಾದ ನಡಿಗೆ ಮತ್ತು ಧ್ಯಾನ ಮುಂತಾದವನ್ನು ಈ ಬಿಡುವಿನ ಸಂದರ್ಭದಲ್ಲಿ ಅಭ್ಯಾಸ ಮಾಡಿಕೊಳ್ಳಿ.
- ಸ್ವಲ್ಪ ವಿರಾಮವನ್ನು ತೆಗೆದುಕೊಂಡು ಓದುವ ಕೋಣೆಯಿಂದ ಹೊರಗಿರುವುದು ಒಳ್ಳೆಯದು.
- ಪೂರ್ವನಿಗದಿತ ಪುನರಾವರ್ತನೆಗಳನ್ನು ಕೈಗೊಳ್ಳಿ.
- ಮಲಗುವಾಗ ಒತ್ತಡ ಇರಿಸಿಕೊಳ್ಳ ಬೇಡಿ, ನಿರಾಳವಾಗಿರಿ.
- ಸಕಾರಾತ್ಮಕ ಆತ್ಮ ಸಂಭಾಷಣೆಯು ಓದಲು ಮತ್ತಷ್ಟು ಸ್ಫೂರ್ತಿ ತುಂಬುವುದರ ಜತೆಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಉಪಯುಕ್ತ.

ಪದಬಂಧ

● **ಸಿ.ರವಿಶಂಕರ ಶಾಸ್ತ್ರಿ, ದಂಬೆ**

1	■	■	2		3	■	■	4
5	6			■	7		8	
■		■	■	9	■	■		■
10		11	■		■	12		13
	■	14					■	
15	16		■		■	17	18	
■		■	■		■	■		■
19			20	■	21			22
	■	■	23			■	■	

ಎಡದಿಂದ ಬಲಕ್ಕೆ

2. ದುಃಖದಿಂದ ಬಂದಿದೆ ಕಣ್ಣೀರು (3)
5. ಚಾಡಿಹೇಳು ಎನ್ನುವುದನ್ನುಧ್ವನಿಸುವ ನುಡಿಗಟ್ಟು (4)
7. ಜನರ ನಡುವಿನ ಕಲಹ (4)
10. ಕೊನೆಗೆ ಅನುಸ್ವಾರದೊಂದಿಗೆ ಬಂದಿರುವ ಅಡವಿ (3)
12. ತಿಳಿಗೇಡಿಯು ಮಯನ ನಡುವೆ ಬಂದಿದ್ದಾನೆ (3)
14. ಯೌವನವನ್ನು ಹೇಳುವ ಮತ್ತೊಂದು ನುಡಿಗಟ್ಟು ಕಾವಿನಿಂದ ಕೂಡಿದ ನೆತ್ತರಿನಂತಿದೆ (5)
15. ಗಣಪತಿಗೆ ಪ್ರಿಯವಾದ ಹುಲ್ಲು (3)
17. ವನದಲ್ಲಿರುವಾಗಲೇ ಬರೆದ ಪದ್ಯ (3)
19. ಪುಕ್ಕಲು ಸ್ವಭಾವದವನು (4)
21. ಕೂಡಿಸುವ ಲೆಕ್ಕ (4)
23. ಗಾಂಧೀಜಿಯ ಕೈಯಲ್ಲಿದೆ ನೂಲುವ ಸಾಧನ (3)

ಮೇಲಿಂದ ಕೆಳಕ್ಕೆ

1. ವಸ್ತುವನ್ನು ಸುಡಬಲ್ಲ ಅಗ್ನಿ (2)
2. ಕೆಂಪುಮಿಶ್ರಿತವಾದ ಕಪ್ಪುಬಣ್ಣ (2)
3. ಸತ್ಯಕ್ಕೆ ಮತ್ತೊಂದು ಹೆಸರು (2)
4. ಸ್ಕೂಟಿಯಲ್ಲಿ ಬಂದು ನೋಡಿದರೆ ಇವತ್ತು ರಜೆ (2)
6. ಮಾಡುವ ರೀತಿ (3)
8. ಲೆತ್ತದ ಆಟ (3)
9. ಸಿಹಿಯಾದ ಸ್ಮೃತಿ (5)
10. ಯುದ್ಧಕ್ಕೆ ಮತ್ತೊಂದು ಹೆಸರು (3)
11. ಅಂಬಿಕೆಗಿದೆ ವಿಶ್ವಾಸ (3)
12. ದಯೆ, ಕರುಣೆ (3)
13. ಗ್ರೀಸ್ ದೇಶದಿಂದ ಬಂದವನು (3)
16. ರೀತಿಯೊಂದಿಗೆ ಬರುವ ಜೋಡಿಪದ (3)
18. ವೃತ್ತಾಕಾರವಾದುದು (3)
19. ನೀರೂ ಆಗಬಲ್ಲ ಬಾಣ (2)
20. ಶೀತದಿಂದ ಉಂಟಾದ ನಡುಕ ತಲೆಕೆಳಗಾಗಿದೆ (2)
21. ಸಣ್ಣ ಸೇತುವೆ (2)
22. ಮೂಗಿಗೆ ಏರಿಸುವ ತಂಬಾಕಿನ ಹುಡಿ (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2.ಕಂಬನಿ 5.ಕಿವಿಯೂದು 7.ಜಟಾಪಟಿ 10.ಕಾನನಂ 12.ಮಡೆಯ 14.ಬಿಸಿನೆತ್ತರು 15.ಗರಿಕೆ 17.ಕವನ 19.ಅಂಜುಗುಳಿ 21.ಸಂಕಲನ 23.ಚರಕ

ಮೇಲಿಂದ ಕೆಳಕ್ಕೆ
1.ಬೆಂಕಿ 2.ಕಂದು 3.ನಿಜ 4.ಸೂಟಿ 6.ವಿಧಾನ 8.ಪಗಡೆ 9.ಸವಿನೆನಪು 10.ಕಾಳಗ 11.ನಂಬಿಕೆ 12.ಮರುಕ 13.ಯವನ 16.ರಿವಾಜು 18.ವರ್ತುಲ 19.ಅಂಬು 20.ಳಿಚ 21.ಸಂಕ 22.ನಸ್ಯ

ಅವಿದ್ಯಾವಂತ ತಂದೆಯ ನೆನಪಿಗಾಗಿ ಇಮ್ಯಾಜಿನೇಷನ್ ಲೈಬ್ರರಿ ಕಟ್ಟಿದ ಮಗಳು

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

1946ರಲ್ಲಿ ಅಮೆರಿಕದ ಟೆನ್ನೆಸ್ಸಿಯ ಲೋಕಸ್ಟ್ ರಿಡ್ಜ್ ಎನ್ನುವ ಬೆಟ್ಟದ ತಪ್ಪಲಿನಲ್ಲಿ ಆಕೆ ಜನಿಸಿದಳು. ಹನ್ನೆರಡು ಮಕ್ಕಳ ಬಡ ಕುಟುಂಬದಲ್ಲಿ ಆಕೆ ನಾಲ್ಕನೆಯವಳು. ಆಕೆ ಹುಟ್ಟಿದಾಗ, ಹೆರಿಗೆ ಮಾಡಿಸಿದ ವೈದ್ಯರಿಗೆ ನೀಡಲು ಆಕೆಯ ತಂದೆ ರಾಬರ್ಟ್ ಲೀ ಪಾರ್ಟನ್ ಬಳಿ ಹಣವಿರಲಿಲ್ಲ; ಒಂದು ಚೀಲ ಜೋಳದ ಹಿಟ್ಟನ್ನು ನೀಡಿ ಆ ಋಣ ತೀರಿಸಿದ್ದರು. ಗಾಳಿ ತಡೆಯಲು ಗೋಡೆಗಳಿಗೆ ಹಳೆಯ ಪತ್ರಿಕೆಗಳನ್ನು ಅಂಟಿಸಿದ, ಕಿಟಕಿಗಳಿಲ್ಲದ ಒಂದು ಪುಟ್ಟ ಗುಡಿಸಲೇ ಅವರ ಮನೆಯಾಗಿತ್ತು. ಅಲ್ಲಿ ವಿದ್ಯುತ್ ಇರಲಿಲ್ಲ, ನಲ್ಲಿಯ ನೀರಿರಲಿಲ್ಲ. ಕೊರೆಯುವ ಚಳಿಯಲ್ಲಿ ಹದಿನಾಲ್ಕು ಮಂದಿ ಒಂದೇ ಸೂರಿನಡಿ ಬದುಕುತ್ತಿದ್ದರು.

ಆಕೆಯ ಬಾಲ್ಯದಲ್ಲಿ ಸಹಜವಾಗಿ ಬೇರೆ ಮಕ್ಕಳಂತೆ ನಿದ್ದೆ, ಆಟ-ಪಾಠಗಳು ಇರಲಿಲ್ಲ. ಮುಂಜಾನೆ ನಾಲ್ಕು ಗಂಟೆಗೆ ಎದ್ದು ತಂದೆಯ ಬುತ್ತಿ ಕಟ್ಟುವುದು ಮತ್ತು ಒಡಹುಟ್ಟಿದವರನ್ನು ನೋಡಿಕೊಳ್ಳುವುದು ಆಕೆಯ ಜವಾಬ್ದಾರಿಯಾಗಿತ್ತು. ಒಮ್ಮೆ ಆಕೆಯ ಪಾದದ ಬೆರಳುಗಳು ಕತ್ತರಿಸಿ ಹೋದಾಗ, ಆಸ್ಪತ್ರೆಗೆ ಹೋಗುವ ಶಕ್ತಿಯೂ ಅವರಿಗಿರಲಿಲ್ಲ. ಅಮ್ಮ ಅವೀ ಲೀ ಪಾರ್ಟನ್ ಸೀಮೆಎಣ್ಣೆ ಮತ್ತು ಸೂಜಿಯನ್ನೇ ಬಳಸಿ ಆಕೆಯ ಬೆರಳುಗಳನ್ನು ಹೊಲಿದಿದ್ದಳು. ಇಂಥ ಕಠಿಣ ಬದುಕಿನಲ್ಲೂ ಅಮ್ಮ ಆಕೆಗೆ ಒಂದು ಅದ್ಭುತ ಪಾಠ ಕಲಿಸಿದ್ದಳು. ಬಡತನವಿದ್ದರೂ ಗೌರವದಿಂದ ಬದುಕುವುದು ಹೇಗೆ ಎಂದು ಕಲಿಸಲು ಹರಿದ ಬಟ್ಟೆಗಳ ಚೂರುಗಳನ್ನು ಸೇರಿಸಿ ಒಂದು ಕೋಟನ್ನು ಹೊಲಿದು ಕೊಟ್ಟಿದ್ದಳು.

ಬಡತನ ಬೆನ್ನಟ್ಟಿದರೂ ಆಕೆ ಕನಸು ಕಾಣುವುದನ್ನು ಬಿಡಲಿಲ್ಲ. ತಗಡಿನ ಡಬ್ಬಿಯನ್ನೇ ಮೈಕ್ರೋಫೋನ್ ಮಾಡಿಕೊಂಡು ಬೆಟ್ಟಗಳ ಎದುರು ಹಾಡುತ್ತಿದ್ದ ಆ ಪುಟ್ಟ ಹುಡುಗಿ ಮುಂದೆ ಜಗತ್ತೇ ಕೊಂಡಾಡುವ ಡಾಲಿ ಪಾರ್ಟನ್ ಆದಳು.

ಆದರೆ ಡಾಲಿಯ ವಿಶೇಷತೆ ಇರುವುದು ಆಕೆಯ ಸಾಧನೆಯಲ್ಲಲ್ಲ, ತಾನು ಬೆಳೆದು ಬಂದ ಹಾದಿಯನ್ನು ಮರೆಯದಿರುವ ಆಕೆಯ ಗುಣದಲ್ಲಿ. ತನ್ನ ತಂದೆಗೆ ಓದಲು ಬರೆಯಲು ಬರುತಿರಲಿಲ್ಲ ಎಂಬ ನೋವು ಆಕೆಯನ್ನು ಕಾಡುತ್ತಿತ್ತು. ಅದರ ನೆನಪಿಗಾಗಿ ಆಕೆ 'ಇಮ್ಯಾಜಿನೇಷನ್ ಲೈಬ್ರರಿ' ಎಂಬ ಸಂಸ್ಥೆಯನ್ನು ಕಟ್ಟಿ, ಕೋಟ್ಯಂತರ ಮಕ್ಕಳಿಗೆ ಉಚಿತವಾಗಿ ಪುಸ್ತಕಗಳನ್ನು ಹಂಚಿದಳು. ಈ ಯೋಜನೆಯ ಮೂಲಕ ಅವರು ಹುಟ್ಟಿದ ಮಗುವಿನಿಂದ ಶಾಲಾ ವಯಸ್ಸಿನವರೆಗೆ ಮಕ್ಕಳಿಗೆ ಪ್ರತಿ ತಿಂಗಳು ಉಚಿತವಾಗಿ ಪುಸ್ತಕಗಳನ್ನು ಕಳುಹಿಸುತ್ತಾರೆ. ಈವರೆಗೆ ಜಗತ್ತಿನಾದ್ಯಂತ ಸುಮಾರು 20 ಕೋಟಿಗೂ ಅಧಿಕ ಗುಣಮಟ್ಟದ ಪುಸ್ತಕಗಳನ್ನು ಇವರ ಸಂಸ್ಥೆ ಹಂಚಿದೆ.

2020ರಲ್ಲಿ ಕೋವಿಡ್ ಸಮಯದಲ್ಲಿ, ಈಕೆ 'ಮಾಡರ್ನಾ' ಲಸಿಕೆಯ ಸಂಶೋಧನೆಗಾಗಿ 1 ಮಿಲಿಯನ್ ಡಾಲರ್ ದೇಣಿಗೆ ನೀಡಿದ್ದರು. ಇವರು ನೀಡಿದ ಈ ಸಮಯೋಚಿತ ಆರ್ಥಿಕ ನೆರವು ಲಸಿಕೆಯು ಬೇಗನೆ ಸಿದ್ಧವಾಗಲು ಪ್ರಮುಖ ಕಾರಣವಾಯಿತು. 2016ರಲ್ಲಿ ತಮ್ಮ ತವರು ಪ್ರಾಂತ್ಯದಲ್ಲಿ ಕಾಳ್ಗಿಚ್ಚು ಉಂಟಾದಾಗ ಮನೆ ಕಳೆದುಕೊಂಡವರಿಗೆ ನೆರವು ನೀಡಿ ಸಂತ್ರಸ್ತ ಕುಟುಂಬಗಳಿಗೆ ಪ್ರತಿ ತಿಂಗಳು ಹಣದ ಸಹಾಯ ನೀಡಿ ಅವರು ಮತ್ತೆ ಜೀವನ ಕಟ್ಟಿಕೊಳ್ಳಲು ಆಸರೆಯಾದರು. ಕೇವಲ ಮನುಷ್ಯರಿಗಷ್ಟೇ ಅಲ್ಲದೆ, ಅಳಿವಿನ ಅಂಚಿನಲ್ಲಿದ್ದ 'ಬಾಲ್ಡ್ ಈಗಲ್' ಪಕ್ಷಿಗಳ ಸಂರಕ್ಷಣೆಗೂ ಡಾಲಿ ಪಾರ್ಟನ್ ಶ್ರಮಿಸುತ್ತಿದ್ದಾರೆ.

ಸ್ಥಳೀಯ ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಸಂಗೀತ ಸಲಕರಣೆ ಮತ್ತು ಸ್ಕಾಲರ್‌ಶಿಪ್‌ಗಳನ್ನು ಇವರ ಸಂಸ್ಥೆ ನೀಡುತ್ತಾ ಬಂದಿದೆ. ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಹಿಳೆಯರಿಗಾಗಿ ಉಚಿತವಾಗಿ ವಿಗ್‌ಗಳನ್ನು ಒದಗಿಸುವ ಕೆಲಸವನ್ನೂ ಮಾಡಲಾಗುತ್ತದೆ. ಇವರ ಹೆಚ್ಚಿನ ದಾನ ಕಾರ್ಯಗಳು ಯಾವುದೇ ಪ್ರಚಾರವಿಲ್ಲದೆ, ಸದ್ದಿಲ್ಲದೆ ಪ್ರಾಮಾಣಿಕವಾಗಿ ನಡೆಯುತ್ತವೆ. 'ಸಹಾಯ ಮಾಡುವ ಶಕ್ತಿ ನಿಮಗಿದ್ದರೆ ಅದನ್ನು ಖಂಡಿತಾ ಮಾಡಿ' ಎಂಬುದು ಡಾಲಿಯ ಜೀವನದ ಸರಳ ಮತ್ತು ಸ್ಫೂರ್ತಿದಾಯಕ ತತ್ವ.

ಯಶಸ್ಸು ಎಂದರೆ ಕೇವಲ ಹಣ ಅಥವಾ ಚಪ್ಪಾಳೆಗಳಲ್ಲ. ನಾವು ಎತ್ತರಕ್ಕೆ ಬೆಳೆದಾಗ ನಮ್ಮ ಹಳೆಯ ಬದುಕನ್ನು ಎಷ್ಟು ಪ್ರೀತಿಯಿಂದ ನೆನಪಿಸಿಕೊಳ್ಳುತ್ತೇವೆ ಮತ್ತು ಎಷ್ಟು ಜನರ ಕೈ ಹಿಡಿದು ಮೇಲೆತ್ತುತ್ತೇವೆ ಎಂಬುದೇ ನಿಜವಾದ ಸಾಧನೆ.

ನಮ್ಮ ಭೂತಕಾಲ ನಮ್ಮನ್ನು ಕಾಡಬಾರದು, ಅದು ನಮ್ಮನ್ನು ರೂಪಿಸಬೇಕು. ಡಾಲಿ ಪಾರ್ಟನ್ ತನ್ನ ಹಸಿವನ್ನೇ ಹಸಿವಿನ ವಿರುದ್ಧ ಹೋರಾಡುವ ಶಕ್ತಿಯನ್ನಾಗಿ ಮಾಡಿಕೊಂಡರು. ಇಂದು ನಾವು ಅನುಭವಿಸುತ್ತಿರುವ ಕಷ್ಟಗಳು ನಾಳೆ ನಾವು ಮಾಡುವ ಸಾಧನೆಗೆ ಅಡಿಪಾಯವಾಗಬಹುದು ಎಂಬುದಕ್ಕೆ ಡಾಲಿ ಪಾರ್ಟನ್ ಜೀವನವೇ ಸಾಕ್ಷಿ.

ನೀವೂ ಬರೆಯಬಹುದು
ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ರಣಜಿ: ಪಿಯೂಷ್ ದ್ವಿಶತಕ ಇಲೈಟ್ ಗುಂಪಿಗೆ ಬಿಹಾರ

ಪಾಟ್ನಾ: ಬಿಹಾರ ಕ್ರಿಕೆಟ್ ತಂಡವು ಸೋಮವಾರ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಪ್ಲೇಟ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿ ಇಲೈಟ್ ಗುಂಪಿಗೆ ಬಡ್ತಿ ಪಡೆಯಿತು. ಫೈನಲ್ ಪಂದ್ಯದಲ್ಲಿ ಬಿಹಾರ ತಂಡವು ಮಣಿಪುರದ ವಿರುದ್ಧ 568 ರನ್‌ಗಳ ಬೃಹತ್ ಅಂತರದಿಂದ ಗೆಲುವನ್ನು ಪಡೆಯಿತು. ವೈಭವ್ ಸೂರ್ಯವಂಶಿ ಅವರ ಗೈರು ಹಾಜರಿಯಲ್ಲಿ ಬಿಹಾರ ತಂಡದ ಗೆಲುವಿಗೆ ಪಿಯೂಷ್ ಸಿಂಗ್ 216 ರನ್ ಬಾರಿಸಿ ಬಲ ತುಂಬಿದರು. ಆ ಮೂಲಕ ಅವರು ಬಿಹಾರ ತಂಡದ ಸುಲಭ ಗೆಲುವಿಗೆ ಕಾರಣರಾದರು. ಅವರನ್ನು ಹೊರತುಪಡಿಸಿ ಖಾಲೀದ್ ಆಲಂ 81 ರನ್, ಬಿಪಿನ್ ಸೌರಭ್ 90 ರನ್ ಬಾರಿಸಿ ಬಿಹಾರ ತಂಡಕ್ಕೆ ಆಸರೆಯಾದರು. ಬಿಹಾರವು ಮಣಿಪುರಕ್ಕೆ 764 ರನ್‌ಗಳ ಕಠಿಣ ಗುರಿಯೊಡ್ಡಿತ್ತು. ಆದರೆ ಅದು 195 ರನ್‌ಗಳಿಗೆ ಆಲೌಟ್ ಆಯಿತು. 2022–23ರ ಋತುವಿನ ನಂತರ ಬಿಹಾರವು ಇಲೈಟ್‌ನಿಂದ ಪ್ಲೇಟ್ ಗುಂಪಿಗೆ ಜಾರಿತ್ತು. ಆದರೆ ಈ ಬಾರಿ ಅದು ಮತ್ತೆ ತನ್ನ ಘನತೆ ಉಳಿಸಿಕೊಂಡಿದೆ.

ಸರಣಿಯಿಂದ ಹೊರಬಿದ್ದ ಬ್ಯಾಟರ್ ತಿಲಕ್ ವರ್ಮಾ

ದೆಹಲಿ: ಟೀಮ್ ಇಂಡಿಯಾದಲ್ಲಿ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಯುವ ಬ್ಯಾಟ್ಸ್‌ಮನ್ ತಿಲಕ್ ವರ್ಮಾ, ನ್ಯೂಜಿಲೆಂಡ್ ವಿರುದ್ಧದ ಟಿ20 ಸರಣಿಯ ಕೊನೆಯ ಎರಡೂ ಪಂದ್ಯಗಳಿಂದಲೂ ಹೊರ ಬಿದಿದ್ದಾರೆ. ಆದರೆ ಅವರು 2026ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ಭಾರತ ತಂಡವನ್ನು ಸೇರ್ಪಡೆಯಾ ಗಲಿದ್ದಾರೆಂದು ಬಿಸಿಸಿಐ ತನ್ನ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ. ಹೈದರಾಬಾದ್ ಬ್ಯಾಟ್ಸ್‌ಮನ್ ಆಗಿ ರಾಜ್‌ಕೋಟ್‌ನಲ್ಲಿ ಈ ತಿಂಗಳ ಆರಂಭದಲ್ಲಿ ವಿಜಯ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಆಡುತ್ತಿರುವಾಗ ಗಾಯಕ್ಕೆ ತುತ್ತಾಗಿದ್ದರು. ಅವರಿಗೆ ತೀವ್ರವಾದ ವೃಷಣ ನೋವು ಉಂಟಾಗಿತ್ತು, ಬಳಿಕ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಇದೀಗ ಅವರು ಬೆಂಗಳೂರಿನ ಹೊರವಲಯದಲ್ಲಿರುವ ಬಿಸಿಸಿಐ ಸೆಂಟರ್ ಆಫ್ ಎಕ್ಸ್‌ಲೆನ್ಸ್‌ನಲ್ಲಿ ಪುನಶ್ಚೇತನ ಕಾರ್ಯದಲ್ಲಿ ತೊಡಗಿದ್ದಾರೆ. ದೈಹಿಕ ಫಿಟ್ನೆಸ್ ಅನ್ನು ಅವರು ಆರಂಭಿಸಿದ್ದಾರೆಂದು ಬಿಸಿಸಿಐ ಸೋಮವಾರ ಖಚಿತಪಡಿಸಿದೆ. ಅವರು ಸಂಪೂರ್ಣ ಫಿಟ್‌ನೆಸ್‌ಗೆ ಮರಳಲು ಇನ್ನಷ್ಟು ಸಮಯದ ಅಗತ್ಯವಿದೆ, ಹಾಗಾಗಿ ನ್ಯೂಜಿಲೆಂಡ್ ವಿರುದ್ಧದ ಸಂಪೂರ್ಣ ಸರಣಿಗೆ ಅಲಭ್ಯರಾಗಿದ್ದಾರೆಂದು ಬಿಸಿಸಿಐ ತಿಳಿಸಿದೆ.

ಎಂಟರ ಘಟಕ್ಕೆ ದಾಟಿದ ಕಾರ್ಲೋಸ್ ಅಲ್ಕರಾಜ್, ನೊವಾಕ್ ಜೊಕೊವಿಚ್

ಆಸ್ಟ್ರೇಲಿಯನ್ ಓಪನ್: ಕ್ವಾ. ಫೈನಲ್‌ಗೆ ಸಿನ್ನರ್

ಮೆಲ್ಬರ್ನ್: ಇಟಲಿಯ ಖ್ಯಾತ ಟೆನ್ನಿಸ್ ತಾರೆ ಯಾನಿಕ್ ಸಿನ್ನರ್ ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯನ್ ಓಪನ್ ಟೆನ್ನಿಸ್ ಟೂರ್ನಮೆಂಟ್‌ನ ಕ್ವಾರ್ಟರ್ ಫೈನಲ್ ತಲುಪಿದ್ದಾರೆ. ಸೋಮವಾರ ನಡೆದ ಪಂದ್ಯದಲ್ಲಿ ಅವರು ಅರ್ಜೆಂಟೀನಾ ಮೂಲದ, ತಮ್ಮದೇ ದೇಶದ ಲುಸಿಯಾನೋ ಡಾರ್ಡೆರಿಯ ಅವರನ್ನು 6–1, 6–3, 7–6(2) ಸೆಟ್‌ಗಳಿಂದ ಸೋಲಿಸಿ ಮುಂದಿನ ಹಂತ ಪ್ರವೇಶಿಸಿದರು.

ಮೊದಲ ಸೆಟ್‌ನಲ್ಲಿ ಯಾನಿಕ್ ಸಿನ್ನರ್ ಉತ್ತಮ ಮುನ್ನಡೆಯನ್ನು ಕಾಯ್ದುಕೊಂಡರು. ಮೊದಲ ಸೆಟ್‌ನಲ್ಲೇ 5–0 ಅಂತರದ ಲೀಡ್ ಪಡೆದಿದ್ದರು. 27 ನಿಮಿಷಗಳಲ್ಲಿ ಆರಂಭದ ಸೆಟ್ ಅನ್ನು ಯಶಸ್ವಿಯಾಗಿ ಮುಗಿಸಿದರು.

ಹಾಗೆಯೇ ಸ್ಪೇನ್ ತಾರೆ ಕಾರ್ಲೋಸ್ ಅಲ್ಕರಾಜ್ ಅವರೂ ಕೂಡಾ ಸತತ ಮೂರನೇ ಬಾರಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು. ಎದುರಾಳಿ ಆಟಗಾರ ಗಾಯಾಳಾದ ಕಾರಣ ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರೂ ಪ್ರಯಾಸವಿಲ್ಲದೆ ಅಂತಿಮ ಎಂಟರ ಘಟ್ಟಕ್ಕೆ ಮುನ್ನಡೆದರು.

ರಾಡ್ ಲೇವರ್ ಅರೇನಾದಲ್ಲಿ ನಡೆದ ಪ್ರಿ–ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಅಲ್ಕರಾಜ್ 7–6 (8–6), 6–4, 7–5ರಿಂದ

ಅಮೆರಿಕದ ಟಾಮಿ ಪೌಲ್ ಅವರನ್ನು ಸೋಲಿಸಿದರು. ಚೊಚ್ಚಲ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ 22 ವರ್ಷದ ಅಲ್ಕರಾಜ್ ಮುಂದಿನ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ ಅವರನ್ನು ಎದುರಿಸಲಿದ್ದಾರೆ.

ನಾಲ್ಕು ಗ್ರ್ಯಾಂಡ್‌ಸ್ಲಾಮ್‌ಗಳ ಪೈಕಿ ಉಳಿದ ಮೂರರಲ್ಲಿ ತಲಾ ಎರಡು ಬಾರಿ ಚಾಂಪಿಯನ್ ಆಗಿರುವ ಅಲ್ಕರಾಜ್ ಅವರಿಗೆ ಮೆಲ್ಬರ್ನ್ ಪಾರ್ಕ್‌ನಲ್ಲಿ ಈ ತನಕ ಎಂಟರ ಘಟ್ಟ ದಾಟಲು ಸಾಧ್ಯವಾಗಿಲ್ಲ. ಕಳೆದ ಎರಡು ಆವೃತ್ತಿಗಳಲ್ಲಿ ಕ್ವಾರ್ಟರ್ ಫೈನಲ್‌ನಲ್ಲೇ ಹೊರಬಿದ್ದಿದ್ದರು. ಈ ಬಾರಿ ಅವರು ಚಾಂಪಿಯನ್ ಆದರೆ ಅತೀ ಕಿರಿಯ ವಯಸ್ಸಿಗೆ ನಾಲ್ಕು ಪ್ರಮುಖ ಪ್ರಶಸ್ತಿ ಗೆದ್ದ ಆಟಗಾರ ಎಂಬ ಹಿರಿಮೆಗೆ ಪಾತ್ರರಾಗಲಿದ್ದಾರೆ. ಸದ್ಯ ಈ ದಾಖಲೆ ಅವರದೇ ದೇಶದ ರಫೆಲ್ ನಡಾಲ್ ಹೆಸರಿನಲ್ಲಿದೆ

ದಾಖಲೆಯ 25ನೇ ಗ್ರಾನ್‌ಸ್ಲಾಮ್ ಕಿರೀಟ ಗೆಲ್ಲುವ ಛಲದಲ್ಲಿರುವ ಜೊಕೊವಿಚ್ ಅವರು ಸೋಮವಾರ ಅಂತಿಮ 16ರ ಸುತ್ತಿನಲ್ಲಿ ಜೇಕಬ್ ಮೆನ್ಸಿಕ್ ಅವರನ್ನು ಎದುರಿಸಬೇಕಿತ್ತು. ಆದರೆ ಝೆಕ್ ರಿಪಬ್ಲಿಕ್‌ನ ಆಟಗಾರ ಗಾಯಾಳಾಗಿ ಸ್ಪರ್ಧೆಯಿಂದ ಹಿಂದೆ ಸರಿದಿದ್ದಾರೆ. ನಾಲ್ಕನೇ ಶ್ರೇಯಾಂಕದ ಜೊಕೊವಿಚ್ ಅವರು ಮುಂದಿನ ಸುತ್ತಿನಲ್ಲಿ ಒಂಬತ್ತನೇ ಶ್ರೇಯಾಂಕದ ಟೇಲರ್ ಫ್ರಿಟ್ಸ್ (ಅಮೆರಿಕ) ಅಥವಾ ಐದನೇ ಶ್ರೇಯಾಂಕದ ಲೊರೆಂಝು ಮುಸೆಟ್ಟಿ (ಇಟಲಿ) ಅವರನ್ನು ಎದುರಿಸಲಿದ್ದಾರೆ.

ಹಾಲಿ ರನ್ನರ್ ಅಪ್ ಅಲೆಕ್ಸಾಂಡರ್ ಜ್ವರೇವ್ 6–2, 6–4, 6–4ರಿಂದ ಅರ್ಜೆಂಟೀನಾದ ಫ್ರಾನ್ಸಿಸ್ಕೊ ಸೆರುಂಡೊಲೊ ಅವರನ್ನು ಮಣಿಸಿ ಮುನ್ನಡೆದರು. ಕಳೆದ ವರ್ಷದ ಫೈನಲ್‌ನಲ್ಲಿ ಯಾನಿಕ್ ಸಿನ್ನರ್ ವಿರುದ್ಧ ಸೋಲು ಅನುಭವಿಸಿದ್ದ ಮೂರನೇ ಶ್ರೇಯಾಂಕದ ಜ್ವರೇವ್ (ಜರ್ಮನಿ) ಮುಂದಿನ ಸುತ್ತಿನಲ್ಲಿ ಅಮೆರಿಕದ ಲರ್ನರ್ ಟಿಯನ್ ವಿರುದ್ಧ ಆಡಲಿದ್ದಾರೆ. 25ನೇ ಶ್ರೇಯಾಂಕದ ಟಿಯನ್ ಅವರು 6–4, 6–0, 6–3ಯಿಂದ 11ನೇ ಶ್ರೇಯಾಂಕದ ಮೆಡ್ವೆಡೇವ್ ಅವರಿಗೆ ಆಘಾತ ನೀಡಿದ್ದಾರೆ.

1978ರಿಂದ 2014ರ ವರೆಗೆ ಪಂಜಾಬ್ ಕ್ರಿಕೆಟ್ ಅಸೋಸಿಯೇಷನ್ ಮುಖ್ಯಸ್ಥರಾಗಿ ಸೇವೆ

ಬಿಸಿಸಿಐ ಮಾಜಿ ಅಧ್ಯಕ್ಷ ಬಿಂದ್ರಾ ನಿಧನ

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮಾಜಿ ಅಧ್ಯಕ್ಷ

ಇಂದರ್ಜಿತ್ ಸಿಂಗ್ ಬಿಂದ್ರಾ, 84ನೇ ವಯಸ್ಸಿನಲ್ಲಿ ಇಹಲೋಕ ತ್ಯಜಿಸಿದ್ದಾರೆ. ಅವರು 1993ರಿಂದ 1996ರ ವರೆಗೆ ಬಿಸಿಸಿಐ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅವರ ಅಧಿಕಾರಾವಧಿಯಲ್ಲಿ ಭಾರತಕ್ಕೆ 1996ರ ಏಕದಿನ ವಿಶ್ವಕಪ್‌ನ ಸಹ–ಆತಿಥ್ಯದ ಹಕ್ಕು ದೊರೆತಿತ್ತು.

ಅವರ ಅಧಿಕಾರಾವಧಿಯಲ್ಲಿ ಭಾರತದಲ್ಲಿ ಕ್ರಿಕೆಟ್ ನಿರ್ವಹಣೆ ಮತ್ತು ಮೂಲಸೌಕರ್ಯಕ್ಕೆ ಗಮನಾರ್ಹ ಕೊಡುಗೆ ದೊರೆತಿದೆ. 2015ರಲ್ಲಿ ಮೊಹಾಲಿಯ ಪಿಸಿಎ ಕ್ರೀಡಾಂಗಣವನ್ನು ಅವರ ಗೌರವಾರ್ಥವಾಗಿ ಐಎಸ್ ಬಿಂದ್ರಾ, ಕ್ರೀಡಾಂಗಣ ಎಂದು ಮರುನಾಮಕರಣ ಮಾಡಲಾಯಿತು. ಐಪಿಎಲ್ 2013ರ ಭ್ರಷ್ಟಾಚಾರ ಹಗರಣದ ಸಮಯದಲ್ಲಿ ಅವರು ಎನ್. ಶ್ರೀನಿವಾಸನ್ ಮತ್ತು ಬಿಸಿಸಿಐನ ಕಾರ್ಯನಿರ್ವಹಣೆಯನ್ನು ಟೀಕಿಸಿದ್ದರು. ಹಿರಿಯ ಅಧಿಕಾರಿಯಾಗಿ, ಜಗಮೋಹನ್ ದಾಲ್ಮಿಯಾ ಅವರೊಂದಿಗೆ 1990ರ ದಶಕದಲ್ಲಿ ಟಿವಿ ಹಕ್ಕುಗಳಲ್ಲಿ ವಾಣಿಜ್ಯ ಅವಕಾಶಗಳನ್ನು ಗುರುತಿಸುವ ಮೂಲಕ ವಿಶ್ವ ಕ್ರಿಕೆಟ್‌ನಲ್ಲಿ ಭಾರತ ಗಮನಾರ್ಹ ಸಾಧನೆ ಮಾಡಲು ನೆರವಾದರು. ಐಸಿಸಿ ಅಧ್ಯಕ್ಷರ ಪ್ರಮುಖ ಸಲಹೆಗಾರರಲ್ಲಿ ಒಬ್ಬರಾಗಿ ಕ್ರಿಕೆಟ್ ಆಡಳಿತದಲ್ಲಿ ತಮ್ಮ ಪ್ರಾಮುಖ್ಯತೆಯನ್ನು ಮತ್ತಷ್ಟು ಹೆಚ್ಚಿಸಿಕೊಂಡರು.

ಐಸಿಸಿ ಅಧ್ಯಕ್ಷ ಸಂತಾಪ: ಬಿಂದ್ರಾ ಅವರ ನಿಧನಕ್ಕೆ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಮುಖ್ಯಸ್ಥ ಜಯ್ ಶಾ ಸಂತಾಪ ಸೂಚಿಸಿದ್ದಾರೆ. 'ಬಿಸಿಐನ ಮಾಜಿ ಅಧ್ಯಕ್ಷರು ಮತ್ತು ಭಾರತೀಯ ಕ್ರಿಕೆಟ್ ಮಂಡಳಿಯ ದಿಗ್ಗಜ ಐಎಸ್ ಬಿಂದ್ರಾ, ಅವರ ನಿಧನಕ್ಕೆ ತೀವ್ರ ಸಂತಾಪಗಳು. ಅವರ ಪರಂಪರೆ ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ನೀಡಲಿ, ಓಂ ಶಾಂತಿ' ಎಂದು ಶ್ರದ್ಧಾಂಜಲಿ ಕೋರಿದ್ದಾರೆ. ಬಿಸಿಸಿಐ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲು 1978ರಿಂದ 2014ರ ವರೆಗೆ ಪಂಜಾಬ್ ಕ್ರಿಕೆಟ್ ಅಸೋಸಿಯೇಷನ್‌ಮುಖ್ಯಸ್ಥರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ.

ನ್ಯೂಜಿಲೆಂಡ್ ವಿರುದ್ಧದ 3 ಪಂದ್ಯಗಳಲ್ಲೂ ವೈಫಲ್ಯ

ಸಂಜು ಸ್ಥಾನ ಈಗ ಅಭದ್ರ

ಸಂಜು ದೆಹಲಿ: ನ್ಯೂಜಿಲೆಂಡ್ ವಿರುದ್ಧ ಭಾರತ ತಂಡ ಇನ್ನೂ ಎರಡು ಪಂದ್ಯಗಳು ಬಾಕಿ ಇರುವಾಗಲೇ 3–0 ಅಂತರದಲ್ಲಿ ಟಿ20 ಸರಣಿಯನ್ನು (3–1) ವಶಪಡಿಸಿಕೊಂಡಿದ್ದರೂ, ಭಾರತ ತಂಡದ ಒಬ್ಬ ಆಟಗಾರ ಮಾತ್ರ ಈ ಸರಣಿಯಲ್ಲಿ ಸತತ ವೈಫಲ್ಯವನ್ನು ಅನಭವಿಸುತ್ತಿದ್ದಾರೆ. ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ತನ್ನನ್ನು ತಾನು ಸಾಬೀತುಪಡಿಸಲು ಸುವರ್ಣಾವಕಾಶವನ್ನು ಪಡೆದಿದ್ದ ವಿಕೆಟ್ ಕೀಪರ್–ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ ತನಗೆ ಲಭಿಸಿದ ಉತ್ತಮ ಅವಕಾಶಗಳನ್ನು ವ್ಯರ್ಥ ಮಾಡಿಕೊಂಡಿದ್ದಾರೆ.

ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಸಂಜು ಸ್ಯಾಮ್ಸನ್‌ಗೆ ನ್ಯೂಜಿಲೆಂಡ್ ವಿರುದ್ಧದ ಸರಣಿಯು ಅಂತಿಮ ಪರೀಕ್ಷೆಯಾಗಿತ್ತು. ಆದರೆ ಮೊದಲ ಟಿ20ನಲ್ಲಿ 10 ರನ್ ಮತ್ತು ಎರಡನೇ ಪಂದ್ಯದಲ್ಲಿ ಕೇವಲ 6 ರನ್ ಗಳಿಸಿದ್ದ ಕಾರಣ ಮೂರನೇ ಪಂದ್ಯದಲ್ಲಿ ಎಲ್ಲರ ನಿರೀಕ್ಷೆ ಸಂಜು ಮೇಲಿತ್ತು. ಆದರೆ ಭಾನುವಾರದ ಪಂದ್ಯದಲ್ಲಿ ತಮ್ಮ ಖಾತೆಯನ್ನು ತೆರೆಯಲು ಸಹ ಅವರು ವಿಫಲರಾದರು. ಕೇರಳ ಬ್ಯಾಟ್ಸ್‌ಮನ್‌ನ ಈ ಕಳಪೆ ಫಾರ್ಮ್ ಟೀಮ್ ಮ್ಯಾನೇಜ್‌ಮೆಂಟ್‌ಗೆ ಕಳವಳವನ್ನು ಹೆಚ್ಚಿಸಿದೆ, ಏಕೆಂದರೆ ವಿಶ್ವಕಪ್‌ನಂತಹ ಪ್ರಮುಖ ಟೂರ್ನಿಯಲ್ಲಿ ತಂಡ ಸ್ಥಿರತೆಯನ್ನು ತೋರಿಸಲು ವಿಫಲವಾದ ಬ್ಯಾಟ್ಸ್‌ಮನ್ ಅನ್ನು ಅವಲಂಬಿಸಲು ಸಾಧ್ಯವಿಲ್ಲ.

ವಿಶ್ವಕಪ್ ತಂಡದ ಆಯ್ಕೆಯಾಗಿ ತಮ್ಮನ್ನು ತಾವು ಸಾಬೀತುಪಡಿಸಲು ಸಂಜು ಸ್ಯಾಮ್ಸನ್‌ಗೆ ಕೊನೆಯ ಅವಕಾಶವಾಗಿತ್ತು, ಆದರೆ ಅವರ ಪ್ರದರ್ಶನವು ಮತ್ತೊಮ್ಮೆ ಅವರ ವಿಮರ್ಶಕರಿಗೆ ಅವಕಾಶವನ್ನು ನೀಡಿದೆ. ಸರಣಿಯ ಉಳಿದ ಪಂದ್ಯಗಳಲ್ಲಿ ಟೀಮ್ ಮ್ಯಾನೇಜ್‌ಮೆಂಟ್ ಅವರಿಗೆ ಮತ್ತೊಂದು ಅವಕಾಶವನ್ನು ನೀಡುವ ಸಾಧ್ಯತೆ ಕಡಿಮೆಯಾಗಿದೆ.

ದ.ಆಫ್ರಿಕಾ ಲೀಗ್ | ಕಾವ್ಯಾ ಮಾರನ್ ತಂಡಕ್ಕೆ ಜಯ

ಈಸ್ಟರ್ನ್ ಕೇಪ್ ತಂಡಕ್ಕೆ ಟಿ 20 ಲೀಗ್ ಕಿರೀಟ



ಜೋಹಾನ್ಸ್‌ಬರ್ಗ್: ದಕ್ಷಿಣ ಆಫ್ರಿಕಾದ ಟಿ20 ಲೀಗ್ ಫೈನಲ್‌ನಲ್ಲಿ ಕಾವ್ಯಾ ಮಾರನ್ ಒಡೆತನದ ಸನ್‌ರೈಸರ್ಸ್ ಈಸ್ಟರ್ನ್ ಕೇಪ್ ತಂಡ ಪ್ರಿಟೋರಿಯಾ ಕ್ಯಾಪಿಟಲ್ಸ್ ಅನ್ನು 6 ವಿಕೆಟ್‌ಗಳಿಂದ ಮಣಿಸಿದೆ. ಇದರೊಂದಿಗೆ ಮೂರನೇ ಬಾರಿಗೆ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಅಂತಿಮ ಪಂದ್ಯದಲ್ಲಿ ಸನ್‌ರೈಸರ್ಸ್ ಈಸ್ಟರ್ನ್ ಕೇಫ್ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಪ್ರಿಟೋರಿಯಾ ಕ್ಯಾಪಿಟಲ್ಸ್ ತಂಡವು ಡೆವಾಲ್ಡ್ ಬ್ರೆವಿಸ್ ಅವರ ಶತಕದ ಸಹಾಯದಿಂದ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 158 ರನ್ ಗಳಿಸುವಲ್ಲಿ ಯಶಸ್ವಿ ಆಯಿತು. ಇದಕ್ಕೆ ಉತ್ತರವಾಗಿ ಸನ್‌ರೈಸರ್ಸ್ ಈಸ್ಟರ್ನ್ 4 ಎಸೆತಗಳು ಬಾಕಿ ಇರುವಾಗಲೇ 162 ರನ್ ಗಳಿಸಿ ಮೂರನೇ ಬಾರಿಗೆ ಪ್ರಶಸ್ತಿ ಗೆದ್ದುಕೊಂಡಿತು.

ಬ್ರಿಟ್ಜ್ಕೆ–ಸ್ಟಬ್ಸ್ ಅದ್ಭುತ ಪ್ರದರ್ಶನ: ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಗುರಿಯನ್ನು ಬೆನ್ನಟ್ಟಿದ ಸನ್‌ರೈಸರ್ಸ್ ಪರ ಮ್ಯಾಥ್ಯೂ ಬ್ರೀಟ್ಜ್ಕೆ ಮತ್ತು ಟ್ರಿಸ್ಟಾನ್ ಸ್ಟಬ್ಸ್ ಗೆಲುವಿನ ಇನ್ನಿಂಗ್ಸ್ ಆಡಿದರು. ಕೇವಲ ಐದು ರನ್‌ಗಳಿಗೆ ಮೊದಲ ವಿಕೆಟ್ ಕಳೆದುಕೊಂಡು ಕಳಪೆ ಆರಂಭ ಪಡೆದ ಸನ್‌ರೈಸರ್ಸ್ 48 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ಭಾರಿ ಸಂಕಷ್ಟಕ್ಕೆ ಸಿಲುಕಿತ್ತು, ಆದರೆ ಬ್ರೀಟ್ಜ್ಕೆ ಮತ್ತು ಸ್ಟಬ್ಸ್ ಆಕರ್ಷಕ ಇನ್ನಿಂಗ್ಸ್ ಮೂಲಕ ತಂಡವನ್ನು ಸುಭದ್ರ ಸ್ಥಿತಿಯತ್ತ ಕೊಂಡೊಯ್ದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ಮ್ಯಾಥ್ಯೂ ಬ್ರೀಟ್ಜ್ಕೆ 49 ಎಸೆತಗಳಲ್ಲಿ ಐದು ಬೌಂಡರಿ ಮತ್ತು ಎರಡು ಸಿಕ್ಸರ್‌ಗಳೊಂದಿಗೆ ಅಜೇಯ 68 ರನ್ ಗಳಿಸಿದರು. ಟ್ರಿಸ್ಟಾನ್ ಸ್ಟಬ್ಸ್ 41 ಎಸೆತಗಳಲ್ಲಿ ಎರಡು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳನ್ನು ಒಳಗೊಂಡಂತೆ ಅಜೇಯ 63 ರನ್ ಕಲೆ ಹಾಕಿದರು. ಬ್ರೀಟ್ಜ್ಕೆ ಮತ್ತು ಸ್ಟಬ್ಸ್ ಅಜೇಯ ಅರ್ಧಶತಕಗಳೊಂದಿಗೆ ಈಸ್ಟರ್ನ್ ಕೇಫ್ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಬಾಂಗ್ಲಾ ವಿರುದ್ಧ ಜಾಂಟಿ ಟೀಕೆ

ಜೋಹಾನ್ಸ್‌ಬರ್ಗ್: ಟಿ20 ವಿಶ್ವಕಪ್ ಬಹಿಷ್ಕರಿಸಿರುವ ಬಾಂಗ್ಲಾದೇಶ ನಿರ್ಧಾರದ ಬಗ್ಗೆ ದಕ್ಷಿಣ ಆಫ್ರಿಕಾದ ಮಾಜಿ ಕ್ರಿಕೆಟಿಗ

ಜಾಂಟಿ ರೋಡ್ಸ್ ಟೀಕೆ ಮಾಡಿದ್ದಾರೆ. ಕ್ರೀಡೆಗಳನ್ನು ರಾಜಕೀಯ ವಿವಾದಗಳಿಂದ ದೂರವಿಡಬೇಕು ಎಂದು ಅವರು ತಿಳಿಸಿದ್ದಾರೆ. ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾವು ರಾಜಕೀಯವನ್ನು ಕ್ರೀಡೆಯಿಂದ ದೂರವಿಡಬೇಕು, ಆದರೆ ದುರದೃಷ್ಟವಶಾತ್ ಕ್ರೀಡೆಯನ್ನು ರಾಜಕೀಯದಿಂದ ಬೇರ್ಪಡಿಸಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ. ಟಿ20 ವಿಶ್ವಕಪ್ ಕುರಿತು ಮಾತನಾಡಿದ ಅವರು, ಈ ಬಾರಿ, ವಿಶ್ವಕಪ್‌ನಲ್ಲಿ 20 ತಂಡಗಳು ಸ್ಪರ್ಧಿಸುತ್ತಿವೆ. ಈ ನಿಟ್ಟಿನಲ್ಲಿ ಐಸಿಸಿ ಉತ್ತಮ ಕೆಲಸ ಮಾಡುತ್ತಿದೆ. ನಾನು ವರ್ಷದ ಐದು ತಿಂಗಳು ಭಾರತದಲ್ಲಿ ವಾಸಿಸುತ್ತೇನೆ. ಅದಕ್ಕಾಗಿಯೇ ಈ ವಿಶ್ವಕಪ್ ನನ್ನ ಸ್ವಂತ ದೇಶದಲ್ಲಿ ನಡೆಯುತ್ತಿದೆ ಎಂದು ನನಗೆ ಅನಿಸುತ್ತದೆ. ನಾನು ಈ ಪಂದ್ಯಾವಳಿಗಾಗಿ ಕಾತರದಿಂದ ಕಾಯುತ್ತಿದ್ದೇನೆ. ಚಾಂಪಿಯನ್ ಯಾರಾಗಲಿದ್ದಾರೆ, ಯಾವ ತಂಡ ಸೆಮಿಫೈನಲ್ ತಲುಪುತ್ತದೆ ಎಂದು ಟಿ20 ಕ್ರಿಕೆಟ್‌ನಲ್ಲಿ ಮುಂಚಿತವಾಗಿ ಊಹಿಸಲು ಸಾಧ್ಯವಿಲ್ಲ. ಇದರಲ್ಲಿ ಯಾವುದೇ ಆಟಗಾರರು ಕೇವಲ 10 ನಿಮಿಷಗಳಲ್ಲಿ ಆಟದ ಸ್ವರೂಪವನ್ನು ಬದಲಾಯಿಸುವ ಸಾಮರ್ಥ್ಯ ಹೊಂದಿರಲಿದ್ದಾರೆ ಎಂದು ಜಾಂಟಿ ರೋಡ್ಸ್ ಅಭಿಪ್ರಾಯಪಟ್ಟಿದ್ದಾರೆ.

ವಿಟಾಕೀಸ್

ಸುವರ್ಣ ಸಂಭ್ರಮದಲ್ಲಿ ರಾಘವೇಂದ್ರ ಚಿತ್ರವಾಣಿ

ಕನ್ನಡದ ಮೊದಲ ಪ್ರಚಾರ ಸಂಸ್ಥೆ ರಾಘವೇಂದ್ರ ಚಿತ್ರವಾಣಿಗೆ ಈಗ ಸುವರ್ಣ ಮಹೋತ್ಸವದ ಸಂಭ್ರಮ. 1976ರಲ್ಲಿ ಡಿ.ವಿ.ಸುಧೀಂದ್ರ ಅವರು ರಾಘವೇಂದ್ರ ಚಿತ್ರವಾಣಿ ಸಂಸ್ಥೆಯನ್ನು ಪ್ರಾರಂಭಿಸಿದರು. ಈವರೆಗೂ ಸುಮಾರು ಮೂರು ಸಾವಿರಕ್ಕೂ ಅಧಿಕ ಚಿತ್ರಗಳಿಗೆ ಪ್ರಚಾರ ಕಾರ್ಯ ನೀಡಿರುವ ಸಂಸ್ಥೆ ಇದಾಗಿದೆ. ಪ್ರಸ್ತುತ ಈ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯನ್ನು ಸುಧೀಂದ್ರ ವೆಂಕಟೇಶ್ ಮುನ್ನಡೆಸುತ್ತಿದ್ದಾರೆ. ಸುಧೀಂದ್ರ ಅವರ ಪುತ್ರ ಸುನೀಲ್ ಸುಧೀಂದ್ರ, ಡಿ.ಜಿ.ವಾಸುದೇವ್, ಪವನ್ ವೆಂಕಟೇಶ್ ಸಾಥ್ ನೀಡುತ್ತಿದ್ದಾರೆ. ಐವತ್ತರ ಸಂಭ್ರಮವನ್ನು ಏಪ್ರಿಲ್ ತಿಂಗಳಲ್ಲಿ ವಿಶೇಷವಾಗಿ ಆಚರಿಸಲು ರಾಘವೇಂದ್ರ ಚಿತ್ರವಾಣಿ ಸಂಸ್ಥೆ ಮುಂದಾಗಿದೆ. ಇದರ ಪೂರ್ವಭಾವಿಯಾಗಿ ಸುವರ್ಣ ಸಂಭ್ರಮದ ಲೋಗೊ ಅನಾವರಣ ಮಾಡಲಾಗಿದೆ.

ಹಿರಿಯ ನಟ ಜೆ.ಕೆ.ಶ್ರೀನಿವಾಸಮೂರ್ತಿ, ನಟ ಕೋಮಲ್ ಕುಮಾರ್ ಹಾಗೂ ನಟಿ ಅನು ಪ್ರಭಾಕರ್ , ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ಸುವರ್ಣ ಸಂಭ್ರಮದ ಲೋಗೊ ಅನಾವರಣ ಮಾಡಿದರು.

ರಾಘವೇಂದ್ರ ಚಿತ್ರವಾಣಿ ಸಂಸ್ಥೆಗೂ ಐವತ್ತು ವರ್ಷ. ನಾನು ಸಿನಿಮಾರಂಗಕ್ಕೆ ಬಂದು ಐವತ್ತು ವರ್ಷ ಆಗಿನಿಂದಲೂ ನನಗೆ ಸುಧೀಂದ್ರ ಅವರ ಜತೆ ಒಡನಾಟ. ಪ್ರಚಾರ ಸಂಸ್ಥೆಯೊಂದು ಈ ರೀತಿ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವುದು ನಿಜಕ್ಕೂ ಖುಷಿಯಾಗಿದೆ. ರಾಘವೇಂದ್ರ ಚಿತ್ರವಾಣಿ ನೂರು ವರ್ಷಗಳ ಸಂಭ್ರಮವನ್ನು ಕಾಣುವಂತಾಗಲಿ ಎಂದು ಹಿರಿಯ ನಟ ಶ್ರೀನಿವಾಸ ಮೂರ್ತಿ ಹಾರೈಸಿದರು.

ನೀವು ಕನ್ನಡ ಚಿತ್ರರಂಗದಲ್ಲಿ ದೊಡ್ಡ ನಟರಾಗಿ ಬೆಳೆಯುತ್ತೀರಾ ಎಂದು ಸುಧೀಂದ್ರ ಅವರು ಹಾರೈಸಿದ್ದರು. ಅವರ ಆಶೀರ್ವಾದದಿಂದ ನಾನು ಚಿತ್ರರಂಗದಲ್ಲಿ ನಟನಾಗಿ ಗುರುತಿಸಿಕೊಂಡಿದ್ದೇನೆ.

ರಾಘವೇಂದ್ರ ಚಿತ್ರವಾಣಿ ಸಂಸ್ಥೆ ರಾಯರ ದಯೆಯಿಂದ ಇನ್ನಷ್ಟು ಪ್ರಸಿದ್ಧಿ ಪಡೆಯಲಿ ಎಂದು ನಟ ಕೋಮಲ್ ಕುಮಾರ್ ಹಾರೈಸಿದರು.

ನಾನು ಬಾಲ ನಟಿಯಾದಗಿನಿಂದಲೂ ಸುಧೀಂದ್ರ ಅವರನ್ನು ನೋಡಿಕೊಂಡು ಬೆಳೆದವಳು. ಪ್ರಚಾರ ಸಂಸ್ಥೆಯೊಂದು ಐವತ್ತು ವರ್ಷಗಳ ಕಾಲ ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿರುವುದು ನಿಜಕ್ಕೂ ಹೆಮ್ಮೆ ಎಂದು ನಟಿ ಅನು ಪ್ರಭಾಕರ್ ಮುಖರ್ಜಿ ಹೇಳಿದರು.

ಏಪ್ರಿಲ್ ನಲ್ಲಿ ರಾಘವೇಂದ್ರ ಚಿತ್ರವಾಣಿ ಸಂಸ್ಥೆಯ ಐವತ್ತನೇ ವರ್ಷದ ಸಮಾರಂಭವನ್ನು ಅದ್ದೂರಿಯಾಗಿ ಆಚರಿಸಲು ಸಿದ್ದತೆ ನಡೆಯುತ್ತಿದೆ ಎಂದು ಸುಧೀಂದ್ರ ವೆಂಕಟೇಶ್ ಹೇಳಿದರು.

ಜೀವನದ ಹೋರಾಟದ ಕಥೆ ಸರ್ವೈವರ್

ದೊಡ್ಮನೆ ದೊರೆ ಶಿವರಾಜ್‌ಕುಮಾರ್ ಎಲ್ಲರಿಗೂ ಅಚ್ಚುಮೆಚ್ಚು. ಇಂದಿಗೂ ಶಿವಣ್ಣ ಬಲು ಬೇಡಿಕೆಯ ನಟರಾಗಿದ್ದಾರೆ. ಕನ್ನಡ ಮಾತ್ರವಲ್ಲ, ಪರ ಭಾಷೆಯಲ್ಲಿಯೂ ಶಿವಣ್ಣನಿಗೆ ಭರ್ಜರಿ ಡಿಮ್ಯಾಂಡ್ ಇದೆ. ಅಲ್ಲಿಯೂ ಅಪಾರ ಅಭಿಮಾನಿಗಳ ಬಳಗವೇ ಇದೆ. ಈಗ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಅವರ ಕುರಿತ ಸಾಕ್ಷ್ಯಚಿತ್ರ ಮೂಡಿಬರುತ್ತಿದೆ. ಶಿವರಾಜ್ ಕುಮಾರ್ ಕ್ಯಾನ್ಸರ್ ನಿಂದ ಬಳಲುತ್ತಿದ್ದರು. ದೂರದ ಅಮೇರಿಕಾಗೆ ತೆರಳಿ ಚಿಕಿತ್ಸೆ ಪಡೆದು ಆರೋಗ್ಯವಾಗಿದ್ದಾರೆ. ಶಿವಣ್ಣ ಕ್ಯಾನ್ಸರ್ ವಿರುದ್ಧ ಹೋರಾಟ ಮಾಡಿ ಗೆದ್ದ ಕಥೆಯನ್ನು ಈಗ ಡಾಕ್ಯುಮೆಂಟರಿ ಮೂಲಕ ತೆರೆಗೆ ತರಲಾಗುತ್ತಿದೆ.

ಸರ್ವೈವರ್ ಶೀರ್ಷಿಕೆಯಲ್ಲಿ ಸಾಕ್ಷ್ಯಚಿತ್ರ ಮೂಡಿಬರುತ್ತಿದೆ.

ಶಿವಣ್ಣ ಅರವತ್ತು ವರ್ಷ ದಾಟಿದ್ದರು ಇಂದಿಗೂ ಯುವಕರನ್ನು ನಾಚಿಸುವಂತೆ ಕುಣಿಯುತ್ತಾರೆ, ಸಾಹಸ ಸನ್ನಿವೇಶಗಳಲ್ಲೂ ಕಾಣಿಸಿಕೊಂಡು ರಂಜಿಸುತ್ತಾರೆ. ಹೀಗಿರುವಾಗಲೇ ಶಿವಣ್ಣ ಅವರಿಗೆ ಕ್ಯಾನ್ಸರ್ ಕಾಡಿತು. ಅಮೇರಿಕಾಗೆ ತೆರಳಿದ ಶಿವಣ್ಣ ಕ್ಯಾನ್ಸರ್ ಗೆ ಚಿಕಿತ್ಸೆ ಪಡೆದರು. ಶಿವರಾಜ್ ಕುಮಾರ್ ಅವರು ಬೇಗ ಗುಣಮುಖರಾಗಲಿ ಎಂದು ಕರುನಾಡಿನ ಜನತೆ ಪ್ರಾರ್ಥಿಸಿದರು. ಎಲ್ಲರ ಹಾರೈಕೆಯಿಂದ ಶಿವಣ್ಣ ಗುಣಮುಖರಾಗಿ ತವರಿಗೆ ಮರಳಿದರು. ಶಿವಣ್ಣ ಎಲ್ಲರಿಗೂ ಸ್ಫೂರ್ತಿ, ಅಂತೆಯೇ ಕ್ಯಾನ್ಸರ್ ವಿರುದ್ಧದ ಅವರ ಹೋರಾಟ ಇತರರಿಗೂ ಧೈರ್ಯ ತುಂಬಿದೆ. ಇದೇ ವಿಚಾರವನ್ನು ಸಾಕ್ಷ್ಯ ಚಿತ್ರದ ಮೂಲಕ ಕಟ್ಟಿಕೊಡಲಾಗುತ್ತಿದೆ. ಗೀತಾ ಶಿವರಾಜ್ ಕುಮಾರ್ ಅವರೇ ಈ ಸಾಕ್ಷ್ಯಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಪ್ರದೀಪ್ ಈ ಸಾಕ್ಷ್ಯ ಚಿತ್ರಕ್ಕೆ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಗಣರಾಜ್ಯೋತ್ಸವ ಪ್ರಯುಕ್ತ ಸರ್ವೈವರು ಸಾಕ್ಷ್ಯಚಿತ್ರದ ಟೀಸರ್ ಬಿಡುಗಡೆಯಾಗಿದೆ. ಟೀಸರ್ ವೀಕ್ಷಿಸಿದ ಅಭಿಮಾನಿಗಳು ಶಿವಣ್ಣ ಅವರಿಗೆ ಬಹುಪರಾಕ್ ಎಂದಿದ್ದಾರೆ.

ತೆರೆಯಲ್ಲಿ ರಕ್ತ ಕಾಶ್ಮೀರ

ಹಿರಿಯ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದಾದ ರಕ್ತ ಕಾಶ್ಮೀರ ಈ ವಾರ ತೆರೆಗೆ ಬರುತ್ತಿದೆ.

ಕಾಶ್ಮೀರದಲ್ಲಿ ನಡೆಯುತ್ತಿರುವ ಭಯೋತ್ಪಾದನೆ, ಅದರ ವಿರುದ್ಧದ ಹೋರಾಟದ ಕಥೆ ಈ ಚಿತ್ರದಲ್ಲಿದೆ. ಉಪೇಂದ್ರ ನಾಯಕನಾಗಿ ನಟಿಸಿದ್ದು, ರಮ್ಯಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಮುಖೇಶ್ ರಿಶಿ, ದೊಡ್ಡಣ್ಣ, ಓಂಪ್ರಕಾಶ್ ರಾವ್, ಅನಿಲ, ಕುರಿ ಪ್ರತಾಪ್ ಮುಂತಾದವರು ತಾರಾಗಣದಲ್ಲಿದ್ದಾರೆ. ಈ ಸಿನಿಮಾದ ಮೂಲಕ ರಮ್ಯಾ ಅವರನ್ನು ಮತ್ತೊಮ್ಮೆ ತೆರೆಯಲ್ಲಿ ಕಣ್ತುಂಬಿಕೊಳ್ಳ ಬಹುದಾಗಿದೆ.

ರಕ್ತ ಕಾಶ್ಮೀರ ಶೀರ್ಷಿಕೆಯೇ ತಿಳಿಸುವಂತೆ ಪಾಕ್ ಆಕ್ರಮಿತ ಕಾಶ್ಮೀರವನ್ನು ವಾಪಸ್ ಪಡೆಯುವ ಕಥಾಹಂದರ ಹೊಂದಿದೆ. ಪಾಕ್ ಆಕ್ರಮಿತ ಉಗ್ರಗಾಮಿಗಳು ಕಾಶ್ಮೀರ ದಲ್ಲಷ್ಟೇ ಅಲ್ಲ, ಬೆಂಗಳೂರು ಸೇರಿದಂತೆ ಭಾರತದ ವಿವಿಧ ನಗರಗಳಲ್ಲೂ ದಾಳಿ ನಡೆಸಿ ಸಾವಿರಾರು ಅಮಾಯ ಕರನ್ನು ಹತ್ಯೆ ಮಾಡಿರುತ್ತಾರೆ. ಇದರಿಂದ ನೊಂದ ಚಿತ್ರದ ನಾಯಕ ಹಾಗೂ ನಾಯಕಿ ಬೆಂಗಳೂರಿನಿಂದ ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಹೋಗಿ ಅಲ್ಲಿರುವ ಉಗ್ರರನ್ನು ಮಟ್ಟಹಾಕುವ ಕಥೆ ಚಿತ್ರದಲ್ಲಿದೆ. ಕಾಶ್ಮೀರದಲ್ಲೇ ಸುಮಾರು ಒಂದು ತಿಂಗಳಿಗೂ ಹೆಚ್ಚುಕಾಲ ಚಿತ್ರೀಕರಣ ನಡೆಸಲಾಗಿದೆ. ಹಲವು ಬಾಲ ಕಲಾವಿದರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ದೇಶಪ್ರೇಮ ಸಾರುವ ಈ ಚಿತ್ರವನ್ನು ಕುಟುಂಬ ಸಮೇತ ಕುಳಿತು ನೋಡಬಹುದಾಗಿದೆ.

ಈ ಚಿತ್ರದ ಮತ್ತೊಂದು ವಿಶೇಷವೆಂದರೆ ಹದಿನೆಂಟು ನಿಮಿಷಗಳ ಒಂದು ವಿಶೇಷ ಗೀತೆ ಇದೆ. ಈ ಹಾಡಿನಲ್ಲಿ ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್, ಶಿವರಾಜ ಕುಮಾರ್, ಪುನೀತ್ ರಾಜಕುಮಾರ್, ಜಗ್ಗೇಶ್, ಉಪೇಂದ್ರ, ರಮೇಶ್ ಅರವಿಂದ್, ದರ್ಶನ್, ಜೈ ಜಗದೀಶ್, ಆದಿತ್ಯ ಸೇರಿದಂತೆ ಕನ್ನಡದ ದಿಗ್ಗಜ ನಾಯಕರು ಕಾಣಿಸಿಕೊಂಡಿದ್ದಾರೆ. ಇದು ಈವರೆಗೂ ಯಾರು ಮಾಡಿರದ ದಾಖಲೆ ಎನ್ನುತ್ತಾರೆ ನಿರ್ದೇಶಕ ರಾಜೇಂದ್ರಸಿಂಗ್ ಬಾಬು.

ಈ ಚಿತ್ರಕ್ಕೆ ಎಸ್ ವಿ ರಾಜೇಂದ್ರಸಿಂಗ್ ಬಾಬು ಅವರೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಎಂ.ಎಸ್ .ರಮೇಶ್ ಸಂಭಾಷಣೆ ಬರೆದಿದ್ದು , ಗುರುಕಿರಣ್ ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ಎಂಡಿಎಂ ಪ್ರೊಡಕ್ಷನ್ ಲಾಂಛನದಲ್ಲಿ ರಕ್ತ ಕಾಶ್ಮೀರ ನಿರ್ಮಾಣವಾಗಿದೆ.

ರಿಷಿಯ ಹೊಸ ಪಯಣ

ಕವಲು ದಾರಿ, ಅಪರೇಷನ್ ಅಲಮೇಲಮ್ಮ ಖ್ಯಾತಿಯ ನಟ ರಿಷಿ ಟಾಲಿವುಡ್ ಅಂಗಳದಲ್ಲಿಯೂ ಮಿಂಚಿದವರು. ಈಗ ಕನ್ನಡದಲ್ಲಿ ಸಾಲು ಸಾಲು ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. ರಿಷಿ ನಾಯಕನಾಗಿ ನಟಿಸುತ್ತಿರುವ ಜವರ ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ನೆರವೇರಿತು.

ಜವರ ಸಿನಿಮಾದಲ್ಲಿ ರಿಷಿ ವಿಭಿನ್ನ ಲುಕ್ ನಲ್ಲಿ ಮಿಂಚಲಿದ್ದಾರೆ. ಅದಕ್ಕೂ ಮೊದಲೇ ಮತ್ತೊಂದು ಸಿನಿಮಾದಲ್ಲಿ ರಿಷಿ ರಂಜಿಸಲು ಸಿದ್ಧವಾಗಿದ್ದಾರೆ. ಹೌದು, ಅನಂತ ಪದ್ಮನಾಭ ಶೀರ್ಷಿಕೆಯ ಸಿನಿಮಾದಲ್ಲಿ ರಿಷಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈ ಚಿತ್ರದ ಟೈಟಲ್ ಪೋಸ್ಟರ್ ರಿಲೀಸ್ ಆಗಿದ್ದು, ಒಂದಷ್ಟು ಕುತೂಹಲವನ್ನು ಮೂಡಿಸಿದೆ. ಈ ಚಿತ್ರದಲ್ಲಿ ಹಿರಿಯ ನಟ ಪ್ರಕಾಶ್ ಬೆಳವಾಡಿ ಕೂಡ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ.

ಕೆಂಪು ಬಣ್ಣದ ಕಾರಿನ ಮೇಲೆ ಸೂಟ್ ಕೇಸ್ ಗಳನ್ನು ಇಡಲಾಗಿದ್ದು, ರಿಷಿ ಹಾಗೂ ಪ್ರಕಾಶ್ ಬೆಳವಾಡಿ ಇಬ್ಬರು ಮುಂಭಾಗದಲ್ಲಿ ಕುಳಿತು ಯಾವುದೋ ವಿಚಾರವನ್ನು ಚರ್ಚಿಸುತ್ತಿದ್ದಾರೆ. ಇದನ್ನು ಗಮನಿಸಿದರೆ ಇದು ಪಯಣದಲ್ಲಿ ಸಾಗುವ ಕಥೆ ಎಂಬುದು ತಿಳಿಯುತ್ತದೆ. ಅದರ ಜತೆಗೆ ಕಾಮಿಡಿ ಸ್ಟೋರಿಯೂ ಬೆರೆತಿರಬಹುದು



ಎಂಬುದು ಸ್ಪಷ್ಟವಾಗುತ್ತದೆ.

ರನ್ನ, ವಿಕ್ಟರಿ ಅಂತಹ ಹಿಟ್ ಸಿನಿಮಾಗಳಿಗೆ ಸಂಭಾಷಣೆ ಬರೆದಿರುವ ಪ್ರಶಾಂತ್ ರಾಜಪ್ಪ ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಸೂರ್ಯವಂಶಿ ಈ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಸದ್ದಿಲ್ಲದೆ ಸೆಟ್ಟೇರಿದ ಅನಂತ ಪದ್ಮನಾಭ ಚಿತ್ರದ ಬಹುತೇಕ ಶೂಟಿಂಗ್ ಮುಕ್ತಾಯವಾಗಿದ್ದು, ಎರಡು ಹಾಡುಗಳ ಚಿತ್ರೀಕರಣ ಬಾಕಿ ಇದೆ. ಹಾಡುಗಳನ್ನು ಕರ್ನಾಟಕದ ಸುಂದರ ತಾಣಗಳಲ್ಲಿ ಸೆರೆಹಿಡಿಯಲಿರುವ ಚಿತ್ರತಂಡ ಬಳಿಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಆರಂಭಿಸಲಿದೆ. ಒಟ್ಟಾರೆ ಹೊಸ ವರ್ಷದಲ್ಲಿ ರಿಷಿ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದು, ತೆರೆಯಲ್ಲಿ ಪ್ರೇಕ್ಷಕರನ್ನು ರಂಜಿಸಲಿದ್ದಾರೆ.

ಸಂಜನಾ ನಿಶ್ಚಿತಾರ್ಥ

ನಟಿ ಸಂಜನಾ ಬುರ್ಲಿ ಕಿರುತೆರೆ ಪ್ರಿಯರಿಗೆ ಅಚ್ಚುಮೆಚ್ಚು. ಪುಟ್ಟಕ್ಕನ ಮಕ್ಕಳು ಧಾರಾವಾಹಿ ಮೂಲಕ ಮನೆಮಾತಾಗಿರುವ ಸಂಜನಾ ಹೊಸ ಬಾಳಿಗೆ ಕಾಲಿಡಲು ನಿರ್ಧರಿಸಿದ್ದಾರೆ. ನಟಿ ಸಂಜನಾ, ಸಮರ್ಥ್ ಅವರೊಂದಿಗೆ ದಾಂಪತ್ಯಕ್ಕೆ ಕಾಲಿಡಲಿದ್ದಾರೆ. ಇವರಿಬ್ಬರ ನಿಶ್ಚಿತಾರ್ಥ ಸರಳವಾಗಿ ಕುಟುಂಬದವರ ಸಮ್ಮುಖದಲ್ಲಿ ನೆರವೇರಿದೆ.

ತಮ್ಮ ನಿಶ್ಚಿತಾರ್ಥದ ಫೋಟೊಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಚನ್ನಗಿರಿಯವರಾದ ಸಮರ್ಥ್ ವೃತ್ತಿಯಲ್ಲಿ ವೈದ್ಯರಾಗಿದ್ದಾರೆ. ಸದ್ಯ ಸಂಜನಾ ಪುಟ್ಟಕ್ಕನ ಮಕ್ಕಳು ಧಾರಾವಾಹಿ ಬಳಿಕ ಶ್ರೀಗಂಧದ ಗುಡಿ ಧಾರಾವಾಹಿಯಲ್ಲಿ ನಟಿಸುತ್ತಿದ್ದಾರೆ. ಸಂಜನಾ ಈ ಹಿಂದೆ ಸಿನಿಮಾದಲ್ಲಿಯೂ ನಟಿಸಿದ್ದರು.